ಕಲಬುರಗಿ Kalaburagi | ಹುಬ್ಬಳ್ಳಿ Hubballi | ಬೆಂಗಳೂರು Bengaluru | ಮಂಗಳೂರು Mangaluru | ದಾವಣಗೆರೆ Davanagere | ಬಾಗಲಕೋಟೆ Bagalakote | ಬೆಳಗಾವಿ Belagavi | ಸಂಪುಟ Volume 28 | ಸಂಚಿಕೆ Issue 18 | ಪುಟ Pages 12

ಗುರುವಾರ 7 ಮೇ 2026 RNI REGN NO. KARKAN/1999/2674 www.epaper.samyukthakarnataka.com Samyuktha Karnataka @samyuktakarnat2 ₹ 5-00

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ

ಸಂಯುಕ್ತ ಕರ್ನಾಟಕ

ಶತಕದತ್ತ ಓಟ... ತೊಂಬತ್ತರ ನೋಟ

ಕನ್ನಡಿಗರ ಸಾಕ್ಷಿಪ್ರಜ್ಞೆ

samyuktha karnataka

ಮಹಿಳೆ ಜೊತೆ ಅನುಚಿತ ವರ್ತನೆ ಪ್ರಕರಣ: ಡಿಜಿಪಿ ರಾಮಚಂದ್ರರಾವ್ ಅಮಾನತು ತೆರವು 7

ಕಾರ್ಯಾಚರಣೆ ವೇಳೆ ಮೃತಪಟ್ಟಿದ್ದ ದಸರಾ ಆನೆ ಅರ್ಜುನನ ಸ್ಮಾರಕ ಲೋಕಾರ್ಪಣೆ 8

ಶಿಲ್ಪಕಲೆಯ ಕುರಿತ ಐತಿಹಾಸಿಕ ಸಿನಿಮಾದ ಮದನಿಕಾ ಪಾತ್ರದಲ್ಲಿ ರಾಗಿಣಿ ದ್ವಿವೇದಿ ನಟನೆ 4

ಸಂಯುಕ್ತ ಕರ್ನಾಟಕ
ಜಾಣರ ಗುರು
1 ರೂ.ಗೆ ಮಾಹಿತಿಗಳ ರಸದೌತಣ
ಹದಿಹರೆಯದವರಿಗೆ ಅರಿವಿನ ಹರಿವು
ಇಂದೇ ಕೊಂಡು ಓದಿರಿ
ಪ್ರತಿಗಳಿಗಾಗಿ: ಬಸಪ್ಪ-70220 22063

ಬೆಂಗಳೂರಿನಿಂದ IPL ಫೈನಲ್ ಔಟ್ ಕಾರಣವೇನು?
QR CODE ಸ್ಕ್ಯಾನ್ ಮಾಡಿ ವಿಡಿಯೋ ನೋಡಿ
Samyukta_Karnataka

ಮೇ 10ಕ್ಕೆ ಮೋದಿ ಬೆಂಗ್ಳೂರಿಗೆ: ಧ್ಯಾನ ಮಂದಿರ ಉದ್ಘಾಟನೆ

ಬೆಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೇ 10ರಂದು ಬೆಂಗಳೂರಿಗೆ ಭೇಟಿ ನೀಡಲಿದ್ದು, ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರಕ್ಕೆ ಭೇಟಿ ನೀಡಲಿದ್ದಾರೆ. ಆಶ್ರಮದ ಆವರಣದಲ್ಲಿ ನಿರ್ಮಿಸಿರುವ ಹೊಸ ಧ್ಯಾನ ಮಂದಿರವನ್ನು ಈ ವೇಳೆ ಉದ್ಘಾಟಿಸಲಿದ್ದಾರೆ.

ಅಸ್ಸಾಂ: ಹಿಮಂತ್ ಮೇ 11 ಬಳಿಕ ಮತ್ತೆ ಸಿಎಂ ಆಗಿ ಪ್ರಮಾಣ?

ಗುವಾಹಟಿ: ಅಸ್ಸಾಂ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಭರ್ಜರಿ ಜಯ ದಾಖಲಿಸಿದ ಬೆನ್ನಲ್ಲೇ ಮುಖ್ಯಮಂತ್ರಿ ಹಿಮಂತ ಬಿಸ್ವ ಸರ್ಮಾ ಅವರು ಬುಧ ವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ದ್ದಾರೆ. ಮೇ 11ರ ನಂತರ ಸರ್ಮಾ ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ಮೂಲಗಳು ಹೇಳಿವೆ. ವಿವರ: 9

ವಂದೇಮಾತರಂಗೆ ರಾಷ್ಟ್ರಗೀತೆ ಪ್ರಸ್ತಾವಕ್ಕೆ ಸಂಪುಟದಲ್ಲಿ ಒಪ್ಪಿಗೆ

ನವದೆಹಲಿ: ವಂದೇ ಮಾತರಂಗೆ ರಾಷ್ಟ್ರಗೀತೆ ಸ್ಥಾನಮಾನ ಕಲ್ಪಿಸಲು ಸಲ್ಲಿಕೆಯಾಗಿದ್ದ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟದಲ್ಲಿ ಒಪ್ಪಿಗೆ ನೀಡಲಾಗಿದೆ. ಇಷ್ಟರಲ್ಲೇ ಸಂಸತ್ತಿನಲ್ಲಿ ಇದಕ್ಕೆ ಸಂಬಂಧಿಸಿದಂತೆ ಕಾಯ್ದೆ ತಿದ್ದುಪಡಿಯನ್ನು ಮಂಡಿಸಲಾಗುತ್ತದೆ. ವಿವರ: 9

ಶೃಂಗೇರಿ ಶಾಸಕ ಡಿ.ಎನ್.ಜೀವರಾಜ್ ಪ್ರಮಾಣ ಸ್ವೀಕಾರ

ಬೆಂಗಳೂರು: ಅಂಚೆ ಮತಗಳ ಮರು ಎಣಿಕೆಯಿಂದ ವಿಜಯಿಯಾಗಿರುವ ಶೃಂಗೇರಿ ಶಾಸಕ, ಬಿಜೆಪಿಯ ಡಿ.ಎನ್. ಜೀವರಾಜ್ ಚುನಾವಣೆ ನಡೆದು ಮೂರು ವರ್ಷಗಳ ಬಳಿಕ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ವಿವರ: 7

ಕುಂಚತಂತ್ರ

ಕಾಂತೇಶ ಮ. ಬಡಿಗೇರ



ತಮಿಳುನಾಡಲ್ಲಿ ಹೊಸ ಮೈತ್ರಿಯ ಯುಗಾರಂಭ

55 ವರ್ಷದ ಡಿಎಂಕೆ ಸಖ್ಯ ಬಿಟ್ಟು ವಿಜಯ್ ಹೆಗಲಿಗೆ ಕೈ

ಕಾಂಗ್ರೆಸ್‌ನ 5 ಶಾಸಕರ ಬೆಂಬಲ ಟಿವಿಕೆಯ ದಳಪತಿಗೆ ಆದರೂ 118ರ ಸರಳ ಬಹುಮತಕ್ಕೆ 6 ಸೀಟುಗಳ ಕೊರತೆ

ಚೆನ್ನೈ: ಸರ್ಕಾರ ರಚಿಸಲು ಸರಳ ಬಹುತಮಕ್ಕೆ ಕೊರತೆಯಿರುವ ಹಿನ್ನೆಲೆಯಲ್ಲಿ ವಿಜಯ್ ಕಾಂಗ್ರೆಸ್, ಕಮ್ಯುನಿಸ್ಟ್ ಸೇರಿ ಸಣ್ಣಪುಟ್ಟ ಪಕ್ಷಗಳ ಬೆಂಬಲ ಕೋರಿದ್ದಾರೆ. ಈ ಹಿನ್ನೆಲೆಯಲ್ಲಿ

ಟಿವಿಕೆಗೆ ಬೆಂಬಲ ನೀಡಲಾಗುವುದು ಎಂದು ಕಾಂಗ್ರೆಸ್ ಘೋಷಿಸಿದೆ. ಆ ಮೂಲಕ 55 ವರ್ಷಗಳ ಹಿಂದೆ ಮಾಡಿಕೊಂಡಿದ್ದ ಡಿಎಂಕೆ ಜತೆಗಿನ ಮೈತ್ರಿಯನ್ನು ಕಡಿದುಕೊಂಡು ಕೈ ಕೊಟ್ಟಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಡಿಎಂಕೆ ವಕ್ತಾರ ಸರವಣನ್, ಕಾಂಗ್ರೆಸ್ ಪಕ್ಷ ಟಿವಿಕೆಗೆ ಬೆಂಬಲ ಸೂಚಿಸುವ ಮೂಲಕ ಬೆನ್ನಿಗೆ ಚೂರಿ ಇರಿದಿದೆ. ಜನಾದೇಶ ಧಿಕ್ಕರಿಸಿ ತಮಿಳಿಗರ ಬೆನ್ನಿಗೆ ಚೂರಿ ಹಾಕಿದ್ದಾರೆ ಎಂದು ಕಿಡಿ ಕಾರಿದ್ದಾರೆ.

ಟಿವಿಕೆಗೆ ಬೆಂಬಲ ನೀಡುವಂತೆ ವಿಜಯ್ ಕೋರಿದ್ದಾರೆ ಹಾಗೂ ಈ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದು ಕಾಂಗ್ರೆಸ್ ನಾಯಕ ಕೆ.ಸಿ.ವೇಣುಗೋಪಾಲ್ ಮಂಗಳವಾರ ಹೇಳಿದ್ದರು. ಇದೀಗ ಡಿಎಂಕೆ ಜತೆಗಿನ ಮೈತ್ರಿಯನ್ನು ಲೆಕ್ಕಿಸದೆ ಹಾಗೂ ಮೈತ್ರಿ ಕೂಟದ ಒಗ್ಗಟ್ಟಿನ ಬಗ್ಗೆಯೂ ಆಲೋಚಿಸಿದೆ ಕಾಂಗ್ರೆಸ್ ಟಿವಿಕೆಗೆ ಬೆಂಬಲ ನೀಡಿದೆ ಎಂದು ಇಂಡಿ ಕೂಟದಲ್ಲೇ ಆಕ್ರೋಶ ವ್ಯಕ್ತವಾಗುತ್ತಿದೆ. ಪುಟ 12

ಸರ್ಕಾರ ರಚನೆಗೆ ಗೌರ್ನರ್ ಬಳಿ ವಿಜಯ್ ಹಕ್ಕು ಮಂಡನೆ

ಬೆನ್ನಿಗೆ ಕಾಂಗ್ರೆಸ್ ಚೂರಿ: ಡಿಎಂಕೆ

ಡಿಎಂಕೆ ಮೈತ್ರಿ ಕಡಿದುಕೊಂಡು ಟಿವಿಕೆ ಪಕ್ಷಕ್ಕೆ ಕಾಂಗ್ರೆಸ್ ಬೆಂಬಲ ನೀಡಿದ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಡಿಎಂಕೆ ನಾಯಕ ಸರವಣನ್, ದಶಕಗಳ ಕಾಲ ಜತೆಯಲ್ಲಿದ್ದ ಮಿತ್ರಪಕ್ಷ ಕಾಂಗ್ರೆಸ್ ಈಗ ಅಧಿಕಾರದಾಸೆಗೆ ದ್ರೋಹ ಬಗೆದಿದೆ. ಕಾಂಗ್ರೆಸ್ ನಮ್ಮ ಬೆನ್ನಿಗೆ ಚೂರಿ ಇರಿದಿದೆ ಎಂದು ಕಿಡಿ ಕಾರಿದ್ದಾರೆ.

ಬಹುಮತ ತೋರಿಸಲು ರಾಜ್ಯಪಾಲ ಸೂಚನೆ

- ಇಂದು ವಿಜಯ್ ಪದಗ್ರಹಣ ಅನುಮಾನ

ಟಿವಿಕೆ ಅಧ್ಯಕ್ಷ ದಳಪತಿ ವಿಜಯ್ ಅವರು ಮಂಗಳವಾರ ರಾಜ್ಯಪಾಲರನ್ನು ಭೇಟಿಯಾಗಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಆದರೆ ಬಹುಮತಕ್ಕೆ ಅಗತ್ಯವಿರುವ ಸಂಖ್ಯೆ ಇಲ್ಲದ ಕಾರಣ ರಾಜ್ಯಪಾಲರು ಸರ್ಕಾರ ರಚಿಸಲು ಅನುಮತಿ ನಿರಾಕರಿಸಿ ವಾಪಸ್ ಕಳುಹಿಸಿದ್ದಾರೆ. ಹೀಗಾಗಿ ಇಂದು ನಡೆಯಬೇಕಿದ್ದ ಪ್ರಮಾಣ ವಚನ ಸ್ವೀಕಾರ ಸಮಾರಂಭ ಬಹುತೇಕ ಡೌಟ್ ಎನ್ನಲಾಗಿದೆ. ಚುನಾವಣೆಯಲ್ಲಿ 108 ಸೀಟುಗಳನ್ನು ಗೆಲ್ಲುವ ಮೂಲಕ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಟಿವಿಕೆ ನಾಯಕ ವಿಜಯ್, ಲೋಕಭವನಕ್ಕೆ ಭೇಟಿ ನೀಡಿ, ತಮ್ಮ ಪಕ್ಷದ ಶಾಸಕರು ಹಾಗೂ ಮೈತ್ರಿ ಪಕ್ಷಗಳ ಬೆಂಬಲದೊಂದಿಗೆ ಒಟ್ಟು 112 ಶಾಸಕರ ಸಹಿ ಇರುವ ಬೆಂಬಲ ಪತ್ರವನ್ನು ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅವರಿಗೆ ಸಲ್ಲಿಸಿದರು. ರಾಜ್ಯದಲ್ಲಿ ಸ್ಥಿರ ಸರ್ಕಾರ ನೀಡಲು ತಮಗೆ ಅವಕಾಶ ನೀಡಬೇಕು ಎಂದು ಅವರು ಮನವಿ ಮಾಡಿದರು.

ರಾಜಕೀಯ ಹಿಂಸಾಚಾರಕ್ಕೆ 4 ಬಲಿ

ಬಂಗಾಳದಲ್ಲಿ ದಳ್ಳುರಿ

ಬಿಜೆಪಿ, ಟಿಎಂಸಿ ಕಾರ್ಯಕರ್ತರ ಬಡಿದಾಟ ಪಕ್ಷದ ಕಚೇರಿ, ಮನೆ, ಅಂಗಡಿಗಳಿಗೆ ಬೆಂಕಿ

ಕೋಲ್ಕತಾ: ಪಶ್ಚಿಮಬಂಗಾಳ ವಿಧಾನಸಭಾ ಚುನಾವಣಾ ಫಲಿತಾಂಶ ಹೊರಬಿದ್ದ ಬೆನ್ನಲ್ಲೇ ರಾಜ್ಯದೆಲ್ಲೆಡೆ ರಾಜಕೀಯ ಹಿಂಸಾಚಾರ ತಾಂಡವವಾಡಿದ್ದು ಇದುವರೆಗೆ ನಾಲ್ವರು ಬಲಿಯಾಗಿದ್ದಾರೆ. ಉತ್ತರ 24 ಪರಗಣದ ನ್ಯೂ ಟೌನ್‌ನಲ್ಲಿ ಮತ್ತು

ಹೌರಾದ ಉದಯನಾರಾಯಣಪುರದಲ್ಲಿ ಇಬ್ಬರು ಬಿಜೆಪಿ ಕಾರ್ಯಕರ್ತರು ಬಲಿಯಾಗಿದ್ದಾರೆ. ಇದೇ ವೇಳೆ ಕೋಲ್ಕತಾದ ಬೆಲಾಘಾಟ್ ಹಾಗೂ ಬಿರ್ಭೂಮ್‌ನ ನಾನೂರ್‌ನಲ್ಲಿ ಟಿಎಂಸಿ ಕಾರ್ಯಕರ್ತರು ಹತ್ಯೆಗೀಡಾಗಿದ್ದಾರೆ. ಆದರೆ ಕನಿಷ್ಠ ಎರಡು ಪ್ರಕರಣಗಳು ರಾಜಕೀಯ ಸಂಬಂಧಿತ ಹತ್ಯೆಯಲ್ಲ. ಹೌರಾದಲ್ಲಿ ನಡೆದ ಕೃತ್ಯಕ್ಕೆ ರಾಜಕೀಯ ಕಾರಣವಲ್ಲ. ಇದು ವೈಯಕ್ತಿಕ ದ್ವೇಷದಿಂದ ನಡೆದಿರುವುದು ಎಂದು ತನಿಖೆ ವೇಳೆ ಗೊತ್ತಾಗಿದೆ. ಬೆಲಾಘಾಟ್‌ನಲ್ಲಿ ಟಿಎಂಸಿ ಕಾರ್ಯಕರ್ತನನ್ನು ಹುಡುಕುತ್ತಾ ಕೆಲವರು ಆತನ ಮನೆಗೆ ಬಂದಾಗ ಆತ ತಪ್ಪಿಸಿಕೊಳ್ಳುವ ಯತ್ನದಲ್ಲಿ ಟೇರಸ್‌ನಿಂದ ಹಾರಿದ್ದ ಎಂದು ಪೊಲೀಸ್ ಅಧಿಕಾರಿ ವಿವರಿಸಿದ್ದಾರೆ.

ನ್ಯೂಟೌನ್‌ನಲ್ಲಿ ಬಿಜೆಪಿ ವಿಜಯೋತ್ಸವ ಆಚರಣೆಯ ನಂತರ ಪಕ್ಷದ ಕಾರ್ಯಕರ್ತ ಮಧು ಮೊಂಡಲ್ ಮನೆಗೆ ಬರುತ್ತಿದ್ದಾಗ ಟಿಎಂಸಿ ಕಾರ್ಯಕರ್ತರ ದಾಳಿಯಿಂದ ಹತ್ಯೆಗೀಡಾಗಿದ್ದಾನೆ. ಹೌರಾದ ನಾರಾಯಣಪುರದಲ್ಲಿ ಬಿಜೆಪಿ ಗೆದ್ದ ನಂತರ ಜೈ ಶ್ರೀರಾಮ್ ಘೋಷಣೆ ಕೂಗಿ ಕೇಸರಿ ಬಣ್ಣ ಎರಚಿದಕ್ಕಾಗಿ ಯಾದವ್ ಬಾರ್ ಎಂಬಾತನನ್ನು ಕೊಲೆ ಮಾಡಲಾಗಿದೆ.

ಇದೇ ರೀತಿ ಬಿರ್ಭೂಮ್‌ನಲ್ಲಿ ಟಿಎಂಸಿ ಕಾರ್ಯಕರ್ತ ಅಬಿರ್ ಘೋಷ್ ಹಾಗೂ ಬೆಲಾ ಘಾಟ್‌ನಲ್ಲಿ ಅದೇ ಪಕ್ಷದ ಶಾಸಕ ವಿಸ್ವಜಿತ್ ಪಟ್ಟನಾಯಕನನ್ನು ಬಿಜೆಪಿಯವರು ಹತ್ಯೆ ಮಾಡಿದ್ದಾರೆಂದು ಆರೋಪಿಸಲಾಗಿದೆ. ಕೋಲ್ಕತಾದ ನ್ಯೂ ಮಾರ್ಕೆಟ್‌ನಲ್ಲಿದ್ದ ಮಾಂಸದಂಗಡಿಯನ್ನು ಬುಲ್ಡೋಜರ್ ಮೂಲಕ ಕೆಲವು ದುಷ್ಕರ್ಮಿಗಳು ಕೆಡವಿದ್ದಾರೆ. ಈ ಕೃತ್ಯಕ್ಕೆ ಬಿಜೆಪಿ ಬೆಂಬಲ ನೀಡಿದೆ ಎಂದು ಆರೋಪಿಸಲಾಗುತ್ತಿದೆ. ಪುಟ 12

9ಕ್ಕೆ ಸಿಎಂ ಪ್ರಮಾಣ

ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆಯಲು ಬಿಜೆಪಿ ಸಜ್ಜಾಗಿದೆ. ಮೇ9ರಂದು ರವೀಂದ್ರನಾಥ್ ಠಾಗೂರ್ ಅವರ ಜನ್ಮದಿನದಂದೇ ನೂತನ ಮುಖ್ಯಮಂತ್ರಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದು ಬಂಗಾಳದ ಬಿಜೆಪಿ ರಾಜ್ಯಾಧ್ಯಕ್ಷ ಸಮೀಕ್ ಭಟ್ಟಾಚಾರ್ಯ ದೃಢಪಡಿಸಿದ್ದಾರೆ. 294 ಸದಸ್ಯ ಬಲದ ವಿಧಾನಸಭೆಯಲ್ಲಿ ಬಿಜೆಪಿಯು 207 ಸ್ಥಾನಗಳನ್ನು ಗೆಲ್ಲುವ ಮೂಲಕ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಆಡಳಿತಕ್ಕೆ ಅಂತ್ಯ ಹಾಡಿದೆ. ಶನಿವಾರ ನಡೆಯಲಿರುವ ಪದಗ್ರಹಣ ಸಮಾರಂಭಕ್ಕೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹಸಚಿವ ಅಮಿತ್ ಶಾ ಸೇರಿದಂತೆ ಗಣ್ಯರು ಪಾಲ್ಗೊಳ್ಳುವ ಸಾಧ್ಯತೆಯಿದೆ.

ಇಂದು ಸರ್ಕಾರ ವಿಸರ್ಜನೆ

- ಇನ್ನೂ ರಾಜೀನಾಮೆ ನೀಡದ ಮಮತಾ

ಪಶ್ಚಿಮ ಬಂಗಾಳದ ಸರ್ಕಾರ ಮೇ 7ರಂದು ವಿಸರ್ಜನೆಯಾಗಲಿದ್ದು, ಮಮತಾ ಬ್ಯಾನರ್ಜಿ ಅವರು ಇನ್ನೂ ರಾಜೀನಾಮೆ ನೀಡಿಲ್ಲ. ಚುನಾವಣೆಯಲ್ಲಿ ಬಿಜೆಪಿ ಬಹುಮತ ಸಾಧಿಸಿದ್ದರೂ, ಸಿಎಂ ಮಮತಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರಾಕರಿಸಿದ್ದಾರೆ. ಇದು ರಾಜ್ಯದಲ್ಲಿ ಸಾಂವಿಧಾನಿಕ ಬಿಕ್ಕಟ್ಟಿಗೆ ದಾರಿ ಮಾಡಿಕೊಟ್ಟಿದೆ. ನಾನು ಸೋತಿಲ್ಲ, ನಮ್ಮ ಪಕ್ಷವೂ ಸೋತಿಲ್ಲ. ಚುನಾವಣೆ ಆಯೋಗ ಮತ್ತು ಬಿಜೆಪಿ ಸೇರಿ 100ಕ್ಕೂ ಹೆಚ್ಚು ಸ್ಥಾನಗಳನ್ನು ಲೂಟಿ ಮಾಡಿವೆ ಎಂದು ಮಮತಾ ಆರೋಪಿಸಿದ್ದಾರೆ.

'5 ವರ್ಷ ಕಾಂಗ್ರೆಸ್‌ದೇ ಸರ್ಕಾರ, ವರಿಷ್ಠರು ಹೇಳಿದ್ರೆ ನಾನೇ ಸಿಎಂ'

ಮೊದಲ ಬಾರಿ ಬದಲಾಯ್ತೇ ಸಿಎಂ ಮಾತಿನ ಧಾಟಿ?

ಸಂ.ಕ. ಸಮಾಚಾರ, ಮೈಸೂರು

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಪೂರ್ಣಾವಧಿ ಮುಂದುವರೆಯಲಿದೆ. ಹೈಕಮಾಂಡ್ ಮಾತನ್ನು ಮಾತ್ರ ಕೇಳುತ್ತೇನೆ. ಹೈಕಮಾಂಡ್ ಹೇಳಿದರೆ ಐದು ವರ್ಷ ನಾನೇ ಮುಖ್ಯಮಂತ್ರಿ ಆಗಿರುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳುವ ಮೂಲಕ ಕುರ್ಚಿ ಭದ್ರ ಎಂಬ ಸಂದೇಶ ರವಾನಿಸಿದ್ದಾರೆ.

ನಗರದ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ 5 ವರ್ಷ ನೀವೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತೀರಾ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ, ಐದು ವರ್ಷ ಕಾಂಗ್ರೆಸ್ ಸರ್ಕಾರ ಇರುತ್ತದೆ. ಹೈಕಮಾಂಡ್ ಹೇಳಿದರೆ ನಾನು 5 ವರ್ಷ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತೇನೆ ಎಂದು ಹೇಳಿದರು. ತನ್ಮೂಲಕ '5 ವರ್ಷ ನಾನೇ ಸಿಎಂ' ಎಂಬ ಈವರೆಗಿನ ಅವರ ಹೇಳಿಕೆಯಲ್ಲಿ ಮೊದಲ ಬಾರಿ ಬದಲಾವಣೆ ಕಂಡು ಬಂದಿತು. ಪುಟ 12

ರಾಹುಲ್ ಗಾಂಧಿ ಕರೆದ್ರೆ ಮಾತ್ರ ದಿಲ್ಲಿಗೆ ಹೋಗ್ತೇನೆ

ಹೈಕಮಾಂಡ್ ಹೇಳಿದರೆ ಐದು ವರ್ಷ ನಾನೇ ಮುಖ್ಯಮಂತ್ರಿ ಆಗಿರುತ್ತೇನೆ. ಹೈಕಮಾಂಡ್ ಮಾತನ್ನು ಮಾತ್ರ ಕೇಳುತ್ತೇನೆ. ಯಾರು ಏನೇ ಹೇಳಿದರೂ ಅಂತಿಮ ನಿರ್ಧಾರ ಹೈಕಮಾಂಡ್‌ನದ್ದೇ ಆಗಿದೆ. ರಾಹುಲ್ ಗಾಂಧಿ ಕರೆದರೆ ದೆಹಲಿ ಹೋಗಿ ಭೇಟಿ ಆಗುತ್ತೇನೆ. ನಾನು ಭೇಟಿ ಸಮಯ ಕೇಳಿಲ್ಲ.

- ಸಿದ್ದರಾಮಯ್ಯ, ಮುಖ್ಯಮಂತ್ರಿ

ಐಪಿಎಲ್ ಫೈನಲ್ ಅಹ್ಮದಾಬಾದ್‌ಗೆ

ಬೆಂಗ್ಳೂರು ಕೈಬಿಟ್ಟಿದ್ದಕ್ಕೆ ಶಾಸಕರು ಕಾರಣವೇ?

ಸಂ.ಕ.ಸಮಾಚಾರ, ಬೆಂಗಳೂರು

ಮೇ 31 ರಂದು ನಡೆಯಬೇಕಿರುವ ಐಪಿಎಲ್ ಫೈನಲ್ ಪಂದ್ಯ ಅಹಮದಾಬಾದ್ ಸ್ಟೇಡಿಯಂನಲ್ಲಿನಡೆಯಲಿದೆ.

ಬೆಂಗಳೂರಿನಲ್ಲಿ ನಡೆಯಬೇಕಿದ್ದ ಫೈನಲ್ ಸ್ಥಳಾಂತರಗೊಂಡಿದ್ದು, ಕ್ರಿಕೆಟ್ ಅಭಿಮಾನಿಗಳಲ್ಲಿ ಬೇಸರಕ್ಕೆ ಕಾರಣವಾಗಿದೆ. ಶಾಸಕರಿಗೆ ಉಚಿತ ಟಿಕೆಟ್ ನೀಡಬೇಕಾಗಿರುವುದರಿಂದ ಪಂದ್ಯ ಸ್ಥಳಾಂತರ ಆಗಿರಬಹುದು ಎನ್ನಲಾಗಿದೆ. ವಿವರ: 12

ಫ್ರೀ ಟಿಕೆಟ್‌ಗೆ ಸಂಬಂಧವಿಲ್ಲ

ಅಹಮದಾಬಾದ್‌ನಲ್ಲಿ ದೊಡ್ಡ ಕ್ರೀಡಾಂಗಣವಿದೆ, ಹೆಚ್ಚು ಜನ ಸೇರುತ್ತಾರೆ ಎಂಬ ಉದ್ದೇಶದಿಂದ ಫೈನಲ್ ಪಂದ್ಯ ಸ್ಥಳಾಂತರ ಮಾಡಿರಬೇಕು. ಶಾಸಕರಿಗೆ ಟಿಕೆಟ್ ವಿತರಣೆಗೂ ಅಂತಿಮ ಪಂದ್ಯ ಸ್ಥಳಾಂತರಕ್ಕೂ ಸಂಬಂಧವಿಲ್ಲ. ಹಾಗೇನಾದರೂ ಬಿಸಿಸಿಐ ಹೇಳಿದರೆ ಸೂಕ್ತ ಉತ್ತರ ಕೊಡ್ತೀನಿ.

- ಡಿ.ಕೆ.ಶಿವಕುಮಾರ್, ಡಿಸಿಎಂ

ಬೆಳಗಾವೀಲಿ ಪ್ರಥಮ ಮುಂಗಾರು ಕಲಾಪ?

ಸುವರ್ಣಸೌಧ ನಿರ್ಮಾಣವಾಗಿ 13 ವರ್ಷ ಬಳಿಕ ಹೊಸ ಮುನ್ನುಡಿ

- ಶಿವಕುಮಾರ್ ಮೆಣಸಿನಕಾಯಿ

ಬೆಂಗಳೂರು: ಈಗಾಗಲೇ ಅತಿ ಸುದೀರ್ಘ ಅವಧಿಗೆ ಮುಖ್ಯಮಂತ್ರಿ ಆಗಿ ಸಾಧನೆ ಮಾಡಿರುವ ಸಿದ್ದರಾಮಯ್ಯ ಅವರು ಇದೀಗ ಮತ್ತೊಂದು ದಾಖಲೆ ಸ್ಥಾಪಿಸಲು ವೇದಿಕೆ

ಸಿದ್ಧಪಡಿಸುತ್ತಿದ್ದಾರೆ. ಕರ್ನಾಟಕ ವಿಧಾನ ಮಂಡಲದ ಮುಂಗಾರು ಅಧಿವೇಶನ ಇತಿಹಾಸದಲ್ಲೇ ಮೊದಲ ಬಾರಿಗೆ ಬೆಳಗಾವಿಯ ಸುವರ್ಣಸೌಧದಲ್ಲಿ ಜೂನ್ ಎರಡನೇ ವಾರ ನಡೆಯಲಿದೆ. ಹೌದು, ಸಿಎಂ ಸಿದ್ದರಾಮಯ್ಯ ಈಗಾಗಲೇ ಉಭಯ ಸದನಗಳ ಅಧ್ಯಕ್ಷರ ಜೊತೆ ಚರ್ಚೆ ನಡೆಸಿದ್ದು, ಎಲ್ಲವೂ ಅಂದುಕೊಂಡಂತೆ ನಡೆದರೆ ಜೂನ್ ಎರಡನೇ ವಾರದಿಂದ 10 ದಿನ ಮುಂಗಾರು ಕಲಾಪ ಸುವರ್ಣ ಸೌಧದಲ್ಲಿ ನಡೆಯಲಿದೆ. ಪುಟ 12

- ಜೂನ್ ಎರಡನೇ ವಾರದಲ್ಲಿ 10 ದಿನ ಮುಂಗಾರು ಅಧಿವೇಶನಕ್ಕೆ ಸರ್ಕಾರ ಸಜ್ಜು
- ಇದೇ ಮೊದಲ ಬಾರಿಗೆ ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆಯಲಿದೆ ಕಲಾಪ
- ಕಳೆದ 25 ವರ್ಷಗಳಿಂದ ಚಳಿಗಾಲದ ಅಧಿವೇಶನಕ್ಕೆ ಸೀಮಿತವಾಗಿದ್ದ ಬೆಳಗಾವಿ
- 2012ರಲ್ಲಿ ಸುವರ್ಣಸೌಧ ನಿರ್ಮಾಣ ಆದ್ಮೇಲೆ ಮೊಲದ ಮುಂಗಾರು ಕಲಾಪ
- ಇತಿಹಾಸದಲ್ಲೇ ಮುಂಗಾರು ಅಧಿವೇಶನ ಬೆಳಗಾವಿಯಲ್ಲಿ ನಡೆಸಿ ಮತ್ತೊಂದು ಹೊಸ ದಾಖಲೆಗೆ ಸಿಎಂ ಸಿದ್ದು ಒಲವು

ಸಿಎಂ ಜತೆ ಚರ್ಚಿಸಿದ್ದೇನೆ



ಬೆಳಗಾವಿಯಲ್ಲಿ ಮುಂಗಾರು ಅಧಿವೇಶನ ನಡೆಸುವ ಮೂಲಕ ಉತ್ತರ ಕರ್ನಾಟಕದಲ್ಲಿ ನಡೆಯುವ ಶಾಸನ ಸಭೆಯ ಚರ್ಚೆಗಳು ಮತ್ತಷ್ಟು ಗಂಭೀರ ಸ್ವರೂಪ ಪಡೆಯಬೇಕೆಂಬುದು ನನ್ನ ಅಭಿಪ್ರಾಯ. ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಳಗಾವಿಯಲ್ಲಿ ಮುಂಗಾರು ಅಧಿವೇಶನ ನಡೆಸುವ ಬಗ್ಗೆ ನನ್ನೊಂದಿಗೆ ಚರ್ಚಿಸಿದ್ದಾರೆ. ಈ ಬಗ್ಗೆ ಸರ್ಕಾರ ಅಂತಿಮ ನಿರ್ಧಾರ ಪ್ರಕಟಿಸಲಿದೆ.

- ಬಸವರಾಜ್ ಹೊರಟ್ಟಿ, ವಿಧಾನ ಪರಿಷತ್ ಸಭಾಪತಿ

JSS ACADEMY OF HIGHER EDUCATION & RESEARCH (DEEMED TO BE UNIVERSITY) MYSURU

NAAC A++ Accredited | NIRF Top 25 University in India

ADMISSIONS OPEN 2026-27

APPLY @ www.jssuni.edu.in | admissions@jssuni.edu.in | +91 99808 41859 +91 821-2548014/416

MEDICINE
- MBBS
- MD/MS/Dip (24 Specializations)
- DM/M.Ch (8 Specializations)

Fellowship/Diploma:
- Psychosexual Medicine/ Neuroanaesthesia
- Neonatology/ Pain Medicine
- Critical Care Medicine/Head & Neck Surgery
- Otology & Neuro-Otology
- Arthroplasty/Arthroscopy
- Regional Anaesthesia/ Infectious Diseases
- Diploma in Psychosexual Health

BOT/B.Sc (Allied & Healthcare Education):
- Anesthesia & Operation Theatre Technology
- Medical Laboratory Technology
- Medical Imaging Technology
- Renal Dialysis Technology
- Respiratory Therapy
- Cardiac Care Technology
- Perfusion Technology
- Emergency Medicine Technology
- Optometry
- Forensic Sciences
- Physician Assistant
- Medical Genetics & Counseling (Hon's)
- Bachelor of Occupational Therapy (BOT)

MOT/MA/M.Sc (Medical / Allied & Healthcare Education):
- Medical Microbiology
- Medical Biochemistry
- Medical Physiology
- Medical Anatomy
- Medical Pharmacology
- Medical Genetics and Counseling
- Clinical Psychology
- Clinical Embryology
- Clinical Research
- Respiratory Therapy
- Forensic Odontology
- Echocardiography
- Health Technologies and Data Sciences
- Epidemiology (Spatial epidemiology)
- Masters in Occupational Therapy (MOT) in Paediatrics
- Masters in Occupational Therapy (MOT) in Neurology
- MA Clinical Psychology
- Prof. Diploma in Clinical Psychology

School of Public Health:
- Bachelor of Public Health (BPH)
- Masters in Public Health (MPH)
- Masters in Public Health in Biostatistics

Certificate:
- Geriatric Emergency Medicine
- Dermatopathology
- Clinical Immunology and Rheumatology
- Antimicrobial Stewardship
- ICU Point of Care Ultrasound (POCUS)

PHARMACY (Mysuru & Ooty Campus)
- B Pharm
- B Pharm - Lateral Entry
- Pharm D
- Pharm D (PB)
- D Pharm

M.Pharm
- Pharmaceutics
- Industrial Pharmacy
- Pharmaceutical Regulatory Affairs
- Pharmaceutical Chemistry
- Pharmaceutical Analysis
- Pharmaceutical Quality Assurance
- Pharmacology
- Pharmacy Practice
- Pharmacognosy
- Pharmaceutical Biotechnology

Clinical Pharmacy Residency
- Infectious Diseases/ Oncology/ Nephrology/ Geriatrics Pharmacy/ Community Pharmacy/ Cardiology

Diploma/Certificate
- Pharma Diploma (17 Programs)
- Certificate Program in (GxP)
- Clinical Research/ Telepharmacy
- Medicine Information
- Herbal Drug Standardization
- Pharmaceutical Quality Assurance

DENTISTRY
- BDS
- MDS (9 Specializations)

Diploma
- Dental Mechatronics
- Dental Operating Room Assistant

Certificate Programs:
- Dental Certificate (7 Programs)

HEALTH SYSTEM MANAGEMENT STUDIES
- BBA Hospital & Health System Management (Hon's)
- MBA Hospital Administration
- MBA (HR/Finance/Marketing)
- MBA Pharmacy Administration

YOGA
- B.Sc Yoga
- M.Sc Yoga
- Yoga Teachers Course (YTC) 3 Months

Ph.D
- Medicine/ Dentistry/ Pharmacy Management Studies / Yoga Life Sciences/ Allied & Healthcare Education/ Occupational therapy

LIFE SCIENCES
B.Sc (3Yrs Degree/4Yrs Hon's)
- Biotechnology
- Microbiology
- Environmental Sciences
- Food, Nutrition & Dietetics
- Psychology
- Biochemistry
- Computational Biology & Bioinformatics
- Statistics & Data Analytics
- Artificial Intelligence & Data Science

M.Sc (2 Years)
- Biochemistry
- Geoinformatics
- Microbiology
- Cognitive Neuroscience
- Environmental Sciences
- Molecular Biology
- Nano Science & Technology
- Nutrition & Dietetics
- Medical Statistics
- Bioinformatics
- Medical Physics
- Cosmetic Science
- Biotechnology
- Sports, Nutrition & Management
- Master of Library and Information Science (M.Lib & Info. Sci.)
- Clinical Psychology (Ooty Campus)

M.Sc (1 Year - NEP)
- Psychology
- Nutrition and Dietetics
- Biochemistry
- Microbiology
- Biotechnology
- Environmental Sciences

Diploma
- Tissue Culture
- Nutraceutical Technology
- Environment Health & Safety Management/ Industrial Safety

Online Learning Programs
- BBA Hospital and Health System Management
- MBA Hospital Administration
- MBA Pharmacy Administration

Certificate Programs
- Dental Ethics & Jurisprudence/
- Yoga Instructor/ Pharmacoinformatics
- Immunoinformatics & Vaccine Design

Diploma
- Bioinformatics/ Medical Devices
- Pharmacovigilance/ Pharmacuitical Quality Control/ Regulatory Affairs

JSS ACADEMY OF HIGHER EDUCATION & RESEARCH
Sri Shivarathreeshwara Nagara, Bannimantap, Mysuru - 570015 Karnataka, India

ಮೊಟ್ಟೆ ಧಾರಣೆ 100ಕ್ಕೆ-₹590, 10ಕ್ಕೆ- ₹64 | ಚಿಕನ್ ದರ ಕೆಜಿಗೆ ₹260 | ಶುದ್ಧ ಬಂಗಾರ (99.90) ₹1,51,600 | ಸ್ಟಾಂಡರ್ಡ್ ಬಂಗಾರ (22 ಕ್ಯಾ.) ₹1,38,700 | ಶುದ್ಧ ಬೆಳ್ಳಿ (.999 ಶುದ್ಧತೆ) ₹2,49,900 | ಪ್ರತಿ ಡಾಲರ್‌ಗೆ ₹94.61

CMYK

ಸುದ್ದಿ ಮಿಂಚು

ಸುರಪುರದಲ್ಲಿ ನಗರ ಸಾರಿಗೆ ಬಸ್ ಪ್ರಾರಂಭಿಸುವಂತೆ ನಗರಸಭೆ ಸದಸ್ಯ ಮನವಿ ಸಲ್ಲಿಸಿದರು.

ನಗರ ಸಾರಿಗೆ ಸಂಚಾರಕ್ಕೆ ಆಗ್ರಹ

ಸುರಪುರ: ನಗರಸಭೆ ವ್ಯಾಪ್ತಿಯಲ್ಲಿ ನಗರ ಸಾರಿಗೆ (ಸಿಟಿ) ಬಸ್ ಸೌಲಭ್ಯ ಕಲ್ಪಿಸುವಂತೆ ನಗರಸಭೆ ನಾಮ ನಿರ್ದೇಶಿತ ಸದಸ್ಯ ಪ್ರಕಾಶ ಅಲಬನೂರ ಆಗ್ರಹಿಸಿದರು. ಈ ಕುರಿತು ಸಾರಿಗೆ ಘಟಕ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿ ಮಾತನಾಡಿ, ಸುರಪುರ ನಗರ ದಿನೇ ದಿನೇ ವಿಸ್ತಾರಗೊಳ್ಳುತ್ತಿದ್ದು ನಗರದ ಸುತ್ತಳತೆ ಸುಮಾರು 15 ಕಿ.ಮೀ ಗಿಂತ ಹೆಚ್ಚಾಗುತ್ತಿದ್ದು ನಗರದಲ್ಲಿ ಸಾರಿಗೆ ವ್ಯವಸ್ಥೆ ಇಲ್ಲದ್ದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆ ಉಂಟಾಗುತ್ತಿದೆ. ಬಸ್ ನಿಲ್ದಾಣದಿಂದ ನ್ಯಾಯಾಲಯ, ಸರ್ಕಾರಿ ಪದವಿ ಮಹಾವಿದ್ಯಾಲಯ, ಸರಕಾರಿ ಪಾಲಿಟೆಕ್ನಿಕ್ ಕಾಲೇಜ್, ತಹಸಿಲ್ದಾರ್ ಕಚೇರಿ, ತಾಲೂಕ ಪಂಚಾಯಿತಿ ಕಚೇರಿ ಇನ್ನಿತರ ಕಚೇರಿಗಳಿಗೆ ಹೋಗಲು ಸಾರ್ವಜನಿಕರಿಗೆ ಸಾರಿಗೆ ಅನುಕೂಲ ಇಲ್ಲದೆ ಖಾಸಗಿ ವಾಹನಗಳಿಗೆ ಹೆಚ್ಚು ಹಣ ನೀಡಿ ಹೋಗಿ ಬರುವ ಪರಿಸ್ಥಿತಿ ಇದೆ ಎಂದು ದೂರಿದರು.

ಅಲ್ಲದೆ ಬಸ್ ನಿಲ್ದಾಣದಿಂದ ರಂಗಂಪೇಟೆ ಅಂಬೇಡ್ಕರ್ ವೃತ್ತ, ದೊಡ್ಡ ಬಜಾರ, ತಿಮ್ಮಾಪುರ ,ದಿವಳಗುಡ್ಡ ಮಾರ್ಗವಾಗಿ ಸತ್ಯಂಪೇಟೆ, ನಂತರ ಶಿಬಾರಬಂಡಿ,ಎಪಿಎಂಸಿ ಮಾರುಕಟ್ಟೆ, ಕುಂಬಾರಪೇಟೆ ಮೂಲಕ,ಹಳೆ ಬಸ್ ನಿಲ್ದಾಣ ಮಾರ್ಗವಾಗಿ ಬಸ್ ನಿಲ್ದಾಣಕ್ಕೆ ಸಿಟಿ ಬಸ್ ಓಡಾಟ ಆರಂಭಿಸಿದಲ್ಲಿ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗಲಿದೆ. ಆದ್ದರಿಂದ ಸಾರಿಗೆ ಇಲಾಖೆ ಕೂಡಲೆ ನಗರ ಸಾರಿಗೆ ಬಸ್‌ಗಳ ಸಂಚಾರ ಆರಂಭಿಸಬೇಕೆಂದು ಒತ್ತಾಯಿಸಿದರು. ಮನವಿಗೆ ಸ್ಪಂದಿಸಿದ ಬಸ್ ಘಟಕದ ವ್ಯವಸ್ಥಾಪಕರು ತಕ್ಷಣವೇ ಮೇಲಾಧಿಕಾರಿಗಳ ಗಮನಕ್ಕೆ ತಂದು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಕೆ ಸೊಹೇಲ್ ತಿಮ್ಮಾಪೂರ, ತುಕಾರಾಂ ಟಿ ಭಾಗವಹಿಸಿದ್ದರು.

ಅವೈಜ್ಞಾನಿಕ ಕಾಲುವೆ ಕಾಮಗಾರಿ ನಿಲ್ಲಿಸಿ

ವಡಗೇರಾ: ಕೃಷ್ಣಾ ಮೇಲ್ದಂಡೆ ಎಡಭಾಗದ ಕಾಲುವೆ ವಡಗೇರಾದಿಂದ ಬೆಂಡೆಬೆಂಬಳಿವರೆಗೆ ಹೊಸದಾಗಿ ಕಾಲುವೆ ನಿರ್ಮಾಣವಾಗುತ್ತಿರುವುದು ಅವೈಜ್ಞಾನಿಕದಿಂದ ಕೂಡಿದೆ. ಕೂಡಲೇ ಕಾಮಗಾರಿ ನಿಲ್ಲಿಸುವಂತೆ ಜೆಡಿಎಸ್ ಪಕ್ಷ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ವಿನೋದಗೌಡ ಮಾಲಿಪಾಟೀಲ್ ಆಗ್ರಹಿಸಿದ್ದಾರೆ. ತಾಲೂಕಿನ ಕೊನೆ ಭಾಗದ ಗ್ರಾಮಗಳಾದ ಕುರಿಯಾಳ, ಅನಕಸೂಗೂರು, ಬೀರನಕಲ್, ಕಾಡಂಗೇರಾ (ಬಿ), ಕುರುಕುಂದ, ಬಸವನಗರ, ಹಾಲಗೇರಾ, ಹೊರಟೂರು, ವಡಗೇರಾ ಇನ್ನಿತರ ಗ್ರಾಮಗಳಿಗೆ ಪ್ರತಿ ವರ್ಷವೂ ಸಮರ್ಪಕವಾಗಿ ಕಾಲುವೆಗಳಿಗೆ ನೀರು ಪೂರೈಕೆಯಾಗುತ್ತಿಲ್ಲವೆಂದು ದೂರಿದ್ದಾರೆ. ಆದರೆ ಸರ್ಕಾರ ನೂರಾರು ಕೋಟಿ ರೂ. ಖರ್ಚು ಮಾಡಿ ಕೊನೆ ಭಾಗದ ಕಾಲುವೆಯ ಮುಂದಿನ ಗ್ರಾಮಗಳಿಗೆ ನೀರು ತಲುಪಿಸುತ್ತೇವೆ ಎಂದು ಕಾಮಗಾರಿ ಮಾಡುತ್ತಿರುವುದು ಸರಿಯಲ್ಲ. ಈ ಕಾಮಗಾರಿಯೂ ಗುತ್ತಿಗೆದಾರರ ಪರವಾಗಿ ಅವರ ಲಾಭಕ್ಕಾಗಿ ಕಾಮಗಾರಿ ಆರಂಭ ಮಾಡುತ್ತಿದೆ ಎಂಬ ಅನುಮಾನವನ್ನು ಅವರು ವ್ಯಕ್ತಪಡಿಸಿದ್ದಾರೆ. ಸುಮಾರು ವರ್ಷಗಳಿಂದ ಈ ಭಾಗದ ರೈತರು ಕಾಲುವೆ ನೀರಿನಿಂದ ವಂಚಿತರಾಗಿ ಸಂಕಷ್ಟ ಅನುಭವಿಸುತ್ತಿದ್ದಾರೆ. ವಡಗೇರಾ ಭಾಗದ ಕೊನೆ ಭಾಗಕ್ಕೆ ನೀರು ಹರಿದು ಬರುವುದಿಲ್ಲ.

ಅಂದ ಮೇಲೆ ಇನ್ನೂ ವಡಗೇರಾ ಕೆಳಭಾಗದ ಗ್ರಾಮಗಳಿಗೆ ನೀರು ತಲುಪಲು ಸಾಧ್ಯವೇ ಎಂದು ಖಾರವಾಗಿ ಪ್ರಶ್ನಿಸಿದ್ದಾರೆ. ಕೊನೆಯ ಭಾಗದ ರೈತರಿಗೆ ಕಾಲುವೆ ಇದ್ದು ಇಲ್ಲದಂತಾಗಿದೆ. ಕಾಲುವೆಗಾಗಿ ಜಮೀನು ಕಳೆದುಕೊಂಡ ರೈತರು ಕಂಗಾಲಾಗಿದ್ದಾರೆ. ಅಧಿಕಾರಿಗಳಿಗೆ ಇದರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದು, ಮುಂದಿನ ಭಾಗಕ್ಕೆ ಕಾಲುವೆ ನಿರ್ಮಾಣಕ್ಕೆ ಮುಂದಾಗಿರುವುದು ಸರಕಾರ ಹಣ ಪೋಲು ಹಾಕುವ ಹುನ್ನಾರ ಇದಾಗಿದೆ ಎಂದು ಆರೋಪಿಸಿದ್ದಾರೆ.

ವಡಗೇರಾ ಭಾಗದಲ್ಲಿ ಕೃಷ್ಣಾ ಮತ್ತು ಭೀಮಾ ನದಿ ಇವೆ ಅಲ್ಲಿಂದಲೇ ಏತ ನೀರಾವರಿಯನ್ನು ಮಾಡಬಹುದಿತ್ತು. ನೂತನ ಕಾಲುವೆ ನಿರ್ಮಾಣ ಯೋಜನೆಯಿಂದ ರೈತರಿಗೆ ಯಾವುದೇ ಪ್ರಯೋಜನವಿಲ್ಲ. ಆದ್ದರಿಂದ ಕಾಲುವೆ ಕಾಮಗಾರಿ ನಿಲ್ಲಿಸದಿದ್ದಲ್ಲಿ ಪ್ರತಿಕೂಲ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ಶುಭ ವಿವಾಹ

ಶಿವರಾಜ – ಸುನೀತಾ

ಕಲಬುರಗಿ: ತಾಲೂಕಿನ ಮೇಳಕುಂದಾ (ಬಿ) ಗ್ರಾಮದ ದಿ. ನೀಲಮ್ಮ ಮತ್ತು ಮಲ್ಲಿಕಾರ್ಜುನ ಪೊಲೀಸ್ ಪಾಟೀಲ್ ಅವರ ಪುತ್ರ ಶಿವರಾಜ ವಿವಾಹವು, ಕಡಣಿಯ ಕನ್ನುಬಾಯಿ ಮತ್ತು ಭೀಮಾಶಂಕರ ಬಾಗಲಕೋಟೆಯವರ ಪುತ್ರಿ ಸುನೀತಾ ಜೊತೆ ಹಡಗಿಲಹಾರುತಿಯ ಶ್ರೀ ಕಂಠಿ ಬಸವೇಶ್ವರ ದೇವಾಲಯದ ಆದರ್ಶ ಕಲ್ಯಾಣ ಮಂಟಪದಲ್ಲಿ ದಿ. 6ರಂದು ಜರುಗಿತು.

ಚಂದನಾ– ವಿನೋದ

ಕಲಬುರಗಿ: ಇಲ್ಲಿಯ ಕವಿತಾ ಮತ್ತು ವಿಜಯಕುಮಾರ ಬಾಡಾ ಅವರ ಪುತ್ರಿ ಚಂದನಾ ವಿವಾಹವು ಶೈಲಜಾ ಮತ್ತು ಲಕ್ಷ್ಮಣ ಕೊಕ್ಕವಾರ್ ಅವರ ಪುತ್ರ ವಿನೋದ ಜೊತೆ ನಗರದ ನಿಗ್ಗುಡಿ ಫಂಕ್ಷನ್ ಹಾಲ್‌ನಲ್ಲಿ ದಿ. 6ರಂದು ಜರುಗಿತು.

ನಿಯಮ ಮೀರಿ ಕಟ್ಟಡ ಕಟ್ಟಿದರೆ ನೆಲಸಮ

ನಗರಸಭೆ ಪೌರಾಯುಕ್ತ ಉಮೇಶ ಚವ್ಹಾಣ ಎಚ್ಚರಿಕೆ । ನಿಯಮ ಉಲ್ಲಂಘಿಸಿ ಕಟ್ಟಡಗಳು ಕಟ್ಟಿದರೇ ಕಾನೂನು ಕ್ರಮ

ಸಂ.ಕ. ಸಮಾಚಾರ ಯಾದಗಿರಿ: ನಗರಸಭೆ ನಿಯಮಗಳಂತೆಯೇ ಪರವಾನಿಗೆ ಪಡೆದು ಕಟ್ಟಡಗಳನ್ನು ಕಟ್ಟಬೇಕು ಹೊರತು ತಮ್ಮ ಮನಸೋ ಇಚ್ಛೆ ನಿರ್ಮಾಣಕ್ಕೆ ಮುಂದಾದರೆ ಅಂತಹ ಕಟ್ಟಡಗಳನ್ನು ಯಾವುದೇ ಮುಲಾಜಿ ಇಲ್ಲದೆ ನೆಲಸಮ ಮಾಡಲಾಗುವುದು ಮತ್ತು ಕಾನೂನು ಉಲ್ಲಂಘಿಸಿದರೆ ದಂಡ ವಿಧಿಸಲಾಗುವುದು ಎಂದು ನಗರಸಭೆ ಪೌರಾಯುಕ್ತ ಉಮೇಶ ಚವ್ಹಾಣ ಎಚ್ಚರಿಕೆ ನೀಡಿದ್ದಾರೆ. ನಗರದ ವಿವಿಧ ಬಡಾವಣೆಗಳಿಗೆ ತಮ್ಮ ಸಿಬ್ಬಂದಿಗಳೊಂದಿಗೆ ತೆರಳಿ ಹತ್ತಾರು ಕಟ್ಟಡಗಳನ್ನು ಪರಿಶೀಲಿಸಿದ ಅವರು ಮಾಧ್ಯಮದೊಂದಿಗೆ ಮಾತನಾಡಿ, ನಗರದಲ್ಲಿ ಮನೆ, ವಾಣಿಜ್ಯ ಮಳಿಗೆಗಳ ಕಟ್ಟುವಾಗ ಬಹುತೇಕರು ಪರವಾನಿಗೆ ಪಡೆಯುತ್ತಾರೆ. ಮುಂದೆ ಪರವಾನಿಗೆ ಪಡೆದ ಪ್ರಕಾರ ಕಟ್ಟಡ ನಿರ್ಮಾಣ ಮಾಡದೇ ತಮಗೆ ಬೇಕಾದ ರೀತಿಯಲ್ಲಿ ಕಟ್ಟಿಕೊಳ್ಳುವವರ ಸಂಖ್ಯೆ ಅಧಿಕವಾಗಿದೆ. ಇದಕ್ಕೆ ಮೂಗುದಾರ ಹಾಕಲು ನಗರಸಭೆ ಮುಂದಾಗಿದೆ ಎಂದು ಹೇಳಿದರು.

ವಸತಿ ಗೃಹಗಳು ಇರುವ ಕಡೆ ವಾಣಿಜ್ಯ ಮಳಿಗೆಗಳು ಕಟ್ಟುವುದು, ಒಂದೇ ಅಂತಸ್ತಿನ ಪರವಾನಿಗೆ ಪಡೆದು 2–3 ಅಂತಸ್ತುಗಳ ಕಟ್ಟಡ ಕಟ್ಟುವುದು, ಬೋರವೆಲ್ ಹಾಕುವಾಗ, ವಿದ್ಯುತ್ ಸಂಪರ್ಕ ಪಡೆಯುವಾಗ ನಗರಸಭೆಯಿಂದ ಕ್ಲಿಯರ್ ಪತ್ರ ಪಡೆಯುದು ಕಡ್ಡಾಯವಾಗಿದ್ದರೂ ಅನೇಕರು ನೇರವಾಗಿ ಜೆಸ್ಕಾಂ ಇಲಾಖೆಗೆ ಕರೆಂಟ್ ಸೌಲಭ್ಯ ಪಡೆಯುತ್ತಿದ್ದಾರೆ. ಇದು ತಪ್ಪು ಈ ವೇಳೆ ಜೆಸ್ಕಾಂ ಅಧಿಕಾರಿಗಳು ದಾಖಲೆಗಳು ಪರಿಶೀಲಿಯೇ ವಿದ್ಯುತ್ ಸಂಪರ್ಕ ನೀಡಬೇಕು. ಈ ನಿಟ್ಟಿನಲ್ಲಿ ಜೆಸ್ಕಾಂ ಅಧಿಕಾರಿಗಳು ಗಮನ ಹರಿಸಿ ನಗರಸಭೆಗೆ ಆಗುತ್ತಿರುವ ಮೋಸ ಮತ್ತು ನಷ್ಟ ತಪ್ಪಿಸಬೇಕೆಂದು ಮನವಿ ಮಾಡಿದರು.

ಖಾಲಿ ನಿವೇಶನಗಳ ಮಾಲಿಕರು ತಮ್ಮ ನಿವೇಶನಗಳ ಸುತ್ತ ಸುತ್ತುಗೊಡೆ ನಿರ್ಮಿಸಿ ಸ್ವಚ್ಛತೆ ಕಾಪಾಡಬೇಕು. ಇದನ್ನು ಉಲ್ಲಂಘಿಸಿದವರಿಗೆ ದಂಡ ವಿಧಿಸಲಾಗುವದು. ಕಟ್ಟಡ ಕಟ್ಟುವಾಗ ಚರಂಡಿ, ರಸ್ತೆ ಬಿಟ್ಟು ಕಟ್ಟಬೇಕೆಂಬ ನಿಯಮವಿದ್ದರೂ ಇಲ್ಲಿ ಅನೇಕರು ಚರಂಡಿ ಮೇಲೆಯೇ ಕಟ್ಟಡದ ಮೆಟ್ಟಿಲುಗಳು ನಿರ್ಮಿಸಿದ್ದಾರೆ. ಇಂತಹಗಳನ್ನು ಪತ್ತೆ ಹಚ್ಚಿ ನೆಲಸಮ ಮಾಡಲಾಗುವುದು ಎಂದು ಹೇಳಿದರು. ನಗರಸಭೆ ಅಧಿಕಾರಿಗಳಾದ ಶಿವಪುತ್ರ ನಡಗೇರಿ, ಶರಣಮ್ಮ, ಬಸವರಾಜ ಇನ್ನಿತರರಿದ್ದರು.

ಯಾದಗಿರಿಯಲ್ಲಿ ನಗರಸಭೆ ನಿಯಮಗಳನ್ನು ಮೀರಿ ಕಟ್ಟುತ್ತಿರುವ ಕಟ್ಟಡಗಳನ್ನು ಪೌರಾಯುಕ್ತ ಉಮೇಶ್ ಚವ್ಹಾಣ್ ಪರಿಶೀಲಿಸಿದರು.

ಸಂಚಾರಕ್ಕೆ ಅಡಚಣೆಯಾಗದಿರಲಿ

ಕಟ್ಟಡ ಕಟ್ಟುವ ಮಾಲಿಕರು ರಸ್ತೆ ಮೇಲೆ ಉಸುಕು ಮತ್ತು ಕಂಕರ್ ಹಾಕುವ ಮೂಲಕ ರಸ್ತೆ ಅತಿಕ್ರಮಣ ಮಾಡಿ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ನಗರಸಭೆ ಗಮನಕ್ಕೆ ಬಂದಿದೆ. ಯಾರೇ ಆಗಲಿ ತಮ್ಮ ನಿವೇಶನದ ಸ್ಥಳದಲ್ಲಿ ಬೇಕಾದ ವಸ್ತುಗಳು ಇಟ್ಟುಕೊಂಡು ನಿರ್ಮಾಣದ ಕೆಲಸ ಮಾಡಬೇಕು ಮತ್ತು ವಾಹನಗಳ ಪಾರ್ಕಿಂಗ್‌ಗಾಗಿ ಸ್ಥಳ ಬಿಟ್ಟಂತಹ ನಕಾಶೆ ನಗರಸಭೆ ತೋರಿಸುತ್ತಾರೆ. ಆದರೆ ಸ್ಥಳಕ್ಕೆ ಬಂದು ನೋಡಿದಾಗ ಪಾರ್ಕಿಂಗ್‌ಗೆ ಜಾಗವೇ ಬಿಟ್ಟಿರುವುದಿಲ್ಲ. ಲಕ್ಷಾಂತರ ರೂ.ಖರ್ಚು ಮಾಡಿ ಕಾರ್ ಇತರೆ ವಾಹನಗಳು ಖರೀದಿಸುವವರು ತಮ್ಮ ಸ್ವಂತ ಕಟ್ಟಡದ ಸ್ಥಳದಲ್ಲಿಯೇ ಕಡ್ಡಾಯವಾಗಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಿಕೊಳ್ಳಬೇಕು. ಇಲ್ಲವಾದರೇ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪೌರಾಯುಕ್ತರು ಎಚ್ಚರಿಕೆ ನೀಡಿದರು.

ಮುಂದಿನ ಸಭೆಗೆ ಶಾಸಕರನ್ನು ಕರೆಸಿ

ಪುರಸಭೆ ಸದಸ್ಯರ ಒಕ್ಕೊರಲಿನಿಂದ ಆಗ್ರಹ । ಪುರಸಭೆ ಕಚೇರಿ ಸಭಾಂಗಣದಲ್ಲಿ ಸಾಮಾನ್ಯ ಸಭೆ

ಸಂ.ಕ. ಸಮಾಚಾರ ಕಕ್ಕೇರಾ: ಪಟ್ಟಣವಿಡೀ ಮೂಲ ಸೌಲಭ್ಯದ ಕೊರತೆಯಿಂದ ನರಳುತ್ತಿದೆ. ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಹೆಚ್ಚಿನ ಅನುದಾನ ಅವಶ್ಯ. ಈ ಹಿನ್ನೆಲೆಯಲ್ಲಿ ಮುಂದಿನ ಸಭೆಗೆ ಶಾಸಕರನ್ನು ಕರೆಸುವಂತೆ ಪಕ್ಷಬೇಧ ಮರೆತು ಒಕ್ಕೊರಲಿನಿಂದ ಪಪಂ ಸದಸ್ಯರು ಆಗ್ರಹಿಸಿದರು. ಪಟ್ಟಣದ ಪುರಸಭೆ ಕಚೇರಿ ಸಭಾಂಗಣದಲ್ಲಿ ಪುರಸಭೆ ಅಧ್ಯಕ್ಷ ಪರಮಣ್ಣ ಕಮತಗಿ ಅಧ್ಯಕ್ಷತೆಯಲ್ಲಿ ಜರುಗಿದ ಸಾಮಾನ್ಯ ಸಭೆಯಲ್ಲಿ ಅನೇಕ ಸದಸ್ಯರು ಮಾತನಾಡಿ, ಈಗ ಸರಕಾರದಿಂದ ಬರುತ್ತಿರುವ ಅನುದಾನ ಸಮರ್ಪಕವಾಗಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಮೇಲಾಗಿ ನಮ್ಮ ಪೌರ ಕಾರ್ಮಿಕರು ವೇತನವಿಲ್ಲದೇ ಪರದಾಡುತ್ತಿದ್ದಾರೆ. ಕೂಡಲೇ ಅವರ ವೇತನ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು.

ಪಟ್ಟಣದ ಮುಖ್ಯ ರಸ್ತೆಗಳಾದ ಬನದೊಡ್ಡಿ ಕ್ರಾಸ್, ಹಳೆ ಗ್ರಾಪಂ ಕಚೇರಿ ಆವರಣ, ರಸ್ತೆ ಅಕ್ಕಪಕ್ಕ ಹಾಗೂ ನಾಡ ಕಚೇರಿಗಳಿಗೆ ವಾಹನಗಳು ಮತ್ತು ನಾಗರೀಕರು ಸಂಚರಿಸಲು ಬಾರದಂತೆ 50ಕ್ಕೂ ಹೆಚ್ಚು ಅನಧಿಕೃತ ಡಬ್ಬಾಗಳನ್ನು ಕೂಡಲೇ ಪುರಸಭೆ ಆಡಳಿತ ಮಂಡಳಿ ತೆರವುಗೊಳಿಸಬೇಕು ಎಂದು ಸದಸ್ಯರು ಮುಖ್ಯಾಧಿಕಾರಿಗಳನ್ನು ಆಗ್ರಹಿಸಿದರು.



ಕಕ್ಕೇರಾದ ಪುರಸಭೆ ಕಚೇರಿಯ ಸಭಾಂಗಣದಲ್ಲಿ ಸಾಮಾನ್ಯ ಸಭೆ ಜರುಗಿತು. ಪುರಸಭೆ ಅಧ್ಯಕ್ಷ ಪರಮಣ್ಣ ಕಮತಗಿ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಜೆಟ್ಟೆಪ್ಪ ದಳಾರ, ಮುಖ್ಯಾಧಿಕಾರಿ ವೆಂಕಟೇಶ ತೇಲಂಗ್ ಇದ್ದರು.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸ್ವಚ್ಛತೆ ಇಲ್ಲ. ಹೆರಿಗೆಯಾದ ಮಹಿಳೆಯರಿಗೆ ಬೆಳಗಿನ ಉಪಹಾರ, ಊಟ ನೀಡುತ್ತಿಲ್ಲ. ಆಸ್ಪತ್ರೆಯಲ್ಲಿ ಗಾಳಿ, ಬೆಳಕು ಇಲ್ಲದೇ ಗರ್ಭಿಣಿಯರು ಪರಿತಪಿಸುವಂತಾಗಿದೆ ಎಂದು ಸದಸ್ಯರು ಸಭೆಯಲ್ಲಿದ್ದ ವೈದ್ಯಾಧಿಕಾರಿಯನ್ನ ತರಾಟೆಗೆ ತೆಗೆದುಕೊಂಡ ಪ್ರಸಂಗ ಜರುಗಿತು. ಇನ್ನಿತರ ಹತ್ತು ಹಲವು ಉಪಯುಕ್ತ ವಿಷಯಗಳ ಮೇಲೆ ಗಂಭೀರ ಚರ್ಚೆಗೆ ಸಭೆ ಸಾಕ್ಷಿಯಾಯಿತು. ಉಪಾಧ್ಯಕ್ಷ ಜಟ್ಟೆಪ್ಪ ದಳಾರ, ಮುಖ್ಯಾಧಿಕಾರಿ ವೆಂಕಟೇಶ ತೇಲಂಗ್, ಸಿಬ್ಬಂದಿ ಮಾನಪ್ಪ ಗೋನಾಲ್, ಶೇಖರ್, ಮೌನೇಶ ನಾಯಕ, ಜಟ್ಟೆಪ್ಪ ಬಾಚಾಳ್, ಕೃಷ್ಣಾ ನಾಯ್ಕ್ ರಾಠೋಡ್ ಇನ್ನಿತರರು ಇದ್ದರು.

ತೆರೆದ ಬಾವಿ ಸ್ವಚ್ಛತೆಗೆ ಆಗ್ರಹ

ಗುರುಮಠಕಲ್: ತಾಲೂಕಿನ ಚಪೆಟ್ಲ ಗ್ರಾಮದ ಹರಿಜನ ವಾರ್ಡ್‌ನಲ್ಲಿರುವ ಸಾರ್ವಜನಿಕ ತೆರೆದ ಬಾವಿಯು ಸಂಪೂರ್ಣವಾಗಿ ಮುಳ್ಳು, ಕಂಠಿಗಳಿಂದ ಆವೃತ್ತವಾಗಿದೆ. ಈ ಬಾವಿಯನ್ನು ಸ್ವಚ್ಛಗೊಳಿಸುವದು ಸೇರಿ ಬಾವಿಯ ಸುತ್ತಲೂ ತಡೆಗೋಡೆ ನಿರ್ಮಿಸಿ ಜನರಿಗೆ ಉಪಯೋಗಿಸಲು ಅನುಕೂಲ ಮಾಡಿಕೊಡುವದು ಸ್ಥಳೀಯ ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ಆದ್ಯ ಕರ್ತವ್ಯವಾಗಿದೆ. ಗ್ರಾಮಕ್ಕೆ ಪ್ರಮುಖವಾಗಿ ಕುಡಿಯುವ ನೀರಿನ ಸೆಲೆಯಾಗಿದೆ. ಒಂದಾನೊಂದು ಕಾಲದಲ್ಲಿ ಈ ಬಾವಿಯೇ ನೀರೆ ಕುಡಿಯಲು ಆಸರೆಯಾಗಿತ್ತು. ಎಳೆ ನೀರಿನಷ್ಟೇ ಶುದ್ಧ ಮತ್ತು ಸಿಹಿ ನೀರು ಎಂಬುದು ಹಿರಿಯರ ಅಂಬೋಣವಾಗಿದೆ.

ಬಾವಿಯಲ್ಲಿ ಅಳಿದುಳಿದ ನೀರು ಕಲುಷಿತಗೊಂಡು, ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ. ಗ್ರಾಮಸ್ಥರು ದಿನನಿತ್ಯದ ಬಳಕೆಗೆ ಮಾತ್ರ ಇದೇ ಬಾವಿಯ ನೀರನ್ನು ಅವಲಂಬಿಸಿದ್ದು, ಸದ್ಯದ ಪರಿಸ್ಥಿತಿಯಿಂದಾಗಿ ನೀರು ಬಳಸಲು ತೀವ್ರ ಆತಂಕ ಪಡುವಂತಾಗಿದೆ. ಮುಂದಿನ ರಣ ಬೇಸಿಗೆಯಲ್ಲಿ ಹನಿ ನೀರಿಗೂ ಪರದಾಡುವ ಪರಿಸ್ಥಿತಿ ಬರುವ ಮುನ್ನವೇ ಸಂಬಂಧಪಟ್ಟವರು ಎಚ್ಚೆತ್ತುಕೊಂಡು ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಂಡು ಜನತೆಗೆ ಅನುಕೂಲ ಕಲ್ಪಿಸುವಂತೆ ಆಗ್ರಹಿಸಲಾಗಿದೆ.

ಕನ್ನಡಕ್ಕೆ ಭವ್ಯ ಐತಿಹಾಸಿಕ ಹಿನ್ನೆಲೆಯಿದೆ

ಕಸಾಪ ತಾಲೂಕ ಅಧ್ಯಕ್ಷ ಶರಣಬಸಪ್ಪ ಯಾಳವಾರ ಹೇಳಿಕೆ

ಸಂ.ಕ. ಸಮಾಚಾರ ಸುರಪುರ: ನಗರದ ಗರುಡಾದ್ರಿ ಕಲಾ ಮಂದಿರದ ಆವರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ ತಾಲೂಕ ಘಟಕದಿಂದ ಕಸಾಪ 112ನೇ ಸಂಸ್ಥಾಪನಾ ದಿನ ಆಚರಿಸಲಾಯಿತು. ಕಸಾಪ ತಾಲೂಕ ಅಧ್ಯಕ್ಷ ಶರಣಬಸಪ್ಪ ಯಾಳವಾರ ಮಾತನಾಡಿ, ಎರಡು ಸಾವಿರ ವರ್ಷಗಳಿಗಿಂತಲೂ ಹೆಚ್ಚಿನ ಇತಿಹಾಸ ಸಾಹಿತ್ಯ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕನ್ನಡ ಭಾಷೆಯು ಭಾರತದ ಪ್ರಾಚೀನ ಮತ್ತು ಶ್ರೀಮಂತ ಭಾಷೆಗಳಲ್ಲಿ ಒಂದಾಗಿದೆ. ಮೈಸೂರು ಅರಸು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಚಾಲನೆ ನೀಡಿ ಆರಂಭಿಸಿದ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸಿದೆ . ಕನ್ನಡ ಪುಸ್ತಕ ಪ್ರಕಟಣೆ, ಕನ್ನಡ ನಾಡು–ನುಡಿಯ ಸಂರಕ್ಷಣೆ ಮತ್ತು ಕನ್ನಡ ಭಾಷೆ ಬೆಳವಣಿಗೆಗಾಗಿ ಶ್ರಮಿಸಬೇಕೆಂಬ ಆಶಯದೊಂದಿಗೆ ಕಟ್ಟಲಾಗಿರುವ ಸಂಸ್ಥೆ ಇದಾಗಿದೆ ಎಂದರು.

ಪಬ್ಲಿಕ್ ರಿಕ್ರೀಯೇಶನ್ ಕ್ಲಬ್ ಅಧ್ಯಕ್ಷ ಅರವಿಂದ ಕುಮಾರ್ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಸಾಹಿತಿಗಳನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ. ಗ್ರಾಮೀಣ ಭಾಗದಲ್ಲಿ ಕನ್ನಡ ಅಭಿಮಾನ ಬೆಳೆಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಳ್ಳಬೇಕು ಎಂದು ಸಲಹೆ ನೀಡಿದರು. ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಸುರೇಶ ಸಜ್ಜನ್ ಮಾತನಾಡಿ, ಕನ್ನಡಿಗರ ಹೆಮ್ಮೆಯ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು ಸಾಹಿತ್ಯ ಸಂಸ್ಕೃತಿಯನ್ನು ನಾಡಿನಾದ್ಯಂತ ಬಿತ್ತರಿಸುವ ಮೂಲಕ ಕನ್ನಡಿಗರ ಮನೆ ಮಾತಾಗಿದೆ ಎಂದರು. ಸಾಹಿತಿ ಕನಕಪ್ಪ ವಾಗಣಗೇರಿ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ ಕುರಿತು ಮಾತನಾಡಿದರು. ಗೌರವ ಕೋಶಾಧ್ಯಕ್ಷ ವೆಂಕಟೇಶ್ ಪಾಟೀಲ್ ನಿರೂಪಿಸಿದರು. ಶ್ರೀಶೈಲ್ ಯಂಕಂಚಿ ಸ್ವಾಗತಿಸಿದರು. ಶಿಕ್ಷಕ ಸಾಹೇಬರೆಡ್ಡಿ ಇಟಗಿ ವಂದಿಸಿದರು.

ನ್ಯಾಯವಾದಿ ರಾಮನಗೌಡ ಸುಬೇದಾರ್, ಯಲ್ಲಪ್ಪ ಹುಲಿಕಲ್, ರಾಘವೇಂದ್ರ ಬಾಡಿಯಾಳ, ಸಾಹಿತಿ ಪ್ರಕಾಶ್ ಅಲಬನೂರ, ರಜಾಕ್ ಭಾಗವಾನ, ಜಾವೀದ ಹುಸೇನ್ ಹವಾಲ್ದಾರ್, ರಾಘವೇಂದ್ರ ಭಕ್ರಿ, ಅರವಿಂದ ಚಂದ್ರಗಿರಿ, ಶರಣಬಸವ ಹೂಗಾರ ಉಪಸ್ಥಿತರಿದ್ದರು.

ಹಜ್ ಯಾತ್ರಾರ್ಥಿಗಳಿಗೆ ಗೃಹ ಸನ್ಮಾನ



ಕೆಂಭಾವಿ: ನಮ್ಮ ಪಟ್ಟಣ ಭಾವೈಕ್ಯತೆಯ ನಾಡು. ಇಲ್ಲಿ ಹಿಂದೂ–ಮುಸ್ಲಿಂ ಎಂಬ ಯಾವದೇ ಬೇಧ ಭಾವ ಇಲ್ಲ. ಎಲ್ಲರೂ ಅಣ್ಣ ತಮ್ಮಂದಿರಂತೆ ಬಾಳುತ್ತಿದ್ದಾರೆ ಎಂದು ವಲಯದ ಸಿಆರ್‌ಪಿ ಬಂದೇನವಾಜ ನಾಲತವಾಡ ಹೇಳಿದರು. ಪಟ್ಟಣದ ಬಾಬುಗೌಡ ಮಾಲಿಪಾಟೀಲರ ನಿವಾಸದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ವತಿಯಿಂದ ಪವಿತ್ರ ಹಜ್ ಯಾತ್ರೆ ಕೈಗೊಳ್ಳುತ್ತಿರುವ ಮುಸ್ಲಿಂ ಸಮುದಾಯದವರಿಗೆ ಏರ್ಪಡಿಸಿದ್ದ ಸನ್ಮಾನ ಸಮಾರಂಭ ಉದ್ದೇಶಿಸಿ ಮಾತಾಡಿ, ಒಂದು ಮಿನಿ ಭಾರತ ನೋಡಬೇಕಾದರೆ ಅದು ನಮ್ಮ ಕೆಂಭಾವಿಯಲ್ಲಿ ಮಾತ್ರ ಎಂದು ಹೇಳಲು ಹೆಮ್ಮೆಯಾಗುತ್ತದೆ ಎಂದರು.

ಪಟ್ಟಣದಲ್ಲಿ ಮಾತ್ರ. ಎಲ್ಲ ಜಾತಿ ಧರ್ಮದವರು ಏಕತೆಯಿಂದ ಒಗ್ಗಾಟ್ಟಾಗಿದ್ದಾರೆ. ಯಾವದೇ ಧಾರ್ಮಿಕ ಕಾರ್ಯಕ್ರಮವಿದ್ದರೂ ಎಲ್ಲರೂ ಸೇರಿ ಮಾಡುವ ಸಂಪ್ರದಾಯವಿದೆ. ಪವಿತ್ರ ಹಜ್ ಯಾತ್ರೆ ಕೈಗೊಳ್ಳುತ್ತಿರುವ ನಾಲ್ಕು ಪರಿವಾರದವರಿಗೆ ಶುಭವಾಗಲಿ ಎಂದು ಹಾರೈಸಿದರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಾಬುಗೌಡ ಮಾಲಿಪಾಟೀಲ ಮಾತನಾಡಿ, ಯಾತ್ರೆ ಕೈಗೊಳ್ಳುತ್ತಿರುವ ಮೌಲಾನಾ ಗಾಲಿಬಖಾನ್ ಇನಾಮಾದಾರ, ರಫೀಕ ವಡಕೇರಿ, ಮಹಿಮೊದಸಾಬ ವಡಕೇರಿ, ಗುಡುಸಾಬ (ಅಬ್ದುಲ ರಜಾಕ) ಹವಲ್ದಾರ ಹಾಗೂ ಅವರ ಪರಿವಾರದವರಿಗೆ ಶುಭವಾಗಲಿ ಎಂದರು.

ಮೌಲಾನಾ ಗೌಸ್ ಮಾತನಾಡಿದರು. ಗಣ್ಯರಾದ ಹಮೀದ್ ಮೌಲಾನಾ, ಸಾಹೇಬಲಾಲ ಆಂದೇಲಿ, ಬಸವಂತ್ರಾಯಗೌಡ ಮಾಲಿಪಾಟೀಲ, ರಮೇಶ ಸೊನ್ನದ, ಸಂಗಣ್ಣ ತುಂಬಗಿ, ಮಹಿಪಾಲರೆಡ್ಡಿ ಡಿಗ್ಗಾವಿ, ಮಲ್ಲನಗೌಡ ಪಾಟೀಲ, ಶಿವು ಮಾಲಿಪಾಟೀಲ, ಭೀಮನಗೌಡ ಕಾಚಾಪುರ, ಗುರುಮೂರ್ತಿ ಪತ್ತಾರ, ಶ್ರೀಶೈಲ ಆಲ್ದಾಳ, ಬಸವರಾಜ ತಳವಾರ, ಆರೀಫ್ ಖಾಜಿ, ನಂದಪ್ಪ ಕವಲ್ದಾರ, ಹಳ್ಳೆಪ್ಪ ಕವಲ್ದಾರ, ಸುಗುರಯ್ಯ ಇಂಡಿ, ಬಸನಗೌಡ, ಅಂಬರೀಶ, ಚಂದ್ರು, ಇಲಿಯಾಸ ವಡಕೇರಿ, ಉಮೇಶರೆಡ್ಡಿ, ಬಂದೇನವಾಜ, ದಸ್ತಗೀರ, ಆರೀಫ್ ಅನೇಕರಿದ್ದರು.

ಮುಂದಿನ ವರ್ಷ ಶೇ. 100 ಫಲಿತಾಂಶ ತನ್ನಿ

ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಸಲಹೆ । ಅಭಿನಂದನಾ ಸಮಾರಂಭ

ಸಂ.ಕ. ಸಮಾಚಾರ ಯಾದಗಿರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿಶತ ಫಲಿತಾಂಶ ಪಡೆದ ಶಾಲೆಗಳ ಶಿಕ್ಷಕರು ಹಾಗೂ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭವನ್ನು ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಜರುಗಿತು. ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಉದ್ಘಾಟಿಸಿ, ಪರೀಕ್ಷೆಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಶುಭ ಹಾರೈಸಿ, ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನೂ ತರಬೇತಿಗೊಳಿಸಿ ಮುಂದೆ ಸಾಧನೆ ಮಾಡುವಂತೆ ಪ್ರೇರೇಪಿಸಬೇಕು. ಮುಂದಿನ ಶೈಕ್ಷಣಿಕ ವರ್ಷ ಶೇಕಡಾ ನೂರರಷ್ಟು ಫಲಿತಾಂಶ ತರಲು ಪ್ರಯತ್ನಿಸಿ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ಮತ್ತು ಶಿಕ್ಷಕರಿಗೆ ಸಲಹೆ ನೀಡಿದರು.

ಮುಖ್ಯ ಅತಿಥಿಯಾದ ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಮಾತನಾಡಿ, ಇದು ಜಿಲ್ಲೆಗೆ ಹರ್ಷದ ವರುಷವಾಗಿದೆ. ಕಾರಣ, ನಾಲ್ವರು ಯುಪಿಎಸ್ಸಿಯಲ್ಲಿ ಉತ್ತೀರ್ಣರಾಗಿರುವುದು ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಜಿಲ್ಲೆಯ 86 ಶಾಲೆಗಳು ಶೇಕಡಾ ನೂರರಷ್ಟು ಫಲಿತಾಂಶ ಲಭಿಸಿದೆ. ವಿದ್ಯಾರ್ಥಿಗಳು, ಶಿಕ್ಷಕರು, ಶಿಕ್ಷಣ ಇಲಾಖೆ ಅಧಿಕಾರಿ ಸಿಬ್ಬಂದಿಗಳ ತಂಡಕ್ಕೆ ಅಭಿನಂದಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.ಶಿಕ್ಷಣ ಸಚಿವರು ಸಹ ಜಿಲ್ಲೆಯ ಸಾಧನೆ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದು ಮುಂದಿನ ವರ್ಷಗಳಲ್ಲಿ ಎಲ್ಲಾ ಶಾಲೆಗಳಲ್ಲಿ ಪ್ರತಿಶತ ನೂರರಷ್ಟು ಫಲಿತಾಂಶ ತರಲು ಪ್ರಯತ್ನಿಸೋಣ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಸಿಇಒ ಲವೀಶ್ ಒರಡಿಯಾ ಮಾತನಾಡಿ, ಈ ಬಾರಿಯ ಪರೀಕ್ಷೆಯಲ್ಲಿ ಶೇ 91.8 ಪಾಸಿಂಗ್ ಫಲಿತಾಂಶ ಬಂದಿದೆ. ಕಳೆದ ಬಾರಿ ಫಲಿತಾಂಶದಲ್ಲಿ ಕೊನೆಯಲ್ಲಿದ್ದ ಜಿಲ್ಲೆ ಈ ಬಾರಿ ರ್‍ಯಾಂಕಿಂಗ್ ಸ್ಥಾನದಲ್ಲಿ ಸುಧಾರಣೆ ಕಂಡುಕೊಂಡಿದೆ. ಶಿಕ್ಷಣ ಸಚಿವರು ಸಹ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ಡಿಡಿಪಿಐ ಚನ್ನಬಸಪ್ಪ ಮುಧೋಳ ಅವರ ಅವಿರತ ಪರಿಶ್ರಮದ ಬಗ್ಗೆ ಪ್ರಶಂಸಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಮಾತನಾಡಿ, ಜಿಲ್ಲೆಯಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಬದಲಾವಣೆ ಪರ್ವ ಶುರುವಾಗಿದೆ. ಖಾಸಗಿ ಶಾಲೆಗಳ ಪ್ರಮಾಣ ಕಡಿಮೆ ಇದ್ದರೂ ವಿದ್ಯಾರ್ಥಿಗಳು ಅಭೂತಪೂರ್ವ ಸಾಧನೆ ಮಾಡಿದ್ದಾರೆ.ವಿದ್ಯಾರ್ಥಿಗಳಿಗೆ ಆಧುನಿಕ ತಂತ್ರಜ್ಞಾನಕ್ಕೆ ಅನುಗುಣವಾಗಿ ಅವರ ಭವಿಷ್ಯ ರೂಪಿಸುವಂತೆ ಸಲಹೆ ನೀಡಿದರು.

ಡಿಡಿಪಿಐ ಚನ್ನಬಸಪ್ಪ ಮುಧೋಳ, ಸಮಾಜ ಕಲ್ಯಾಣ ಇಲಾಖೆ ಡಿಡಿ ಚನ್ನಬಸಪ್ಪ, ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಅಶೋಕ ಕೆಂಭಾವಿ ಇದ್ದರು. ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ, ಶೇಕಡಾ ನೂರರಷ್ಟು ಫಲಿತಾಂಶ ತಂದ ಮುಖ್ಯ ಶಿಕ್ಷಕರಿಗೆ, ಅತಿಥಿ ಶಿಕ್ಷಕರಿಗೆ ಸನ್ಮಾನಿಸಲಾಯಿತು. ಜಿಲ್ಲಾ ನೋಡಲ್ ಅಧಿಕಾರಿ ಹನುಮಂತ ಸ್ವಾಗತಿಸಿದರು. ಕಿಶನ್ ಪವಾರ್ ನಿರೂಪಿಸಿದರು. ಸಂಗೀತಾ ಪ್ರಾರ್ಥಿಸಿದರು.

ಯಾದಗಿರಿಯಲ್ಲಿ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಅಮಾಯಕರ ವಿರುದ್ಧ ದಾಖಲಾದ ಪ್ರಕರಣ ಕೈಬಿಡಿ

ಯಾದಗಿರಿ: ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ತಳವಾರ ಸಮುದಾಯದ ಪ್ರತಿಭಟನಾಕಾರರನ್ನು ಬಂಧಿಸಿರುವ ಪೊಲೀಸರ ಕ್ರಮ ಅಸಂವಿಧಾನಿಕವಾಗಿದ್ದು, ನ್ಯಾಯ ಕೇಳಲು ಬಂದ ಅಮಾಯಕರನ್ನು ಬಂಧಿಸಿರುವುದು ಸರ್ಕಾರಕ್ಕೆ ಶೊಭೆಯಲ್ಲ. ಕೂಡಲೇ ಬಂಧಿಸಿದವರನ್ನು ಬಿಡುಗಡೆ ಮಾಡಬೇಕು. ಪ್ರಕರಣಗಳನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿ ಜಿಲ್ಲಾ ತಳವಾರ ಹಿತರಕ್ಷಣಾ ಸಂಘದ ವತಿಯಿಂದ ಮನವಿ ಸಲ್ಲಿಸಲಾಯಿತು.

ಜಿಲ್ಲಾಧಿಕಾರಿ ಮೂಲಕ ರಾಜ್ಯಪಾಲರಿಗೆ ಬರೆದ ಮನವಿ ಸಲ್ಲಿಸಿದ ಸಂಘದ ಪದಾಧಿಕಾರಿಗಳು ಮಾತನಾಡಿ, ನಮ್ಮ ಸಮುದಾಯ ಶಾಂತರೀತಿಯಿಂದ ನ್ಯಾಯ ಕೇಳಲು ಪ್ರತಿಭಟನೆ ಮಾಡಲಾಗಿದೆಯೇ ಹೊರತು ಯಾವುದೇ ಗಲಾಟೆ ಮಾಡಲು ಅಲ್ಲ ಎಂದು ಹೇಳಿದರು. ಭಾರತ ಸರ್ಕಾರವು ತಳವಾರ ಮತ್ತು ಪರಿವಾರ ಜಾತಿಯನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಿ ಆದೇಶ ಮಾಡಿ ಐದು ವರ್ಷಗಳು ಕಳೆದು ಹೋದರು ಕೂಡ ರಾಜ್ಯದಲ್ಲಿ ಕಲಬುರಗ ಮತ್ತು ಯಾದಗಿರಿ ಭಾಗದಲ್ಲಿ ಸುಖಾ ಸುಮ್ಮನೆ ಅಧಿಕಾರಿಗಳು ಯಾರದೋ ಪಟ್ಟಭದ್ರ ಹಿತಾಸಕ್ತಿಗಳ ಮಾತು ಕೇಳಿ ನಿರಂತರವಾಗಿ ಎರಡು ವರ್ಷಗಳಿಂದ ಈ ಜಿಲ್ಲೆಯ ಅಧಿಕಾರಿಗಳು ಪರಿವಾರ ಮತ್ತು ತಳವಾರ ಜಾತಿಗೆ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ ಮತ್ತು ಸಿಂಧುತ್ವ ನೀಡದೆ ಸತಾಯಿಸುತ್ತಿದ್ದಾರೆ ಎಂದು ದೂರಿದರು.ಅಮಾನುಷ ರೀತಿಯಲ್ಲಿ ವರ್ತಿಸಿ ಕ್ರೌರ್ಯ ಮೆರೆದ ಪೊಲೀಸ್ ಅಧಿಕಾರಿಗಳನ್ನು ಈ ಕೂಡಲೇ ಅಮಾನತ್ತು ಮಾಡಬೇಕು ಎಂದು ಒತ್ತಾಯಿಸಿದರು.

ಈ ಕೂಡಲೇ ಪ್ರತಿಭಟನಾಕಾರರ ಮೇಲೆ ದಾಖಲಿಸಿರುವ ಪ್ರಕರಣವನ್ನು ರದ್ದುಗೊಳಿಸಬೇಕು. ಕಂದಾಯ ಇಲಾಖೆ ಅಧಿಕಾರಿಗಳಿಗೆ ನೈಜವಾಗಿರುವ ತಳವಾರ ಸಮುದಾಯದವರಿಗೆ ನ್ಯಾಯಯುತವಾಗಿ ಪ್ರಮಾಣ ಪತ್ರವನ್ನು ನೀಡಲು ಸೂಕ್ತ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದರು. ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂದಿನ ದಿನಮಾನಗಳಲ್ಲಿ ಪ್ರತಿಯೊಂದು ತಾಲೂಕು, ಹೋಬಳಿ, ಹಾಗೂ ಗ್ರಾಮಗಳಲ್ಲಿ ಉಗ್ರ ಸ್ವರೂಪದ ಪ್ರತಿಭಟನೆಗಳನ್ನು ಮಾಡಬೇಕಾಗುತ್ತದೆ. ಬರುವ ಚುನಾವಣೆಗಳಲ್ಲಿ ಮತದಾನ ಬಹಿಷ್ಕಾರಕ್ಕೂ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸಂಘದ ಜಿಲ್ಲಾಧ್ಯಕ್ಷ ವೆಂಕಟೇಶ ಅಯ್ಯಪ್ಪ ತಳವಾರ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಹೇಶ ಠಾಣಗುಂದಿ, ಮೌನೇಶ ತಳವಾರ ರಾಂಪೂರ, ದೇವಿಂದ್ರಪ್ಪ ಮಸ್ಕನಳ್ಳಿ, ಮಹೇಂದ್ರಕುಮಾರ ಸುರಪುರ, ಚಂದ್ರಕಾಂತ ತಿಂಥಣಿ, ವೆಂಕಟೇಶ ಪುಟ್ಟಿ, ಮಲ್ಲಪ್ಪ ಎಸ್. ಮಸ್ಕನಳ್ಳಿ ಇದ್ದರು.

ಯಾದಗಿರಿ ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಅವರಿಗೆ ಜಲ್ಲಾ ತಳವಾರ ಹಿತರಕ್ಷಣಾ ಸಂಘದ ವತಿಯಿಂದ ಮನವಿ ಸಲ್ಲಿಸಲಾಯಿತು.

ತಳವಾರ ಹಿತರಕ್ಷಣಾ ಸಂಘ ಮುಖಂಡರ ಆಗ್ರಹ

ಸುದ್ದಿ ಮಿಂಚು

ನಿರ್ಲಕ್ಷ್ಯ : ರಿಮ್ಸ್ ವೈದ್ಯರ ವಿರುದ್ಧ ಕ್ರಮವಹಿಸಲಿ

ರಾಯಚೂರು: ಇಲ್ಲಿನ ರಿಮ್ಸ್ ಆಸ್ಪತ್ರೆಯಲ್ಲಿ ಹೆರಿಗೆ ನಂತರ ಕುಟುಂಬ ನಿಯಂತ್ರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದು, ಆ ಶಸ್ತ್ರಚಿಕಿತ್ಸೆ ವಿಫಲವಾಗಿದ್ದು, ಮತ್ತೊಂದು ಮಗುವಾಗಿದೆ. 2015ರಲ್ಲಿ ಡಾ.ನಂದಿತಾ ಎಂಬುವವರು ಶಸ್ತ್ರಚಿಕಿತ್ಸೆ ಮಾಡಿದ್ದಾರೆ. ಅವರ ವಿರುದ್ಧ ದೂರು ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಮಂಜರ್ಲಾ ಗ್ರಾಮದ ಹನುಮಂತು ಆಪಾದಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ರಿಮ್ಸ್ ಆಸ್ಪತ್ರೆಯಲ್ಲಿ 2015ರಲ್ಲಿ ಪತ್ನಿಗೆ ಕುಟುಂಬ ನಿಯಂತ್ರಣ ಶಸ್ತ್ರ ಚಿಕಿತ್ಸೆಕ್ಕೊಳಪಡಿಸಲಾಗಿತ್ತು. ಶಸ್ತ್ರಚಿಕಿತ್ಸೆಯ ನಂತರವೂ ಮತ್ತೊಂದು ಮಗು 2022ರಲ್ಲಿ ಆಗಿದೆ. ವೈದ್ಯರ ನಿರ್ಲಕ್ಷ್ಯದ ಕುರಿತು ಅಂದಿನ ಜಿಲ್ಲಾಧಿಕಾರಿಗಳಿಗೆ ಹಾಗೂ ರಿಮ್ಸ್‌ನ ನಿರ್ದೇಶಕ ಡಾ.ಬಸವರಾಜ ಪೀರಾಪುರ ಅವರಿಗೆ ದೂರು ಸಲ್ಲಿಸಿದರೂ ಕ್ರಮ ಮಾತ್ರ ಶೂನ್ಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಡತನದಿಂದ ಮಕ್ಕಳನ್ನು ಸಾಕುವ ಪರಿಸ್ಥಿತಿಯಲ್ಲಿಲ್ಲ. ಆದರೂ ಮಕ್ಕಳಾಗಿದ್ದರಿಂದ ಮೂರು ಜನ ಮಕ್ಕಳನ್ನು ಕುಟುಂಬವನ್ನು ನಿರ್ವಹಿಸಬೇಕಿದೆ. ಆದರೆ, ಡಾ.ನಂದಿತಾ ಹಾಗೂ ಡಾ.ರಾಧಾ ಸಂಗಾವಿ ವಿರುದ್ಧ ಕ್ರಮಕ್ಕೆ ಜಿಲ್ಲಾಧಿಕಾರಿಗಳು ಸೂಚಿಸಿದ್ದರೂ ಕ್ರಮವಾಗುತ್ತಿಲ್ಲ ಎಂದು ದೂರಿದರು. ಕುಟುಂಬ ನಿರ್ವಹಣೆ ತೊಂದರೆಯಾಗಿದ್ದು, ಕೂಡಲೇ ಸಂಬಂಧಪಟ್ಟ ವೈದ್ಯರ ವಿರುದ್ಧ ಕ್ರಮ ಕೈಗೊಂಡು ನ್ಯಾಯ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದರು. ಪತ್ನಿ ಕಮಲಮ್ಮ, ಗದಾರ ವೆಂಕಟೇಶ ಹಾಗೂ ಮತ್ತಿತರರಿದ್ದರು.

ರಾಯಚೂರಿನ ಪತ್ರಿಕಾಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಯಾದಗಿರಿಯ ಸರ್ಕಾರಿ ಉಪಕರಣ ಮತ್ತು ತರಬೇತಿ ಕೇಂದ್ರದ ಪ್ರಾಚಾರ್ಯ ಶಿವಕುಮಾರ ಟಿ ಅವರು ಮಾತನಾಡಿದರು.

ಡಿಪ್ಲೊಮಾ ಕೋರ್ಸ್‌ಗಳ ಆರಂಭ

ರಾಯಚೂರು:ಯಾದಗಿರಿ ಸರ್ಕಾರಿ ಉಪಕರಣ ಮತ್ತು ತರಬೇತಿ ಕೇಂದ್ರದಲ್ಲಿ ಡಿಪ್ಲೊಮಾ ಕೋರ್ಸ್‌ಗಳು ಆರಂಭವಾಗಿದ್ದು, ಆಸಕ್ತ ಯುವಕ, ಯುವತಿಯರು ಪ್ರವೇಶಾತಿ ಪಡೆದುಕೊಳ್ಳಬಹುದಾಗಿದೆ ಎಂದು ಕೇಂದ್ರದ ಪ್ರಾಚಾರ್ಯ ಶಿವಕುಮಾರ.ಟಿ ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೈಗಾರಿಕೆಗಳಿಗೆ ಬೇಕಾಗುವ ನುರಿತ ಮಾನವ ಸಂಪನ್ಮೂಲವನ್ನು ಒದಗಿಸುವ ಜೊತೆಗೆ ಯುವಕ, ಯುವತಿಯರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಕಾರ್ಯವನ್ನು ಕೇಂದ್ರ ಮಾಡುತ್ತಿದ್ದು, ಇದೀಗ 2026–27ನೇ ಸಾಲಿಗೆ ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶಾತಿಗಳು ಪ್ರಾರಂಭವಾಗಿವೆ ಎಂದು ವಿವರಿಸಿದರು.

ಕೇಂದ್ರದಲ್ಲಿ ಡಿಪ್ಲೊಮಾ ಇನ್ ಟೂಲ್, ಡೈಮೇಕಿಂಗ್, ಮೆಕಾಟ್ರಾನಿಕ್ಸ್ ಹಾಗೂ ಪ್ರಿಸಿಷನ್ ಮ್ಯಾನುಫ್ಯಾಕ್ಚರಿಂಗ್ ಎಂಬ ಮೂರು ಕೋರ್ಸ್‌ಗಳಿದ್ದು, ಪ್ರತಿ ಕೋರ್ಸ್ ಮೂರು ವರ್ಷ ಹಾಗೂ ಒಂದು ವರ್ಷ ಕಡ್ಡಾಯ ಕೈಗಾರಿಕಾ ತರಬೇತಿ ಅವಧಿಯನ್ನು ಹೊಂದಿರುತ್ತವೆ ಎಂದು ಹೇಳಿದರು.

ನಾಲ್ಕು ವರ್ಷದ ಶುಲ್ಕವನ್ನು ವಿದ್ಯಾರ್ಥಿಗಳು ಮೊದಲು ಭರಿಸಬೇಕಾಗುತ್ತದೆ. ಮೂರು ವರ್ಷದ ಕೋರ್ಸ್‌ಗಳಿಗೆ ತಗಲುವ ಶುಲ್ಕವನ್ನು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ರೂಪದಲ್ಲಿ ಸರ್ಕಾರದಿಂದ ನೀಡಲಾಗುತ್ತದೆ. ಕೋರ್ಸ್ ನಂತರ ವಿದ್ಯಾರ್ಥಿಗಳಿಗೆ ವಿವಿಧ ಕೈಗಾರಿಕೆಗಳಲ್ಲಿ ಉದ್ಯೋಗಗಳನ್ನು ಕಲ್ಪಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ 6362883923, 8106563928 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ಕೋರಿದರು. ವೆಂಕಟರಾವ್ ಪತ್ರಿಕಾಗೋಷ್ಠಿಯಲ್ಲಿದ್ದರು.

ನೀರಿನ ಸಂಪ್‌ನಲ್ಲಿ ವ್ಯಕ್ತಿಯ ಶವ ಪತ್ತೆ

ಮಸ್ಕಿ: ಪಟ್ಟಣದ ದೇವಾಂಗ ಕಾಂಪ್ಲೆಕ್ಸ್ ಹಿಂದೆ ಇರುವ ಸಿಮೆಂಟ್ ರಿಂಗ್‌ನ ನೀರಿನ ಟ್ಯಾಂಕ್ (ಸಂಪ್)ನಲ್ಲಿ ವ್ಯಕ್ತಿಯ ಶವ ಪತ್ತೆಯಾಗಿರುವ ಘಟನೆ ಮಂಗಳವಾರ ರಾತ್ರಿ ನಡೆದಿದೆ.

ಮೃತವ್ಯಕ್ತಿ ಪಟ್ಟಣದಲ್ಲಿ ಪೇಂಟಿಂಗ್ ಕೆಲಸ ಮಾಡುತ್ತಿದ್ದ ಕರಿಂ(35) ಎಂದು ಗುರುತಿಸಲಾಗಿದೆ. ಇಲ್ಲಿನ ದೇವಾಂಗ ಕಾಂಪ್ಲೆಕ್ಸ್ ಬಳಿಯ ಸಂಪ್‌ನಲ್ಲಿ ವ್ಯಕ್ತಿಯ ಶವ ಪತ್ತೆಯಾಗಿದ್ದು, ಪೊಲೀಸ್ ಅಧಿಕಾರಿಗಳು ಬಂದು ಪರಿಶೀಲಿಸಿ ನೀರಿನ ಸಿಂಪನಲ್ಲಿದ್ದ ಮೃತ ದೇಹವನ್ನು ಹೊರಗೆ ತೆಗೆದು ಇಲ್ಲಿನ ಸರ್ಕಾರಿ ಆಸ್ಪತ್ರೆಗೆ ಕಳಿಸಲಾಯಿತು. ವಾಸನೆ ಹರಡಿರುವದರಿಂದ ಸಿಂಕ್‌ನಲ್ಲಿ ಎರಡ್ಮೂರು ದಿನಗಳ ಹಿಂದೆ ವ್ಯಕ್ತಿ ಮೃತಪಟ್ಟಿರಬೇಕು ಎನ್ನಲಾಗುತ್ತಿದೆ. ಮೃತ ಕರೀಂನು ಮದ್ಯ ಸೇವನೆ ಮಾಡುತ್ತಿದ್ದನ್ನು, ಪೇಟಿಂಗ್ ಕೆಲಸ ಮಾಡುತ್ತಿದ್ದ ಕರಿಂ ಒಂದು ವಾರದ ಹಿಂದೆ ಕೆಲಸಕ್ಕೆ ಹೋದವನು ಮನೆಗೆ ಬಂದಿರಲಿಲ್ಲ. ಆದರೆ, ಮಂಗಳವಾರ ರಾತ್ರಿ ದೇವಾಂಗ ಕಾಂಪ್ಲೆಕ್ಸ್ ಹತ್ತಿರದಲ್ಲಿರುವ ಸಂಪಿನಲ್ಲಿ ಮೃತ ದೇಹ ಪತ್ತೆಯಾಗಿದೆ. ಕುಟುಂಬದವರು ಘಟನಾ ಸ್ಥಳಕ್ಕೆ ಆಗಮಿಸಿ ಕರಿಂ ಧರಿಸುತ್ತಿದ್ದ ಬಟ್ಟೆಗಳನ್ನು ನೋಡಿ ಮೃತ ವ್ಯಕ್ತಿ ಕರಿಂ ಎಂದು ಗುರುತಿಸಲಾಗಿದೆ. ಮಸ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆ : ತಾತ್ಕಾಲಿಕ ಸ್ಥಗಿತ

ರಾಯಚೂರು: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ 2026–31ನೇ ಅವಧಿಗೆ ನಡೆಯಬೇಕಿದ್ದ ತಾಲ್ಲೂಕು, ವಿಶೇಷ ಯೋಜನಾ ಜಿಲ್ಲಾ ಹಾಗೂ ರಾಜ್ಯ ಪದಾಧಿಕಾರಿಗಳ ಚುನಾವಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಸಂಘದ ರಾಜ್ಯ ಚುನಾವಣಾಧಿಕಾರಿ ಮೆಹಬೂಬ್ ಪಾಷಾ ಮೂಲಿಮನಿ ಅವರು ಮಂಗಳವಾರ ಹೊರಡಿಸಿದ ಪರಿಷ್ಕೃತ ಚುನಾವಣಾ ಅಧಿಸೂಚನೆಯ ಪ್ರಕಾರ, ಸಂಘದ ಹಿಂದಿನ ಆದೇಶಗಳು ಹಾಗೂ ಮೇ. 1ರ ಸುತ್ತೋಲೆಯ ಅನ್ವಯ ಚುನಾವಣಾ ಪ್ರಕ್ರಿಯೆ ಆರಂಭಿಸಲಾಗಿತ್ತು. ಆದರೆ, ಬೆಂಗಳೂರಿನ ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣದ ಮಧ್ಯಂತರ ಅರ್ಜಿ ಸಂಖ್ಯೆ 3ಕ್ಕೆ ಸಂಬಂಧಿಸಿದಂತೆ ಮೇ. 2ರಂದು ನ್ಯಾಯಾಲಯ ನೀಡಿದ ಆದೇಶದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ನ್ಯಾಯಾಲಯವು ತಾಲೂಕು, ಜಿಲ್ಲಾ ಹಾಗೂ ರಾಜ್ಯ ಕಾರ್ಯಕಾರಿ ಸಮಿತಿಗಳ ಚುನಾವಣೆಯನ್ನು ಮುಂದಿನ ಆದೇಶದವರೆಗೆ ತಡೆಹಿಡಿಯುವಂತೆ ಸೂಚಿಸಿರುವುದರಿಂದ, ಮೇ 5ರಿಂದ ಚುನಾವಣಾ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸಿ ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶಿಸಲಾಗಿದೆ.

ಎಲ್ಲ ಹಂತದ ಚುನಾವಣಾಧಿಕಾರಿಗಳು ಈಗಾಗಲೇ ನಡೆದಿರುವ ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದ ದಾಖಲೆಗಳು, ನಾಮಪತ್ರಗಳು ಹಾಗೂ ಎಣಿಕೆಗೊಂಡ ಮತಪತ್ರಗಳನ್ನು ಸೇರಿಸಿ ಎಲ್ಲಾ ದಾಖಲೆಗಳನ್ನು ಮುಚ್ಚಿದ ಲಕೋಟೆಯಲ್ಲಿ (ಸೀಲ್ಡ್ ಕವರ್) ಸುರಕ್ಷಿತವಾಗಿ ಸಂರಕ್ಷಿಸಬೇಕೆಂದು ಸೂಚಿಸಲಾಗಿದೆ. ಈ ಆದೇಶವನ್ನು ಮೇ 5, 2026ರಂದು ರಾಜ್ಯ ಚುನಾವಣಾಧಿಕಾರಿಗಳ ಕಚೇರಿಯಿಂದ ಅಧಿಕೃತವಾಗಿ ಹೊರಡಿಸಲಾಗಿದೆ.

ಮೊಬೈಲ್ ಮೇಲೆ ವ್ಯಾಮೋಹ ಹೆಚ್ಚಳ

ಕಿಲ್ಲೆ ಶ್ರೀಗಳ ಅಭಿಮತ | ಕಸಾಪ 112ನೇ ಸಂಸ್ಥಾಪನಾ ದಿನಾಚರಣೆ | ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ರಾಯಚೂರು: ಇಂದಿನ ತಂತ್ರಜ್ಞಾನ ಯುಗದಲ್ಲಿ ಸಾಹಿತ್ಯವನ್ನು ಓದುವುದು ಮತ್ತು ತಿಳಿಯುವುದು ತುಂಬಾ ಅವಶ್ಯಕ. ಇಂದಿನ ಕಾಲದಲ್ಲಿ ಶೇ. 90ರಷ್ಟು ಜನರ ಗಮನ ಮೊಬೈಲ್‌ನತ್ತಲೇ ಇದ್ದಾರೆ. ಹಿಂದಿನ ಕಾಲದಲ್ಲಿ ಗುರುದೇವೋ ಮಹಾದೇವ' ಎಂಬ ಶ್ಲೋಕ ಪ್ರಸಿದ್ಧವಾಗಿತ್ತು, ಆದರೆ ಇಂದಿನ ಮೊಬೈಲ್ ವ್ಯಾಮೋಹವನ್ನು ಕಂಡ ಕವಿಯೊಬ್ಬರು ಮೊಬೈಲ್ ದೇವೋ ಮಹಾದೇವ ಎಂದು ತಮಾಷೆಯಾಗಿ ಹೇಳುವಂತಾಗಿದೆ ಎಂದು ನಗರದ ಶ್ರೀ 108 ಸಾವಿರ ದೇವರ ಸಂಸ್ಥಾನ, ಕಿಲ್ಲೇ ಬೃಹನ್ಮಠದ ಪೀಠಾಧಿಪತಿಗಳಾದ ಶ್ರೀ ಶಾಂತಮಲ್ಲ ಶಿವಾಚಾರ್ಯರು ನುಡಿದರು.

ರಾಯಚೂರಿನ ಕಿಲ್ಲೆಬೃಹನ್ಮಠದಲ್ಲಿ ಮಂಗಳವಾರ ಸಂಜೆ ಕಸಾಪ ತಾಲ್ಲೂಕು ಘಟಕದಿಂದ ಏರ್ಪಡಿಸಿದ್ದ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ನಗರದ ಕಿಲ್ಲೆ ಬೃಹನ್ಮಠದಲ್ಲಿ ಮಂಗಳವಾರ ಸಂಜೆ ಕನ್ನ ಸಾಹಿತ್ಯ ಪರಿಷತ್ತಿನ ವತಿಯಿಂದ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಹಾಗೂ 10ನೇ ತರಗತಿಯ ಕನ್ನಡ ವಿಷಯದಲ್ಲಿ 125/125 ಹಾಗೂ 100/100 ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಉಪನ್ಯಾಸಕರಾಗಿ ಆಗಮಿಸಿದ್ದ ಸಾಹಿತಿ ವೆಂಕಟರಾವ್ ಕುಲಕರ್ಣಿ ಮಾತನಾಡಿ, ಕನ್ನಡ ನಾಡು, ಭಾಷೆ, ನೆಲ, ಜಲ ಇವುಗಳ ಸಂರಕ್ಷಣೆ ಮತ್ತು ಜವಾಬ್ದಾರಿ ನಮ್ಮ ಮೇಲಿದೆ. ಜೊತೆಗೆ ತಂದೆ, ತಾಯಿ, ಅತಿಥಿಗಳ ಸೇವೆ ಮಾಡುವ ಜೊತೆಗೆ ಈ ಭೂಮಿ ತಾಯಿಯ ಸೇವೆ ಮಾಡುವ ಜವಾಬ್ದಾರಿಯು ನಮ್ಮ ಮೇಲೆ ಇರುವುದರ ಹಿನ್ನೆಲೆಯಲ್ಲಿ ಕನ್ನಡ ನಾಡು ನುಡಿಗೆ 2500 ವರ್ಷಗಳ ಇತಿಹಾಸವಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಡಾ.ಈರಣ್ಣ ಕೋಸಗಿ ಮಾತನಾಡಿ, ವಿದ್ಯಾರ್ಥಿಗಳು ಅಂಕ ಪಡೆಯುವುದ ಹಿಂದೆ ಸಾಕಷ್ಟು ಜನರ ಪರಿಶ್ರಮವಿದೆ. ವಿಶೇಷವಾಗಿ ಜಿಲ್ಲಾಡಳಿತ, ಶಿಕ್ಷಣ ಇಲಾಖೆ, ಶಾಲೆಯ ಮುಖ್ಯ ಗುರುಗಳು ಮತ್ತು ಶಿಕ್ಷಕರ ವರ್ಗದವರ ಸತತ ಪ್ರಯತ್ನ ಮತ್ತು ಪರಿಶ್ರಮದ ಫಲವಾಗಿ ವಿದ್ಯಾರ್ಥಿಗಳು ಉತ್ತಮವಾಗಿ ಅಭ್ಯಾಸ ಮಾಡುವುದರಿಂದ ಇಷ್ಟು ಉತ್ತಮವಾದ ಅಂಕಗಳನ್ನು ಪಡೆಯಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ತಾಲ್ಲೂಕು ಕಸಾಪ ಅಧ್ಯಕ್ಷರಾದ ಡಾ.ಬಿ.ವಿಜಯ ರಾಜೇಂದ್ರ ಅವರು ಮಾತನಾಡಿದರು. ಇದೇ ಸಂದರ್ಭದಲ್ಲಿ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಕೃಷ್ಣ ತೆಲಂಗಾಣ ಗಡಿನಾಡು ಕನ್ನಡ ಸಂಘದ ಅಧ್ಯಕ್ಷರಾದ ನಿಜಾಮುದ್ದೀನ್ ಹಾಗೂ ಸಾಹಿತಿ ಡಾ.ಅರುಣಾ ಹಿರೇಮಠ ಅವರಿಗೆ ವಿಶೇಷವಾಗಿ ಸನ್ಮಾನಿಸಿ ಗೌರವಿಸಲಾಯಿತು. ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡ ವಿಷಯದಲ್ಲಿ 125/125 ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಮತ್ತು ಆಂಗ್ಲ ಮಾಧ್ಯಮದ ಕನ್ನಡ ವಿಷಯದಲ್ಲಿ 100/100ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.ಸಾಹಿತಿ ವೀರಹನುಮಾನ, ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ವಿಭಾಗದ ಮುಖ್ಯಸ್ಥರಾದ ಡಾ.ಬಿ.ಎಮ್. ಶರಭೇಂದ್ರ ಸ್ವಾಮಿ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮೋಯಿನುಲ್ ಹಕ್, ಕ್ಷೇತ್ರ ಸಮನ್ವಯ ಶಿಕ್ಷಣಾಧಿಕಾರಿ ಯೂನೂಸ್‌ಬಾಬು ಹಾಗೂ ಗುರು ಕಲಾಮಂದಿರದ ಕಾರ್ಯದರ್ಶಿ ಬಸವರಾಜ ಜಿ. ಉಪಸ್ಥಿತರಿದ್ದರು. ಪ್ರತಿಭಾ ಗೋನಾಳ ಪ್ರಾರ್ಥಿಸಿದರು. ರಾವುತರಾವ್ ಬರೂರ ಸ್ವಾಗತಿಸಿದರು. ವೈಶಾಲಿ ಪಾಟೀಲ್ ನಿರೂಪಿಸಿದರು.

ಮಕ್ಕಳ ಶಿಕ್ಷಣ ಆಸಕ್ತಿ ಬೆಳೆಸಲು ಸಲಹೆ

ಸಂ.ಕ. ಸಮಾಚಾರ, ಮುದಗಲ್ಲ: ಪಾಲಕರ ಗುರಿಗೆ ಸರಿಯಾಗಿ ಮಕ್ಕಳು ಶಿಕ್ಷಣ ಪಡೆಯಲಾರರು. ಆದರೆ ಪಾಲಕರಾದವರು ಮಕ್ಕಳ ಆಸಕ್ತಿಗನುಗುಣವಾಗಿ ಶಿಕ್ಷಣ ಕೊಡಿಸಿದಾಗ ಮಾತ್ರ ಯಶಸ್ಸು ಕಾಣಲು ಸಾಧ್ಯವಾಗು ತ್ತದೆ ಎಂದು ಮಂಗಳೂರಿನ ಅಂಜುಮ್ ಸಂಸ್ಥೆಯ ಶಿಕ್ಷಣ ತಜ್ಞ ಮಹ್ಮದ ನಾಸೀರ್ ಆಭಿಪ್ರಾಯ ವ್ಯಕ್ತಪಡಿಸಿದರು.

ಅವರು ಪಟ್ಟಣದ ಪುರಸಭೆ ರಂಗ ಮಂದಿರದ ಆವರಣದಲ್ಲಿ ಅಂಜುಮನ್ ಇಸ್ಲಾಂ ಸಂಸ್ಥೆ ಮುದಗಲ್ಲ ಘಟಕ ಆಯೋಜಿಸಿರುವ ಸಿದ್ರಾ ಕಿಡ್ಸ್ ಪ್ರೀ ಸ್ಕೂಲ್ ಆರಂಭಕ್ಕೆ ಚಾಲನೆ ನೀಡಿದ ಬಳಿಕ ಮತನಾಡಿದ ಅವರು, ಮಕ್ಕಳು ನಮ್ಮಂತೆ ಇರುವದಿಲ್ಲ, ಮಕ್ಕಳು ಸ್ಪರ್ಧಾತ್ಮಕ ಜಗತ್ತಿನಲ್ಲಿ ಬೆಳೆಯುತ್ತಿದ್ದಾರೆ, ಪಾಲಕರು ಬದಲಾಗದಿದ್ದರೂ ಮಕ್ಕಳು ಸಮಯಕ್ಕೆ ಸರಿಯಾಗಿ ಬದಲಾಗುತ್ತಿದ್ದಾರೆ.

ಮಕ್ಕಳ ಬುದ್ಧಿಮಟ್ಟವನ್ನು ನಾವು ಅರಿಯುಬೇಕು. ಅವರ ಬುದ್ಧಿಮಟ್ಟವನ್ನು ಅರಿಯುವುದೇ ಪಾಲಕರಿಗೆ ದೊಡ್ಡ ಜವಾಬ್ದಾರಿ. ಮಕ್ಕಳನ್ನು 10ನೇ ತರಗತಿಯ ನಂತರ ಯಾವ ದಿಕ್ಕಿನತ್ತ ಕಳಿಸಬೇಕೆನ್ನುವದನ್ನು ತೀರ್ಮಾನಿಸಬೇಕು. ವಿಜ್ಞಾನ, ಕಲೆ, ವಾಣಿಜ್ಯ ಶಿಕ್ಷಣದತ್ತ ಕಳಿಸಬೇಕಾದರೆ ವಿದ್ಯಾರ್ಥಿಗಳ ಬುದ್ಧಿಮಟ್ಟ ಪರೀಕ್ಷಿಸಬೇಕು. ಆದರೆ ಪಾಲಕರು ಕೂಡ ಮಕ್ಕಳನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕಳಿಸಿದಾಗ ಮಕ್ಕಳ ಕುರಿತು ನಿಗಾ ವಹಿಸಿರಬೇಕು. ಪದವಿ ಶಿಕ್ಷಣದಲ್ಲಿ ಕೂಡ ಮಕ್ಕಳ ಆಸಕ್ತಿಯೇ ಮೂಲ ಮಂತ್ರವಾಗಿರುತ್ತದೆ. ಮಕ್ಕಳಿಗೆ ಸಾಧ್ಯವಾದಷ್ಟು ಮುಂದಿನ ದಾರಿಗಳನ್ನು ತಿಳಿ ಹೇಳ ಬೇಕಾಗುತ್ತದೆ ಎಂದು ಮಾಹಿತಿ ನೀಡಿದರು.

ಸಂಸ್ಥೆಯ ಅಧ್ಯಕ್ಷ ಅಬ್ದುಲ್ ರವೂಫ್, ಉಪಾಧ್ಯಕ್ಷ ಸಾಧಿಕಬೇಗ್, ಗಯಾಸುದ್ದಿನ್, ಸಾಬು ಹುಸೇನ್, ಕಾರ್ಯದರ್ಶಿ ರಜ್ಜಬಲಿ ಟಿಂಗ್ರಿ, ಜಂಟಿ ಕಾರ್ಯದರ್ಶಿ ಹುಸೇನ್ ಖಾದ್ರಿ, ಕಾರ್ಯಕಾರಿ ಸಮೀತಿ ಸದಸ್ಯ ರಾಗಿ ಖಾಸಿಂಸಾಬ್ ಎಲಿಪಕ್, ಅಲ್ಲಾಭಕ್ಷ ಪಟೇಲ್, ಎಸ್. ಆರ್ ರಸೂಲ ಸೇರಿದಂತೆ ಮುಂತಾದವರಿದ್ದರು. ಕೆಯುಡಬ್ಲುಜೆ ರಾಜ್ಯ ಪ್ರಶಸ್ತಿ ಪುರಸ್ಕೃತ ಶಿವರಾಜ ಸುಂಕದ ಸಂಸ್ಥೆಯ ಕಡೆಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಮುದಗಲ್ಲ ಸಮೀಪದ ಜನತಾಪೂರ ಗ್ರಾಮದ ಮೂಲಕ ನೆರೆಯ ಜಿಲ್ಲೆಗೆ ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಟ ಮಾಡುತ್ತಿರುವ ವಾಹನದ ಮೇಲೆ ದಾಳಿ ಮಾಡಿ ಪಡಿತರ ಆಕ್ಕಿ ವಶಪಡಿಸಿಕೊಂಡಿರುವ ಘಟನೆ ಮಂಗಳವಾರ ಜರುಗಿದೆ.

ಅಕ್ರಮ ಪಡಿತರ ಅಕ್ಕಿ ಸಾಗಾಟ: ಅಧಿಕಾರಿಗಳ ದಾಳಿ

ಸಂ.ಕ. ಸಮಾಚಾರ, ಮುದಗಲ್ಲ: ಸಮೀಪದ ಜನತಾಪೂರ ಗ್ರಾಮದ ಪಡಿತರದಾರರ ಮನೆ ಮನೆಗೆ ತೆರಳಿ ಸಂಗ್ರಹಿಸಿದ ಆಹಾರಧಾನ್ಯವನ್ನು ಪಡೆದು ನೆರೆಯ ಜಿಲ್ಲೆಗೆ ಅಕ್ರಮವಾಗಿ ಸಾಗಾಟ ಮಾಡುತ್ತಿರುವ ವಾಹನದ ಮೇಲೆ ದಾಳಿ ಮಾಡಿ ಆಹಾರ ಧಾನ್ಯವನ್ನು ವಶಪಡಿಸಿಕೊಂಡಿರುವ ಘಟನೆ ಜರುಗಿದೆ.

ಗ್ರಾಮಸ್ಥರ ಖಚಿತ ಮಾಹಿತಿ ಮೇರೆಗೆ ಪೊಲೀಸ್ ಇಲಾಖೆ ಹಾಗೂ ಆಹಾರ ಇಲಾಖೆ ಅಧಿಕಾರಿಗಳ ಜಂಟಿ ಕಾರ್ಯಾಚರಣೆಯಲ್ಲಿ ನೆರೆಯ ಜಿಲ್ಲೆಗೆ ಮಾರಾಟ ಮಾಡಲು ಸುಮಾರು 31,360 ರೂಗಳ ಮೌಲ್ಯದ 11.20 ಕ್ವಿಂಟಲ್ ತೂಕದ ಪಡಿತರ ಅಕ್ಕಿಯನ್ನು ಸಾಗಿಸುತ್ತಿದ್ದ ಸರಕು ಸಾಗಣೆ ವಾಹನವನ್ನು ತಪಾಸಣೆಗೆ ಒಳಪಡಿಸಿದಾಗ, ಅಕ್ರಮವಾಗಿ ಸಾಗಿಸುತ್ತಿರುವುದು ಕಂಡು ಬಂದಿದೆ. ಇದರ ಹಿನ್ನಲೆಯಲ್ಲಿ ವಾಹನವನ್ನು ವಶಕ್ಕೆ ಪಡೆದು ಚಾಲಕ ಮತ್ತು ವಾಹನ ಮಾಲೀಕನ ಮೇಲೆ ಪ್ರಕರಣ ದಾಖಲಿಸಿದ್ದಾರೆ.

ಈ ವೇಳೆ ಪಿಎಸ್‌ಐ ವೆಂಕಟೇಶ ಮಾಡಗೇರಿ, ಆಹಾರ ಉಪ ನಿರೀಕ್ಷಕರಾದ ರಾಮಕೃಷ್ಣ ನಾಯ್ಕು, ಅಬ್ದುಲ್ ರೌಫ್ ಸೇರಿದಂತೆ ಇತರರಿದ್ದರು.

ಹಣ ದ್ವಿಗುಣ ವಂಚನೆ ಪ್ರಕರಣ: ಸಿಎಂ ನಿವಾಸದ ಎದುರು ಧರಣಿ

ರಾಯಚೂರು: ಹಣದ್ವಿಗುಣಗೊಳಿಸುವ ಬಗ್ಗೆ ಆಮಿಷ್ಯಯೊಡ್ಡಿ ಜಿಲ್ಲೆಯಲ್ಲಿ ದರ್ವೇಶ ಗ್ರೂಪ್ ಹೆಸರಿನಲ್ಲಿ ಜನರನ್ನು ನಂಬಿಸಿ, ನೂರಾರು ಕೋಟಿ ವಂಚನೆ ಮಾಡಲಾಗಿದ್ದು, ಕೋರ್ಟ್‌ನಿಂದ ತನಿಖೆ ನಡೆಸಿ ಎಂದು ಈ ಪ್ರಕರಣದ ತನಿಖಾ ಸಂಸ್ಥೆಯಾದ ಸಿಐಡಿಗೆ ನಿರ್ದೇಶಿಸಲಾಗಿದೆ. ಸಂಸ್ಥೆಯು ಸಮರ್ಪಕವಾಗಿ ತನಿಖೆ ನಡೆಸುವಲ್ಲಿ ವಿಫಲಗೊಂಡಿದೆ. ಒಂದು ತಿಂಗಳೊಳಗಾಗಿ ಆರೋಪಿಗಳನ್ನು ಬಂಧಿಸಿ ಹೂಡಿಕೆದಾರರಿಗೆ ನ್ಯಾಯ ದೊರಕಿಸಿಕೊಡದೇ ಇದ್ದರೆ, ಮುಖ್ಯಮಂತ್ರಿಗಳ ನಿವಾಸದ ಎದುರು ಧರಣಿ ನಡೆಸಲಾಗುವುದು ಎಂದು ಸಮಾಜ ಸೇವಕ ಅಂಬಾಜಿ ಮೈದರ್ಕರ್ ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ದರ್ವೇಶ ಗ್ರೂಪ್ ಸಂಸ್ಥೆಯಿಂದ ಜನರಿಗೆ ಆಗಿರುವ ವಂಚನೆಯ ಬಗ್ಗೆ ಕುರಿತು 2024ರಲ್ಲಿ ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ, ಪ್ರಕರಣವನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿತ್ತು. ಆದರೆ, ತನಿಖೆ ಆರಂಭಿಸಿ ಎರಡು ವರ್ಷಗಳಾದರೂ ಇದುವರೆಗೆ ಪ್ರಮುಖ ಆರೋಪಿಗಳನ್ನು ಬಂಧಿಸಿಲ್ಲ ಎಂದು ಆರೋಪಿಸಿದರು.

ನಂತರ 2026ರ ಫೆ.17ರಂದು ಸಮ್ರೀನ ಬೇಗಂ ಎಂಬುವವರು ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಸಲ್ಲಿಸಿದ್ದಾರೆ. ಈ ಕುರಿತು ನಗರದ ಮಾರ್ಕೆಟ್ ಯಾರ್ಡ್ ಠಾಣೆಯಲ್ಲಿ 15 ಆರೋಪಿಗಳ ವಿರುದ್ಧ ಎಫ್‌ಐಆರ್‌ಕೂಡ ದಾಖಲಾಗಿದೆ. ನಂತರ 15ನೇ ಆರೋಪಿ ಸಿರಾಜ್ ಅಹ್ಮದ್ ಜಾಫರಿ ಎಂಬುವವರು ತಮ್ಮ ವಿರುದ್ಧದ ಎಫ್‌ಐಆರ್ ರದ್ದುಪಡಿಸುವಂತೆ ಕಲಬುರಗಿ ಪೀಠಕ್ಕೆ ಕೇಳಿದ್ದನ್ನು, ನ್ಯಾಯಾಲಯ ಪರಿಶೀಲಿಸಿ, ಅರ್ಜಿಯನ್ನು ತಿರಸ್ಕರಿ ತನಿಖೆಯನ್ನು ಮುಂದುವರೆಸುವಂತೆ ಆದೇಶ ನೀಡಿದೆ ಎಂದು ಹೇಳಿದರು.

ನ್ಯಾಯಾಲಯದ ಆದೇಶವಿದ್ದರೂ ಇಲ್ಲಿಯವರೆಗೂ ಸಮ್ರೀನ್ ಅವರ ಖಾಸಗಿ ದೂರಿನಲ್ಲಿರುವ ಒಬ್ಬ ಆರೋಪಿಯನ್ನು ಬಂಧಿಸಿಲ್ಲ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಪ್ರಕರಣದ ಎಲ್ಲಾ ಆರೋಪಿಗಳನ್ನು ಬಂಧಿಸಬೇಕು. ಹೂಡಿಕೆದಾರರ ಹಣವನ್ನು ಕಾನೂನು ಪ್ರಕಾರ ವಾಪಸ್ ಕೊಡಿಸಬೇಕು. ತನಿಖೆಯಲ್ಲಿ ವಿಳಂಬ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಹೂಡಿಕೆದಾರ ಸುಲ್ತಾನ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಇಷ್ಟೊಂದು ದೊಡ್ಡ ವಂಚನೆಯಾದರೂ ಯಾಕೆ, ಸರ್ಕಾರವಾಗಲಿ, ಜನಪ್ರತಿನಿಧಿಗಳಾಗಲಿ ಮೌನವಾಗಿದ್ದಾರೆ.

ಆರೋಪಿಗಳನ್ನು ಏಕೆ ರಕ್ಷಣೆ ಮಾಡುತ್ತಿದ್ದಾರೆ. ವಂಚನೆ ಮಾಡಿದ ಆರೋಪಿಗಳನ್ನು ಬಂಧಿಸುತ್ತಿಲ್ಲ. 22ತಿಂಗಳಾದರೂ ಆರೋಪಿಗಳನ್ನು ಬಂಧಿಸದಿರುವುದು. ವಂಚಕರಿಗೆ ವಂಚನೆ ಅವಕಾಶ ಕಲ್ಪಿಸಿದಂತಾಗುವಂತಾಗಿದೆ ಎಂದು ಹೇಳಿದರು.

ಮಸೂದ್ ಅಲಿ, ಚಿರಂಜೀವಿ,ಶೇಖ್ ಸೋಹೆಲ್, ನಾಸಿರುದ್ದಿನ್, ಕಬೀರ್,ಶಂಶುದ್ದಿನ್ ಹಾಗೂ ಮತ್ತಿತರರಿದ್ದರು.

ನೂತನ ಜಿಲ್ಲಾಧಿಕಾರಿಯಾಗಿ ಪೂವಿತಾ ಎಸ್. ಅಧಿಕಾರ ಸ್ವೀಕಾರ

ರಾಯಚೂರು: ಜಿಲ್ಲೆಯ ನೂತನ ಜಿಲ್ಲಾಧಿಕಾರಿಯಾಗಿ ಪೂವಿತಾ ಎಸ್. ಅವರು ಬುಧವಾರ ಸಂಜೆ ಅಧಿಕಾರ ಸ್ವೀಕರಿಸಿದರು.ನೂತನಜಿಲ್ಲಾಧಿಕಾರಿಗಳಿಗೆ ನಿರ್ಗಮಿತ ಜಿಲ್ಲಾಧಿಕಾರಿ ನಿತೀಶ್ ಕೆ. ಅವರು ಅಧಿಕಾರ ಹಸ್ತಾಂತರಿಸಿ ಶುಭ ಕೋರಿದರು.

ನೂತನ ಜಿಲ್ಲಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಪೂವಿತಾ ಎಸ್. ಅವರು ಐತಿಹಾಸಿಕ ರಾಯಚೂರು ಜಿಲ್ಲೆಗೆ ಜಿಲ್ಲಾಧಿಕಾರಿಯಾಗಿ ಬಂದಿರುವುದಕ್ಕೆ ನನಗೆ ತುಂಬಾ ಹೆಮ್ಮೆಯಾಗುತ್ತಿದೆ. ಜಿಲ್ಲೆಯ ಜ್ವಲಂತ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡುವುದರ ಜೊತೆಗೆ ಹಿಂದಿನ ಜಿಲ್ಲಾಧಿಕಾರಿಯವರ ಕೆಲಸಗಳನ್ನು ಮುಂದುವರೆಸುತ್ತೇನೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನನ್ನ ಮೊದಲ ಆದ್ಯತೆಯಾಗಿದೆ. ಜಿಲ್ಲೆಯ ಚುನಾಯಿತ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರ ಸಹಕಾರವನ್ನು ಕೋರುತ್ತೇನೆ ಎಂದು ತಿಳಿಸಿದರು.

ನೂತನ ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು ಮೂಲತಃ ತಮಿಳು ನಾಡಿನ ರಾಜ್ಯದವರಾಗಿದ್ದು. 2016 ಕರ್ನಾಟಕ ಬ್ಯಾಚಿನ ಐ.ಎ.ಎಸ್. ಅಧಿಕಾರಿಯಾಗಿದ್ದು ಅವರು ಮೊದಲು ತಮ್ಮ ಪ್ರೊಬೇಷನರಿ ಅವಧಿಯನ್ನು ಉಡುಪಿಯಲ್ಲಿ ಮುಗಿಸಿ. ನಂತರ ತಿಪಟೂರಿನಲ್ಲಿ ಸಹಾಯಕ ಆಯುಕ್ತರಾಗಿ. ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಹಾಗೂ ಮೈಸೂರು ಆಡಳಿತ ತರಬೇತಿ ಸಂಸ್ಥೆಯಲ್ಲಿ ಜಂಟಿ ನಿರ್ದೇಶಕರಾಗಿ. ಚಾಮರಾಜನಗರ ಜಿಲ್ಲೆಯ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಮತ್ತು ಬೆಂಗಳೂರಿನ ಕೆಯುಐಡಿಎಫ್‌ಸಿಯ ವ್ಯವಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದು, ಸದ್ಯ ರಾಯಚೂರು ಜಿಲ್ಲಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ನೂತನ ಜಿಲ್ಲಾಧಿಕಾರಿಗಳ ಅಧಿಕಾರ ಸ್ವೀಕಾರ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ. ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ. ರಾಯಚೂರು ತಾಲ್ಲೂಕು ತಹಶಿಲ್ದಾರ ಸುರೇಶ ಮರ್ಮಾ ಸೇರಿದಂತೆ ಜಿಲ್ಲಾಡಳಿತ ಭವನದ ಇತರೆ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಹುಬ್ಬಳ್ಳಿ–ಬೆಂಗಳೂರು–ಕಲಬುರಗಿ
ನಮ್ಮ ಕಲಬುರಗಿ ಆವೃತ್ತಿಯ ಕಚೇರಿ ಸ್ಥಳಾಂತರಗೊಂಡಿದೆ
: ನೂತನ ವಿಳಾಸ :
ನಂ. 1–94, 'ಶ್ರೀಕುಂಜ'
ಮಿನಿ ವಿಧಾನಸೌಧದ ಎದುರು, ಆರ್ ಬಂಗ್ಲೋ ಸ್ಟೇಷನ್ ಏರಿಯಾ, ಮುಖ್ಯ ರಸ್ತೆ,
ಕಲಬುರಗಿ – 585 102
ಮೊ: 9449985695-9481000249

ಕನ್ನಡ ಡೈಜೆಸ್ಟ್
ಕಸ್ತೂರಿ
ತಪ್ಪದೆ ಓದಿ

ಆಧಾರ್ ಹೌಸಿಂಗ್ ಫೈನಾನ್ಸ್ ಲಿ.
Aadhar Housing Finance Ltd
ಕಾರ್ಪೊರೇಟ್ ಕಛೇರಿ: ಕಛೇರಿ ಸಂಖ್ಯೆ 501 & 503, 5ನೇ ಮಹಡಿ, ಲೈಟ್‌ಬ್ರಿಡ್ಜ್, ಸಖಿ ವಿಹಾರ ರಸ್ತೆ, ಅಂದೇರಿ ಪೂರ್ವ, ಮುಂಬಯಿ ಸಬ್‌ಅರ್ಬನ್ (ಜಿಲ್ಲೆ), ಮಹಾರಾಷ್ಟ್ರ–400072.
ಸಿಂಧನೂರು ಶಾಖೆ: ನಂ.4–107–73, ವಾರ್ಡ್ ನಂ.8, ಐಡೆಂಟಿಫಿಕೇಷನ್ ನಂ.5–1–596 & 597, 2ನೇ ಮಹಡಿ, ಎಸ್‌ಆರ್‌ಎಸ್ ಕಾಂಪ್ಲೆಕ್ಸ್, ಸಿಂಧನೂರು ಬಸ್‌ನಿಲ್ದಾಣ, ರಾಯಚೂರು–584128, (ಕರ್ನಾಟಕ).

ಡಿಮಾಂಡ್ ನೋಟೀಸ್

ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 3(1) ಓದಿಕೊಂಡಂತೆ ಆರ್ಥಿಕ ಸ್ವತ್ತಿನ ಭದ್ರತೆ ಮತ್ತು ಪುನರ್‌ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಅಧಿನಿಯಮ, 2002ರ ಸೆಕ್ಷನ್ 13(2) ಅನ್ವಯ. ಕೆಳಸಹಿದಾರರು ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್‌ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಅಧಿನಿಯಮ, 2002ರ (ಸದರಿ ಅಧಿನಿಯಮ) ಅನ್ವಯ ಆಧಾರ್ ಹೌಸಿಂಗ್ ಫೈನಾನ್ಸ್ ಲಿ. (ಎಹೆಚ್‌ಎಫ್‌ಎಲ್)ನ ಅಧಿಕೃತ ಅಧಿಕಾರಿಯಾಗಿರುವರು. ಭದ್ರತಾ ಆಸಕ್ತಿ ಜಾರಿ ನಿಯಮಗಳು, 2002ರ ನಿಯಮ 3ನ್ನು ಓದಿಕೊಂಡಂತೆ ಸದರಿ ಅಧಿನಿಯಮದ ಸೆಕ್ಷನ್ 13(12)ರ ಅನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಸಾಲಗಾರರಿಗೆ ನೀಡಲಾಗಿರುವ ಈ ಕೆಳಗೆ ತಿಳಿಸಿರುವ ಸಂಬಂಧಪಟ್ಟ ಡಿಮಾಂಡ್ ನೋಟೀಸ್‌ನಲ್ಲಿ(ಗಳಲ್ಲಿ) ತಿಳಿಸಿರುವ ಸಾಲದ ಬಾಕಿ ಮೊತ್ತವನ್ನು ಮರುಪಾವತಿ ಮಾಡುವಂತೆ ಕೆಳಕಂಡ ಸಾಲಗಾರರಿಗೆ(ರುಗಳಿಗೆ) ಕರೆ ನೀಡಿ ಸದರಿ ಅಧಿನಿಯಮದ ಪ್ರಕರಣ 13(2)ರ ಅನ್ವಯ ಕೆಳಸಹಿದಾರರು ಡಿಮಾಂಡ್ ನೋಟೀಸ್ ನೀಡಿದ್ದರು. ಮೇಲೆ ತಿಳಿಸಿದ ವಿಚಾರದ ಸಂಬಂಧದಲ್ಲಿ ಸದರಿ ಸಾಲಗಾರ(ರು) ಬರೆದುಕೊಟ್ಟಿರುವ ಯಾವುದೇಇತರೆ ದಾಖಲೆ ಪತ್ರಗಳು ಬರಹಗಳನ್ನು ಓದಿಕೊಂಡಂತೆ ಸಾಲದ ಒಪ್ಪಂದ ಪತ್ರದ ಅನ್ವಯ ಪಾವತಿ ಮಾಡಬೇಕಿರುವ ಬಾಕಿ ಮೊತ್ತವನ್ನು ಕೆಳಗೆ ತಿಳಿಸಿರುವ ದಿನಾಂಕಗಳಿಂದ ಪಾವತಿ ಮಾಡುವವರೆಗೆ ಮತ್ತು ಅಥವಾ ಸಂದಾಯವಾಗುವ ದಿನಾಂಕದವರೆಗೆ ಸದರಿ ಡಿಮಾಂಡ್ ನೋಟೀಸ್‌ನಲ್ಲಿ (ಗಳಲ್ಲಿ ವಿವರಿಸಿರುವಂತೆ ಮುಂದಿನ ಬಡ್ಡಿಯ ಜೊತೆಗೆ ಈ ಕೆಳಗೆ ತಿಳಿಸಿರುವ ಮೊತ್ತವನ್ನು ಸದರಿ ನೋಟೀಸ್ ಪ್ರಕಟವಾದ 60 ದಿನಗಳೊಳಗೆ ಎಹೆಚ್‌ಎಫ್‌ಎಲ್ ಇವರಿಗೆ ಪಾವತಿ ಮಾಡುವಂತೆ ಸದರಿ ಸಾಲಗಾರನಿಗೆ(ರಿಗೆ) ಮತ್ತೊಮ್ಮೆ ಈ ಮೂಲಕ ನೋಟೀಸ್ ನೀಡಲಾಗಿದೆ. ಸಾಲದ ಮರುಪಾವತಿ ಭದ್ರತೆಯಾಗಿ ಅನುಕ್ರಮವಾಗಿ ಸದರಿ ಸಾಲಗಾರ(ರು) ಎಹೆಚ್‌ಎಫ್‌ಎಲ್ ಗೆ ಕೆಳಕಂಡ ಸ್ವತ್ತುಗಳನ್ನು ಆಧಾರ ಮಾಡಿದ್ದಾರೆ.

ಕ್ರ. ಸಂ	ಸಾಲಗಾರ(ರು) ಸಹ–ಸಾಲಗಾರರು ಜಾಮೀನುದಾರ(ರು) ಹೆಸರು	ಡಿಮಾಂಡ್ ನೋಟೀಸ್ ದಿನಾಂಕ ಮತ್ತು ಮೊತ್ತ	ಸ್ಥಿರಾಸ್ತಿಯ ವಿವರಣೆ
1	(ಲೋನ್ ಕೋಡ್: 31710000133 ಸಿಂಧನೂರು ಶಾಖೆ) ಇಶ್ರತಾಲಿ ಬಿ (ಸಾಲಗಾರರು) ಹುಸೇನ್ ಬಾಷಾ (ಸಹ ಸಾಲಗಾರರು)	14–04–2026 ರೂ. 8,58,769.00	ವಸತಿಯುತ ಮನೆ ಆಸ್ತಿಯ ಮೌಲ್ಯಮಾಪನ ಸಂಖ್ಯೆ 2–1–41 ಮತ್ತು ಅದರ ಹಳೆಯ ಆಸ್ತಿ ಸಂಖ್ಯೆ 2–1–37/1 ಮತ್ತು ಅದರ ಇ ಸ್ವತ್ತಿನ ಸಂಖ್ಯೆ 9829495001, ಅಳತೆ ಪೂರ್ವ–ಪಶ್ಚಿಮ : 15.240030 ಮೀ, ಉತ್ತರ–ದಕ್ಷಿಣ: 18.288037 ಮೀಟರ್, ಒಟ್ಟು ವಿಸ್ತೀರ್ಣ 278.709 ಚದರ ಮೀಟರ್, ದೇವದುರ್ಗದ ಸಿದ್ಧರಾಮೇಶ್ವರ ಬೀದಿಯಲ್ಲಿ ವಾರ್ಡ್ ಸಂಖ್ಯೆ 21 ರಲ್ಲಿ ಇದೆ. ದೇವದುರ್ಗ, ದೇವದುರ್ಗ ತಾಲ್ಲೂಕು ಮತ್ತು ರಾಯಚೂರು ಜಿಲ್ಲೆ. ಚಕ್ಕುಬಂಧಿ ಪೂರ್ವಕ್ಕೆ : ದೇವರ ಮನೆ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ರಸ್ತೆ ಮತ್ತು ದಕ್ಷಿಣಕ್ಕೆ : ರಸ್ತೆ.
2	(ಲೋನ್ ಕೋಡ್: 31710000145 ಸಿಂಧನೂರು ಶಾಖೆ) ಅದೇನಗೌಡ ಬಸವರಾಜ (ಸಾಲಗಾರರು) ಮರಿಲಿಂಗಮ್ಮ ಅದೇನಗೌಡ (ಸಹ ಸಾಲಗಾರರು)	14–04–2026 ರೂ. 5,08,015.00	ವಸತಿಯುತ ಆಸ್ತಿಯ ಪಂಚಾಯತ್ ಸಂಖ್ಯೆ: 67 ಮತ್ತು ಅದರ ಇ ಸ್ವತ್ತಿನ ಸಂಖ್ಯೆ: 152300102000120122, ಅಳತೆ ಪೂರ್ವ–ಪಶ್ಚಿಮ: 9.144 ಮೀಟರ್, ಉತ್ತರ–ದಕ್ಷಿಣ : 12.192 ಮೀಟರ್, ಒಟ್ಟು ವಿಸ್ತೀರ್ಣ111.48 ಚದರ ಮೀಟರ್, ನಿರ್ಮಿತ ಮನೆಯ ಸ್ತಂಭ ಪ್ರದೇಶ 100.00 ಚದರ ಮೀಟರ್, ಕೆ.ಇರಬಗೇರಾ ಗ್ರಾಮಪಂಚಾಯತ್, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ. ಚಕ್ಕುಬಂಧಿ ಪೂರ್ವಕ್ಕೆ: ತೆರೆದ ಪ್ಲಾಟ್, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ರಸ್ತೆ ಮತ್ತು ದಕ್ಷಿಣಕ್ಕೆ: ಹನುಮಯ್ಯನ ಮನೆ.
3	(ಲೋನ್ ಕೋಡ್: 31710000197 ಸಿಂಧನೂರು ಶಾಖೆ) ವಿಜಯಲಕ್ಷ್ಮಿ ಬಾಯಿ (ಸಾಲಗಾರರು) ಸಚಿನ್ ಸಿಂಗ್ (ಸಹ ಸಾಲಗಾರರು)	14–04–2026 ರೂ. 7,87,230.00	ಗ್ರಾಮ ಪಂಚಾಯತಿ ಸಂಖ್ಯೆ 1/75 ಹೊಂದಿರುವ ತೆರೆದ ಪ್ಲಾಟ್, ಅದರ ಇ ಸ್ವತ್ತಿನ ಸಂಖ್ಯೆ: 15230030 2000520050, ಅಳತೆ ಪೂರ್ವ–ಪಶ್ಚಿಮ: 18.288 ಮೀಟರ್, ಉತ್ತರ–ದಕ್ಷಿಣ : 12.192 ಮೀಟರ್, ಒಟ್ಟು ವಿಸ್ತೀರ್ಣ 222.97 ಚದರ ಮೀಟರ್ ಇದರಲ್ಲಿ ನಿರ್ಮಿತ ಪ್ರದೇಶದ ಸ್ತಂಭ ವಿಸ್ತೀರ್ಣ 53.14 ಚದರ ಮೀಟರ್, ರಾಯಚೂರು ಜಿಲ್ಲೆ, ಮಾನ್ವಿ ತಾಲ್ಲೂಕು ಮತ್ತು ಕಪಗಲ್ ಗ್ರಾಮ ಪಂಚಾಯ್ತಿ ವ್ಯಾಪ್ತಿಯೊಳಗಿನ ಮುರಹರಪುರ ಗ್ರಾಮದಲ್ಲಿದೆ. ಚಕ್ಕುಬಂಧಿಗಳು: ಪೂರ್ವಕ್ಕೆ: ಗೋವಿಂದ ಅವರ ಭೂಮಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಚಂದ್ರರಾವ್ ಅವರ ತೆರೆದ ಪ್ಲಾಟ್ ಮತ್ತು ದಕ್ಷಿಣಕ್ಕೆ: ಅಮರಸಿಂಗ್ ಅವರ ಪೆನ್ ಪ್ಲಾಟ್.

ಸದರಿ ಸಾಲಗಾರರು ಮೇಲೆ ತಿಳಿಸಿರುವಂತೆ ಎಹೆಚ್‌ಎಫ್‌ಎಲ್‌ಗೆ ಸಾಲದ ಮೊತ್ತ ಮರುಪಾವತಿ ಮಾಡಲು ವಿಫಲರಾದಲ್ಲಿ ವೆಚ್ಚ ಮತ್ತು ಪರಿಣಾಮಗಳಿಗೆ ಸದರಿ ಸಾಲಗಾರರ ಸಂಪೂರ್ಣ ಹೊಣೆಗಾರಿಕೆಯಲ್ಲಿ ಅಧಿನಿಯಮದ ಪ್ರಕರಣ 13(4) ಮತ್ತು ಅನ್ವಯವಾಗುವ ನಿಯಮಗಳ ಅನ್ವಯ ಎಹೆಚ್‌ಎಫ್‌ಎಲ್ ಮೇಲೆ ತಿಳಿಸಿದ ಭದ್ರತೆಯುಳ್ಳ ಸ್ವತ್ತುಗಳ ಮೇಲೆ ಕ್ರಮ ಕೈಗೊಳ್ಳುವುದು. ಎಹೆಚ್‌ಎಫ್‌ಎಲ್ ನ ಪೂರ್ವಭಾವಿ ಲಿಖಿತ ಅನುಮತಿ ಇಲ್ಲದೆ ಮಾರಾಟ, ಗುತ್ತಿಗೆ ಅಥವಾ ಇನ್ನಿತರೆ ರೂಪದಲ್ಲಿ ಮೇಲೆ ತಿಳಿಸಿರುವ ಸ್ವತ್ತುಗಳನ್ನು ವರ್ಗಾವಣೆ ಮಾಡದಂತೆ ಅಧಿನಿಯಮದ ಅನ್ವಯ ಸದರಿ ಸಾಲಗಾರರನ್ನು ನಿಷೇಧಿಸಲಾಗಿದೆ. ಸದರಿ ಅಧಿನಿಯಮದ ಉಪಬಂಧಗಳನ್ನು ಅಥವಾ ಇದರಡಿ ರೂಪಿಸಿರುವ ನಿಯಮಗಳನ್ನು ಯಾರಾದರು ಉಲ್ಲಂಘಿಸಿದರೆ ಅಥವಾ ಉಲ್ಲಂಘಿಸಲು ನೆರವಾದದ್ದೇ ಆದರೆ ಅಂತಹವರು ಅಧಿನಿಯಮದ ಅನ್ವಯ ತಿಳಿಸಿರುವಂತೆ ಜೈಲು ಶಿಕ್ಷೆ ಮತ್ತು/ಅಥವಾ ಕಾಯ್ದೆಯ ಅನುಸಾರ ದಂಡ ಪಾವತಿಸಬೇಕಾಗುತ್ತದೆ.

ಸ್ಥಳ : ಸಿಂಧನೂರು
ದಿನಾಂಕ : 07.05.2026

ಅಧಿಕೃತ ಅಧಿಕಾರಿ,
ಆಧಾರ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ಕರ್ನಾಟಕ ಸರ್ಕಾರ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ತುರುವಿಹಾಳ ಯೋಜನೆ
ತಾ. ಸಿಂದನೂರು –584128, ಜಿಲ್ಲೆ. ರಾಯಚೂರು
ದೂ. ಸಂಖ್ಯೆ: 08535–295086

ಸಂಖ್ಯೆ: ಶಿಅಯೋತುರುವಿ/ಬಾಮೂ/ಸಿಬ್ಬಂದಿ/ಅ.ಟೆಂ/2026–27 ದಿ. 02.05.2026

–: ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ :–

2026–27ನೇ ಸಾಲಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ತುರುವಿಹಳ ಯೋಜನೆ ತಾ: ಸಿಂಧನೂರು ಕಛೇರಿಯಲ್ಲಿನ ಕಾರ್ಯನಿರ್ವಹಣೆಗಾಗಿ ಐ.ಸಿ.ಡಿ.ಎಸ್ ಯೋಜನೆಯಡಿ ಗ್ರೂಪ್–ಡಿ ಸಿಬ್ಬಂದಿಯ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತೀರುವ ಬಾಹ್ಯ ಮೂಲದ ಸಿಬ್ಬಂದಿ ಸೇವೆ ಒದಗಿಸಲು ಅರ್ಹ ಏಜನ್ಸಿ/ ಸಂಸ್ಥೆಗಳಿಂದ ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 2000 ದ ನಿಯಮದಂತೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆನ್‌ಲೈನ್ ವೆಬ್ ಸೈಟ್ kppp.karnataka.gov.in ನಲ್ಲಿ ಟೆಂಡರ ಕರೆಯಲಾಗಿದೆ.
ಟೆಂಡರಿನ ಸಂಖ್ಯೆ : DWCD/2025-26/SE0710/CALL-2

1) ಟೆಂಡರ್ ಪ್ರಕಟಣೆ ದಿನಾಂಕ:	ದಿ. 02.05.2026
2) ಟೆಂಡರ್ ವಾರ್ಷಿಕ ಅಂದಾಜು ಮೊತ್ತ :	ರೂ. 262896 ಲಕ್ಷ
3) ಇ.ಎಮ್.ಡಿ ಮೊತ್ತ :	ರೂ. 10,000=00
4) ಆನ್‌ಲೈನ್ ನಲ್ಲಿ ಅರ್ಜಿಸಲ್ಲಿಸಲು ಪ್ರಾರಂಭದ ದಿನಾಂಕ:	ದಿ. 02.05.2026
5) ಅರ್ಜಿ ವಿಚಾರಣೆ ಕೊನೆಯ ದಿನಾಂಕ	ದಿ. 12.05.2026
6) ಆನ್‌ಲೈನ್ ನಲ್ಲಿ ಅರ್ಜಿಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ:	ದಿ. 12.05.2026 ಸಂಜೆ 5:30 ಗಂಟೆ ವರೆಗೆ
7) Technical Bid ತೆರೆಯುವ ದಿನಾಂಕ, ಮತ್ತು ಸಮಯ	ದಿ:–13.05.2026 ಬೆಳಿಗ್ಗ 11:30 ಗಂಟೆಗೆ ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ತುರುವಿಹಾಳ ಯೋಜನೆ ತಾ: ಸಿಂಧನೂರು
8) Financial Bid ತೆರೆಯುವ ದಿನಾಂಕ, ಸಮಯ ಮತ್ತು ಸ್ಥಳ :	ದಿ:–14.05.2026ರಂದು ಬೆಳಿಗ್ಗೆ 11:30ಗಂಟೆಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ತುರುವಿಹಾಳ ಯೋಜನೆ ತಾ: ಸಿಂಧನೂರು

ಅಲ್ಪಾವಧಿ ಇ–ಟೆಂಡರ್ ಅರ್ಜಿಸಲ್ಲಿಸಲು ನಿಗದಿಪಡಿಸಿದ ದಿನಾಂಕ ಮತ್ತು ಸಮಯದ ನಂತರ ಬರುವ ಟೆಂಡರಗಳನ್ನು ತಿರಸ್ಕರಿಲಾಗುವುದು, ಟೆಂಡರ್ ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತುರುವಿಹಾಳ ಯೋಜನೆ ತಾ: ಸಿಂಧನೂರು ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ತುರುವಿಹಾಳ ತಾ: ಸಿಂಧನೂರು

ಕಸಾಪಕ್ಕೆ ಒಂದು ಲಕ್ಷ ರೂ.ಗಳ ದತ್ತಿದಾನ

ರಾಯಚೂರು: ಹಿರಿಯ ಸಾಹಿತಿಗಳು ಜಿಲ್ಲಾ ಮಹಿಳಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಇತ್ತೀಚಿಗಷ್ಟೇ ಕರ್ನಾಟಕ ಲೇಖಕಿಯ ಸಂಘದ ವತಿಯಿಂದ ತಮ್ಮ ರಾಯಚೂರು ಕೋಟೆಯ ನರಬಲಿ ಕೃತಿಗೆ ಪ್ರಶಸ್ತಿಯನ್ನು ಪಡೆದಂತಹ ಶ್ರೀಮತಿ ಲಕ್ಷ್ಮೀದೇವಿ ಶಾಸ್ತ್ರಿಯವರು ತಮ್ಮ ತಂದೆಯವರ ಹೆಸರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಒಂದು ಲಕ್ಷ ರೂಪಾಯಿಗಳ ದತ್ತಿಯನ್ನು ದಾನವಾಗಿ ಮಂಗಳವಾರ ಕನ್ನಡ ಭವನದಲ್ಲಿ ನಡೆದ 112ನೇ ಸಂಸ್ಥಾಪನ ದಿನಾಚರಣೆ ಸಂದರ್ಭದಲ್ಲಿ ರೂ ಒಂದು ಲಕ್ಷ ರೂಗಳ ಮೊತ್ತದ ಚೆಕ್‌ನ್ನು ಹುಂಡಿಯನ್ನು ಜಿಲ್ಲಾಧ್ಯಕ್ಷರಾದ ರಂಗಣ್ಣ ಪಾಟೀಲ್ ಅವರಿಗೆ ನೀಡಿದರು.

ರಾಯಚೂರಿನ ಕನ್ನಡ ಭವನದಲ್ಲಿ ಮಂಗಳವಾರ ನಡೆದ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಲಕ್ಷ್ಮೀದೇವಿಶಾಸ್ತ್ರಿಯವರು ಒಂದು ಲಕ್ಷ ಮೊತ್ತದ ಚೆಕ್‌ನ್ನು ಕಸಾಪ ಜಿಲ್ಲಾಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ಅವರಿಗೆ ನೀಡಿದರು.

ಭರ್ಜರಿ ಬೆಳೆಗೆ ಆನಂದ್ ಆಡಿಯೋ ಪಾಲಾದ ಸತೀಶ್ ನೀನಾಸಂ, ರಚಿತಾ ರಾಮ್ ಚಿತ್ರದ ಹಾಡುಗಳು

2 ಕೋಟಿಗೆ ಅಯೋಗ್ಯ 2 ಆಡಿಯೋ ಹಕ್ಕು ಬಿಕರಿ

ಸಿನಿ ಕಾರ್ನರ್

ಸದ್ಯದಲ್ಲೇ ಮ್ಯೂಸಿಕ್ ಧಮಾಕಾ

ಸತೀಶ್ ನೀನಾಸಂ, ರಚಿತಾ ರಾಮ್ ಜೋಡಿಯ 'ಅಯೋಗ್ಯ 2' ಚಿತ್ರದ ಶೂಟಿಂಗ್ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ಮಹೇಶ್ ಕುಮಾರ್ ನಿರ್ದೇಶನದ ಈ ಚಿತ್ರ ಆರಂಭದಿಂದಲೂ ಸಖತ್ ಸದ್ದು ಮಾಡುತ್ತಲೇ ಬಂದಿದೆ. ಈಗಾಗಲೇ 'ಅಯೋಗ್ಯ' ಭಾಗ 1 ಯಶಸ್ಸು ದಾಖಲಿಸಿದ್ದು, ಅದರ ಖುಷಿಯಲ್ಲೇ ಎರಡನೇ ಭಾಗವನ್ನು ಶುರು ಮಾಡಿತ್ತು ಚಿತ್ರತಂಡ. ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿರುವ ಟೀಂ 'ಅಯೋಗ್ಯ', ಹೊಸದೊಂದು ಸುದ್ದಿ ಹರಿಬಿಟ್ಟಿದೆ.

ಅಯೋಗ್ಯ ಚಿತ್ರದ 'ಏನಮ್ಮಿ ಏನಮ್ಮಿ' ಹಾಡು ಕನ್ನಡದ ಮೊದಲ 100 ಮಿಲಿಯನ್ ಗಡಿ ದಾಟಿದ ದಾಖಲೆ ಹೊಂದಿತ್ತು. ಇದೀಗ ಅದೇ ತಂಡದಿಂದ ಮತ್ತೊಂದು ಮ್ಯೂಸಿಕಲ್ ಮ್ಯಾಜಿಕ್ ಹೊಡಬರಲು ತಯಾರಿ ನಡೆಸಿದೆ ಚಿತ್ರತಂಡ. ಅದಕ್ಕೂ ಮುನ್ನ 'ಅಯೋಗ್ಯ-2' ಆಡಿಯೋ ರೈಟ್ಸ್ ವಿಷಯವಾಗಿ ಸೌಂಡು ಮಾಡುತ್ತಿದೆ.

ಅಯೋಗ್ಯ ಚಿತ್ರದ ಆಡಿಯೋ ಹಕ್ಕು 9 ಲಕ್ಷಕ್ಕೆ ಬಿಕರಿಯಾಗಿತ್ತು. ಇದೀಗ 'ಅಯೋಗ್ಯ-2' ಅದಕ್ಕಿಂತಲೂ 20 ಪಟ್ಟು ಹೆಚ್ಚಿಗೆ ಮೊತ್ತಕ್ಕೆ ಬಿಕರಿಯಾಗಿದೆ. ಅರ್ಥಾತ್ 'ಅಯೋಗ್ಯ 2' ಆಡಿಯೋ ರೈಟ್ಸ್ ಬರೋಬ್ಬರಿ 2 ಕೋಟಿ ಕೊಟ್ಟು ಕೊಂಡುಕೊಂಡಿದೆ ಆನಂದ್ ಆಡಿಯೋ ಸಂಸ್ಥೆ.

ಈ ಬಗ್ಗೆ ಖುಷಿ ಹಂಚಿಕೊಂಡಿರುವ ನಿರ್ದೇಶಕ ಮಹೇಶ್, 'ಅಯೋಗ್ಯ ಚಿತ್ರದ ಎಲ್ಲಾ ಹಾಡುಗಳೂ ದೊಡ್ಡ ಮಟ್ಟದಲ್ಲಿ ಹಿಟ್ ಆಗಿದ್ದವು. ಅದರಲ್ಲೂ 'ಏನಮ್ಮಿ ಏನಮ್ಮಿ' ಹಾಡು 100 ಮಿಲಿಯನ್ ಆಗಿತ್ತು. ಅದು ಕನ್ನಡದಲ್ಲಿ ಮೊದಲ ಬಾರಿ 100 ಮಿಲಿಯನ್ ದಾಟಿದ ದಾಖಲೆ ಹೊಂದಿದೆ ಎಂಬುದು ಖುಷಿಯ ವಿಷಯ. ಇದೀಗ ಅದೇ ತಂಡದಿಂದ 'ಅಯೋಗ್ಯ 2' ಸಿದ್ಧವಾಗಿದೆ. ಇದರಲ್ಲೂ ಹಾಡುಗಳು ಒಂದಕ್ಕಿಂತ ಒಂದು ಅದ್ಭುತವಾಗಿವೆ. ಅರ್ಜುನ್ ಜನ್ಯ ಅವರು ಎಷ್ಟೇ ಬ್ಯುಸಿಯಾಗಿದ್ದರೂ ಹಾಡುಗಳನ್ನು ನೀಟಾಗಿ ಮಾಡಿಕೊಟ್ಟಿದ್ದಾರೆ. ಚೇತನ್ ಕುಮಾರ್ ಸಾಹಿತ್ಯವಿದೆ. ಸದ್ಯದಲ್ಲೇ ಒಂದೊಂದೇ ಹಾಡುಗಳನ್ನು ರಿಲೀಸ್ ಮಾಡುವ ಆಲೋಚನೆ ಇದೆ. ಇದೇ ರೀತಿ ಎಲ್ಲಾ ವಿಷಯಗಳಲ್ಲೂ 'ಅಯೋಗ್ಯ 2' ದೊಡ್ಡ ಮಟ್ಟದಲ್ಲಿ ಸದ್ದು ಮಾಡಲಿದೆ' ಎಂಬುದು ಅವರ ಭರವಸೆ.

ಬಿಡುಗಡೆಗೆ ಅಣಿಯಾಗುತ್ತಿರುವ ಈ ಚಿತ್ರಕ್ಕೆ ಎಂ.ಮುನೇಗೌಡ ಬಂಡವಾಳ ಹೂಡಿದ್ದಾರೆ. ಸುಂದರ್ ರಾಜ್, ಶಿವರಾಜ್ ಕೆ.ಆರ್.ಪೇಟೆ, ಅರುಣಾ ಬಾಲರಾಜ್, ಮಂಜು ಪಾವಗಡ ತಾರಾಗಣದಲ್ಲಿದ್ದಾರೆ. ಮಾಸ್ತಿ ಉಪ್ಪಾರಳ್ಳಿ ಸಂಭಾಷಣೆ, 'ಶಾಖಾಹಾರಿ' ಚಿತ್ರಕ್ಕೆ ಛಾಯಾಗ್ರಹಣ ಮಾಡಿದ್ದ ವಿಶ್ವಜಿತ್ ರಾವ್ ಈ ಚಿತ್ರದ ಕ್ಯಾಮರಾಮನ್. ◆

ಸಿದ್ದೇಗೌಡನ ಸದ್ದು ಬಲು ಜೋರು...

ಅಯೋಗ್ಯ ಮೊದಲ ಭಾಗ ಎಲ್ಲಿಗೆ ಮುಗಿದಿತ್ತೋ, ಅದರ ಮರು ದಿನದಿಂದ ಚಿತ್ರ ಶುರುವಾಗುತ್ತದೆ. ಎರಡ್ಮೂರು ಹೊಸ ಪಾತ್ರಗಳು ಬರುತ್ತವೆ ಎನ್ನುವುದು ಬಿಟ್ಟರೆ, ಮಿಕ್ಕಂತೆ ಎಲ್ಲಾ ಪಾತ್ರಗಳು ಮುಂದುವರಿಯುತ್ತವೆ. 'ಅಯೋಗ್ಯ' ಕೊನೆಯಲ್ಲಿ ಗ್ರಾಮ ಪಂಚಾಯ್ತಿ ಸದಸ್ಯನಾಗುವ ಸಿದ್ದೇಗೌಡ ಮುಂದೆ ಏನೆಲ್ಲಾ ಸವಾಲುಗಳನ್ನು ಎದುರಿಸುತ್ತಾನೆ, ಹೇಗೆ ಸದ್ದು ಮಾಡ್ತಾನೆ ಎಂಬುದೇ ಚಿತ್ರದ ಕಥೆ-ಚಿತ್ರಕಥೆ.

▪ **ಮಹೇಶ್ ಕುಮಾರ್** | ನಿರ್ದೇಶಕ

ರಾಗಿಣಿಗೆ ಪಿರಿಯಾಡಿಕ್ ಸಿನಿಮಾದಲ್ಲಿ ಅಭಿನಯಿಸಿರುವ ಖುಷಿ ಸಿಕ್ಕಿದೆ. ವರ್ತಮಾನದಲ್ಲೂ ಇದ್ದು, 400 ವರ್ಷಗಳಷ್ಟು ಹಿಂದಕ್ಕೂ ಹೋಗಿ ಬರುವ ಅವಕಾಶ ಅವರಿಗಿದೆಯಂತೆ. ಹೀಗೆ ಅವರು ಎರಡು ಶೇಡ್‌ಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಚಿತ್ರದ ಹೆಸರು ಮದನಿಕ.

ಜುಲೈ ತಿಂಗಳಲ್ಲಿ ಈ ಸಿನಿಮಾವನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿಕೊಂಡರು ನಿರ್ಮಾಪಕರಾದ ಸುಜಾತ ಲಕ್ಷ್ಮಿ ಮತ್ತು ಕುಮಾರಸ್ವಾಮಿ. ಈಗ ಟೀಸರ್ ಮತ್ತು ಹಾಡುಗಳನ್ನು ಬಹಿರಂಗಗೊಳಿಸಲಾಗಿದೆ. ಬಿ.ಎಸ್.ಸಂಜಯ್ ಚಿತ್ರದ ನಿರ್ದೇಶಕ.

'ಮದನಿಕ ಎಂಬ ಪದವನ್ನು ಶಿಲ್ಪ ಕಲೆಯಲ್ಲಿ ಬಳಕೆ ಮಾಡಲಾಗುತ್ತದೆ. ನಮ್ಮ ಸಿನಿಮಾಗೆ ಅದೇ ಹೊಂದುತ್ತದೆ. ಆದ್ದರಿಂದ ಅದನ್ನೇ ಬಳಕೆ ಮಾಡಿಕೊಂಡಿದ್ದೇವೆ' ಎಂದರು ನಿರ್ದೇಶಕ. ಎರಡು ಕಾಲಘಟ್ಟಗಳನ್ನು ಸಿನಿಮಾದಲ್ಲಿ ತೋರಿಸುತ್ತಿರುವುದರಿಂದ ಹಾಡು ಮತ್ತು ಸಂಭಾಷಣೆಯಲ್ಲಿ ಹಳೆಗನ್ನಡ ಪ್ರಯೋಗವು ನಡೆದಿದೆಯಂತೆ.

ಮದನಿಕ ಚಿತ್ರದಲ್ಲಿ 10 ಹಾಡುಗಳಿವೆ ಎಂಬ ಮಾಹಿತಿ ನೀಡಿದರು ಸಂಗೀತ ನಿರ್ದೇಶಕ ಸಲಾಂ ವೆರೋಲಿ. ಶಾಸ್ತ್ರೀಯ ಹಿನ್ನೆಲೆಯಲ್ಲಿ ಹಾಡುಗಳು ಮೂಡಿಬಂದಿದ್ದು, ಕೆ.ಕಲ್ಯಾಣ್ ಮತ್ತು ಡಾಕ್ಟರ್ ದೇವಾನಂದ್ ಗೀತೆಗಳಿಗೆ ಸಾಹಿತ್ಯ ರಚಿಸಿದ್ದಾರೆ.

ಐತಿಹಾಸಿಕ ಸಿನಿಮಾದಲ್ಲಿ ರಾಗಿಣಿ ಕಮಾಲ್

ರಾಗಿಣಿ ಜೊತೆಗೆ ಧರ್ಮ ಕೀರ್ತಿರಾಜ್ ಕೂಡ ಸಿನಿಮಾದಲ್ಲಿ ನಟಿಸಿದ್ದಾರೆ. ದೇವ್ ಗಿಲ್, ಹರೀಶ್ ರಾಜ್, ಶಶಿಕುಮಾರ್ ಸೇರಿದಂತೆ ಇತರರು ಪೋಷಕ ಪಾತ್ರವರ್ಗ. ಹಿರಿಯ ಛಾಯಾಗ್ರಾಹಕ ಆರ್.ಗಿರಿ ಮದನಿಕ ಸಿನಿಮಾದ ಛಾಯಾಗ್ರಾಹಕ. ◆

ಸು ಫ್ರಮ್ ಸೋ ಸಿನಿಮಾ ಖ್ಯಾತಿಯ ನಟ, ನಿರ್ದೇಶಕ ಜೆ.ಪಿ.ತುಮಿನಾಡ್ ಬುಧವಾರ (ಮೇ6) ಹೊಸ ಬಾಳಿಗೆ ಅಡಿಯಿರಿಸಿದ್ದಾರೆ. ಮಂಗಳೂರಿನ ಪಿಲಿಕುಳದಲ್ಲಿರುವ ಸ್ಕೌಟ್ ಭವನದಲ್ಲಿ ರಶ್ಮಿಕಾ ಜೊತೆ ಜೆ.ಪಿ.ತುಮಿನಾಡ್ ಸಪ್ತಪದಿ ತುಳಿದಿದ್ದಾರೆ. ನಟಿ ಸಂಧ್ಯಾ ಅರಕೆರೆ, ನಿರ್ದೇಶಕ ಶ್ರೀನಿಧಿ ಹಾಗೂ ನಿರೂಪಕ ನಿರಂಜನ್ ದೇಶಪಾಂಡೆ ಸೇರಿದಂತೆ ಅನೇಕ ಕಲಾವಿದರು, ಗಣ್ಯರು ವಿವಾಹ ಸಂಭ್ರಮದಲ್ಲಿ ಭಾಗಿಯಾಗಿ ದಂಪತಿಗೆ ಶುಭ ಹಾರೈಸಿದರು.

ಸಿಎಂ ಆಗುವ ಮೊದಲೇ ಟೈಟಲ್ ಕಾರ್ಡ್‌ನಲ್ಲಿ ಸಿಎಂ!

ಚಿತ್ರತಂಡದಿಂದ ಜನ ನಾಯಗನ್‌ಗೆ ಗೌರವ

ಕಳೆದ ಎರಡು ದಶಕಗಳಿಂದಲೂ ಬೆಳ್ಳಿ ಪರದೆಯ ಮೇಲೆ ರಾರಾಜಿಸುತ್ತಾ, ಅಭಿಮಾನಿಗಳನ್ನು ರಂಜಿಸುತ್ತಾ ಬಂದಿರುವ ನಟ ವಿಜಯ್ ಇದೀಗ ತಮಿಳುನಾಡು ಮುಖ್ಯಮಂತ್ರಿ. ಸುಮಾರು 70ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿರುವ ಅವರು, ವೈವಿಧ್ಯಮಯ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಇದೀಗ ರಿಯಲ್ ಲೈಫ್‌ನಲ್ಲಿ ಸಿಎಂ ಗಾದಿ ಏರುತ್ತಿರುವ ಅವರಿಗೆ 'ಜನನಾಯಗನ್' ಚಿತ್ರತಂಡ ಸ್ಕ್ರೀನ್ ಮೇಲೆ ವಿಜಯ್ ಅವರ ಮೂಲ ಹೆಸರನ್ನು ಹಾಕುವ ಮೂಲಕ ಅಭಿಮಾನಿಗಳಿಗೆ ಸರ್ಪ್ರೈಸ್ ನೀಡಿದೆ. ಹಾಗೆಯೇ ವಿಜಯ್ ಅವರಿಗೂ ಈ ಮೂಲಕ ಗೌರವ ಸಲ್ಲಿಸಿದೆ.

ಅಂದಹಾಗೆ ವಿಜಯ್ ಮೂಲ ಹೆಸರು ಜೋಸೆಫ್ ವಿಜಯ್. ಅವರು ನಟಿಸಿರುವ (ಘೋಷಿಸಿರುವ) ಕೊನೆಯ ಸಿನಿಮಾ ಜನ ನಾಯಗನ್ ಬಿಡುಗಡೆಯಾಗಬೇಕಿದೆ. ಈವರೆಗೂ ಅವರ ಹೆಸರು ಪರದೆಯ ಮೇಲೆ ಇಳಯ ದಳಪತಿ ವಿಜಯ್ ಎಂದು ಬರುತ್ತಿತ್ತು. ಇದೀಗ 'ಜನ ನಾಯಗನ್' ಚಿತ್ರತಂಡ Honorable Chief Minister of Tamilnadu C.Joseph Vijay ಎಂದು ಟೀಸರ್ ಟೈಟಲ್ ಕಾರ್ಡ್‌ನಲ್ಲಿ ನಮೂದಿಸಿದೆ. ಈವರೆಗೂ ಮುಖ್ಯಮಂತ್ರಿ ಆಗಿರುವ ಯಾವ ನಟ, ನಟಿಯ ಹೆಸರು ಈ ರೀತಿ ಹಾಕಿದ ಉದಾಹರಣೆ ಇಲ್ಲ. ಸದ್ಯ ಪರದೆಯ ಮೇಲೆ ವಿಜಯ್ ಮೂಲ ಹೆಸರು ಜೋಸೆಫ್ ವಿಜಯ್ ಎಂದು ರಾರಾಜಿಸಲಿದೆ.

2,876 ಕೋಟಿಗೂ ಹೆಚ್ಚು ವಾಣಿಜ್ಯ ತೆರಿಗೆ ಸಂಗ್ರಹ

ಸಂ.ಕ. ಸಮಾಚಾರ, ಬೆಂಗಳೂರು

ಪ್ರಸಕ್ತ ಆರ್ಥಿಕ ಸಾಲಿನ ಮೊದಲ ತಿಂಗಳಲ್ಲಿ ದಾಖಲೆ ಪ್ರಮಾಣದ ವಾಣಿಜ್ಯ ತೆರಿಗೆಗಳ ಸಂಗ್ರಹವಾಗಿದೆ. ಕಳೆದ ಏಪ್ರಿಲ್ ತಿಂಗಳಲ್ಲಿ 11,428.98 ಕೋಟಿ ರೂ. ಸಂಗ್ರಹವಾಗಿದೆ.

ವಾಣಿಜ್ಯ ತೆರಿಗೆಗಳ ಇಲಾಖೆ ಮಾಹಿತಿ ಪ್ರಕಾರ ಏಪ್ರಿಲ್‌ನಲ್ಲಿ 8,947.72 ಕೋಟಿ ರೂ. ಸರಕು ಸೇವಾ ತೆರಿಗೆ, 2,262.72 ಕೋಟಿ ರೂ. ಕರ್ನಾಟಕ ಮಾರಾಟ ತೆರಿಗೆ ಹಾಗೂ 218.54 ಕೋಟಿ ರೂ. ವೃತ್ತಿ ತೆರಿಗೆ ಸೇರಿದಂತೆ ಒಟ್ಟು 11,428.98 ಕೋಟಿ ರೂ. ಸಂಗ್ರಹಿಸಲಾಗಿದೆ.

2025ರ ಏಪ್ರಿಲ್‌ನಲ್ಲಿ ಈ ಮೂರು ತೆರಿಗೆಗಳು ಸೇರಿ 8552.38 ಕೋಟಿ ರೂ. ಮಾತ್ರ ಸಂಗ್ರಹಿಸಲಾಗಿತ್ತು. ಅಂದರೆ ಕಳೆದ ವರ್ಷಕ್ಕಿಂತ ಈ ವರ್ಷ ಒಂದೇ ತಿಂಗಳಲ್ಲಿ 2,876.594 ಕೋಟಿ ರೂ. ಹೆಚ್ಚಿಗೆ ಸಂಗ್ರಹ ಮಾಡಲಾಗಿದೆ.

ಕಳೆದ ಆರ್ಥಿಕ ಸಾಲಿನ ಯಾವ ತಿಂಗಳಲ್ಲೂ ಈ ಪ್ರಮಾಣ ತೆರಿಗೆಯ ಸಂಗ್ರಹವಾಗಿರಲಿಲ್ಲ. ಕಳೆದ ಫೆಬ್ರವರಿಯಲ್ಲಿ 10,261.32 ಕೋಟಿ ರೂ. ಮತ್ತು ಮಾರ್ಚ್‌ನಲ್ಲಿ 10,322.40 ಕೋಟಿ ರೂ. ಸಂಗ್ರಹವಾಗಿತ್ತು. ಏಪ್ರಿಲ್‌ನಲ್ಲಿ ಅದಕ್ಕಿಂತಲೂ ಹೆಚ್ಚು ಸಂಗ್ರಹವಾಗಿದೆ. ಬಹುಶಃ ಇದು ಇದುವರೆಗಿನ ದಾಖಲೆ ಪ್ರಮಾಣದ ತೆರಿಗೆಯ ಸಂಗ್ರಹವಾದಂತಾಗಿದೆ.

2025-26 ಸಾಲಿನಲ್ಲಿ ಒಟ್ಟಾರೆ 1,10,813.30 ಕೋಟಿ ರೂ. ವಾಣಿಜ್ಯ ತೆರಿಗೆಗಳ ಸಂಗ್ರಹವಾಗಿತ್ತು. 2026-207ನೇ ಆರ್ಥಿಕ ಸಾಲಿನ ಮೊದಲ ತಿಂಗಳಲ್ಲಿ ದಾಖಲಾರ್ಹ ಪ್ರಮಾಣದಲ್ಲಿ ತೆರಿಗೆಗಳ ಸಂಗ್ರಹವಾಗಿದ್ದು, ಇದೇ ರೀತಿ ಮುಂದುವರೆದರೆ, ಆರ್ಥಿಕ ವರ್ಷಾಂತ್ಯಕ್ಕೆ ಕಳೆದ ಸಾಲಿಗಿಂತಲೂ ಅಧಿಕ ಪ್ರಮಾಣದಲ್ಲಿ ತೆರಿಗೆಗಳ ಸಂಗ್ರಹವಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU-550/490/2026-27 (E-207590) ದಿನಾಂಕ: 06.05.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	M/s Trifecta Projects Pvt. Ltd.	ಬೆಂಗಳೂರು ಪೂರ್ವ	ವರ್ತೂರು	ಕೊಡತಿ	28/3	0-22.08	ವ್ಯವಸಾಯ	ವಸತಿ
					28/24	0-22.08		
					ಒಟ್ಟು	1-05		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ ಹಾಗೂ ಈ ಜಮೀನಿನಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಾಯವಾಣಿ/ವಾಟ್ಸ್ಪ್: 9483166622 (24x7). @BDAOfficialGok

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಧಾರವಾಡ

ಫೋ: (0836) 2213838 Email: eedharwad@gmail.com

ನಂ.ಎಚ್.ಡಿಎಂಸಿ/66/07/02/2026-27 ದಿನಾಂಕ: 06-05-2026

ಅಲ್ಪಾವಧಿ/ಪೂರ್ಣಾವಧಿ ಇ-ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಯೋಜನೆ ಅನುದಾನದಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999-2000ರ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಪಿಡಬ್ಲ್ಯೂಡಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಪಾಲಿಕೆ ವಾರ್ಡ ಸದಸ್ಯರ /ಮಹಾಪೌರರ/ಉಪಮಹಾಪೌರರ/ಅಮೃತ 2.0 ಅನುದಾನ

1) ಇಂಡೆಂಟ್ ನಂ. 53896/9.93 ಲಕ್ಷ/ಸಾಮಾನ್ಯ 2) ಇಂಡೆಂಟ್ ನಂ. 54610/10.00ಲಕ್ಷ/ಸಾಮಾನ್ಯ 3) ಇಂಡೆಂಟ್ ನಂ. 54149/13.00 ಲಕ್ಷ/ಸಾಮಾನ್ಯ 4) ಇಂಡೆಂಟ್ ನಂ. 54147/2.25 ಲಕ್ಷ/ಸಾಮಾನ್ಯ 5) ಇಂಡೆಂಟ್ ನಂ. 54612/10.00 ಲಕ್ಷ/ಸಾಮಾನ್ಯ 6) ಇಂಡೆಂಟ್ ನಂ. 49139/2.00ಲಕ್ಷ/ಸಾಮಾನ್ಯ 7) ಇಂಡೆಂಟ್ ನಂ. 56116/8.50 ಲಕ್ಷ/ಪರಿಶಿಷ್ಟ ಜಾತಿ 8) ಇಂಡೆಂಟ್ ನಂ. 55124/30.00 ಲಕ್ಷ/ಸಾಮಾನ್ಯ 9) ಇಂಡೆಂಟ್ ನಂ. 55128/10.00 ಲಕ್ಷ/ಸಾಮಾನ್ಯ 10) ಇಂಡೆಂಟ್ ನಂ. 54105/ 14.00 ಲಕ್ಷ/ಸಾಮಾನ್ಯ 11) ಇಂಡೆಂಟ್ ನಂ. 48796/10.00 ಲಕ್ಷ/ ಸಾಮಾನ್ಯ 12) ಇಂಡೆಂಟ್ ನಂ. 54159/4.05 ಲಕ್ಷ/ಸಾಮಾನ್ಯ 13) ಇಂಡೆಂಟ್ ನಂ. 53141/7.10 ಲಕ್ಷ/ ಸಾಮಾನ್ಯ 14) ಇಂಡೆಂಟ್ ನಂ. 53145/18.45 ಲಕ್ಷ/ಸಾಮಾನ್ಯ 15) ಇಂಡೆಂಟ್ ನಂ. 54629/7.00 ಲಕ್ಷ/ಸಾಮಾನ್ಯ 16) ಇಂಡೆಂಟ್ ನಂ. 54075/15.00 ಲಕ್ಷ/ಸಾಮಾನ್ಯ 17) ಇಂಡೆಂಟ್ ನಂ. 54145/15.00 ಲಕ್ಷ/ಸಾಮಾನ್ಯ 18) ಇಂಡೆಂಟ್ ನಂ. 53571/25.00 ಲಕ್ಷ/ಸಾಮಾನ್ಯ 19) ಇಂಡೆಂಟ್ ನಂ. 54626/4.10 ಲಕ್ಷ/ಸಾಮಾನ್ಯ 20) ಇಂಡೆಂಟ್ ನಂ. 54158/5.11 ಲಕ್ಷ/ಸಾಮಾನ್ಯ 21) ಇಂಡೆಂಟ್ ನಂ. 54141/10.00 ಲಕ್ಷ/ಸಾಮಾನ್ಯ 22) ಇಂಡೆಂಟ್ ನಂ. 51287/14.10 ಲಕ್ಷ/ಸಾಮಾನ್ಯ 23) ಇಂಡೆಂಟ್ ನಂ. 54630/35.00 ಲಕ್ಷ/ಸಾಮಾನ್ಯ 24) ಇಂಡೆಂಟ್ ನಂ. 56117/10.00 ಲಕ್ಷ/ಸಾಮಾನ್ಯ 25) ಇಂಡೆಂಟ್ ನಂ. 53994/32.00 ಲಕ್ಷ/ಸಾಮಾನ್ಯ 26) ಇಂಡೆಂಟ್ ನಂ. 53101/38.00 ಲಕ್ಷ/ಸಾಮಾನ್ಯ 27) ಇಂಡೆಂಟ್ ನಂ. 53103/6.50 ಲಕ್ಷ/ಸಾಮಾನ್ಯ 28) ಇಂಡೆಂಟ್ ನಂ. 53075/13.00 ಲಕ್ಷ/ಸಾಮಾನ್ಯ 29) ಇಂಡೆಂಟ್ ನಂ. 54088/26.60 ಲಕ್ಷ/ಸಾಮಾನ್ಯ 30) ಇಂಡೆಂಟ್ ನಂ. 53901/25.00 ಲಕ್ಷ/ಸಾಮಾನ್ಯ 31) ಇಂಡೆಂಟ್ ನಂ. 49066/7.27 ಲಕ್ಷ/ಸಾಮಾನ್ಯ 32) ಇಂಡೆಂಟ್ ನಂ. 49822/5.00 ಲಕ್ಷ/ಸಾಮಾನ್ಯ 33) ಇಂಡೆಂಟ್ ನಂ. 54391/2.20 ಲಕ್ಷ/ಸಾಮಾನ್ಯ 34) ಇಂಡೆಂಟ್ ನಂ. 51957/10.00 ಲಕ್ಷ/ಸಾಮಾನ್ಯ 35) ಇಂಡೆಂಟ್ ನಂ. 52551/3.00 ಲಕ್ಷ/ಸಾಮಾನ್ಯ 36) ಇಂಡೆಂಟ್ ನಂ. 52217/23.60 ಲಕ್ಷ/ಸಾಮಾನ್ಯ 37) ಇಂಡೆಂಟ್ ನಂ. 54745/6.00 ಲಕ್ಷ/ಸಾಮಾನ್ಯ 38) ಇಂಡೆಂಟ್ ನಂ. 56235/30.27 ಲಕ್ಷ/ಪರಿಶಿಷ್ಟ ಜಾತಿ 39) ಇಂಡೆಂಟ್ ನಂ. 56205/8.05 ಲಕ್ಷ/ಪರಿಶಿಷ್ಟ ಜಾತಿ 40) ಇಂಡೆಂಟ್ ನಂ. 56191/8.05 ಲಕ್ಷ/ಸಾಮಾನ್ಯ 41) ಇಂಡೆಂಟ್ ನಂ. 56152/12.00 ಲಕ್ಷ/ಪ್ರವರ್ಗ-2ಎ 42) ಇಂಡೆಂಟ್ ನಂ. 55242/25.00 ಲಕ್ಷ/ಪರಿಶಿಷ್ಟ ಜಾತಿ 43) ಇಂಡೆಂಟ್ ನಂ. 56145/25.00 ಲಕ್ಷ/ಸಾಮಾನ್ಯ 44) ಇಂಡೆಂಟ್ ನಂ. 57647/11.50ಲಕ್ಷ/ಸಾಮಾನ್ಯ 45) ಇಂಡೆಂಟ್ ನಂ. 57649/30.00 ಲಕ್ಷ/ಪರಿಶಿಷ್ಟ ಜಾತಿ 46) ಇಂಡೆಂಟ್ ನಂ. 56949/10.30 ಲಕ್ಷ/ಸಾಮಾನ್ಯ 47) ಇಂಡೆಂಟ್ ನಂ. 55951/2.50 ಲಕ್ಷ/ಸಾಮಾನ್ಯ 48) ಇಂಡೆಂಟ್ ನಂ. 56976/25.00 ಲಕ್ಷ/ಸಾಮಾನ್ಯ 49) ಇಂಡೆಂಟ್ ನಂ. 55327/21.80 ಲಕ್ಷ/ಸಾಮಾನ್ಯ 50) ಇಂಡೆಂಟ್ ನಂ. 58004/34.00 ಲಕ್ಷ/ಸಾಮಾನ್ಯ 51) ಇಂಡೆಂಟ್ ನಂ. 57958/5.00 ಲಕ್ಷ/ಸಾಮಾನ್ಯ 52) ಇಂಡೆಂಟ್ ನಂ. 57360/5.00 ಲಕ್ಷ/ಸಾಮಾನ್ಯ 53) ಇಂಡೆಂಟ್ ನಂ. 54100/20.00 ಲಕ್ಷ/ಸಾಮಾನ್ಯ 54) ಇಂಡೆಂಟ್ ನಂ. 52924/4.00ಲಕ್ಷ/ಸಾಮಾನ್ಯ 55) ಇಂಡೆಂಟ್ ನಂ. 52884/5.00 ಲಕ್ಷ/ಸಾಮಾನ್ಯ 56) ಇಂಡೆಂಟ್ ನಂ. 49114/34.00 ಲಕ್ಷ/ಸಾಮಾನ್ಯ. 57) ಇಂಡೆಂಟ್ ನಂ. 54567/45.00 ಲಕ್ಷ/ಪ್ರವರ್ಗ-1 58) ಇಂಡೆಂಟ್ ನಂ. 57619/8.00 ಲಕ್ಷ/ಪ್ರವರ್ಗ-2ಎ 59) ಇಂಡೆಂಟ್ ನಂ. 57622/7.00 ಲಕ್ಷ/ಪರಿಶಿಷ್ಟ ಜಾತಿ 60) ಇಂಡೆಂಟ್ ನಂ. 57621/19.00 ಲಕ್ಷ/ಪರಿಶಿಷ್ಟ ಜಾತಿ 61) ಇಂಡೆಂಟ್ ನಂ. 56778/12.63 ಲಕ್ಷ/ಪ್ರವರ್ಗ-2ಎ 62) ಇಂಡೆಂಟ್ ನಂ. 56779/12.00 ಲಕ್ಷ/ಪ್ರವರ್ಗ-1 63) ಇಂಡೆಂಟ್ ನಂ. 56777/25.75 ಲಕ್ಷ/ಸಾಮಾನ್ಯ. 64) ಇಂಡೆಂಟ್ ನಂ. 57692/8.00 ಲಕ್ಷ/ಪರಿಶಿಷ್ಟ ಜಾತಿ 65) ಇಂಡೆಂಟ್ ನಂ. 57956/5.00 ಲಕ್ಷ/ಸಾಮಾನ್ಯ. 66) ಇಂಡೆಂಟ್ ನಂ. 57995/4.88 ಲಕ್ಷ/ಸಾಮಾನ್ಯ. 67) ಇಂಡೆಂಟ್ ನಂ. 57993/5.00 ಲಕ್ಷ/ಪ್ರವರ್ಗ-2ಎ 68) ಇಂಡೆಂಟ್ ನಂ. 57991/6.30 ಲಕ್ಷ/ಸಾಮಾನ್ಯ 69) ಇಂಡೆಂಟ್ ನಂ. 57576/410.00 ಲಕ್ಷ/ಸಾಮಾನ್ಯ.

ಒಟ್ಟು 69 ಕಾಮಗಾರಿಗಳು ಮೊತ್ತ ರೂ.1417.29 ಲಕ್ಷಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು **ಕಾರ್ಯನಿರ್ವಾಹಕ ಅಭಿಯಂತರರು ಧಾರವಾಡ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: 0836-2213838** ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://www.kppp.karnataka.gov.in ರಲ್ಲಿ ಪಡೆಯಬಹುದು. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರಕಾರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಅ.ನಂ. 1 ರಿಂದ 69 ರವರೆಗೆ **ದಿನಾಂಕ: 08-05-2026** ರಿಂದ ಪಡೆಯಬಹುದಾಗಿದೆ.

ಈ ಮೇಲಿನ ಕಾಮಗಾರಿಗಳಿಗೆ (1 ರಿಂದ 55 ಕ್ಕೆ) 1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 27-05-2026 ಸಂಜೆ 04:00 ಗಂಟೆ 2) ಟೆಂಡರ್ ತೆರೆಯುವ ದಿನಾಂಕ: 29-05-2026 ಬೆಳಿಗ್ಗೆ 10:00 ಗಂಟೆ

ಈ ಮೇಲಿನ ಕಾಮಗಾರಿಗಳಿಗೆ (56 ರಿಂದ 68 ಕ್ಕೆ) 1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 16-05-2026 ಸಂಜೆ 04.00 ಗಂಟೆ 2) ಟೆಂಡರ್ ತೆರೆಯುವ ದಿನಾಂಕ : 18-05-2026 ಬೆಳಿಗ್ಗೆ 10:00 ಗಂಟೆ

ಈ ಮೇಲಿನ ಕಾಮಗಾರಿಗಳಿಗೆ (69 ಕ್ಕೆ) 1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 16-06-2026 ಸಂಜೆ 04.00 ಗಂಟೆ 2) ಟೆಂಡರ್ ತೆರೆಯುವ ದಿನಾಂಕ: 17-06-2026 ಸಂಜೆ 04:30 ಗಂಟೆ 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 22-06-2026 ಸಂಜೆ 04:30 ಗಂಟೆ

ಡಿಐಪಿಆರ್/ಧಾರವಾಡ/134/ಮಣಿಪಾಲ್/2026-27

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಧಾರವಾಡ.

ಕರ್ನಾಟಕ ಸರ್ಕಾರ - ಜಿಲ್ಲಾ ಪಂಚಾಯತ್ ಶಿವಮೊಗ್ಗ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಾಗರ

ನಂ.ಕಾಇಂ/ಪುರಾಇಂ/ವಿಸ್ತಾ/ಸೊ.ಸಾಗರ/KW-1,2&3/ಎಇ/ಜೆಇ/2026-27/ ದಿ: 04.05.2026

ಟೆಂಡರ್ ಪ್ರಕಟಣೆ ("ಕೆ.ಪಿ.ಪಿ.ಪಿ" ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಸಾಗರ ಇವರು KW-1,2&3 (Standard Tender Document) ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆ.ಪಿ.ಪಿ.ಪಿ ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2025-26ನೇ ಸಾಲಿನ ಮುಖ್ಯ ಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ (ಸಿ.ಎಂ.ಐ.ಡಿ.ಪಿ.) ಹಾಗೂ 23-24 ನೇ ಸಾಲಿನ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆ ಯಡಿಯಲ್ಲಿನ ಕಾಮಗಾರಿಗಳಿಗೆ ಐಟಂವಾರು ಇ-ಟೆಂಡರ್ ಆಹ್ವಾನಿಸಲಾಗಿದೆ

1) ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 05.05.2026 ರಿಂದ 12.05.2026 ರವರೆಗೆ **2**) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 12.05.2026 ಸಮಯ 17:00:00 **3**) ಬಿಡ್ ತೆರೆಯುವ ದಿನಾಂಕ: 13.05.2026 ಸಮಯ 17:01:00.

1. GENERAL Category Works: 24212/CALL-3, 24230/CALL-3, 26572,26577

ಕೆ.ಪಿ.ಪಿ.ಪಿ ವೆಬ್‌ಸೈಟ್ ಟೆಂಡರಿನ ವಿವರಗಳನ್ನು ಈ ಕಛೇರಿಯ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ ಇವರ ಕಛೇರಿಯನ್ನು ಸಂಪರ್ಕಿಸುವುದು ಮತ್ತು ಕೆ.ಪಿ.ಪಿ.ಪಿ ವೆಬ್ ಸೈಟ್ (www.kppp.karnataka.gov.in) ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08183-226064 ಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರಿಂದ ಪಡೆಯಬಹುದು ಅಥವಾ helpdesk ದೂರವಾಣಿ ಸಂಖ್ಯೆ: 080-25501216, 25501227 ಇವರನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಸಾಗರ,

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/26-27/19/05/186

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

No: EE/ UTP /RNR/Canal-Works/SD-4/ PB-2/2026-27/316
Date: 05-05-2026.

ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ ದ್ವಿ - ಲಕೋಟೆ ಪದ್ದತಿ

(ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಕಾಲುವೆ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ 4701 ರಡಿ 02 ಕಾಮಗಾರಿಗೆ ಉಲ್ಲೇಖಿತ ಪತ್ರ (1) ರನ್ವಯ ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಯಗಳ ಟೆಂಡರ್ ಮೊತ್ತ ರೂ.203.94 ಲಕ್ಷಗಳಿಂದ ರೂ:212.62 ಲಕ್ಷಗಳ ವರೆಗೆ (GST ಸೇರಿ) ಇರುತ್ತದೆ. ಮತ್ತು ಇ.ಎಂ.ಡಿ ಮೊತ್ತವು ರೂ:2.59 ಲಕ್ಷಗಳಿಂದ ರೂ:2.70 ಲಕ್ಷಗಳ ವರೆಗೆ ಇರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (ಹಿಂದಿರುಗಿಸಲಾಗದ್ದು) https://kppp.karnataka.gov.in ನಲ್ಲಿ ನೋಡಿಕೊಂಡು ತುಂಬತಕ್ಕದ್ದು. (1) ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ: 06-05-2026 ರಿಂದ 15-05-2026ರ ಸಂಜೆ 5.00 ರವರೆಗೆ (2) ಪ್ರೀ-ಬಿಡ್ ಮೀಟಿಂಗ್ ನಡೆಸುವ ದಿನಾಂಕ 13-05-2026 ಬೆಳಿಗ್ಗೆ 11.30 ಕ್ಕೆ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಕಛೇರಿಯಲ್ಲಿ (3) ಟೆಂಡ್‌ರ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 14-05-2026 ಸಂಜೆ 4.00 ರ ವರೆಗೆ (4) ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 15-05-20263 ರ ಸಂಜೆ 5.00 ರ ವರೆಗೆ (5) ದಿನಾಂಕ 16-05-2026ರಂದು ಸಂಜೆ 5.30 ಗಂಟೆಗೆ ತಾಂತ್ರಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು.

ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ.(08373) 297332 ಕ್ಕೆ ಸಂಪರ್ಕಿಸುವುದು. ಷರತ್ತು ಬದ್ಧ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.

ಸಹಿ/- ಕಾರ್ಯನಿರ್ವಾಹಕಇಂಜಿನೀಯರರು,
ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.

181

ನಾಡಿದ್ದು ಅಮಿತ್ ಶಾ ಅವರಿಂದ ಬಿಎಸ್‌ವೈ ಬಗ್ಗೆ 2 ಕೃತಿ ಬಿಡುಗಡೆ

ಬೆಂಗಳೂರು: ಮೇ 9ರಂದು ಚಿತ್ರದುರ್ಗದಲ್ಲಿ ಐತಿಹಾಸಿಕ ದಾಖಲೆಯಾಗಿ ಸಮಾವೇಶ ಗೊಳ್ಳುತ್ತಿರುವ ಬಿ.ಎಸ್. ಯಡಿಯೂರಪ್ಪನವರ 50 ವರ್ಷಗಳ ಸಾರ್ವಜನಿಕ ಜೀವನ ಪಯಣದ ನೆನಪಿಗಾಗಿ ನಡೆಯುತ್ತಿರುವ 'ಬಿ.ಎಸ್. ವೈ ಅಭಿಮಾನೋತ್ಸವ' ಕಾರ್ಯಕ್ರಮದಲ್ಲಿ ಯಡಿಯೂರಪ್ಪನವರು ನಡೆದು ಬಂದ ಹಾದಿಯ ವಿವರಗಳನ್ನೊಳಗೊಂಡ ಅವರ ಜೀವನ ಚರಿತ್ರೆಯ 'ಕೆಂದಾವರೆ-ಕಮಲ ಅರಳಿದ ಕಥೆ' ಹಾಗೂ ಯಡಿಯೂರಪ್ಪನವರ ಸುದೀರ್ಘ ಶಾಸಕತ್ವದ ಅವಧಿಯಲ್ಲಿ ವಿಧಾನ ಮಂಡಲದ ಉಭಯ ಸದನದಲ್ಲಿ ಮಾಡಿದ ಭಾಷಣಗಳ ಸಂಗ್ರಹಗಳನ್ನು ಹೊತ್ತ 'ಸದನ ಶಿಕಾರಿ- ಯಡಿಯೂರಪ್ಪನವರ ಗುಡುಗಿನ ನುಡಿಗಳು' ಎಂಬ ಎರಡೂ ಪುಸ್ತಕಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಲೋಕಾರ್ಪಣೆಗೊಳಿಸಲಿದ್ದಾರೆ ಎಂದು ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ಅಧ್ಯಕ್ಷ ಆರ್. ರಘು (ಕೌಟಿಲ್ಯ) ಅವರು ತಿಳಿಸಿದ್ದಾರೆ.

'ಕೆಂದಾವರೆ-ಕಮಲ ಅರಳಿದ ಕಥೆ' ಪುಸ್ತಕದಲ್ಲಿ ಯಡಿಯೂರಪ್ಪನವರು ಹೇಳಿಕೊಂಡಿರುವ ಕಥೆಯನ್ನು ಬರಹಗಾರ ಆರ್.ರಘು ನಿರೂಪಿಸಿದ್ದು, ಅವರ ಬಾಲ್ಯದಿಂದ ಈವರೆವಿಗಿನ ಪ್ರಮುಖ ಘಟ್ಟಗಳನ್ನು ಈ ಪುಸ್ತಕದಲ್ಲಿ ದಾಖಲಿಸಲಾಗಿದೆ. 'ಸದನ ಶಿಕಾರಿ- ಯಡಿಯೂರಪ್ಪನವರ ಗುಡುಗಿನ ನುಡಿಗಳು' ಪುಸ್ತಕ ಹೋರಾಟದ ಹಿನ್ನೆಲೆಯಿಂದ ಬಂದ ಯಡಿಯೂರಪ್ಪನವರು ತಮ್ಮ ಶಾಸಕತ್ವದ ಅವಧಿಯಲ್ಲಿ ವಿರೋಧ ಪಕ್ಷದಲ್ಲಿರಲಿ ಆಡಳಿದ ಪಕ್ಷದಲ್ಲಿರಲಿ ಜನಪರ ವಿಚಾರಗಳು, ರೈತರ ಸಂಕಷ್ಟಗಳು, ನಾಡಿನ ಹಿತಾಸಕ್ತಿಯ ವಿಚಾರ ಬಂದಾಗ ಸದನದಲ್ಲೂ ಹೋರಾಟಕ್ಕಿಳಿದು ಗುಡುಗಿ ಮಾತನಾಡಿದ್ದಾರೆ. ಅಂಕಿ-ಸಂಖ್ಯೆಗಳ ಸಹಿತ ಆಧಾರಗಳನ್ನು ಇಟ್ಟುಕೊಂಡು ಮಾತನಾಡಿರುವುದೇ ಹೆಚ್ಚು. 'ಯಡಿಯೂರಪ್ಪ ಗುಡುಗಿದರೆ ವಿಧಾನ ಸೌಧ ನಡುಗುತ್ತದೆ' ಎಂಬ ಮಾತು ಜನಮಾನಸದಲ್ಲಿ ಹಾಸುಹೊಕ್ಕಾಗಿದೆ. ಈ ಹಿನ್ನೆಲೆಯಲ್ಲಿ ಅವರ ಐದು ದಶಕಗಳ ಸುದೀರ್ಘ ಅವಧಿಯಲ್ಲಿ ವಿಧಾನ ಮಂಡಲದಲ್ಲಿ ಮಾತನಾಡಿರುವ ದಾಖಲೆಗಳು 15000 ಪುಟಗಳನ್ನು ಮೀರುತ್ತದೆ. ಇದನ್ನು ಪರಿಷ್ಕರಿಸಿ ಹತ್ತು ಸಂಪುಟಗಳಲ್ಲಿ ತರುವ ಯೋಚನೆಯಿದ್ದು, ಮೊದಲ ಸಂಪುಟವನ್ನು ನಾಳೆ ಬಿಡುಗಡೆಗೊಳಿಸಲಾಗುತ್ತಿದ್ದು, ಇದನ್ನೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿಡುಗಡೆ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರಾಜ್ಯದಲ್ಲಿ ಭಾರಿ ಮಳೆ ಎಚ್ಚರಿಕೆ

ಹಲವು ಜಿಲ್ಲೆಗಳಲ್ಲಿ ಮೇ 12 ರವರೆಗೆ ಕೆಲವೆಡೆ ಮಳೆ ಸೂಚನೆ

ಸಂ.ಕ. ಸಮಾಚಾರ, ಬೆಂಗಳೂರು

ಬಿಸಿಲಿಂದ ಬಸವಳಿದಿದ್ದ ರಾಜ್ಯದ ಜನರಿಗೆ ಪೂರ್ವ ಮುಂಗಾರು ಕೊಂಚ ಸಮಾಧಾನ ತಂದಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಮೇ 12 ರವರೆಗೆ ಕೆಲವೆಡೆ ಮಳೆ ಸೂಚನೆ ಇದೆ. ಆದರೆ ಮೇ 7 ಹಾಗೂ 8 ರಂದು ಭಾರಿ ಮಳೆಯ ಮುನ್ಸೂಚನೆಯೂ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಹವಾಮಾನ ಇಲಾಖೆಯ ಮಾಹಿತಿ ಪ್ರಕಾರ, ಉತ್ತರ ತೆಲಂಗಾಣ ಮತ್ತು ಮನ್ನಾರ್ ಕೊಲ್ಲಿಯ ಮೇಲ್ಭಾಗದಲ್ಲಿ ಸುಳಿಗಾಳಿ ಉಂಟಾಗಿದೆ. ಇದರ ಪರಿಣಾಮವಾಗಿ ಉತ್ತರ ಒಳನಾಡಿನಿಂದ ಮನ್ನಾರ್ ಕೊಲ್ಲಿಯವರೆಗೆ ವಾಯುಭಾರ ಕುಸಿತವಾಗಿದ್ದು, ಇದರಿಂದ ರಾಜ್ಯದಲ್ಲಿ ಮಳೆಗೆ ಪೂರಕ ವಾತಾವರಣ ನಿರ್ಮಾಣವಾಗಿದೆ. ಇದರಿಂದಾಗಿ ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಹಾಸನ, ಕೊಡಗು, ಮಂಡ್ಯ ಮತ್ತು ಮೈಸೂರಿನಲ್ಲಿ ಮೇ 7 ಮತ್ತು 8ರಂದು ಭಾರಿ ಮಳೆಯಾಗುವ ಸಾಧ್ಯತೆಯಿದೆ. ಚಿಕ್ಕಮಗಳೂರಿನಲ್ಲೂ ಮೇ 8ರಂದು ನಿರೀಕ್ಷೆಗಿಂತ ಹೆಚ್ಚು ಮಳೆಯ ಮುನ್ಸೂಚನೆ ನೀಡಲಾಗಿದೆ.

ಒಳನಾಡಿನಲ್ಲಿ 10ರವರೆಗೆ ರಾಜ್ಯದ ಒಳನಾಡಿನ ಹಲವೆಡೆ ಗುಡುಗು ಸಹಿತ ಬಿರುಗಾಳಿ ಬೀಸಲಿದ್ದು, ಗಾಳಿಯ ವೇಗ ಗಂಟೆಗೆ 40-50 ಕಿ.ಮೀ ಇರಲಿದೆ. ಕರಾವಳಿ ಜಿಲ್ಲೆಗಳಲ್ಲಿ ಗಾಳಿಯ ವೇಗ ಗಂಟೆಗೆ 30-40 ಕಿ.ಮೀ ಇರಲಿದ್ದು, ಗುಡುಗು ಸಹಿತ ಮಳೆಯಾಗಲಿದೆ.

ಬಿಸಿಲಿನ ತಾಪ ಹೆಚ್ಚಳ: ರಾಜ್ಯದಲ್ಲಿ ಪೂರ್ವ ಮುಂಗಾರು ಮಳೆ ಆದರೂ ಕೂಡಾ ಉತ್ತರ ಒಳನಾಡಿನ ಜಿಲ್ಲೆಗಳಾದ ಬೀದರ್, ಕಲಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಗದಗ, ವಿಜಾಪುರ, ಬಾಗಲಕೋಟೆಯಲ್ಲಿಯಲ್ಲಿ ಮುಂದಿನ ಒಂದು ವಾರ 42 ಡಿಗ್ರಿವರೆಗೆ ತಾಪಮಾನ ದಾಖಲಾಗಲಿದೆ. ಇನ್ನು ಕರಾವಳಿಯಲ್ಲಿ 37 ಡಿಗ್ರಿ ಸೆ. ಇರಲಿದೆ ಎಂದು ಹವಾಮಾನ ತಜ್ಞ ಸಿ.ಎಸ್. ಪಾಟೀಲ್ ತಿಳಿಸಿದ್ದಾರೆ.

ಯಾವ್ಯಾವ ಜಿಲ್ಲೆಗಳಲ್ಲಿ ಮಳೆ

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಹಾಸನ, ಕೊಡಗು, ಮೈಸೂರು, ಮಂಡ್ಯ, ಚಾಮರಾಜನಗರ, ತುಮಕೂರು, ರಾಮನಗರ, ಕೋಲಾರ, ಚಿಕ್ಕಮಗಳೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಮುಂದಿನ ಮೂರು ದಿನಗಳ ಕಾಲ ಸಾಧಾರಣದಿಂದ ಭಾರಿ ಮಳೆಯಾಗಲಿದೆ. ಧಾರವಾಡ, ಹಾವೇರಿ, ಗದಗ, ಕೊಪ್ಪಳ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಚದುರಿದಂತೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಉಳಿದ ಜಿಲ್ಲೆಗಳಲ್ಲಿ ಒಣ ಹವೆ ಮುಂದುವರಿಯಲಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಲಿದ್ದು, ಉತ್ತರ ಕನ್ನಡದಲ್ಲಿ ಮೇ 8ರಿಂದ ಮಳೆ ಆರಂಭವಾಗುವ ಸಾಧ್ಯತೆಯಿದೆ.

ಬೆಂಗಳೂರು ನಗರದ ಹವಾಮಾನ: ರಾಜಧಾನಿ ಬೆಂಗಳೂರಿನಲ್ಲಿ ಮುಂದಿನ 24 ರಿಂದ 48 ಗಂಟೆಗಳ ಕಾಲ ಭಾಗಶಃ ಮೋಡ ಕವಿದ ವಾತಾವರಣವಿರಲಿದೆ. ಸಂಜೆ ಅಥವಾ ರಾತ್ರಿಯ ಅವಧಿಯಲ್ಲಿ 2 ದಿನ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಈ ಸಮಯದಲ್ಲಿ ಗಂಟೆಗೆ 40-50 ಕಿ.ಮೀ ವೇಗದಲ್ಲಿ ಬಿರುಗಾಳಿ ಬೀಸಬಹುದು. ನಗರದ ಗರಿಷ್ಠ ತಾಪಮಾನ 34ರಿಂದ 35 ಡಿಗ್ರಿ ಸೆಲ್ಸಿಯಸ್ ಇದ್ದರೆ, ಕನಿಷ್ಠ ತಾಪಮಾನ 22 ಡಿಗ್ರಿ ಆಸುಪಾಸಿನಲ್ಲಿರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ಕಲ್ಯಾಣ ಪುರುಷ

ನಿರ್ಲಕ್ಷಿತ ಜಿಲ್ಲೆಗಳಿಗೆ ನೆರವಿನ ಅಭಯಹಸ್ತ

ಉತ್ತರ ಹಾಗೂ ಕಲ್ಯಾಣ ಪ್ರಾಂತ್ಯಗಳಲ್ಲಿ ನೀರು, ಕೃಷಿ, ನಿರುದ್ಯೋಗ ಸದಾ ಜೀವಂತ ಸಮಸ್ಯೆಗಳು. ಇವಕ್ಕೆ ಕಿರೀಟ ಇಟ್ಟಂತೆ ಕಾಡುತ್ತಿರುವುದು ಪ್ರಾದೇಶಿಕ ಅಸಮಾನತೆ. ಇವುಗಳಿಗೆ ಉತ್ತರ ಕಂಡುಕೊಳ್ಳಲೇಬೇಕು ಎಂದು ಶಪಥ ತೊಟ್ಟು ಶ್ರಮಿಸಿದ ದೊಡ್ಡ ನಾಯಕ ಬಿ.ಎಸ್. ಯಡಿಯೂರಪ್ಪನವರು (ಬಿಎಸ್‌ವೈ).

ತಮ್ಮ ಸಾತ್ವಿಕ ಸಿಟ್ಟು ಹಾಗೂ ಪ್ರಾದೇಶಿಕ ಅಸಮಾನತೆ ನಿವಾರಿಸಲೇಬೇಕು ಎಂಬ ಮೌಲಿಕ ಹಠ ತೊಟ್ಟು ತಮ್ಮ ಅವಧಿಯಲ್ಲಿ ಯಡಿಯೂರಪ್ಪ ರೂಪಿಸಿದ ಕಾರ್ಯಕ್ರಮಗಳು ಅನನ್ಯ.

ಉತ್ತರದ ಜನಸಾಮಾನ್ಯರೆಲ್ಲ ಅಪಾರ ಪ್ರೀತಿ ಮಾಡುವ ಈ ನಾಯಕ ಮುಖ್ಯಮಂತ್ರಿಯಾಗಿ ಸಮಸ್ಯೆಗಳ ನಿವಾರಣೆಗೆ ಮಾಡಿದ ಕೆಲಸ ಹಾಗೂ ನೀಡಿದ ಯೋಜನೆಗಳನ್ನು ಜನ ಎಂದಿಗೂ ಮರೆಯಲಾರರು. ಆದ್ದರಿಂದಲೇ ಬಿಎಸ್‌ವೈ ಇಂದಿಗೂ ಉತ್ತರ ಹಾಗೂ ಕಲ್ಯಾಣ ಕರ್ನಾಟಕದ ಪ್ರಶ್ನಾತೀತ ಬಿಜೆಪಿ ನಾಯಕ ಎನಿಸಿಕೊಂಡಿರುವುದು.

ಯಡಿಯೂರಪ್ಪನವರ ರಾಜಕೀಯ ಬದುಕಿನ ಯಾನ ಮತ್ತು ಉತ್ತರ ಕರ್ನಾಟಕ ಎರಡಕ್ಕೂ ಒಂದು ಬಗೆಯ ಬಿಡಿಸಲಾಗದ ನಂಟಿದೆ. ಕೌಟುಂಬಿಕ ಸಂಬಂಧವನ್ನು ಮೀರಿದ, ಪ್ರತಿ ಮನೆಯಲ್ಲೂ 'ನಮ್ಮವ' ಎನ್ನುವ ಭಾವ ಸ್ಫುರಣೆಗೆ ಕಾರಣವಾಗುವವರು ಸದಾ ವಿಭಿನ್ನರಾಗಿ ನಿಲ್ಲುತ್ತಾರೆ.

ಹುಬ್ಬಳ್ಳಿಯಿಂದ ಬೀದರ್‌ವರೆಗಿನ 14 ಜಿಲ್ಲೆಗಳ ಅಭಿವೃದ್ಧಿಯೇ ನನ್ನ ಗುರಿ ಎಂದು ಘಂಟಾಘೋಷವಾಗಿ ಸಾರಿ, ಅದರಂತೆ ಯೋಜನೆಗಳನ್ನು ರೂಪಿಸಿದವರು ಈ ಮಾಜಿ ಮುಖ್ಯಮಂತ್ರಿ.

ಉತ್ತರ ಹಾಗೂ ಕಲ್ಯಾಣ ಕರ್ನಾಟಕ ಪ್ರಾಂತ್ಯಗಳೆಂದರೆ ಬಿಎಸ್‌ವೈಗೆ ಇನ್ನಿಲ್ಲದ ಪ್ರೀತಿ. ಹೀಗಾಗಿ ಇವರು ಉತ್ತರ ಮತ್ತು ಕಲ್ಯಾಣ ಕರ್ನಾಟಕದ ಮನೆಮನೆಗಳಲ್ಲೂ 'ಅಪ್ಪಾಜಿ' ಎಂದೇ ಜನಪ್ರಿಯ.

ಇಲ್ಲಿ ಒಂದು ಅಂಶವನ್ನು ಮರೆಯಬಾರದು. ಅದೆಂದರೆ ಅಧಿಕಾರಕ್ಕೇರುವ ಮೊದಲಿನಿಂದಲೂ ಈ ನಾಯಕ ಉತ್ತರದ ಭಾಗಗಳ ಅಭಿವೃದ್ಧಿಯ ಸಲುವಾಗಿ ಮಾಡಿದ ಹೋರಾಟ.

ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಮಾತ್ರ ರಾಜ್ಯದ ಈ ನತದೃಷ್ಟ ಭಾಗಕ್ಕೆ ಆಸರೆಯಾಗಲಿಲ್ಲ; ಬಿಜೆಪಿಯನ್ನು ಅಧಿಕಾರಕ್ಕೆ ತಂದು ರಾಜ್ಯ ಆಡಳಿತ ಚುಕ್ಕಾಣಿ ಹಿಡಿಯುವ ದಶಕಗಳಿಗೂ ಮೊದಲೇ ಅಭಿವೃದ್ಧಿ ವಂಚಿತ ನೆಲದ ಸಲುವಾಗಿ ಸಕ್ರಿಯ ಹೋರಾಟ ಆರಂಭಿಸಿದವರು ಬಿಎಸ್‌ವೈ. ಹಾಗೂ ಇವರ ಹೋರಾಟದ ಫಲವಾಗಿಯೇ ಉತ್ತರದ ಜಿಲ್ಲೆಗಳೆಲ್ಲ ಕೇಸರಿ ಪಾಳಯದ ಗಟ್ಟಿ ನೆಲವಾದವು ಎಂಬುದು ರಾಜಕೀಯವಾಗಿ ಮರೆಯಲಾಗದ ವಾಸ್ತವ.

ಹಾಗೆಯೇ, ವಿಪಕ್ಷದಲ್ಲಿದ್ದು ಬಿಎಸ್‌ವೈ ಮಾಡಿದ ಹೋರಾಟದ ಕಾರಣಕ್ಕಾಗಿಯೇ ಅಂದಂದಿನ ಆಳುವ ಸರ್ಕಾರಗಳು ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಯೋಜನೆಗಳನ್ನು ಘೋಷಿಸುತ್ತಿದ್ದವು ಎಂಬುದೂ ಅಷ್ಟೇ ದೊಡ್ಡ ಸತ್ಯ.

ಈ ವಿಶಾಲ ಅರ್ಥದಲ್ಲಿ ನೋಡಿದಾಗ, ಬಿಎಸ್‌ವೈ ಮುಖ್ಯಮಂತ್ರಿಯಾಗುವುದಕ್ಕೆ ಮೊದಲೇ ಉತ್ತರ ಹಾಗೂ ಕಲ್ಯಾಣ ಕರ್ನಾಟಕ ಪ್ರಾಂತ್ಯದ ಬರಡು ಜಿಲ್ಲೆಗಳಲ್ಲಿ ಅಭಿವೃದ್ಧಿಯ ಶಕೆ ದಟ್ಟವಾಗುವಂತೆ ಮಾಡಿದ ಅಪರೂಪದ ನಾಯಕ ಎನಿಸಿಕೊಳ್ಳುತ್ತಾರೆ.

ಬಿಎಸ್‌ವೈ ಹೋರಾಟದ ರಾಜಕಾರಣಕ್ಕೆ ಉತ್ತರ ಹಾಗೂ ಕಲ್ಯಾಣ ಕರ್ನಾಟಕ ಪ್ರಾಂತ್ಯಗಳ ಜ್ವಲಂತ ಸಮಸ್ಯೆಗಳು ಸಾಕಷ್ಟು ವಸ್ತುಗಳನ್ನು ಒದಗಿಸಿದವು. ಈ ಅಂಶ ಎಷ್ಟು ಸತ್ಯವೋ, ಈ ಸಮಸ್ಯೆಗಳ ನಿವಾರಣೆ ನನ್ನ ಹೋರಾಟದ ಬದ್ಧತೆಗಳಲ್ಲಿ ಒಂದು ಎಂದು ಯಡಿಯೂರಪ್ಪ ಅವರು ಸದಾ ಸ್ಪಂದಿಸುತ್ತಿರುವುದೂ ಅಷ್ಟೇ ಸತ್ಯ.

ಬೀದರ್ ತುದಿಯ ಬಸವಕಲ್ಯಾಣ ಇರಲಿ, ಉತ್ತರ ಕನ್ನಡದ ಕೊನೆಯ ಭಟ್ಕಳದ ಕಡಲಂಚಿನ ಗ್ರಾಮವೇ ಆಗಿರಲಿ; ಬೆಳಗಾವಿಯ ಸಂಕಷ್ಟವೇ ಇರಲಿ, ವಿಜಯಪುರ– ಬಾಗಲಕೋಟೆಗಳ ಸಮಸ್ಯೆಗಳೇ ಆಗಿರಲಿ; ಹುಬ್ಬಳ್ಳಿ– ಧಾರವಾಡದ ಅಗತ್ಯಗಳಿರಲಿ, ರಾಣೆಬೆನ್ನೂರು– ನಿಪ್ಪಾಣಿಯ ತಲ್ಲಣಗಳೇ ಎದುರಾಗಲಿ ಬಿಎಸ್‌ವೈ ಅಲ್ಲಿ ಹಾಜರು!

ಈ ನಾಯಕರ ಮಟ್ಟಿಗೆ ಇದು ಅಂದಿಗೂ, ಇಂದಿಗೂ ನಿಜವಾದ ಮಾತು. ಆದ್ದರಿಂದಲೇ ಈ ಎರಡು ಪ್ರಾಂತ್ಯಗಳು ಏನೇ ಸಂಕಷ್ಟಕ್ಕೆ ಸಿಲುಕಲಿ, ಜನರಿಗೆ ಇದ್ದ ಮತ್ತು ಈಗಲೂ ಇರುವ ಭರವಸೆ ಎಂದರೆ, 'ಯಡಿಯೂರಪ್ಪ'. ಬಿಎಸ್‌ವೈ ಬಂದು ನಿಂತು ನಮ್ಮ ಪರವಾಗಿ ಹೋರಾಟ ಮಾಡುತ್ತಾರೆ ಎಂಬುದು ಇಲ್ಲಿನ ಎಲ್ಲರಲ್ಲಿ ಕಾಣುವ ಸಾಮಾನ್ಯ ನಿರೀಕ್ಷೆ.

ಈ ಕಾರಣಕ್ಕೇ ಅಧಿಕಾರದಲ್ಲಿರಲಿ, ಇಲ್ಲದಿರಲಿ, ಬಿಎಸ್‌ವೈ ಕಲ್ಯಾಣ ನಾಡನ್ನೂ ಒಳಗೊಂಡ ಇಡೀ ಉತ್ತರದ ಜಿಲ್ಲೆಗಳೆಲ್ಲವುಗಳ ಆಶಾಕಿರಣ. ಇಲ್ಲಿಯೂ ಪ್ರಶ್ನಾತೀತ ನಾಯಕ. ಆಗಲೂ– ಈಗಲೂ ಜನ ಕಣ್ಣರಳಿಸಿ ನೋಡುವ, ಕಿವಿಯಾಗಿ ಕೇಳುವ ಮತ್ತು ನಿರೀಕ್ಷೆ ಇಟ್ಟು ಕಾಯುವ ಮುತ್ಸದ್ದಿ!

ಸುವರ್ಣ ವಿಧಾನಸೌಧ

ಬೆಳಗಾವಿ ವಿಷಯವಾಗಿ ಎಂಇಎಸ್ ಆಗಾಗ ತೆಗೆಯುತ್ತಿದ್ದ ತಗಾದೆಗೆ ಶಾಶ್ವತವಾಗಿ ಬೀಗ ಹಾಕಿದ ಆಡಳಿತಾತ್ಮಕ ಕ್ರಮವೇ 'ಸುವರ್ಣ ವಿಧಾನಸೌಧ' ನಿರ್ಮಾಣ. 2008ರಲ್ಲಿ ಯಡಿಯೂರಪ್ಪ ಸರ್ಕಾರ ಬೆಳಗಾವಿಯ ಹಲಗಾದಲ್ಲಿ ಈ ಭವ್ಯ ಆಡಳಿತ ಶಕ್ತಿ ಕೇಂದ್ರದ ನಿರ್ಮಾಣಕ್ಕೆ ಚಾಲನೆ ನೀಡಿತು. ಸುಮಾರು 400 ಕೋಟಿಗೂ ಹೆಚ್ಚು ವೆಚ್ಚದಲ್ಲಿ ನಿರ್ಮಾಣವಾದ ಸೌಧ 2012ರಲ್ಲಿ ಕಾರ್ಯಾರಂಭ ಮಾಡಿತು. 2012ರ ಡಿಸೆಂಬರ್ ತಿಂಗಳಿನಿಂದ ವಿಧಾನ ಮಂಡಲ ಅಧಿವೇಶನಕ್ಕೆ ವೇದಿಕೆಯಾಯಿತು. ಈಗ ಇದು ಕರ್ನಾಟಕದ ಎರಡನೇ ವಿಧಾನಸೌಧವಾಗಿರುವುದರಿಂದ ಬೆಳಗಾವಿ ರಾಜ್ಯದ ಎರಡನೇ ರಾಜಧಾನಿ ಎನಿಸಿಕೊಳ್ಳುವಂತಾಗಿದೆ. ಪ್ರತಿ ವರ್ಷದ ಚಳಿಗಾಲದ ಅಧಿವೇಶನ ಇಲ್ಲಿ ನಡೆಯುತ್ತದೆ.

ಮಹದಾಯಿಗೆ ಬಿಎಸ್‌ವೈ ಬದ್ಧತೆ

ತಾಂತ್ರಿಕ ಮತ್ತು ಕಾನೂನಾತ್ಮಕ ಕಾರಣಗಳಿಂದಾಗಿ ಕಗ್ಗಂಟಾಗಿರುವ ಮಹದಾಯಿ ಯೋಜನೆಯ ಐತೀರ್ಪಿನಂತೆ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ನೀರು ತರುವ ಯೋಜನೆ ಜಾರಿಗೊಳಿಸುವುದಕ್ಕೆ ಬಿಎಸ್‌ವೈ ಮಾಡಿದ ಯತ್ನಗಳು ಒಂದೆರಡಲ್ಲ.

ಮಹದಾಯಿ ಜಾರಿಗೆ ಆಗ್ರಹಿಸಿ 2018ರಲ್ಲಿ ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ಬಿಜೆಪಿಯಿಂದ ಬೃಹತ್ ರ್‍ಯಾಲಿ ಏರ್ಪಾಡಾಗಿತ್ತು. ಯಡಿಯೂರಪ್ಪ ರ್‍ಯಾಲಿಯ ಮುಖ್ಯ ಭಾಷಣಕಾರರಾಗಿದ್ದರು. 2018ರ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ಮಹದಾಯಿ ಜಾರಿ ಮಾಡುತ್ತೇವೆ; ಇದಕ್ಕಾಗಿ ಗೋವಾ ತಕರಾರರು ಇಲ್ಲದಂತೆ ನೋಡಿಕೊಳ್ಳುತ್ತೇವೆ. ಹುಬ್ಬಳ್ಳಿ ರ್‍ಯಾಲಿಯಲ್ಲಿ ಈ ಬಗ್ಗೆ ಲಿಖಿತ ರೂಪದ ಖಚಿತತೆ ಕೊಡುವುದಾಗಿಯೂ ಈ ನಾಯಕ ರ್‍ಯಾಲಿಗೂ ಮುನ್ನ ಸಾರ್ವಜನಿಕವಾಗಿ ಪ್ರಕಟಿಸಿದ್ದರು. ಅದ್ಹೇಗೆ ಖಚಿತತೆಯನ್ನು ರ್‍ಯಾಲಿಯಲ್ಲಿ, ಅದೂ ಅಧಿಕಾರ ಇಲ್ಲದಿರುವಾಗ ಕೊಡುತ್ತಾರೆ ಎನ್ನುವ ಕುತೂಹಲ ಬಿಎಸ್‌ವೈ ಘೋಷಣೆಯಿಂದ ಮೂಡುವಂತಾಗಿತ್ತು.

ನೆಹರೂ ಮೈದಾನದ ರ್‍ಯಾಲಿಯ ವೇಳೆ ಬಿಜೆಪಿ ಫ್ಯಾಕ್ಸ್ ಯಂತ್ರವನ್ನೂ ಅಳವಡಿಸಿತ್ತು. ಯಡಿಯೂರಪ್ಪ ಭಾಷಣ ಶುರುವಾಗುವ ಮೊದಲು ಗೋವಾದಿಂದ ಫ್ಯಾಕ್ಸ್ ಸಂದೇಶವೂ ಬಂತು !

'ಉತ್ತರ ಕರ್ನಾಟಕದ ಕುಡಿಯುವ ನೀರಿಗೆ ಗೋವಾದ ಯಾವ ಅಡ್ಡಿಯೂ ಇಲ್ಲ' ಎಂಬುದಾಗಿ ಅಂದಿನ ಗೋವಾ ಸಿಎಂ ಮನೋಹರ್ ಪರಿಕ್ಕರ್ (ಬಿಜೆಪಿ) ಸಹಿ ಮಾಡಿ ಕಳಿಸಿದ್ದ ಫ್ಯಾಕ್ಸ್ ಅದಾಗಿತ್ತು!

ಸೇರಿದ್ದ ಸಹಸ್ರಾರು ಜನರಿಗೆ ಅಚ್ಚರಿ... ಖುಷಿ ಎರಡೂ ಒಟ್ಟಿಗೇ ಆದವು. ಜನರ ಜಯಘೋಷ ಮುಗಿಲುಮುಟ್ಟಿತು. ಯಡಿಯೂರಪ್ಪ ಮಾತಿನಂತೆ ನಡೆದುಕೊಂಡಿದ್ದರು.

2018ರಲ್ಲಿ ಅಧಿಕಾರಕ್ಕೆ ಏರದಿದ್ದರೂ, 2019ರಲ್ಲಿ ರಾಜ್ಯ ಆಡಳಿತ ಚುಕ್ಕಾಣಿಯನ್ನು ಎರಡನೇ ಬಾರಿಗೆ ಹಿಡಿದಾಗ ಯಡಿಯೂರಪ್ಪ ಮಹದಾಯಿಗೆ ಬದ್ಧರಾಗಿ ಉಳಿದರು. ಕೇಂದ್ರ ಸರ್ಕಾರದ ಜೊತೆ ನಿರಂತರ ಸಂಪರ್ಕ ಇಟ್ಟುಕೊಂಡು, ಐತೀರ್ಪಿನ ಅಧಿಸೂಚನೆಗೆ ಭದ್ರ ಅಡಿಪಾಯವನ್ನು ಹಾಕಿದರು. ಕೇಂದ್ರ ಸರ್ಕಾರದಿಂದ ಯಾವುದೇ ಅಡ್ಡಿ ಎದುರಾಗದಂತೆ ಆಡಳಿತಾತ್ಮಕ ತಂತ್ರಗಳನ್ನು ಹೆಣೆದರು. ಫಲವಾಗಿಯೇ 2022ರ ಡಿಸೆಂಬರ್‌ನಲ್ಲಿ (ಬೆಳಗಾವಿ ಅಧಿವೇಶನದ ಕೊನೇ ದಿನ) ಕರ್ನಾಟಕದ ಮಹದಾಯಿ ಡಿಪಿಆರ್‌ಗೆ ಕೇಂದ್ರ ಜಲಶಕ್ತಿ ಆಯೋಗದಿಂದ ಅನುಮೋದನೆ ದೊರಕಿತು. ಅಂತಿಮವಾಗಿ ಪರಿಸರ ಇಲಾಖೆ ಅನುಮೋದನೆ ನಂತರ ಮಹದಾಯಿ ಜಾರಿಗೊಳ್ಳಲಿದೆ.

ಬಿ.ಎಸ್.ಯಡಿಯೂರಪ್ಪನವರು ಉತ್ತರ ಹಾಗೂ ಕಲ್ಯಾಣ ಕರ್ನಾಟಕದ ಮನೆಮನಗಳ ಸದಸ್ಯರಂತೆ ಬೆರೆತು ಹೋಗಿರುವ ಮುತ್ಸದ್ದಿ ರಾಜಕಾರಣಿ. ಈ ಎರಡೂ ಪ್ರಾಂತ್ಯಗಳಲ್ಲಿ 'ಅಪ್ಪಾಜಿ' ಎಂದು ಜನ ಪ್ರೀತಿಯಿಂದ ಕರೆಯುವ ಈ ನಾಯಕ, ಉತ್ತರ ಭಾಗಗಳ ಕಡೆಗೆ ತೋರಿದ ಒಲವು ಪದಗಳ ಹಿಡಿತಕ್ಕೆ ನಿಲುಕದಂಥದ್ದು. ಬಿಎಸ್‌ವೈ ಮುಖ್ಯಮಂತ್ರಿಯಾಗಿ, ವಿಪಕ್ಷ ಸದಸ್ಯ ಮತ್ತು ಪ್ರತಿಪಕ್ಷ ನಾಯಕರಾಗಿ ದಶಕಗಳ ಕಾಲದಿಂದ ಇಲ್ಲಿನ ಅಭಿವೃದ್ಧಿಯಲ್ಲಿ ವಹಿಸಿರುವ ಪಾತ್ರ ಅನನ್ಯವಾದುದು. ತಮ್ಮ ಕ್ಷೇತ್ರವಾದ ಶಿವಮೊಗ್ಗ ಜಿಲ್ಲೆ ಶಿಕಾರಿಪುರವನ್ನು ಪ್ರೀತಿಸುವಷ್ಟೇ ಆಳವಾಗಿ ಅವರು ಬೆಳಗಾವಿ ಹಾಗೂ ಕಲಬುರ್ಗಿ ವಿಭಾಗಗಳನ್ನೂ ಪ್ರೀತಿಸುತ್ತಾರೆ. ಇವೆರಡು ವಿಭಾಗಗಳ ಹದಿನಾಲ್ಕು ಜಿಲ್ಲೆಗಳ ಸರ್ವತೋಮುಖ ಅಭಿವೃದ್ಧಿಗಾಗಿ ಕಂಕಣಬದ್ಧರಾಗಿ ಕೆಲಸ ಮಾಡಿದ್ದಾರೆ. ವಿಶೇಷ ಅನುದಾನಗಳನ್ನು ತಮ್ಮ ಅವಧಿಯಲ್ಲಿ ನೀಡಿದ್ದಾರೆ. ಹೀಗಾಗಿ ಉತ್ತರ- ಕಲ್ಯಾಣ ಕರ್ನಾಟಕದ ಪ್ರಶ್ನಾತೀತ ನಾಯಕರಾಗಿಯೂ ಮೆಚ್ಚುಗೆ ಪಡೆದಿದ್ದಾರೆ.

ಉತ್ತರ ಕರ್ನಾಟಕದ ದೊಡ್ಡಣ್ಣ

ಬಿಎಸ್‌ವೈ

ಶಿಕಾರಿಪುರದಷ್ಟೇ ಬೆಳಗಾವಿ, ಕಲಬುರ್ಗಿ ವಿಭಾಗ ಪ್ರೀತಿಸಿದವರು, ಜನರ ಮೆಚ್ಚುಗೆಯ 'ಅಪ್ಪಾಜಿ'

ಉತ್ತರ- ಕಲ್ಯಾಣದ ಮನೆ-ಮನಗಳ ನಾಯಕ

ಕೃಷ್ಣೆ-ರಾಜ್ಯದ ಎರಡನೇ ಕಣ್ಣು ಎಂದಿದ್ದ ನಾಯಕ ಯಡಿಯೂರಪ್ಪ

ಉತ್ತರ ಹಾಗೂ ಕಲ್ಯಾಣ ಕರ್ನಾಟಕದ ಮಟ್ಟಿಗೆ ಕೃಷ್ಣೆ ಜೀವನಾಡಿ. ಮಹದಾಯಿ ಆಗಲೇಬೇಕಾಗಿರುವ ಯೋಜನೆ. ಇವೆಡರ ಬಗ್ಗೆಯೂ ಯಡಿಯೂರಪ್ಪ ಇಪ್ಪತ್ತೊಂದನೇ ಶತಮಾನದ ಆರಂಭದಿಂದಲೇ ಕಂಕಣ ತೊಟ್ಟಿದ್ದರು.

ಆದ್ದರಿಂದಲೇ 2008ರಲ್ಲಿ ಮೊದಲ ಬಾರಿ ಮುಖ್ಯಮಂತ್ರಿಯಾಗಿ ಮಂಡಿಸಿದ ಬಜೆಟ್‌ನಲ್ಲೇ ಕೃಷ್ಣಾ ಮೇಲ್ದಂಡೆ ಯೋಜನೆಗೆ ಜಲಸಂಪನ್ಮೂಲ ವೆಚ್ಚದಲ್ಲಿ ದೊಡ್ಡ ಪಾಲನ್ನು ನಿಗದಿ ಮಾಡಿದರು. ಅಲ್ಲದೇ ಕೃಷಿ ಬಜೆಟ್ ಮಂಡಿಸುವ ಮೂಲಕ ಅಂದು ದೇಶದ ಗಮನಸೆಳೆದ ಬಿಎಸ್‌ವೈ, ಕೃಷಿ ಬಜೆಟ್‌ನ ಅಂತರಾಳವೇ ಕೃಷ್ಣಾ ಸೇರಿದಂತೆ ರಾಜ್ಯದ ನೀರಾವರಿ ಯೋಜನೆಗಳಿಗೆ ಬಲ ಕೊಡುವುದಾಗಿದೆ ಎಂದು ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದ್ದರು. 'ಕಾವೇರಿ ಮತ್ತು ಕೃಷ್ಣೆ ನಾಡಿನ ಎರಡು ಕಣ್ಣುಗಳು ಎಂಬುದನ್ನು ನಾನು ಬಾಯಿಪಾಠದಂತೆ ಹೇಳುವುದಿಲ್ಲ. ಇದು ನನ್ನ ಮನಸ್ಸಿನ ಶಾಶ್ವತ ನಿಲುವು. ನನ್ನ ಹೃದಯವನ್ನು ಹೊರಗೆ ತೆಗೆದು ನೋಡಿದರೂ ಇವೆರಡರ ಬದ್ಧತೆಯೇ ನನ್ನ ಜೀವ ಎಂಬುದು ಗೊತ್ತಾಗುತ್ತದೆ' ಎಂದು ಈ ನಾಯಕ ಸಾರ್ವಜನಿಕ ಸಭೆಯೊಂದರಲ್ಲಿ ಹೇಳಿದ್ದು ಗಮನಾರ್ಹ. ಸಿಎಂ ಆಗಿದ್ದ ಎರಡೂ ಅವಧಿಯಲ್ಲಿ ಈ ಮಾತಿಗೆ ಪೂರಕವಾಗಿಯೇ ಕೃಷ್ಣಾ ಮೇಲ್ದಂಡೆಗೆ ಹಣ ಬಿಡುಗಡೆ ಮಾಡಿದ್ದರು. ಬಾಗಲಕೋಟೆ– ವಿಜಯಪುರ ಜಿಲ್ಲೆಗಳ ಮುಳುಗಡೆ ಸಂತ್ರಸ್ತರ ವಿಷಯದಲ್ಲಿ ಮಾತೃಹೃದಯದಿಂದ ವರ್ತಿಸಿ ಮನೆಮಾತಾದರು.

ಗಂಗೂಬಾಯಿ ಗುರುಕುಲ

ವಿಶ್ವ ಕನ್ನಡ ಸಮ್ಮೇಳನದಂತೆಯೇ ಬಿಎಸ್‌ವೈ ಉತ್ತರ ಕರ್ನಾಟಕಕ್ಕೆ ನೀಡಿದ ಇನ್ನೊಂದು ಅಮೂಲ್ಯ ಸಾಂಸ್ಕೃತಿಕ ಕೊಡುಗೆ ಎಂದರೆ ಹುಬ್ಬಳ್ಳಿಯ 'ಡಾ. ಗಂಗೂಬಾಯಿ ಹಾನಗಲ್ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗುರುಕುಲ'. ಗಂಗೂಬಾಯಿ ಹಾನಗಲ್, ಭೀಮಸೇನ ಜೋಶಿ, ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು, ಚಂದ್ರಶೇಖರ ಪುರಾಣಿಕಮಠ ಮೊದಲಾದ ಶ್ರೇಷ್ಠ ಶಾಸ್ತ್ರೀಯ ಸಂಗೀತಗಾರರ ನೆಲದಲ್ಲಿ ಗುರುಕುಲ ಮಾದರಿ ಸಂಗೀತ ಶಿಕ್ಷಣದ ಉಚಿತ ಸರ್ಕಾರಿ ಶಾಲೆಯನ್ನು ಆರಂಭಿಸಿದ್ದು ಬಿಎಸ್‌ವೈ ಅವರ ಸಾಂಸ್ಕೃತಿಕ ದೃಷ್ಟಿಕೋನವನ್ನು ತೋರುತ್ತದೆ. ದೇಶದೆಲ್ಲೆಡೆಯ ಸಂಗೀತ ಆಸಕ್ತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ಈ ಸಂಸ್ಥೆ ನೀಡುತ್ತಿತ್ತು. ಈಗ ವ್ಯವಸ್ಥೆಯ ಅಸಡ್ಡೆಗೆ ಬಲಿಯಾಗಿ ಇತಿಹಾಸದ ಪುಟವನ್ನು ಸೇರಿದೆ ಎಂಬುದು ಬೇರೆ ವಿಷಯ.

ಇನ್ವೆಸ್ಟ್ ನಾರ್ತ್ ಕರ್ನಾಟಕ !

ಬಿಎಸ್‌ವೈ ಅವರಿಗೆ ಬಂಡವಾಳ ಹರಿವು ಉತ್ತರ ಹಾಗೂ ಕಲ್ಯಾಣ ಕರ್ನಾಟಕದ ಕಡೆಗೆ ಹರಿದು ಬರಬೇಕು ಎನ್ನುವ ಖಚಿತ ನಿಲುವಿದೆ. ಆಗ ಅಭಿವೃದ್ಧಿಗೆ ವೇಗ ಬರುತ್ತದೆ. ನೀರಾವರಿ ಮತ್ತು ಕೃಷಿ ಕ್ಷೇತ್ರಗಳ ಜೊತೆಜೊತೆಯಾಗಿ ಉದ್ಯಮವೂ ಇಲ್ಲಿ ಬೆಳೆಯಬೇಕು ಎಂಬ ಸ್ಪಷ್ಟತೆಯನ್ನು ಈ ನಾಯಕ ಹೊಂದಿದ್ದಾರೆ.

ಆದ್ದರಿಂದಲೇ 2020ಕ್ಕೆ ಹುಬ್ಬಳ್ಳಿಯಲ್ಲಿ ಮಹತ್ವಾಕಾಂಕ್ಷಿ 'ಇನ್ವೆಸ್ಟ್ ನಾರ್ತ್ ಕರ್ನಾಟಕ' (ಕಲ್ಯಾಣ ಕರ್ನಾಟಕ ಒಳಗೊಂಡಂತೆ ಉತ್ತರ ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಸಮಾವೇಶ) ನಡೆಯಿತು.

ಉತ್ತರ ಭಾಗದ ಹೂಡಿಕೆ ಮತ್ತು ಉದ್ಯಮ ಚಟುವಟಿಕೆಗೆ ಸಂಬಂಧಿಸಿದಂತೆ ಇದು ಮೊದಲ ಸರ್ಕಾರಿ ಸಮಾವೇಶವಾಗಿತ್ತು. ಅಂದಿನ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆದಿದ್ದ ಸಮಾವೇಶವನ್ನು ಉದ್ಘಾಟಿಸಿ, 'ಹುಬ್ಬಳ್ಳಿಯಿಂದ ಬೀದರ್‌ವರೆಗೆ ಹೂಡಿಕೆಗೆ ನಮ್ಮ ಸರ್ಕಾರ ಯೋಜನೆಗಳನ್ನು ರೂಪಿಸಿದೆ' ಎಂದು ಬಿಎಸ್‌ವೈ ಘೋಷಿಸಿದ್ದರು. ಅದರಂತೆಯೇ ಹೂಡಿಕೆದಾರರಿಗೆ ಹಲವಾರು ರಿಯಾಯ್ತಿಗಳನ್ನು ಪ್ರಕಟಿಸಿದ್ದರು. 2020ರ ಇನ್ವೆಸ್ಟ್ ನಾರ್ತ್ ಕರ್ನಾಟಕವೇ ಮುಂದಿನ ದಿನಗಳಲ್ಲಿ ಹುಬ್ಬಳ್ಳಿ–ಧಾರವಾಡಕ್ಕೆ ಎಫ್‌ಎಂಸಿಜಿ ಕ್ಲಸ್ಟರ್ ಘೋಷಣೆಗೆ ಅಡಿಪಾಯ. ಇದೇ ರೀತಿ ರಾಜ್ಯದ ವಿಶೇಷ ಹೂಡಿಕೆ ವಲಯ ಕಾಯ್ದೆಗೂ ಪ್ರೇರಕ.

ಎಸ್ಸೆಂ ಕೃಷ್ಣ ಇದ್ದಾಗ, ಕೃಷ್ಣೆಯ ಮಡಿಲಲ್ಲಿ...!

ಅದು 2002–03ನೇ ಸಾಲಿನ ವರ್ಷ. ಆಗ ಎಸ್.ಎಂ.ಕೃಷ್ಣ ಮುಖ್ಯಮಂತ್ರಿ. ಕೃಷ್ಣಾ ಮೇಲ್ದಂಡೆಗಾಗಿ ಜಮೀನು ಕಳೆದುಕೊಂಡ ಮುಳುಗಡೆ ಸಂತ್ರಸ್ತರು ಸೂಕ್ತ ಪರಿಹಾರ ಹಾಗೂ ಪುನರ್ವಸತಿಗಾಗಿ ಬಾಗಲಕೋಟೆಯಲ್ಲಿ ಪ್ರತಿಭಟನೆ ಆರಂಭಿಸಿದ್ದರು. ಪ್ರತಿಭಟನೆಯನ್ನು ಹತೋಟಿಗೆ ತರಲು ಜಿಲ್ಲಾಡಳಿತ ವಾರಗಟ್ಟಲೇ ಬಾಗಲಕೋಟೆಯಲ್ಲಿ ಕರ್ಫ್ಯೂ ವಿಧಿಸಿತ್ತು. ಅಮಾಯಕರಿಗೆ ಸಾಕಷ್ಟು ತೊಂದರೆಯೂ ಆಗಿತ್ತು. ಪ್ರತಿಭಟನಾಕಾರರ ಮೇಲೆ ವ್ಯವಸ್ಥೆಯಿಂದ ದಬ್ಬಾಳಿಕೆ ನಡೆದಿದೆ ಎನ್ನುವ ಆಕ್ರೋಶ ದಟ್ಟವಾಗಿತ್ತು.

ಉತ್ತರ ಕರ್ನಾಟಕದ ನೀರಾವರಿ ಮತ್ತು ಕೃಷಿ ಬಗ್ಗೆ ಅತ್ಯಂತ ಬದ್ಧತೆಯ ನಿಲುವುಗಳನ್ನು ತೆಗೆದುಕೊಳ್ಳುತ್ತಿದ್ದ ರಾಜ್ಯ ನಾಯಕ ಯಡಿಯೂರಪ್ಪ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದರು. ಒಂದು ರಾತ್ರಿ ಏಕಾಏಕಿ ಬಾಗಲಕೋಟೆಗೆ ಏಕಾಂಗಿಯಾಗಿಯೇ ಆಗಮಿಸಿ, ಜಿಲ್ಲಾಧಿಕಾರಿಗಳ ಕಚೇರಿ ಎದಿರು ಧರಣಿಗೆ ಕೂತೇ ಬಿಟ್ಟರು. ಬಿಎಸ್‌ವೈ ನಡೆ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತು. ಕಂಗಾಲು ಮಾಡಿತು. ಮುಳುಗಡೆ ಸಂತ್ರಸ್ತರ ಬೇಡಿಕೆಗಳಿಗೆ ಸರ್ಕಾರ ಕಿವಿಗೊಡುವಂತಾಯಿತು. ಬಾಗಲಕೋಟೆಯ ಕರ್ಫ್ಯೂ ಸಡಿಲಗೊಂಡಿತು. ಅಮಾಯಕರು ನಿಟ್ಟುಸಿರುಬಿಟ್ಟರು. ವಿಪಕ್ಷದಲ್ಲಿರಲಿ, ಆಡಳಿತಕ್ಕೇ ಸೇರಿದವರಾಗಲಿ, ಬಿಎಸ್‌ವೈ ಜನಪರ ನಾಯಕತ್ವದ ತಾಕತ್ತಿಗೆ ಇದೊಂದು ಉದಾಹರಣೆ.

ಉತ್ತರ ಕರ್ನಾಟಕಕ್ಕೆ ಬಿಎಸ್‌ವೈ ಕೊಡುಗೆ

- ಬೆಳಗಾವಿಯಲ್ಲಿ ಸುವರ್ಣ ವಿಧಾನ ಸೌಧಕ್ಕೆ 2008ರಲ್ಲಿ ಚಾಲನೆ
- ಬೆಳಗಾವಿ ನಗರಾಭಿವೃದ್ಧಿಗೆ 100 ಕೋಟಿಗೂ ಹೆಚ್ಚು ವಿಶೇಷಾನುದಾನ
- ಮಹದಾಯಿ ಯೋಜನೆಗೆ ಬಜೆಟ್‌ನಲ್ಲಿ 100 ಕೋಟಿ ಆರಂಭಿಕ ಹಣ ನಿಗದಿ
- ಗದಗ ಬೆಟಗೇರಿ ನಗರಗಳ 2ನೇ ಹಂತದ ಕುಡಿಯುವ ನೀರಿಗೆ 92 ಕೋಟಿ ಅನುದಾನ
- ಗದುಗಿನಲ್ಲಿ ಪಂಚಾಕ್ಷರ ಗವಾಯಿಗಳ ಸ್ಮಾರಕ ಭವನ ನಿರ್ಮಾಣ
- ಹಾವೇರಿಯಲ್ಲಿ ಎಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು ಸ್ಥಾಪನೆ, ತುಂಗಾ ಮೇಲ್ದಂಡೆ ಯೋಜನೆಗೆ ವೇಗ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಅಭಿವೃದ್ಧಿ ಕಾರ್ಯ
- ಹಾವೇರಿ ಜಿಲ್ಲೆಯ ಸರ್ವಜ್ಞ ಏತ ನೀರಾವರಿ, ಬಾಳಂಬೀಡ ಏತ ನೀರಾವರಿ ಯೋಜನೆಗಳ ಮೂಲಕ ಕೆರೆ ತುಂಬವ ಕಾರ್ಯಕ್ಕೆ ಚಾಲನೆ
- ಉತ್ತರ ಕರ್ನಾಟಕದ ಪ್ರವಾಹದಿಂದ ಬಿದ್ದ ಮನೆಗಳಿಗೆ (ಅದುವರೆಗಿನ) ಅತ್ಯಧಿಕ ಪರಿಹಾರ (5 ಲಕ್ಷ ರೂ.) ನೀಡಿಕೆ
- ಬಾಗಲಕೋಟೆಯಲ್ಲಿ ರಾಜ್ಯದ ಮೊದಲ ತೋಟಗಾರಿಕೆ ವಿಶ್ವವಿದ್ಯಾಲಯ ಸ್ಥಾಪನೆ
- ವಿಜಯಪುರದಲ್ಲಿ 130 ಕೋಟಿ ವೆಚ್ಚದ ವಿಮಾನ ನಿಲ್ದಾಣಕ್ಕೆ ಶಂಕುಸ್ಥಾಪನೆ
- ವಿಜಯಪುರ ಜಿಲ್ಲೆ ಗುಡ್ನಾಪುರ ದಾನಮ್ಮದೇವಿ ದೇಗುಲ ಪ್ರಾಂಗಣದಲ್ಲಿ 11 ಕೋಟಿ ವೆಚ್ಚದ 'ಕರ್ನಾಟಕ ಭವನ' ನಿರ್ಮಾಣ
- ಕೃಷ್ಣಾ ಮೇಲ್ದಂಡೆಯಿಂದ ಕೆರೆಗಳನ್ನು ತುಂಬಿಸುವ ಯೋಜನೆಯಡಿ ವಿಜಯಪುರ ಜಿಲ್ಲೆಯ 118 ಕೆರೆಗಳಿಗೆ 200 ಕೋಟಿ ಅನುದಾನ
- ಉತ್ತರ ಕನ್ನಡದ ಕರಾವಳಿಯನ್ನು ಒಳಗೊಂಡಂತೆ ಜಲಮಾರ್ಗ ಅಭಿವೃದ್ಧಿಗೆ 60 ಕೋಟಿ ಮೀಸಲು
- 2019 ಮತ್ತು 2020ರ ಪ್ರವಾಹದ ವೇಳೆಗೆ ಉತ್ತರ ಕನ್ನಡ ಜಿಲ್ಲೆಗೆ ವಿಶೇಷ ಪ್ಯಾಕೇಜ್ ಘೋಷಣೆ
- ಕಾರವಾರ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್) ಆಸ್ಪತ್ರೆಯಲ್ಲಿ 450 ಹಾಸಿಗೆಗಳ ಸುಸಜ್ಜಿತ ಕಟ್ಟಡ ಕಾಮಗಾರಿಗೆ ವೇಗ
- ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ 25ರಿಂದ 50 ಕೋಟಿ ವಾರ್ಷಿಕ ಅನುದಾನ ನೀಡುವ ಮೂಲಕ ಪ್ರವಾಸೋದ್ಯಮಕ್ಕೆ ಒತ್ತು
- ಕಲಬುರ್ಗಿಯಲ್ಲಿ ಮೊದಲ ಬಾರಿ ಸಚಿವ ಸಂಪುಟ ಸಭೆ; ಇದಾದ ನಂತರ ಮತ್ತೆ ಮೂರು ಸಂಪುಟ ಸಭೆಗಳು.
- ಹೈದರಾಬಾದ್ ಕರ್ನಾಟಕ ಭಾಗಕ್ಕೆ 'ಕಲ್ಯಾಣ ಕರ್ನಾಟಕ' ಎಂದು ಮರು ನಾಮಕರಣ
- ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ಘೋಷಣೆ
- 2009ರಲ್ಲಿ ಯಾದಗಿರಿಯನ್ನು ರಾಜ್ಯದ ಪ್ರತ್ಯೇಕ ಜಿಲ್ಲೆಯಾಗಿ ಘೋಷಣೆ
- ಕಲಬುರ್ಗಿ ಮಹಾನಗರ ಪಾಲಿಕೆಗೆ 100 ಕೋಟಿ ಮತ್ತು ವಿಜಯಪುರ ಪಾಲಿಕೆಗೆ 50 ಕೋಟಿ ವಿಶೇಷ ಅನುದಾನ ನೀಡಿಕೆ

ನೆರೆ ಸ್ಥಿತಿಯ ಏಕಾಂಗಿ ನಿರ್ವಹಣೆ

ಯಡಿಯೂರಪ್ಪನವರು 2019ರಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ನಲವತ್ತೆಂಟು ಗಂಟೆಗಳೂ ಕಳೆದಿರಲಿಲ್ಲ. ಸಚಿವ ಸಂಪುಟ ರಚನೆಯಾಗಿರಲಿಲ್ಲ. ಅಂತಹ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಹಲವೆಡೆ ಏಕಾಏಕಿ ಮೇಘ ಸ್ಫೋಟ ಸಂಭವಿಸಿತು. ಭಾರೀ ಮಳೆಯಿಂದ ಬೆಳಗಾವಿ, ವಿಜಯಪುರ, ಬಾಗಲಕೋಟೆ, ರಾಯಚೂರು ಹೀಗೆ ಇನ್ನೂ ಅನೇಕ ಜಿಲ್ಲೆಗಳಲ್ಲಿ ಜಲಪ್ರಳಯವೇ ಸಂಭವಿಸಿ ಹೋಯಿತು. ಜನ–ಜಾನುವಾರು ಪ್ರಾಣ ಕಳೆದುಕೊಂಡರು.

ಈ ಕಷ್ಟದ ಸಮಯದಲ್ಲಿ ಬಿಎಸ್‌ವೈ ಬೆಂಗಳೂರಿನಲ್ಲಿ ಕುಳಿತು ಅಧಿಕಾರಿಗಳಿಗೆ ಆದೇಶ ಮಾಡಲಿಲ್ಲ. ಹವಾಮಾನ ಅನೇಕ ಕಡೆ ಇರಲಿಲ್ಲ ಎಂಬುದನ್ನೂ ಲೆಕ್ಕಿಸದೇ ಹೆಲಿಕಾಪ್ಟರ್ ಏರಿ ಪ್ರವಾಹಪೀಡಿತ ಸ್ಥಳಗಳ ಭೇಟಿ ನೀಡಿದರು. ಅದೂ ಏಕಾಂಗಿಯಾಗಿ. ಸ್ಥಳೀಯ ಶಾಸಕರಿಗೆಲ್ಲ ಜನರಿಗೆ ಸಹಾಯ ಮಾಡುತ್ತ ಪ್ರವಾಹ ಸ್ಥಳದಲ್ಲೇ ಬೀಡು ಬಿಡುವಂತೆ ಸೂಚಿಸಿದ ಅವರು, ಹೆಲಿಕಾಪ್ಟರ್ ಏರಿ ಇಡೀ ಉತ್ತರ ಕರ್ನಾಟಕದ ನೆರೆ ವೀಕ್ಷಣೆ ಮಾಡಿದರು. ಅಗತ್ಯಕ್ಕಿಂತ ಹೆಚ್ಚು ಪರಿಹಾರವನ್ನು ನೀಡಿದರು. ಒಬ್ಬ ಸಂತ್ರಸ್ತನೂ ಸರ್ಕಾರಿ ವ್ಯವಸ್ಥೆಯ ಕೆಂಪುಪಟ್ಟಿಯ ಕಾರಣಕ್ಕೆ ಪರಿಹಾರದಿಂದ ವಂಚಿತರಾಗದಂತೆ ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಂಡರು. ಎಲ್ಲೆಡೆ ಆರೈಕೆ ಕೇಂದ್ರಗಳು ಮತ್ತು ಗೋಶಾಲೆಗಳನ್ನು ಒಂದು ಕ್ಷಣ ತಡಮಾಡದೇ ತೆರೆಯುವ ಮೂಲಕ ಜನ–ಜಾನುವಾರು ರಕ್ಷಣೆಗೆ ಅಪೂರ್ವ ಕ್ರಮಗಳನ್ನು ತೆಗೆದುಕೊಂಡರು.

ಬಿಎಸ್‌ವೈ ಅಂದು ಪ್ರವಾಹ ಸ್ಥಿತಿ ನಿರ್ವಹಿಸಿದ ರೀತಿಯನ್ನು ಸ್ವತಃ ಆಗಿನ ವಿಪಕ್ಷ ನಾಯಕ ಸಿದ್ದರಾಮಯ್ಯನವರೇ ವಿಧಾನಸಭೆಯಲ್ಲಿ ಮೆಚ್ಚಿ ಮಾತನಾಡಿದರು. ಜನಪರ ಆಡಳಿತಗಾರ ಎಂದು ಉತ್ತರ ಕರ್ನಾಟಕದ ಎಲ್ಲೆಡೆ ಜನ ಅವರನ್ನು ಮೆಚ್ಚುವುದು ಇಂತಹ ನಿರ್ಣಾಯಕ ಕಾರ್ಯಗಳಿಗಾಗಿಯೇ!

ಸಂಯುಕ್ತ ಕರ್ನಾಟಕ ಸಂಪಾದಕೀಯ

ಮಮತಾ ಉದ್ಧಟತನ ನಡೆ ಪ್ರಜಾಪ್ರಭುತ್ವಕ್ಕೆ ಕಪ್ಪುಚುಕ್ಕೆ

ಪಂಚರಾಜ್ಯಗಳ ವಿಧಾನಸಭೆ ಚುನಾವಣೆ ಫಲಿತಾಂಶ ಹೊರಬಿದ್ದು, ಮೂರು ರಾಜ್ಯಗಳಲ್ಲಿ ಜನತಾ ಜನಾರ್ದನ ಪರಿವರ್ತನೆಗೆ ಹುಕುಂ ನೀಡಿದ್ದಾನೆ. ಇನ್ನೆರಡು ಕಡೆ ಅದೇ ಸರ್ಕಾರ ಮುಂದುವರಿಯಲು ಅಸ್ತು ಎಂದಿದ್ದಾನೆ. ಮತಾಶೀರ್ವಾದ ಪಡೆದ ಪಕ್ಷಗಳು ಸರ್ಕಾರ ರಚನೆಯ ಕಸರತ್ತು ನಡೆಸುತ್ತಿವೆ. ತಮಿಳುನಾಡು, ಕೇರಳದಲ್ಲಿ ಅಧಿಕಾರ ಕಳೆದುಕೊಂಡ ಮೈತ್ರಿಕೂಟಗಳಾದ ಡಿಎಂಕೆ ಮತ್ತು ಎಲ್‌ಡಿಎಫ್ ಜನರ ನಿರ್ಣಯಕ್ಕೆ ತಲೆಬಾಗಿದ್ದಾಗಿ ಹೇಳಿವೆ. ಮುಖ್ಯಮಂತ್ರಿ ಸ್ಟಾಲಿನ್ ಮತ್ತು ಪಿಣರಾಯಿ ವಿಜಯನ್ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ. ಇದು ಸಂಪ್ರದಾಯ. ಆದರೆ ಪಶ್ಚಿಮ ಬಂಗಾಳದ ಪರಿಸ್ಥಿತಿ ಭಿನ್ನವಾಗಿದೆ. ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವುದಿಲ್ಲ ಎಂದು ಮಮತಾ ಬ್ಯಾನರ್ಜಿ ಹಠ ಹಿಡಿದಿದ್ದಾರೆ. ದೇಶದ ಇತಿಹಾಸದಲ್ಲೇ ಇಂಥ ಘಟನೆ ನಡೆದಿಲ್ಲ. ಸೋಲು ಎಂಥವರನ್ನೇ ಆಗಲಿ ದಿಕ್ಕೆಡಿಸುತ್ತದೆ. ಹತಾಶರನ್ನಾಗಿ ಮಾಡುತ್ತದೆ. ಆದರೆ ಹುದ್ದೆ ಬಿಟ್ಟುಕೊಡುವುದಿಲ್ಲ ಎನ್ನುವುದು ಅಪ್ರಜಾಪ್ರಭುತ್ವವಾದಿಯಾದ ಮತ್ತೇಳುವಂಥದು. ನೂರಕ್ಕೂ ಹೆಚ್ಚು ಸ್ಥಾನಗಳಲ್ಲಿ ಕಳ್ಳತನದಿಂದ ಬಿಜೆಪಿ ಗೆದ್ದಿದೆ ಎನ್ನುವುದು ಮಮತಾ ಬ್ಯಾನರ್ಜಿ ಅವರ ಆರೋಪ. ಈ ರೀತಿಯ ಅಕ್ರಮ ಎಲ್ಲೇ ನಡೆದರೂ, ಅದನ್ನು ಪ್ರತಿಭಟಿಸಬೇಕು ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಹೋರಾಟವನ್ನು ಮಾಡಬಹುದು. ಆದರೆ ಅದು ಕಾನೂನುಬದ್ಧವಾಗಿ ನಡೆಯಬೇಕು. ಅಧಿಕಾರ ಬಿಟ್ಟುಕೊಡುವುದಿಲ್ಲ ಎಂದು ಬೀದಿ ರಂಪ ಮಾಡುವುದು ಯಾವುದೇ ಕಾರಣಕ್ಕೂ ಸಲ್ಲದು. ಐರನ್ ಲೇಡಿ ಎನ್ನಿಸಿಕೊಂಡಿದ್ದ ಮಾಜಿ ಪ್ರಧಾನಿ ವಿರುದ್ಧವೂ ಚುನಾವಣಾ ಅಕ್ರಮದ ವಿರುದ್ಧ 1975ರಲ್ಲಿ ಕೋರ್ಟ್ ತೀರ್ಪು ನೀಡಿತ್ತು. ಆಗ ಅವರು ಅದರಿಂದ ತಪ್ಪಿಸಿಕೊಳ್ಳಲು ತುರ್ತುಪರಿಸ್ಥಿತಿ ಜಾರಿಗೊಳಿಸಿದರು. ಕಡೆಗೆ ಅದೇ ಅವರಿಗೆ ತಿರುಗುಬಾಣವಾಯಿತು ಎನ್ನುವುದನ್ನೊಮ್ಮೆ ನೆನಪಿಸಿಕೊಳ್ಳಬೇಕು. ಭಾರತದ ಪ್ರಜಾಪ್ರಭುತ್ವ, ಚುನಾವಣಾ ವ್ಯವಸ್ಥೆ ಮತ್ತು ನ್ಯಾಯದಾನ ವ್ಯವಸ್ಥೆ ಎಷ್ಟು ಸದೃಢ ಮತ್ತು ಎಷ್ಟು ಪ್ರಜಾಪ್ರಭುತ್ವವಾದಿ ಎನ್ನುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕಿಲ್ಲ. ಜಗತ್ತಿನಲ್ಲೇ ಇದಕ್ಕೆ ಮಾನ್ಯತೆ ದೊರೆತಿದೆ. ಹೀಗಿರುವಾಗ ಮಮತಾ ಬ್ಯಾನರ್ಜಿ ಅವರಿಗೂ ಅಕ್ರಮ ನಡೆದಿದೆ ಎನ್ನಿಸಿದಲ್ಲಿ ಕೋರ್ಟ್ ಮೆಟ್ಟಿಲೇರಬಹುದು. ಭಾರತದ ಪ್ರಜಾಪ್ರಭುತ್ವಕ್ಕೆ ತನ್ನದೇ ಆದ ಘನತೆ ಇದೆ. ಇಲ್ಲಿ 1951ರಿಂದ 17 ಸಂಸತ್ ಚುನಾವಣೆ ಮತ್ತು 300ಕ್ಕೂ ಹೆಚ್ಚು ರಾಜ್ಯ ವಿಧಾನಸಭಾ ಚುನಾವಣೆಗಳು ನಡೆದಿವೆ. ಒಮ್ಮೆಯೂ ಸೋತವರು ಅಧಿಕಾರದಿಂದ ಇಳಿಯಲು ಈ ರೀತಿ ರಚ್ಚೆ ತೋರಿಸಿಲ್ಲ. ಗೌರವದಿಂದ ತಮ್ಮ ಸ್ಥಾನ ಬಿಟ್ಟುಕೊಟ್ಟಿದ್ದಾರೆ. ಗೆದ್ದವರಿಗೆ ಶುಭ ಹಾರೈಸಿದ್ದಾರೆ. ಭಾರತದ ಪ್ರಜಾಪ್ರಭುತ್ವಕ್ಕೆ ಜಗತ್ತಿನಲ್ಲಿ ಗೌರವ ಪಡೆದುಕೊಳ್ಳಲು ಇದೂ ಒಂದು ಕಾರಣ. ಮಮತಾ ಬ್ಯಾನರ್ಜಿ ಅವರ ನಿಲುವು ಪ್ರಜಾಪ್ರಭುತ್ವಕ್ಕೆ ಕಪ್ಪುಚುಕ್ಕೆ.

> ಚುನಾವಣೆಯ ಬಳಿಕ ಸುಗಮ ಅಧಿಕಾರ ಹಸ್ತಾಂತರಕ್ಕೆ ನಮ್ಮ ದೇಶವು ಜಗತ್ತಿನಲ್ಲೇ ಖ್ಯಾತಿ ಪಡೆದಿದೆ. ಅಂತಹ ಪರಂಪರೆಗೆ ಮಸಿ ಬಳಿಯಬಾರದು.

ರಾಜಕಾರಣದಲ್ಲಿ ಸೋಲು, ಗೆಲುವು ಸಾಮಾನ್ಯ. ಐದು ವರ್ಷಕ್ಕೊಮ್ಮೆ ಜನಾಭಿಪ್ರಾಯದ ಪರೀಕ್ಷೆ ಎದುರಿಸಲೇಬೇಕು. ಜನ ಕೊಟ್ಟ ತೀರ್ಪನ್ನು ಒಪ್ಪಿಕೊಳ್ಳಬೇಕು. ಸೋಲನ್ನು ಸ್ವೀಕರಿಸುವ ಗುಣ ಇಲ್ಲದವರು ಎಂದಿಗೂ ಉತ್ತಮ ನಾಯಕರೆನ್ನಿಸಿಕೊಳ್ಳುವುದಿಲ್ಲ. ಅಧಿಕಾರಕ್ಕೆ ಅಂಟಿಕೊಂಡಿರದವರೇ ಇಂದು ದೊಡ್ಡ ವ್ಯಕ್ತಿ ಎನ್ನಿಸಿಕೊಂಡಿದ್ದಾರೆ. ಲಾಲ್ ಬಹದ್ದೂರ್ ಶಾಸ್ತ್ರಿ ರೈಲ್ವೆ ಸಚಿವರಾಗಿದ್ದಾಗ ಒಂದು ರೈಲ್ವೆ ಅಪಘಾತವಾಗಿದ್ದಕ್ಕೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇಂಥ ಮೇಲ್ಪಂಕ್ತಿಯನ್ನು ನಮ್ಮ ಶ್ರೇಷ್ಠ ನಾಯಕರು ಹಾಕಿಕೊಟ್ಟು ಹೋಗಿದ್ದಾರೆ. ಚುನಾವಣೆ ಸಮಯದಲ್ಲಿ ಬೇಕಾದಷ್ಟು ಆರೋಪ, ಪ್ರತ್ಯಾರೋಪಗಳು ನಡೆಯುತ್ತವೆ. ನಿಷ್ಠುರ ಟೀಕೆ, ವ್ಯಂಗ್ಯಗಳನ್ನು ಚುನಾವಣೆಯಲ್ಲಿ ಸ್ವೀಕರಿಸಿ ಎದುರಿಸಬೇಕಾಗುತ್ತದೆ. ಆದರೆ ಅದು ಚುನಾವಣೆ ಮುಕ್ತಾಯ ಆಗುವವರೆಗೆ ಮಾತ್ರ. ಅದಾದ ನಂತರ ಸೋತವರು, ಗೆದ್ದವರು ದೇಶದ ಅಭ್ಯುದಯಕ್ಕಾಗಿಯೇ ಚಿಂತಿಸಬೇಕಾಗುತ್ತದೆ. ಅಧಿಕಾರಕ್ಕೆ ಕಟ್ಟುಬೀಳಬಾರದು. ಇದೇ ಪ್ರಜಾಪ್ರಭುತ್ವದ ಅತಿದೊಡ್ಡ ಮೌಲ್ಯ. ಬಂಗಾಳದಲ್ಲಿ ಫಲಿತಾಂಶದ ಬೆನ್ನಲ್ಲೇ ಹಿಂಸಾಚಾರವೂ ಶುರುವಾಗಿದೆ. ಬಿಜೆಪಿ ಮತ್ತು ಟಿಎಂಸಿ ಕಾರ್ಯಕರ್ತರ ಅಂಗಡಿ, ಮನೆಗಳ ಮೇಲೆ ದಾಳಿಗಳಾಗಿವೆ, ಬೆಂಕಿ ಹಚ್ಚುವ ಕೃತ್ಯವೂ ಜರುಗಿದೆ. ನಾಲ್ಕು ಅಮಾಯಕರು ಪ್ರಾಣ ಕಳೆದುಕೊಂಡಿದ್ದಾರೆ. ಇದಕ್ಕೆ ಟಿಎಂಸಿ ಮತ್ತು ಬಿಜೆಪಿ ನಾಯಕರು ಪರಸ್ಪರರ ಮೇಲೆ ಆರೋಪ, ಪ್ರತ್ಯಾರೋಪ ಮಾಡುತ್ತಿದ್ದಾರೆ. ಬಂಗಾಳಕ್ಕೆ ಇಂಥ ಹಿಂಸಾಚಾರ ಹೊಸತೇನಲ್ಲ. 2021ರ ಚುನಾವಣೆ ನಂತರವೂ ಹಿಂಸಾಚಾರ ನಡೆದಿತ್ತು. ಈ ಬಾರಿಯೂ ಅದೇ ಪ್ರವೃತ್ತಿ ಮುಂದುವರಿದಿದೆ. ಇಂಥ ಹಿಂಸಾಚಾರ ಪ್ರಜಾಪ್ರಭುತ್ವದ ಮೂಲ ಉದ್ದೇಶಕ್ಕೆ ಧಕ್ಕೆ ತರುತ್ತದೆ. ಇವೆಲ್ಲಕ್ಕೂ ಕಡಿವಾಣ ಬೀಳಬೇಕು. ಚುನಾವಣೆಯ ಬಳಿಕ ಸುಲಲಿತ ಅಧಿಕಾರ ಹಸ್ತಾಂತರದ ಪರಂಪರೆಗೆ ಭಾರತವು ಜಗತ್ತಿನಲ್ಲೇ ಹೆಸರುವಾಸಿಯಾಗಿದೆ. ಕೆಲ ಪಾಶ್ಚಾತ್ಯ, ಆಫ್ರಿಕನ್ ಅಥವಾ ಮಧ್ಯಪ್ರಾಚ್ಯ ದೇಶಗಳಲ್ಲಿ ಚುನಾವಣೆಯ ಬಳಿಕ ಗೆದ್ದವರಿಗೆ ಅಧಿಕಾರ ಬಿಟ್ಟುಕೊಡದೆ ರಕ್ತಪಾತ ನಡೆಸುವುದುಂಟು. ಭಾರತದಲ್ಲಿ ಅಂತಹ ಪರಿಪಾಠ ಇಲ್ಲ. ಆದ್ದರಿಂದಲೇ ನಮ್ಮ ದೇಶದಲ್ಲಿ ನಡೆಯುವ ಪ್ರತಿ ಚುನಾವಣೆಗೂ ವಿದೇಶಗಳಿಂದ ಅಧಿಕಾರಿಗಳು ಮತ್ತು ರಾಜಕಾರಣಿಗಳ ನಿಯೋಗಗಳು ಬರುತ್ತವೆ. ಈ ಪರಂಪರೆಗೆ ಮಸಿ ಬಳಿಯುವ ಕೆಲಸ ಯಾರು ಮಾಡಿದರೂ ಅದು ಅಕ್ಷಮ್ಯ.

ಮಾರಿ ನೋಡ್ರಿ=ಪಾರ್ಟಿಗೆ ಬರ್ರಿ

ತಾರಾತಿಗಡಿ
ನರಸಿಂಹ ಪುಲಿಹೈದರ್
ಮುಖ್ಯ ವರದಿಗಾರ

ಮೊದಲಿನಿಂದಲೂ ಸಿನೆಮಾ ಹುಚ್ಚು ಹಚ್ಚಿಕೊಂಡು ಒಂದೆರಡು ಸಿನೆಮಾದಲ್ಲಿ ಸೈಡ್ ರೋಲ್ ಮಾಡಿದ್ದ ತಿಗಡೇಸಿ ರಾಮಾಯಣದಲ್ಲಿ ಪೂರ್ಣ ಪ್ರಮಾಣದ ಜಾಂಬುವಂತನ ಪಾರ್ಟ್ ಮಾಡಿದ್ದ. ಅವತ್ತೊಂದಿನ ನೀವು ವಿಜ್ಜಿ ಕಂಡ ಹಾಗೆ ಕಾಣುತ್ತಿ ಎಂದು ಕಿವುಡನುಮಿ ಹೇಳಿದ್ದಳು. ಅದನ್ನು ಮನಸ್ಸಿಗೆ ಹಚ್ಚಿಕೊಂಡ ಆತ ಬಪ್ರತಿಯೊಂದಕ್ಕೂ ನಟ ತಮಿಳಿನ ವಿಜಯ್‌ನ ಅನುಕರಣೆ ಮಾಡುತ್ತಿದ್ದ. ಕೂದಲನ್ನೂ ಹಾಗೆಯೇ ಕಟಿಂಗ್ ಮಾಡಿಸುತ್ತಿದ್ದ. ಡ್ರೆಸ್ಸೂ ಕೂಡ ಆತನಂತೆ ಹಾಕುತ್ತಿದ್ದ. ನಡೆದಾಡುವುದು...ಸ್ವಲ್ಪ ಸ್ವಲ್ಪ ಬಿಳಿಗಡ್ಡ ಬಿಟ್ಟುಕೊಂಡು ಅಡ್ಡಾಡುತ್ತಿದ್ದ. ಮಾತೆತ್ತಿದರೆ ನಾಯಗನ್..ನಾಯಗನ್ ಎಂದು ಹೇಳುತ್ತಿದ್ದ. ಈಗ ಆತ ಜಯಭೇರಿ ಸಾಧಿಸಿದ ಕೂಡಲೇ ಅದಕ್ಕೆ ನಾನೇ ಗೈಡ್ ಮಾಡಿದ್ದೆ. ನೀನು ಸುಮ್ಮನಿರಬೇಡ...ಪಾರ್ಟಿಕಟ್ಟು ಎಂದು ಹೇಳಿದ್ದೆ.. ಈಗ ಕಟ್ಟಿದ ನೋಡಿ ಹೇಗಿದೆ ಎಂದು ಅವರಿವರ ಮುಂದೆ ಹೇಳಿದ್ದ ಹಾಗೆಯೇ ಭಾಗೀರತಿಯ ಮುಂದೆಯೂ ಹೇಳಿದ. ಅದಕ್ಕೆ ಆಕೆ..ನೀನ್ಯಾಕೆ ಪಾರ್ಟಿ ಕಟ್ಟಬಾರದು ಹೇಗಿದ್ದರೂ ನೀನು ಆತನ ಫ್ಯಾನು ನೋಡಲೂ ಹಾಗೆಯೇ ಇದ್ದೀಯ ಎಂದು ಕಿವುಡನುಮಿ ಹೇಳಿದ್ದಾಳೆ..ಟ್ರೈ ಮಾಡು..ಟ್ರೈ ಮಾಡು ಅಂತ ಹೇಳಿದಳು. ಈ ಮಾತನ್ನು ಮನಸ್ಸಿಗೆ ಹಚ್ಚಿಕೊಂಡ ಆತ ಮರುದಿನವೇ "ಮಾರಿ ನೋಡ್ರಿ–ಪಾರ್ಟಿಗೆ ಬರ್ರಿ" ನೀವೆಲ್ಲ ಬಂದು ಹೇಳಿದ ಮೇಲೆ ಪಾರ್ಟಿ ಹೆಸರು ಅನೌನ್ಸ್ ಮಾಡೋಣ ಎಂದು ಅಲ್ಲಲ್ಲಿ ಪೋಸ್ಟರ್ ಅಂಟಿಸಿದ. ಇಲ್ಲಿಯೂ ಬಂದ ನಟ–ನೋಡಿರಿ ಆತನ ಹಟ...ಎಂದು ರೈಮಿಂಗ್ ಶಬ್ದಗಳನ್ನು ಹಾಕಿ ಹೋರ್ಡಿಂಗ್ ಹಾಕಿಸಿದ. ಪತ್ರಿಕೆಗಳಲ್ಲಿ ಜಾಹೀರಾತು ನೀಡಿದ...ಎಲ್ಲ ಪೋಸ್ಟರ್‌ಗಳಿಗೆ ತಾನು ಅಭಿನಯಿಸಿದ್ದ ಜಾಂಬುವಂತನ ಪಾರ್ಟಿನ ಫೋಟೋ ಹಾಕಿದ್ದ. ಜನರು ಅದನ್ನು ನೋಡಿ ಓಹೋ ಇವರ ಪಾರ್ಟಿಗೆ ಹೋದರೆ ಕಚ್ಚಿಗಿಚ್ಚೀತು ನಾ ಒಲ್ಲೆ ಅಂತ ಸೋಷಿಯಲ್ ಮೀಡಿಯಾದಲ್ಲಿ ಹರಿಬಿಟ್ಟರು. ಆತನ ಪೋಸ್ಟರ್ ನೋಡಿ ಕೆಲವರು ಮನೆಯ ಮುಂದೆ ಕೋಲು ಹಿಡಿದುಕೊಂಡು ಹೋದರು. ಅಂದು ಹಿತ್ತಿಲ ಬಾಗಿಲಿನಿಂದ ಓಡಿ ಹೋದ ತಿಗಡೇಸಿ ಪಾರ್ಟಿಸುದ್ದಿಯಾಗಲೀ, ವಿಜ್ಜಿ ಸುದ್ದಿಯಾಗಲೀ ತೆಗೆಯಲಿಲ್ಲ.



75 ವರ್ಷಗಳ ಹಿಂದೆ.. ಅಮೃತ ಸಮಾಚಾರ 07–05–1951 ಸೋಮವಾರ

ವಿನಿಯಂತ್ರಣದ ಬಗ್ಗೆ ದುಡುಕಲಾಗದು

ಹೊಸದಿಲ್ಲಿ 6– ಎಐಸಿಸಿ ಅಧಿವೇಶನವು ಎರಡಲು ದಿನಗಳವರೆಗೆ ಕಾರ್ಯಕಲಾಪಗಳನ್ನು ನಡೆಸಿ ಇಂದು ಕೊನೆಗಂಡಿತು. ಇಂದು ಬಿ ಮತ್ತು (ಬ) ವಿಭಾಗದ ಪ್ರಾಂತಗಳಲ್ಲಿಯ ತಾರತಮ್ಯವು ಹೋಗಬೇಕೆಂಬ ಶ್ರೀ ಕೆ. ಹನುಮಂತಯ್ಯನವರ ಗೊತ್ತುವಳಿಯು ಕಾಂಗ್ರೆಸ ಕಾರ್ಯ ಸಮಿತಿಗೆ ಒಪ್ಪಿಸಲ್ಪಟ್ಟಿತು.

ಬಟ್ಟೆಯ ಹಾಗು ಸಕ್ಕರೆಯ ವಿನಿಯಂತ್ರಣವಾಗಬೇಕೆಂಬ ಗೊತ್ತುವಳಿಯು ಬಹುಮತದಿಂದ ಬಿದ್ದು ಹೋಯಿತು. ಕೇಂದ್ರ ಚನಾವಣೆ ಸಮಿತಯ ಆಯ್ಕೆಯ ಬಗ್ಗೆ ಮೌಲಾನಾ ಅಬುಲ್ ಕಲಾಂ ಅಜಾದರು ಮಾತನಾಡುತ್ತ ಈ ಚುನಾವಣೆ ಸಮಿತಿಯ ಹೊರಗುಳಿಯಲು ಶ್ರೀ ಕಿಡವಾಯಿ ಹಾಗು ಆಚಾರ್ಯ ಕೃಪಲಾನಿಯವರು ನಿರ್ಧರಿಸಿದ್ದಕ್ಕೆ ವಿಷಾದಪಟ್ಟರು.

ಜೆನ್–ಜಿ ಸುನಾಮಿ; ದರ್ಪ ರಾಜಕಾರಣ ಫಿನಿಷ್!

ಜೆನ್–ಜಿ–ಯುವ ಜನತೆ ಜಾಗೃತರಾಗಿದ್ದಾರೆ. ಮೊನ್ನೆ ನಡೆದ ಪಂಚ ರಾಜ್ಯ ಚುನಾವಣೆಯಲ್ಲಿ ಈ ಶತಮಾನದ ನವ ಯುವಕರು ತಮ್ಮ ಸಾಮರ್ಥ್ಯ ಮತ್ತು ವಿಚಾರಗಳನ್ನು ಸ್ಪಷ್ಟವಾಗಿ ಹೇಳಿದ್ದಾರೆ.

ದೇಶದ ಭ್ರಷ್ಟ, ದಬ್ಬಾಳಿಕೆಯ, ಸಂವಿಧಾನ ಮತ್ತು ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳನ್ನು ಬದಲಿಸುವ ಶಕ್ತಿ ತಮ್ಮಲ್ಲಿದೆ ಎಂಬುದನ್ನು ಈ ಯುವಕರು ತೋರಿಸಿದ್ದಾರೆ. ಹಾಗೆಯೇ ಜೆನ್–ಜಿ ಸಮಸ್ಯೆಗಳಿಗೆ ಸ್ಪಂದಿಸದಿದ್ದರೆ, ಬೇಕು ಬೇಡಗಳಿಗೆ ಕಿವಿಗೊಡದಿದ್ದರೆ ಬಿಡೆವು ಎಂದು ಸಾರಿದ್ದಾರೆ. ನಿರ್ಲಕ್ಷಿಸಿದರೆ ತಮ್ಮ ಶಕ್ತಿ ಏನೆಂಬುದನ್ನು ಮತಗಳ ಮೂಲಕ ಸಾರ್ವಜನಿಕವಾಗಿ ಹೇಳಬೇಕಾಗುತ್ತದೆ ಎನ್ನುವುದನ್ನು ವಿಶ್ವಕ್ಕೆ ತೋರಿಸಿದ್ದಾರೆ.

ತಮಿಳುನಾಡು ಚುನಾವಣೆ 'ತಮಿಳು ವೆಟ್ರಿಗ ಕಳಗಂ'ನ (ಟಿವಿಕೆ) ನಟ ವಿಜಯ ಪಕ್ಷ ಗೆದ್ದಿರುವುದೇ ಈ ಕಾರಣಕ್ಕೆ. ವಿಜಯ್ ಟಿಕೆಟ್ ನೀಡಿದ್ದು ಯುವಕರಿಗೆ. ಬಹುತೇಕ ಎಲ್ಲ ನಲವತ್ತೈದರ ವಯೋಮಿತಿಯ ಒಳಗಿನವರು. ಇವರೆಲ್ಲ ತಮ್ಮ ಬೆಂಬಲಿಗರು ಎಂದಲ್ಲ. ಸಾರ್ವಜನಿಕರಿಗೆ, ಸಮಾಜದ ನೋವು ನಲಿವುಗಳಿಗೆ ಸ್ಪಂದಿಸುವವರು ಮತ್ತು ಪ್ರಜ್ಞಾವಂತರು ಎನ್ನುವ ಕಾರಣಕ್ಕೆ ವಿಜಯ್ ಇಂಥವರಿಗೆ ಟಿಕೆಟ್ ಕೊಟ್ಟರು. ಜನಪ್ರತಿನಿಧಿಯಾಗುವವರು ಸಚ್ಚಾರಿತ್ರ್ಯವಂತರು, ಜನರಿಗೆ ಸ್ಪಂದಿಸುವವರಾದರೆ ಜನ ಗೆಲ್ಲಿಸುತ್ತಾರೆ ಎಂಬುದು ಇದರಿಂದ ಸಾಬೀತಾಯಿತು.

ತಮಿಳುನಾಡಿನ ವಂಶಪಾರಂಪರ್ಯ ರಾಜಕೀಯ ಮತ್ತು ಮೂವತ್ತು ನಲವತ್ತು ವರ್ಷಗಳಿಂದ ಅಧಿಕಾರ ಹಿಡಿದುಕೊಂಡಿರುವ ಅಥವಾ ಅದರ ಸುತ್ತ ಗಿರಕಿ ಹೊಡೆಯುವ ಮಂದಿಯಿಂದ ಜನ ಬೇಸತ್ತಿದ್ದರು. ಇದಕ್ಕೆ ಈಗ ಪರಿಹಾರವಾಗಿ ವಿಜಯ್ ಯುವ ತಂಡ ಕಟ್ಟಿದ್ದರು. ಅದೀಗ ಕ್ಲಿಕ್ ಆಯಿತು. ಡಿಎಂಕೆ, ಎಡಿಎಂಕೆ ಈ ಹಳಸಲು ಮುಖಗಳಿಗೆ ಮತದಾರರು "ಮಂಗಳಾರತಿ" ಎತ್ತಿ, ಯುವ ಸಮೂಹಕ್ಕೆ ತಿಲಕ ಇಟ್ಟರು!

ವಿಯಜ್ ಸ್ಟಾರ್ ಆಗಿ ಚುನಾವಣೆ ಗೆಲ್ಲಲಿಲ್ಲ. ಮತದಾರರು ಈ ಕಾರಣಕ್ಕಾಗಿಯೂ ಗೆಲ್ಲಿಸಲಿಲ್ಲ. ಎರಡು ವರ್ಷಗಳಿಂದ ವಿಜಯ್ ನಡೆಸಿರುವ ಕಾರ್ಯ, ಯುವಕರ ಮನಸ್ಥಿತಿ ಮತ್ತು ಅವರಲ್ಲಿನ ಅಂತಃಶಕ್ತಿಯನ್ನು ಜಾಗೃತಿಗೊಳಿಸಿ ಈಗ ಜನಬೆಂಬಲ ಗಳಿಸಿದ್ದಾರೆ. ಪರೋಕ್ಷವಾಗಿ ಯುವಕರೇ ದೇಶದ ಮುಂದಿನ ರಾಜಕಾರಣವನ್ನು ಕೈಗೆತ್ತಿಕೊಳ್ಳಿ ಎಂದು ಸಂದೇಶವನ್ನು ವಿಜಯ್ ಸಾರಿದಂತಿದೆ.

ಸ್ಟಾರ್ ನಟರೆಂಬ ಕಾರಣಕ್ಕೆ ವಿಜಯ್ ಗೆಲ್ಲಲಿಲ್ಲ ಎನ್ನುವುದಕ್ಕೆ ಒಂದು ಬಲವಾದ ಉದಾಹರಣೆ ನಮ್ಮೆದುರಿದೆ. ವಿಜಯ್‌ಗಿಂತ ಅತೀ ಹೆಚ್ಚು ಜನಪ್ರಿಯತೆ ಹಾಗೂ ದೇಶಾದ್ಯಂತ ಸಾಕಷ್ಟು ಬೆಂಬಲ ಹೊಂದಿದ್ದ ಕಮಲಹಾಸನ್ ರಾಜಕಾರಣದಲ್ಲಿ ಸೋತರು. ಜನ ಬೆಳೆಸಲಿಲ್ಲ. ರಜನಿಕಾಂತ್ ಯತ್ನಿಸಿದರು. ಆದರೆ ಆಗಲಿಲ್ಲ!!

ವಿಜಯ್‌ಗೆ ಏಕೆ ಸಾಧ್ಯವಾಯಿತೆಂದರೆ ಯುವ ಶಕ್ತಿಯ ಕೈಗೆ ಕೆಲಸ ಕೊಡುವ ಭರವಸೆ ನೀಡಿದ್ದು. ಯುವ ಜನತೆಯೇ ನಮ್ಮ ಭವಿಷ್ಯ ಎಂಬುದನ್ನು ಎರಡು ವರ್ಷಗಳಿಂದ ಸಾರಿ ಹೇಳಿದ್ದು ಒಂದು ಭಾಗವಾಯಿತು. ಇದಕ್ಕಿಂತ ಮುಖ್ಯವಾಗಿ ತಾವು ಹೋದಲ್ಲೆಲ್ಲ ಈ ಮಾತು ಹೇಳುತ್ತಿರುವುದರಲ್ಲಿ ಕೇವಲ ಬೂಟಾಟಿಕೆಯ ಅಥವಾ ಸಿನಿಮೀಯ ನಟನೆಯ ಅಂಶಗಳಿಲ್ಲ ಎನ್ನುವುದನ್ನು ಸಾಮಾಜಿಕ ಜಾಲತಾಣಗಳ ಮೂಲಕ ಜೆನ್–ಜಿಗಳಿಗೆ ಮನವರಿಕೆ ಮಾಡಿಕೊಡುವಲ್ಲಿ ವಿಜಯ್ ಗೆದ್ದಿದ್ದರು.

ಚುನಾವಣಾ ಪೂರ್ವದ ಈ ಎರಡು ವರ್ಷಗಳ ಕೆಲಸ ಮತ್ತು ಪ್ರಚಾರದಲ್ಲಿ ಅವರನ್ನು ಯುವ ಸಮೂಹ ಮತ್ತು ಈ ಜೆನ್–ಜಿ ಪಾಲಕರು ನಂಬಿದ್ದೇ ವಿಜಯ್ ಅನಿರೀಕ್ಷಿತವಾಗಿ ಅಧಿಕಾರಕ್ಕೆ ಏರುವಂತಾಗಲು ಕಾರಣ.

ಎಂಜಿಆರ್ (ಎಂ.ಜಿ.ರಾಮಚಂದ್ರನ್) ಕೂಡ ಇದೇ ರೀತಿ ಜನಪ್ರಿಯ ನಟರಾಗಿ ಮನಸ್ಸುಗಳನ್ನು ಗೆದ್ದು ತಮಿಳುನಾಡಿನ ಹೊಸ ರಾಜಕೀಯ ತಾರೆಯಾಗಿ ಉದಯಿಸಿದ್ದರು. ಅವರು ಅಧಿಕಾರಕ್ಕೇರಿದ ನಂತರ ತಮಿಳಿಗರನ್ನು ನಿರಾಸೆ ಮಾಡಲಿಲ್ಲ. ಬದಲಾಗಿ ಜನಪರ ಆಡಳಿತಕ್ಕೆ ದೇಶದಲ್ಲಿಯೇ ಸೈ ಎನಿಸಿಕೊಂಡರು. ಈಗ ವಿಜಯ್ ಎದಿರೂ ಇಂಥದ್ದೇ ಸವಾಲಿದೆ. ಚುನಾವಣೆಗೆ ಮುನ್ನ ಗೆದ್ದ ಜೆನ್–ಜಿ ಮನಸ್ಸುಗಳ ನಿರೀಕ್ಷೆಯನ್ನು ಅವರು ಈಗ ಹುಸಿಗೊಳಿಸದಂತೆ ನೋಡಿಕೊಳ್ಳುವುದು ಪ್ರಸಕ್ತ ತಮಿಳುನಾಡಿನ ಸನ್ನಿವೇಶದಲ್ಲಿ ಹೂ ಎತ್ತಿದಷ್ಟು ಸುಲಭವಂತೂ ಅಲ್ಲ!

ಪಶ್ಚಿಮ ಬಂಗಾಳದಲ್ಲೂ ಅಷ್ಟೇ. ಮಮತಾ ಬ್ಯಾನರ್ಜಿ ಅಹಂಕಾರ, ಸೊಕ್ಕು ಮತ್ತು ಅವರ ಹಿಂಬಾಲಕರ ಗೂಂಡಾಗಿರಿಯಿಂದ ಜನ ಬೇಸತ್ತಿದ್ದರು. ಹಾಗಾಗಿ ಅವರನ್ನು ಬದಲಿಸಲೇಬೇಕು ಎನ್ನುವ ತೀರ್ಮಾನವನ್ನು ಮೂರು ಕೋಟಿಯಷ್ಟಿರುವ ಯುವ ಮತದಾರರು ಮಾಡಿದ್ದರು. ಅಧಿಕಾರದ ಹದಿನೈದು ವರ್ಷದಲ್ಲಿ ನಿರುದ್ಯೋಗ ಯುವ ಜನರ ಧ್ವನಿಯನ್ನು ಮಮತಾ ಕೇಳಲಿಲ್ಲ.

ಬದಲಾಗಿ ಅವರನ್ನು ಪಶ್ಚಿಮ ಬಂಗಾಳ ಹಾಗೂ ತನ್ನ ವಿರೋಧಿ ಎಂದು ಬಿಂಬಿಸತೊಡಗಿದ್ದರು. ಮೊಕದ್ದಮೆಗಳನ್ನು ಹೇರಿದ್ದರು. ಹಾಗಾಗಿ ಯುವ ಸಮೂಹದ ಬಲ ಹಾಗೂ ಒಲವು ಎರಡನ್ನೂ ಮಮತಾ ಕಳೆದುಕೊಂಡರು. ಈಗ ಬಿಜೆಪಿಯಿಂದ ಆಯ್ಕೆಯಾದ ನಲವತ್ತೈದಕ್ಕೂ ಹೆಚ್ಚು ಶಾಸಕರು ಯುವಕರೇ ಎಂಬುದು, ಜೆನ್–ಜಿ ಯುವ ಸಮೂಹದತ್ತ ಒಲವು ಹೊಂದಿದ್ದಾರೆ; ದೇಶದಲ್ಲಿ ಬದಲಾವಣೆ ಬಯಸಿದ್ದಾರೆ ಎನ್ನುವುದಕ್ಕೆ ಸಾಕ್ಷಿ.

ಕೇರಳಂನ ಎಲ್‌ಡಿಎಫ್ ಸರ್ಕಾರ ಯುವಕರಿಗೆ ಟಿಕೆಟ್ ನೀಡಲಿಲ್ಲ. ಬದಲು ಆರವತ್ತು– ಎಪ್ಪತ್ತು ವರ್ಷದವರನ್ನೇ ಕಮ್ಯೂನಿಸ್ಟ್ ಚಿಂತನೆಯ ಹೆಸರಿನಲ್ಲಿ ಕಣಕ್ಕಿಳಿಸಿತು. ಸಿದ್ಧಾಂತಕ್ಕೆ ಜನ ಮೆಚ್ಚಬೇಕು ಎನ್ನುವ ಧೋರಣೆ ಇದರ ಹಿಂದೆ ಸ್ಪಷ್ಟವಾಗಿತ್ತು. ಹೊಟ್ಟೆಗೆ ಹಿಟ್ಟಿಲ್ಲದಿರುವಾಗ ತತ್ವ, ಸಿದ್ಧಾಂತ– ಬೋಧನೆಗಳು ಯಾರಿಗೆ ಬೇಕಾಗಿದೆ? ಹಸಿದ ಹೊಟ್ಟೆಗೆ ಇವು ಹೇಗೆ ತಾನೇ ರುಚಿಸಲು ಸಾಧ್ಯ?

ಕಾಂಗ್ರೆಸ್‌ನಿಂದ ಕೇರಳಂನಲ್ಲಿ ಈ ಸಾರೆ ಗೆದ್ದವರಲ್ಲಿ ಬಹುತೇಕ ಯುವ ಹಾಗೂ ಮಧ್ಯಮ ವಯಸ್ಸಿನವರು. ರಾಹುಲ್ ಪಡೆ ಈ ಮಟ್ಟಿಗೆ ವಾಸ್ತವಿಕ ನೆಲೆಗಟ್ಟಿನಲ್ಲಿ ಸ್ಪಂದಿಸಿದೆ.

> ವರ್ಷಕ್ಕೆ ಎರಡು ಕೋಟಿ ಜನರಿಗೆ ಉದ್ಯೋಗ ನೀಡುವ ಭರವಸೆ ನೀಡುವ ಕೇಂದ್ರ ಸರ್ಕಾರ, ಹತ್ತು ವರ್ಷದ ನಂತರವೂ ಎರಡು ಕೋಟಿ ಉದ್ಯೋಗಗಳನ್ನು ನೀಡಲಿಲ್ಲ. ಹಾಗೆಯೇ ಅಧಿಕಾರಕ್ಕೆ ಬಂದ ತಕ್ಷಣ ಖಾಲಿ ಇರುವ ಎರಡು ಲಕ್ಷ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವ ಭರವಸೆ ನೀಡಿದ್ದ ಕರ್ನಾಟಕ ಸರ್ಕಾರ ಈಗ ಒಂದಿಲ್ಲೊಂದು ನೆಪ ಹೇಳಿ ಯುವ ಸಮೂಹದ ಸಹನೆಯನ್ನು ಪರೀಕ್ಷಿಸುತ್ತಿದೆ.

ಜನಾಶಯ
ಮೋಹನ ಹೆಗಡೆ
ಕಾರ್ಯನಿರ್ವಾಹಕ ಸಂಪಾದಕ

ಗ್ಯಾರಂಟಿಗಳು, ಯುವನಿಧಿ, ಉಚಿತ ಬಸ್, ಮಾಸಾಶನ, ಫ್ರೀಬಿಗಳೆಲ್ಲ ನಂತರದ ವಿಷಯಗಳು ಮತ್ತು ಯೋಜನೆಗಳು. ವಿಶ್ವಾಸಾರ್ಹ ವ್ಯಕ್ತಿಗಳು ಮತ್ತು ರಾಜಕಾರಣಕ್ಕೆ ಹೊಸ ಮುಖಗಳನ್ನು ಪರಿಚಿಸಿದ್ದರಿಂದ ಕೇರಳಂನಲ್ಲಿ ಕಾಂಗ್ರೆಸ್ (ಯುಡಿಎಫ್) ಗೆದ್ದು, ಕಮ್ಯೂನಿಸ್ಟ್ ಆಡಳಿತಕ್ಕೆ ದೇಶದಲ್ಲಿ ಕೊನೇ ಮೊಳೆ ಹೊಡೆಯಿತು.

ಜೆನ್–ಜಿ ಕಳೆದ ಎರಡು ವರ್ಷಗಳಿಂದಂತೂ ತುಂಬ ಜಾಗೃತಗೊಂಡಿದ್ದಾರೆ. ನೇಪಾಳದಲ್ಲಿ ತಮ್ಮದೇ ಆದ ಸರ್ಕಾರವನ್ನು ಗೆಲ್ಲಿಸಿಕೊಂಡು ಬರುವಷ್ಟು ಪ್ರಬುದ್ಧರಾಗಿದ್ದಾರೆ. ಅದೇ ಟ್ರೆಂಡ್ ಈಗ ಭಾರತದಲ್ಲೂ ನಡೆದಿದೆ.

ಜೆನ್ ಜಿ ಇಪ್ಪತ್ತೊಂದನೇ ಶತಮಾನಕ್ಕೆ ಸೇರಿದ್ದು. 2000–2001ರಲ್ಲಿ ಜನಿಸಿದವರು ಈಗ ಮತದಾರರು. ಇವರಲ್ಲದೇ ಒಟ್ಟು ದೇಶದಲ್ಲಿ ಕನಿಷ್ಠ 40 ಕೋಟಿಗೂ ಅಧಿಕ ಮಂದಿ ನಲವತ್ತೈದು ವಯಸ್ಸಿನ ಮತದಾರರಿದ್ದಾರೆ ಎನ್ನುವುದನ್ನು ಚುನಾವಣಾ ಆಯೋಗವೇ ತಿಳಿಸಿದೆ.

ಇವರೇ ಈಗ ಪ್ರಬುದ್ಧ ಮತ್ತು ಜಾಗೃತ ಮತದಾರರು. ಉತ್ತಮ ಶಿಕ್ಷಣ, ತಂತ್ರಜ್ಞಾನ ಪಡೆದ, ಚಿಂತಿಸುವ ಮತ್ತು ಚಿಂತನೆ ನಡೆಸುವ ಜನ. ಇವರನ್ನು ಹತ್ತಿಕ್ಕುವ ಪ್ರಯತ್ನಗಳು ಇನ್ನು ಮುಂದೆ ನಡೆಯಲಾರವು. ಬಿಹಾರ, ಉತ್ತರ ಪ್ರದೇಶ, ದೆಹಲಿ, ರಾಜಸ್ಥಾನ, ಮಣಿಪುರ, ಮಹಾರಾಷ್ಟ್ರ, ಕರ್ನಾಟಕ ಸರ್ಕಾರಗಳೆಲ್ಲ ಜೆನ್ ಜಿ ಹೋರಾಟದ ಭೀತಿಯಲ್ಲಿವೆ.

ಕಿಸಾನ್ ಹೋರಾಟದಿಂದ ತತ್ತರಿಸಿದ್ದ ಕೇಂದ್ರ ಸರ್ಕಾರ ಹಾಗೂ ಸ್ಥಳೀಯ ರಾಜ್ಯ ಸರ್ಕಾರಗಳು ಹತ್ತಿಕ್ಕಲು ಹೋಗಿ ಅಧಿಕಾರ ಕಳೆದುಕೊಳ್ಳುವ ಅಂಚಿಗೆ ಬಂದವು. ವರ್ಷಕ್ಕೆ ಎರಡು ಕೋಟಿ ಜನರಿಗೆ ಉದ್ಯೋಗ ನೀಡುವ ಭರವಸೆ ನೀಡುವ ಕೇಂದ್ರ ಸರ್ಕಾರ, ಹತ್ತು ವರ್ಷದ ನಂತರವೂ ಎರಡು ಕೋಟಿ ಉದ್ಯೋಗಗಳನ್ನು ನೀಡಲಿಲ್ಲ. ಹಾಗೆಯೇ ಅಧಿಕಾರಕ್ಕೆ ಬಂದ ತಕ್ಷಣ ಖಾಲಿ ಇರುವ ಎರಡು ಲಕ್ಷ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವ ಭರವಸೆ ನೀಡಿದ್ದ ಕರ್ನಾಟಕ ಸರ್ಕಾರ ಈಗ ಒಂದಿಲ್ಲೊಂದು ನೆಪ ಹೇಳಿ ಯುವ ಸಮೂಹದ ಸಹನೆಯನ್ನು ಪರೀಕ್ಷಿಸುತ್ತಿದೆ.

ಧಾರವಾಡ, ಶಿವಮೊಗ್ಗ, ದಾವಣಗೆರೆ, ಕಲಬುರ್ಗಿ, ಮಂಗಳೂರು ಇತ್ಯಾದಿ ಕಡೆ ಸಹಸ್ರಾರು ನಿರುದ್ಯೋಗಿ ಯುವಕರು ನೇಮಕಾತಿ ಕೈಗೊಳ್ಳದ ರಾಜ್ಯ ಸರ್ಕಾರದ ವಿರುದ್ಧ ನೇರ ಹೋರಾಟಕ್ಕೆ ಇಳಿದರು. ಈಗ ಸರ್ಕಾರ ಇಂತಹ ಯುವ ಹೋರಾಟಗಾರರ ಮೇಲೆ ಪೊಲೀಸರನ್ನು ಬಳಸಿ ಮೊಕದ್ದಮೆಗಳನ್ನು ಹೂಡುತ್ತಿದೆ. ಧಾರವಾಡದಲ್ಲಿ ಹೋರಾಟದ ನೇತೃತ್ವ ವಹಿಸಿದ್ದ ಯುವಕನ ಮೇಲೆ ಐವತ್ತಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಿದೆ.

ಈತನನ್ನು ಜೈಲಿಗೂ ಅಟ್ಟಲಾಗಿತ್ತು. ವಿದ್ಯಾರ್ಥಿಗಳಿಗೆ ಎಲ್ಲಿಯೂ ಕೆಲಸ ಸಿಗದಂತೆ ನೋಡಿಕೊಳ್ಳುವ, ಪ್ರಮಾಣ ಪತ್ರಗಳನ್ನು ತಡೆಹಿಡಿಯುವ ಮತ್ತು ಕ್ರಿಮಿನಲ್ ಕೇಸ್ ಹಾಕುವ ಹುನ್ನಾರ ನಡೆಯುತ್ತಿದೆ.

ಅಂದರೆ, ಜೆನ್ ಜಿ ಧ್ವನಿ ಹತ್ತಿಕ್ಕಿದರೆ ಮತ್ತಷ್ಟು ಪುಟಿದೇಳುತ್ತಾರೆ ಎನ್ನುವುದು ಸರ್ಕಾರಕ್ಕೆ ಇನ್ನೂ ಸ್ಪಷ್ಟವಾದಂತಿಲ್ಲ. ಶಿವಮೊಗ್ಗ, ದಾವಣಗೆರೆ, ಧಾರವಾಡದಲ್ಲೆಲ್ಲ ಹೋರಾಟದಲ್ಲಿ ತೊಡಗಿಸಿಕೊಂಡ, ಕೆಲಸ ಕೊಡಿ ಎಂದು ಕೇಳಿದ ಮಕ್ಕಳನ್ನು ಹೆಕ್ಕಿ ಹೆಕ್ಕಿ ಪ್ರಕರಣದಲ್ಲಿ ಸಿಲುಕಿಸಲಾಗುತ್ತಿದೆ. ಗಾಂಜಾ ಕೇಸು, ಮದ್ಯಪಾನ ಮಾಡಿ ವಾಹನ ಓಡಿಸುವ ಕೇಸು ಹಾಕುವ, ಎಲ್ಲಿಯೋ ವಶಪಡಿಸಿಕೊಂಡ ಮಾದಕ ವಸ್ತುಗಳನ್ನು ಹೋರಾಟ ಮಾಡಿದ ಯುವಕರ ಮನೆಯಲ್ಲಿ ತಂದಿಟ್ಟು ಪ್ರಕರಣ ದಾಖಲಿಸುವ ಕುತಂತ್ರ– ಕುತ್ಸಿತ ಕಾರ್ಯ ಸರ್ಕಾರದಿಂದಲೇ ನಡೆಯುತ್ತಿವೆ. ಇವೆಲ್ಲ ಒಂದಿಲ್ಲೊಂದು ದಿನ 'ಬೂಮರಾಂಗ್' ಆಗುವುದು ನಿಶ್ಚಿತ.

ಇನ್ನು ಹೊಟ್ಟೆ, ಬಟ್ಟೆ, ಜೀವನ ನಡೆಸುವ ಉದ್ಯೋಗದ ಪ್ರಶ್ನೆ ಬಂದಾಗ, ಯಾವ ಲಾಠಿ–ಸಾಟಿ– ಧೋತ್ರ ನಡೆಯಲ್ಲ ಎನ್ನುವುದನ್ನು ಪಂಚರಾಜ್ಯ ಚುನಾವಣೆ ತೋರಿಸಿದೆ. ತಮಿಳುನಾಡು ಇರಬಹುದು, ಪಶ್ಚಿಮ ಬಂಗಾಳ ಅಥವಾ ಕೇರಳಂ ಆಗಿರಬಹುದು. ಯುವಕರ ಧ್ವನಿಯನ್ನು ಹತ್ತಿಕ್ಕಿ, ಅವರನ್ನು ನಿರ್ಲಕ್ಷಿಸಿದರೆ ಇನ್ನು ನಡೆಯಲ್ಲ; ಸಾಂಪ್ರದಾಯಿಕ ವೇಷದ ಹಿರಿತಲೆಗಳ, ದರ್ಪ (ಕುಟುಂಬ) ರಾಜಕಾರಣಕ್ಕೆ ನೆಲೆ ಇಲ್ಲ ಎನ್ನುವುದು ಸಾಬೀತಾಗಿದೆ.

ಭ್ರಮಾಲೋಕ ಸೃಷ್ಟಿಸಿ, ಜಾತಿ–ಧರ್ಮದ ಕಂದಕ ನಿರ್ಮಿಸುವ ಮೂಲಕ ರಾಜಕೀಯ ಬೇಳೆ ಬೇಯಿಸಿಕೊಳ್ಳಬೇಕು ಎಂದುಕೊಳ್ಳುವರು 'ಪಂಚರಾಜ್ಯ– ಕಜ್ಜಾಯ'ವನ್ನು ಆಳವಾಗಿ ಅವಲೋಕಿಸಲು ಇದು ಸಕಾಲ !

ಸುಪ್ರೀಂ ನ್ಯಾಯಾಲಯದ ಕಕ್ಷಿದಾರರಿಗೆ ಶ್ರೀರಕ್ಷೆ

ಸುಪ್ರೀಂ ನ್ಯಾಯಾಲಯದಲ್ಲಿ ವರ್ಷಗಳಿಂದ ಬಾಕಿ ಉಳಿಯುತ್ತಿರುವ ಪ್ರಕರಣಗಳ ಸಂಖ್ಯೆ ದಿನೇದಿನೇ ಹೆಚ್ಚುತ್ತಿರುವುದು ಗಮನಾರ್ಹವಾಗಿದೆ. "ಮನೆ ಬಾಗಿಲಲ್ಲೇ ನ್ಯಾಯ" ಎಂಬ ಕಲ್ಪನೆ ಇನ್ನೂ ವಾಸ್ತವ ರೂಪ ಪಡೆಯದೆ ಇರುವುದರಿಂದ ಸಾಮಾನ್ಯ ಕಕ್ಷಿದಾರರು ಅಪಾರ ತೊಂದರೆ ಅನುಭವಿಸುತ್ತಿದ್ದಾರೆ. ನ್ಯಾಯಕ್ಕಾಗಿ ದೂರದ ದೆಹಲಿಗೆ ತೆರಳಿ, ಸಮಯ, ಹಣ ಮತ್ತು ಮಾನಸಿಕ ಶಕ್ತಿ ವ್ಯಯಿಸುವ ಪರಿಸ್ಥಿತಿ ಇನ್ನೂ ಮುಂದುವರಿದಿದೆ.

ಈ ಹಿನ್ನೆಲೆಯಲ್ಲಿ ಹೈಕೋರ್ಟ್ ನ್ಯಾಯಮೂರ್ತಿಗಳಾದ ಶಿವರಾಮನ್ ಹಾಗೂ ಆರ್. ದೇವದಾಸ್ ಅವರು ಕೈಗೊಂಡಿರುವ ಕ್ರಮಗಳು ಆಶಾದಾಯಕವಾಗಿವೆ. ಅವರು ಕಕ್ಷಿದಾರರು ದೆಹಲಿಗೆ ತೆರಳುವ ಅಗತ್ಯವಿಲ್ಲದೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳ ಮೂಲಕವೇ ತಮ್ಮ ಪ್ರಕರಣಗಳನ್ನು ಪರಿಹರಿಸಿಕೊಳ್ಳಬಹುದೆಂಬ ಮಹತ್ವದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಜಿಲ್ಲಾಮಟ್ಟದಲ್ಲಿಯೇ ಅಗತ್ಯ ಕಾನೂನು ಹಾಗೂ ತಾಂತ್ರಿಕ ಸೌಲಭ್ಯಗಳು ಲಭ್ಯವಿವೆ ಎಂಬುದು ಜನತೆಗೆ ನಂಬಿಕೆ ನೀಡುವ ಸಂಗತಿಯಾಗಿದೆ.

ಈ ಕ್ರಮವು ಸಾಮಾನ್ಯ ಜನರ ಮೇಲೆ ಇರುವ ಆರ್ಥಿಕ ಹಾಗೂ ಮಾನಸಿಕ ಭಾರವನ್ನು ಕಡಿಮೆ ಮಾಡುವುದರಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಆದರೆ, ಈಗಾಗಲೇ ದೀರ್ಘಕಾಲದಿಂದ ಬಾಕಿ ಉಳಿದಿರುವ ಪ್ರಕರಣಗಳನ್ನು ಜ್ಯೇಷ್ಠತೆಯ ಆಧಾರದ ಮೇಲೆ ಶೀಘ್ರವಾಗಿ ಇತ್ಯರ್ಥಗೊಳಿಸುವತ್ತ ಸರ್ಕಾರ ಹಾಗೂ ನ್ಯಾಯಾಂಗ ಹೆಚ್ಚು ಗಮನ ಹರಿಸಬೇಕು. ಕಕ್ಷಿದಾರರಿಗೆ ತಕ್ಷಣದ ನ್ಯಾಯ ಮತ್ತು ಸಮರ್ಪಕ ರಕ್ಷಣೆ ದೊರಕುವುದು ಪ್ರಜಾಪ್ರಭುತ್ವದ ಮೂಲ ಸಿದ್ಧಾಂತವಾಗಿದೆ. ನ್ಯಾಯವು ಮನೆ ಬಾಗಿಲಲ್ಲೇ ದೊರೆಯುವ ದಿನ ದೂರದಲ್ಲಿಲ್ಲ ಎಂಬ ವಿಶ್ವಾಸ ಮೂಡುವಂತಾಗಲಿ? ಇದೇ ಜನರ ನಿರೀಕ್ಷೆ.

■ ವಸಂತರಾವ್ ಮುನವಳ್ಳಿ, ಸವದತ್ತಿ.

ಹಗುರು ಮಾತು ಸಚಿವರಿಗೆ ಸಲ್ಲ

ಸಚಿವ ಪ್ರಿಯಾಂಕಾ ಖರ್ಗೆ ಅವರು ಅಸ್ಸಾಮ್, ಪಶ್ಚಿಮಬಂಗಾಳದ ಗೆಲುವು ಬಿಜೆಪಿಯ ಗೆಲುವಲ್ಲ ಅದು ಚುನಾವಣಾ ಆಯೋಗದ ಗೆಲುವು ಎಂದು ಹೇಳಿರುವುದು ನೋಡಿದರೆ ಅವರು ಆಡುವಾಗ ಗೆದ್ದ ತಂಡವನ್ನು ಇದು ನಿಮ್ಮ ಗೆಲುವಲ್ಲ ಇದು ಅಂಪೈರ್ ಗೆಲುವು ಎಂದಂತಿದೆ.

ಚುನಾವಣೆಗೆ ಎರಡು ಪಕ್ಷಗಳ ಅಥವಾ ಅದಕ್ಕಿಂತ ಹೆಚ್ಚು ಪಕ್ಷಗಳ ನಡುವೆ ಜಿದ್ದಾಜಿದ್ದಿನ ಸ್ಪರ್ಧೆ ಇದ್ದಾಗ ಒಂದು ಪಕ್ಷ ಗೆದ್ದಾಗ ಅದು ಆ ಪಕ್ಷದ ಗೆಲುವು ಎಂದು ಅಭಿನಂದಿಸುವುದನ್ನು ಬಿಟ್ಟು ಇದು ಆ ಪಕ್ಷದ ಗೆಲುವಲ್ಲ ಎಂದರೆ ಏನಾರ್ಥ? ನ್ಯಾಯಾಲಯದಲ್ಲಿ ಒಂದು ವ್ಯಾಜ್ಯ ನಡೆದಾಗ ಒಬ್ಬ ಕಕ್ಷಿದಾರನಿಗೆ ನ್ಯಾಯ ಸಿಕ್ಕರೆ ಅದು ಅವನ ಗೆಲುವಲ್ಲ ನ್ಯಾಯಾಧೀಶರ ಗೆಲುವು ಎಂದರೆ ಏನಾರ್ಥ. ಅದೇ ರೀತಿ ಕರ್ನಾಟಕ, ಕೇರಳದ ತಮಿಳುನಾಡಿನ ಗೆಲುವು ಆ ಪಕ್ಷದ್ದಲ್ಲ ಅದು ಚುನಾವಣಾ ಆಯೋಗದ ಗೆಲುವು ಎಂದು ಹೇಳಬೇಕಿತ್ತು. ಒಬ್ಬ ಸಚಿವರಾಗಿ ಮಾತು ಆಡಬೇಕಾದಾಗ ಅಳೆದು ತೂಗಿ ಮಾತಾಡುವುದನ್ನು ಕಲಿತರೆ ಒಳ್ಳೆಯದು ಇಲ್ಲದಿದ್ದರೆ ಸಾರ್ವಜನಿಕರ ಮುಂದೆ ಅಪಹಾಸ್ಯಕ್ಕೆ ಗುರಿಯಾಗುತ್ತೀರಿ. ಹಾಗೆಯೆ ನಿಮ್ಮ ತೂಕ (ಬೆಲೆ) ಕಡಿಮೆಯಾಗುತ್ತದೆ.

■ ಎಂ.ಪರಮೇಶ್ವರ, ಮದ್ದಿಹಳ್ಳಿ

4 ಲಕ್ಷ ಖಾಲಿ ಹುದ್ದೆ ಭರ್ತಿಗೆ ಕ್ರಮಕೈಗೊಳ್ಳಿ

ರಾಜ್ಯ ಸರ್ಕಾರ ಒಳಮೀಸಲಾತಿಯ ಸಮಸ್ಯೆಯನ್ನು ಸರ್ವಸಮ್ಮತ ಹಂಚಿಕೆಯ ಮೂಲಕ ಯಶಸ್ವಿಯಾಗಿ ಪರಿಹರಿಸಿದೆ. ಆದರಂತೆ ರೋಸ್ಟರ್ ಬಿಂದುಗಳ ಪಟ್ಟಿಯನ್ನು ಸಹ ಪರಿಷ್ಕರಿಸಿದೆ. ನಿರುದ್ಯೋಗಿ ಯುವಜನತೆಯ ನಿಯೋಗವೊಂದು ಮುಖ್ಯಮಂತ್ರಿ ಸಿದ್ಧರಾಮಯ್ಯವರನ್ನು ಭೇಟಿ ಮಾಡಿ, ಖಾಲಿ ಇರುವ ಸುಮಾರು 4 ಲಕ್ಷ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಲು ವಿನಂತಿ ಮಾಡಿದೆ. ಮುಖ್ಯಮಂತ್ರಿಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಹಾಗಾಗಿ ಈಗಲಾದರೂ ಕಳೆದ ಮೂರು ವರ್ಷಗಳಿಂದಲೂ, ವಿವಿಧ ಇಲಾಖೆಗಳು, ನಿಗಮ, ಮಂಡಳಿಗಳಲ್ಲಿ ಖಾಲಿ ಬಿದ್ದಿರುವ ಒಟ್ಟಾರೆ ಸುಮಾರು 4 ಲಕ್ಷ ಹುದ್ದೆಗಳ ಭರ್ತಿಯ ಬಗ್ಗೆ ಸರ್ಕಾರ ತನ್ನ ಚುನಾವಣೆ ಪ್ರಣಾಳಿಕೆಯಂತೆ ತುರ್ತು ಕ್ರಮ ಜರುಗಿಸಬೇಕು.

■ ರಮೇಶ್, ಬೆಂಗಳೂರು

ಸಂಯುಕ್ತ ಬಂಧ 5950



ಉತ್ತರ: 5949

ಎಡದಿಂದ ಬಲಕ್ಕೆ: 1.ಮಧುರ 3.ಚಾಲಕ 5.ಸಾಗು 6.ಕುರಿ 7.ಸಮಯ 8.ತ್ರಿವಿಧ 9.ನವನವೀನ 12.ಅನಂತದೂರ 15.ಸಮರ 16.ಸಾಹಿತ್ಯ 17.ವಿಂಧ್ಯಾ 18.ಶುಭಾ 19.ವಿನೋದ 20.ಸಬಲ

ಮೇಲಿನಿಂದ ಕೆಳಕ್ಕೆ: 1.ಮಹಾಸತಿ 2.ರಸಾಯನ 3.ಚಾರಿತ್ರಿಕ 4.ಕಳಾಧರ 10.ನಮ್ರತ 11.ರಸಕವಿ 12.ಅರವಿಂದ 13.ರಸಾಭಾಸ 14.ಸತ್ಯಶೀಲ

ಎಡದಿಂದ ಬಲಕ್ಕೆ

3	ಜನರು ಪೂಸಿಕೊಂಡ ಕಾಡಿಗೆ	3
5	ಗಣ್ಯರಿಗೆ ನೀಡುವ ರಕ್ಷಣೆ	3
7	ಯೌವನದಲ್ಲಿ ಸುತ್ತಾಡಲು ಒಂದು ತೋಟ	2
9	ಜನಮೇಜಯನಿಗೆ ಸಿಕ್ಕ ಗೆಲುವು	2
10	ಸಮಯ ಜಾರದಂತೆ ಬಳಸಿಕೊಂಡ ಸೂಟಿ	2
12	ಶಯನದ ಬದಿ ಹರಿದ ನದಿ	3
13	ಆಹಾ! ಅಳುತ್ತ ನಿಂದ ಸೇವಕ	2
14	ಮಹಾಸತಿಯಲ್ಲಿ ಅಡಗಿದ ಭಾವ	2
15	ಹಾಡಿನ ಒಂದು ಭಾಗ ಎಂಬರ್ಥದ ಪದ	3
16	ಮದನ ಮೇಯಿಸಿದ ಪಶು	2
18	ಕಪಿಯ ಸ್ನೇಹ ಮಾಡಿದ ಕೋಗಿಲೆ	2
19	ತಿಲಕ ಇರಿಸಿಕೊಂಡಾಗ ದೊರೆತ ಎಳ್ಳು	2
21	ಪುಣ್ಯವನ್ನು ಗಳಿಸಿದ ಈತ ಪರಿಶುದ್ಧ	3
23	ಅವರ ಆಸೆಯಂತೆ ಹಾಕಿದ ಪಟ್ಟು	3

ಮೇಲಿನಿಂದ ಕೆಳಕ್ಕೆ

1	ಜಗವನ್ನೆಲ್ಲ ಸುತ್ತಿಕೊಂಡು ಬಂದಿರುವ ಆನೆ	2
2	ಕೋಪಗೊಂಡಿರುವ ಶಿವ	2
3	ಬಿಟ್ಟ ಅಂಬು ಮುಟ್ಟಿದ ಆಕಾಶ	3
4	ಹೊಸದಾದ ಒಂಬತ್ತರ ಸಂಖ್ಯೆ	2
5	ಭಕ್ತನಿಗೆ ಯಮನ ಬಳಿ ಹೋಗಲು ಹೆದರಿಕೆ	2
6	ಅಗೆಳು ಬೆಂದಿಲ್ಲವೆಂದು ನಿಂದಿಸು	3
8	ಮೃದುವಾದ ಮಾತುಗಳ ಮೋಸಗಾರ	5
9	ಪ್ರಜಾಸಮೂಹವನ್ನು ಎಣಿಸುವ ಕಾರ್ಯಕ್ರಮ	5
11	ಜಾತಿಮತವಿಲ್ಲದೆ ಮೂಡಿಸಿದ ಎಚ್ಚರ	3
13	ಆನೆಯ ಮೇಲೆ ಕುಳಿತವನಿಗಾದ ಸಂತಸ	3
14	ದೀಪಾವಳಿಗೆ ಹಚ್ಚಿದ ಕಡ್ಡಿ	3
17	ನಕಾರ ಹೇಳಿಕೊಂಡೇ ತಂದ ನಕ್ಷೆ	3
18	ತಪಿಸುತ್ತಲೇ ಇರುವ ತಂದೆ	2
20	ಬಲ ವರ್ಧಿಸಿದಾಗ ಬಂದ ರಾಮಪುತ್ರ	2
22	ಸಮುದ್ರದ ನೀರಿನ ಹಾಗೂ ಆಕಾಶದ ಬಣ್ಣ	2
24	ವಿರಸದಿಂದ ಬಳಲಿದ ಭಾಸ್ಕರ	2

ದಿನ ವಿಶೇಷ
ಗುರುವಾರ: 07.05.2026

- ಶ್ರೀ ಶಾಲಿವಾಹನ ಶಕೆ 1948
- ಸೌರಮಾಸ: ಮೇಷ, ದಿನ: 23
- ಮು. ಮಾಸ: ದುಲ್ ಖದಾ, ದಿನ: 20

ಪರಾಭವ ಸಂವತ್ಸರ, ಉತ್ತರಾಯಣ, ವಸಂತಋತು, **ಮಾಸ:** ವೈಶಾಖ, **ಪಕ್ಷ:** ಕೃಷ್ಣ, **ತಿಥಿ:** ಪಂಚಮೀ (10.14), **ನಿತ್ಯನಕ್ಷತ್ರ:** ಪೂರ್ವಾಷಾಢ (18.43), **ಯೋಗ:** ಸಾಧ್ಯ (25.59), **ಕರಣ:** ಗರಜೆ (23.21)
ಮಾಸ ನಿಯಾಮಕ: ಕಮಲಾಲಯ ಮಧುಸೂದನ
ಸೂರ್ಯೋದಯ: 06.00 (ನಾಳೆ: 06.00)
ಸೂರ್ಯಾಸ್ತ: 06.48 (ನಾಳೆ: 06.48)
ಮಳೆನಕ್ಷತ್ರ: ಭರಣೀ ಮೂರನೇ ಪಾದ

ಮಹರ್ಷಿ ಕಶ್ಯಪ ಜಯಂತಿ. ಸಂತ ಚೋಖೋಬಾ ಮೇಳಾ ಪುಣ್ಯತಿಥಿ. ಶಾನವಾಡ ಬಸವೇಶ್ವರ ರಥ. ಮದ್ದೂರು ನೃಸಿಂಹ ರಥ. ಮಾರೇಹಳ್ಳಿ ಲಕ್ಷ್ಮೀನೃಸಿಂಹಸ್ವಾಮಿ ಮಹಾಭಿಷೇಕ. ಸಿಂಧಘಟ್ಟ ಲಕ್ಷ್ಮೀನಾರಾಯಣ ರಥ. ಕೋಲಾರ ವರದರಾಜ ಅಸ್ಥಾಪನ ಉತ್ಸವ. ಅರ್ಥಶಾಸ್ತ್ರಜ್ಞ ಡೇವಿಡ್ ಹ್ಯೂಮ್, ಕವಿ ರಾಬರ್ಟ್ ಬ್ರೌನಿಂಗ್, ರವೀಂದ್ರನಾಥ ಠಾಗೋರ್, ಸಂಸ್ಕೃತ ವಿದ್ವಾಂಸ ಎಂ. ಹಿರಿಯಣ್ಣ, ಪಿ.ವಿ. ಕಾಣೆ, ಲೇಖಕ ಪನ್ನಾಲಾಲ್ ಪಟೇಲ್, ಬಾನ್ಸುರಿ ವಾದಕ ನಿತ್ಯಾನಂದ ಹಳದೀಪುರ ಜನ್ಮದಿನ. ವಿಶ್ವ ಅಥ್ಲೆಟಿಕ್ಸ್ ದಿನ. ವಿಶ್ವ ಪಾಸ್‌ವರ್ಡ್ ದಿನ.

ಮನವ ಶೋಧಿಸಬೇಕು ನಿತ್ಯ

ನಮ್ಮ ಜೀವನವು ಧರ್ಮ ಮತ್ತು ಅಧರ್ಮಗಳ ನಡುವಿನ ನಿರಂತರ ಹೋರಾಟ. ಪ್ರತಿದಿನ ನಾವು ಮಾಡುವ ಕರ್ಮಗಳೇ ನಮ್ಮ ಭವಿಷ್ಯವನ್ನು ರೂಪಿಸುತ್ತವೆ. ನಾವು ಮಾಡುವ ಕರ್ಮಗಳಲ್ಲಿ ಹಲವು ಸಕಾರಾತ್ಮಕವಾಗಿದ್ದರೆ, ಕೆಲವು ನಕಾರಾತ್ಮಕವಾಗಿರುತ್ತವೆ. ಇನ್ನು ಕೆಲವು ತಿಳಿದೋ ಅಥವಾ ತಿಳಿಯದೆಯೋ ಮಾಡಿದ ತಪ್ಪುಗಳಾಗಿರುತ್ತವೆ. ದಿನನಿತ್ಯದ ಬದುಕಿನಲ್ಲಿ ನಾವು ಆಡುವ ಮಾತುಗಳು, ಮಾಡುವ ಕೆಲಸಗಳು ಮತ್ತು ಇತರರೊಂದಿಗಿನ ವರ್ತನೆ – ಇವುಗಳೆಲ್ಲವೂ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆ.

ಕೆಲವೊಮ್ಮೆ ಕೋಪದಲ್ಲಿ ಮಾತನಾಡುವುದು, ಅಸೂಯೆಪಡುವುದು ಮತ್ತು ಇತರರಿಗೆ ನೋವನ್ನು ಉಂಟುಮಾಡುವುದು ಮುಂತಾದವು ಪಾಪಕರ್ಮಗಳಿಗೆ ಕಾರಣವಾಗುತ್ತವೆ. ಇವುಗಳನ್ನು ನಾವು ಅರಿಯದೆ ಮುಂದುವರಿಸಿದರೆ, ನಮ್ಮ ಒಳಮನಸ್ಸು ಅಶಾಂತವಾಗುತ್ತದೆ ಮತ್ತು ಸಮಾಜದಲ್ಲಿಯೂ ನಮ್ಮ ಗೌರವ ಕುಗ್ಗುತ್ತದೆ. ಈ ಹಿನ್ನೆಲೆಯಲ್ಲಿ **ಮನವ ಶೋಧಿಸಬೇಕು ನಿಚ್ಚ ದಿನ ದಿನ ಮಾಡುವ ಪಾಪ ಪುಣ್ಯದ ವೆಚ್ಚ** ॥ ಎಂಬ ದಾಸರ ವಾಣಿಯು ನಮಗೆ ದಾರಿದೀಪವಾಗಬೇಕಿದೆ. ಅಂದರೆ, ನಮ್ಮ ಮನಸ್ಸನ್ನು ಪ್ರತಿದಿನ ಪರಿಶೀಲಿಸಿ, ತಪ್ಪುಗಳನ್ನರಿತು, ಅವುಗಳನ್ನು ಸರಿಪಡಿಸಿಕೊಂಡು ಸಾಗುವುದು ಮುಖ್ಯ. 'ಮನುಷ್ಯರು ದಿನವೂ ತಮ್ಮ ನಡವಳಿಕೆಯನ್ನು ಒರೆಗೆ ಹಚ್ಚಿ ನೋಡಿಕೊಳ್ಳುತ್ತಿರಬೇಕು. ತಮ್ಮ ವರ್ತನೆ ಸಜ್ಜನಿಕೆಯಿಂದ ಕೂಡಿದೆಯೋ ಅಥವಾ ಪಶುಗಳ ಹಾಗಿದೆಯೋ ಎಂಬುದನ್ನು ಗಮನಿಸುತ್ತಿರಬೇಕು.' (**ಪ್ರತ್ಯಹಂ ಪ್ರತ್ಯವೇಕ್ಷೇತ ನರಶ್ಚರಿತಮಾತ್ಮನಃ । ಕಿನ್ನು ಮೇ ಪಶುಭಿಸ್ತುಲ್ಯಂ ಕಿನ್ನು ಸತ್ಪುರುಷೈರಿತಿ** ॥) ಪ್ರತಿದಿನವೂ ಆತ್ಮಾವಲೋಕನ ಮಾಡಿಕೊಳ್ಳುವುದರಿಂದ ನಾವು ಉತ್ತಮ ವ್ಯಕ್ತಿಗಳಾಗಬಹುದು ಮತ್ತು ಸಮಾಜಕ್ಕೂ ಒಳಿತನ್ನು ಉಂಟುಮಾಡಬಹುದು.



ಗುರುಬೋಧೆ
ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು
ಪೀಠಾಧಿಪತಿಗಳು,
ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಮಂತ್ರಾಲಯ

ಮನವ ಶೋಧಿಸುವುದು ಎಂದರೆ ಕೇವಲ ಆತ್ಮಪರಿಶೀಲನೆ ಮಾತ್ರವಲ್ಲ, ಅದು ದೇವರ ಅನುಗ್ರಹವನ್ನು ಅರಸುವ ಪ್ರಯತ್ನವೂ ಆಗಿದೆ. ಪ್ರತಿದಿನ ನಾವು ಮಾಡಿದ ತಪ್ಪುಗಳನ್ನು ಅರಿತು, ಅವುಗಳನ್ನು ಸರಿಪಡಿಸಲು ಸಂಕಲ್ಪ ಮಾಡಬೇಕು. ಜೊತೆಗೆ, ಸತ್ಪ್ರವೃತ್ತಿಗಳನ್ನು ಬೆಳೆಸಿ, ಧರ್ಮದ ಮಾರ್ಗದಲ್ಲಿ ನಡೆಯಬೇಕು. ಮಾತನಾಡುವ ಮುಂಚೆ ಯೋಚಿಸಿ ಮಾತನಾಡಬೇಕು. ಒಂದು ಸಾರಿ ಒಡೆದ ಮುತ್ತನ್ನು ಹೇಗೆ ಮತ್ತೆ ಕೂಡಿಸಲು ಸಾಧ್ಯವಿಲ್ಲವೋ ಹಾಗೆ ಆಡಿದ ಮಾತು ತಪ್ಪಾಗಿದ್ದರೆ ಅದನ್ನು ಸರಿಪಡಿಸುವುದು ತುಂಬ ಕಷ್ಟ.

ಕೋಪ, ಅಸೂಯೆ, ಅಹಂಕಾರ, ದ್ವೇಷ ಮುಂತಾದ ದುರ್ಗುಣಗಳನ್ನು ನಾವು ತೊಡೆದುಹಾಕಲು ಭಗವಂತನ ಭಕ್ತಿ ಮತ್ತು ನಾಮಸ್ಮರಣೆ ಅತ್ಯುತ್ತಮ ಮಾರ್ಗ ಎಂದು ಶ್ರೀಮನ್ಮಧ್ವಾಚಾರ್ಯರು ತಿಳಿಸಿಕೊಟ್ಟಿದ್ದಾರೆ. ಜೊತೆಗೆ ಮಾನವನ ಜೀವನದಲ್ಲಿ ಸತ್ಪ್ರವೃತ್ತಿ, ಭಕ್ತಿ ಮತ್ತು ಧರ್ಮಾಚರಣೆಗಳು ಹಾಗೂ ಕರ್ಮ, ಭಕ್ತಿ ಮತ್ತು ಜ್ಞಾನಗಳ ಸಮನ್ವಯವನ್ನು ಒತ್ತಿ ಹೇಳುತ್ತಾರೆ. ದಿನನಿತ್ಯದ ಪಾಪಕರ್ಮಗಳು ನಮ್ಮನ್ನು ಭವ ಬಂಧನಕ್ಕೆ ಒಳಪಡಿಸುತ್ತವೆ; ಆದರೆ ಭಗವಂತನ ಸ್ಮರಣೆ ಮತ್ತು ಸತ್ಕರ್ಮಗಳು ಈ ಬಂಧನಗಳನ್ನು ಬಿಡಿಸಿ ಮೋಕ್ಷದ ದಾರಿಯನ್ನು ತೆರೆಸುತ್ತವೆ.

ಇಂದಿನ ಭವಿಷ್ಯ

ಡಾ. ವೈ.ಎಸ್.ಕೆ. ಆಚಾರ್ಯ
ಜ್ಯೋತಿಷಿಗಳು,
ಶ್ರೀ ಕಾಮಾಕ್ಯ ಪ್ರತ್ಯಂಗಿರಾದೇವಿ ಉಪಾಸಕರು
76767 78568

ರಾಹು ಕಾಲ ಮ. 01.30ರಿಂದ 03
ಗುಳಿಕ ಕಾಲ ಬೆ. 09ರಿಂದ 10.30
ಯಮಗಂಡ ಕಾಲ ಬೆ. 06ರಿಂದ 07.30
ಶುಭ ಸಂಖ್ಯೆ 1–3–5–9

- **ಮೇಷ:** ಸೋದರರಲ್ಲಿ ಭಿನ್ನಾಭಿಪ್ರಾಯ. ಶ್ರೀಮಂತ ವ್ಯಕ್ತಿಗಳ ಭೇಟಿ. ಭೂಸಂಬಂಧಿತ ವ್ಯಾಜ್ಯಗಳಿಂದ ವಿಮುಕ್ತಿ.
- **ವೃಷಭ:** ಸಂಕಲ್ಪಿತ ಕೆಲಸಗಳಲ್ಲಿ ಅನುಕೂಲ. ಅನಿರೀಕ್ಷಿತ ವೆಚ್ಚ. ಮನೆಯವರ ಸಹಕಾರ. ಹೂಡಿಕೆಗಳಲ್ಲಿ ಲಾಭ.
- **ಮಿಥುನ:** ಆಧ್ಯಾತ್ಮಿಕ ಚಿಂತಕರಿಗೆ ಶುಭ. ದೂರದ ಪ್ರಯಾಣ. ಗೀತರಚನಕಾರರಿಗೆ ಲಾಭ. ವೃತ್ತಿಯಲ್ಲಿ ಮುಂಬಡ್ತಿ.
- **ಕರ್ಕ:** ಉನ್ನತ ವಿದ್ಯಾಭ್ಯಾಸಕ್ಕೆ ಶುಭ. ಸಾಹಿತ್ಯ ಕ್ಷೇತ್ರದವರಿಗೆ ಶುಭ. ಶತ್ರುಗಳಿಂದ ಮಾನಸಿಕ ಒತ್ತಡ ಬರುವ ಸಂಭವ.
- **ಸಿಂಹ:** ಪ್ರೀತಿಸಿದವರಿಂದ ಮೋಸ. ವಿನಾಕಾರಣ ಮಾನಸಿಕ ಒತ್ತಡ. ವೃತ್ತಿರಂಗದಲ್ಲಿ ಅಭಿವೃದ್ಧಿ. ಕಣ್ಣಿನ ಸಮಸ್ಯೆ.
- **ಕನ್ಯಾ:** ಪುಸ್ತಕ ವ್ಯಾಪಾರಿಗಳಿಗೆ ಲಾಭ. ದೇಹಾಲಸ್ಯ ಸ್ನೇಹಿತರ ಸಹಕಾರ. ಆನ್‌ಲೈನ್ ವ್ಯವಹಾರಗಳಲ್ಲಿ ನಷ್ಟ.
- **ತುಲಾ:** ಉನ್ನತ ಅಧ್ಯಯನ ಆಸಕ್ತರಿಗೆ ಶುಭ. ತಂದೆ ಮಕ್ಕಳ ಮಧ್ಯೆ ವೈಮನಸ್ಯ ಸಂಭವ. ಧರ್ಮಚಿಂತನೆ ಲಾಭಪ್ರದ.
- **ವೃಶ್ಚಿಕ:** ಕೃಷಿಕರಿಗೆ ಲಾಭ. ಹವ್ಯಾಸಿ ರಂಗ ಕಲಾವಿದರಿಗೆ ಶುಭ. ಚಾಲನೆಯಲ್ಲಿ ಎಚ್ಚರ. ಮಿತ್ರರ ಜತೆಗೆ ಪ್ರವಾಸ.
- **ಧನು:** ವೃತ್ತಿಯಲ್ಲಿ ಬದಲಾವಣೆ. ಉದ್ಯೋಗ ಆಕಾಂಕ್ಷಿಗಳಿಗೆ ಶುಭ. ಪುಣ್ಯಕ್ಷೇತ್ರ ದರ್ಶನ. ನೆಂಟರ ಸಹಾಯ ಸಹಕಾರ.
- **ಮಕರ:** ತಾಯಿಗೆ ಅನಾರೋಗ್ಯ ಸಂಭವ. ಪಿತ್ರಾರ್ಜಿತ ಆಸ್ತಿಗಳಿಂದ ಆದಾಯ. ರಸ್ತೆ ಗುತ್ತಿಗೆದಾರರಿಗೆ ಲಾಭ.
- **ಕುಂಭ:** ಮಧ್ಯವರ್ತಿಗಳಿಂದ ಧನ ನಷ್ಟ. ಫ್ಯಾಶನ್ ತಂತ್ರಜ್ಞರಿಗೆ ಲಾಭ. ಗುರುಗಳ ದರ್ಶನ. ಕೃಷಿಕರಿಗೆ ಸಣ್ಣ ಲಾಭ.
- **ಮೀನ:** ವೃತ್ತಿಯಲ್ಲಿ ಭಿನ್ನಾಭಿಪ್ರಾಯ. ಆರೋಗ್ಯದ ಬಗ್ಗೆ ಎಚ್ಚರ. ವಸ್ತ್ರವಿನ್ಯಾಸಕರಿಗೆ ಶುಭ. ದೂರಪ್ರಯಾಣದ ಸಾಧ್ಯತೆ.

Editor : Mahabaleshwar V.Bhat, Printed and Published by Ashok Shanbhag on behalf of Loka Shikshana Trust, Printed at Samyukta Karnataka PressC-23, Kapanoor Industrial Area, Kalaburagi and Published at H.No.1-1165-13, Gokul Nivas, Opp: Dr.Arati Sharma Hospital, Ivan-E-Shani, Station Area,Kalaburagi, Phone No. 08472-220848, e-mail:gulbsk2008@gmail.com RNI Regn.No.KARKAN/1999/2674 Executive Editor : Mohan Hegde

CMYK

ನಾಯಕತ್ವ ಗೊಂದಲ ಶೀಘ್ರ ನಿವಾರಣೆ: ಪರಂ

ರಾಜ್ಯ ರಾಜಕೀಯಕ್ಕೆ ಮಲ್ಲಿಕಾರ್ಜುನ ಖರ್ಗೆ । ಹೈಕಮಾಂಡ್ ತೀರ್ಮಾನಕ್ಕೆ ಬದ್ಧ

ಸಂ.ಕ. ಸಮಾಚಾರ ಬೆಂಗಳೂರು

ಪಂಚರಾಜ್ಯ ಚುನಾವಣೆ ಮುಗಿದಿದ್ದು, ರಾಜ್ಯದ ಕಾಂಗ್ರೆಸ್ ನಾಯಕತ್ವದ ಗೊಂದಲಗಳನ್ನ ಹೈಕಮಾಂಡ್ ಬಗೆಹರಿಸುವ ವಿಶ್ವಾಸ ಇದೆ ಎಂದು ಗೃಹ ಸಚಿವ ಪರಮೇಶ್ವರ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಗೊಂದಲಗಳು ಬಗೆಹರಿಯಲೇಬೇಕು. ನಮ್ಮ ಉದ್ದೇಶ ಆಡಳಿತದ ಮೇಲೆ ಪರಿಣಾಮ ಬೀರಬಾರದು. ಬಗೆಹರಿಸಲು ಆಗದೇ ಇರುವ ಗೊಂದಲ ಇದಲ್ಲ. ಚುನಾವಣೆಯಲ್ಲಿ ಹೈಕಮಾಂಡ್ ನಾಯಕರು ಚುನಾವಣಾ ಕಾರ್ಯದಲ್ಲಿ ಇದ್ದರು. ಈಗ ಚುನಾವಣೆ ಮುಗಿದಿದೆ. ಆದಷ್ಟು ಬೇಗ ಈ ಗೊಂದಲ ಒಂದು ಹಂತಕ್ಕೆ ಬರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಚಿವ ಸಂಪುಟ ಪುನರ್ ರಚನೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಇವೆಲ್ಲ ನಾವು ಹೇಳುವ ವಿಚಾರ ಅಲ್ಲ.

ಮುಖ್ಯಮಂತ್ರಿ, ಪಕ್ಷದ ಅಧ್ಯಕ್ಷರು, ಹೈಕಮಾಂಡ್ ಇವರೆಲ್ಲಾ ಕೂತುಕೊಂಡು ತೀರ್ಮಾನ ಮಾಡ್ತಾರೆ. ಕೆಲವು ಸಾರಿ ಸಮಯ ತೆಗೆದುಕೊಳ್ಳುತ್ತದೆ ಎಂದರು.ಮಲ್ಲಿಕಾರ್ಜುನ ಖರ್ಗೆ ಅವರಿಗೆ ರಾಜ್ಯ ರಾಜಕೀಯಕ್ಕೆ ಆಹ್ವಾನ ಕೊಟ್ಟ ವಿಚಾರವಾಗಿ ಮಾತನಾಡಿ, ನಾವು ನಮ್ಮ ಅಭಿಪ್ರಾಯ ಹೇಳಿದ್ದೇವೆ. ಅಂತಿಮವಾಗಿ ಹೈಕಮಾಂಡ್ ಅವರು ತೀರ್ಮಾನ ಮಾಡ್ತಾರೆ. ಹೈಕಮಾಂಡ್ ತೀರ್ಮಾನಕ್ಕೆ ನಾವು ಬದ್ಧ. ಹೈಕಮಾಂಡ್ ಏನೇ ತೀರ್ಮಾನ ಮಾಡಿದರೂ ನಾವೆಲ್ಲರೂ ಬದ್ಧವಾಗಿ ಇರುತ್ತೇವೆ. ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದು ಸ್ಪಷ್ಟಪಡಿಸಿದ್ದಾರೆ.

ರಾಜೇಗೌಡ ದೂರಿನನ್ವಯ ಕೇಸ್

ಶೃಂಗೇರಿ ಚುನಾವಣೆ ಮರು ಎಣಿಕೆಯಲ್ಲಿ ಮತಗಳನ್ನು ತಿದ್ದಿರುವ ವಿಚಾರದ ಬಗ್ಗೆ ರಾಜೇಗೌಡ ದೂರು ಕೊಟ್ಟಿದ್ದರು. ದೂರಿನನ್ವಯ ಎಫ್ಐಆರ್ ದಾಖಲು ಮಾಡಲಾಗಿದೆ. ಎಫ್ಐಆರ್‌ಗೆ ಕೋರ್ಟ್ ತಡೆ ನೀಡಿದೆ. ಎರಡು ದಿನ ಆದ ಮೇಲೆ ವಿಚಾರಣೆಗೆ ಬರುತ್ತದೆ. ಕೋರ್ಟ್ ತೀರ್ಮಾನ ಏನು ಅಂತ ನೋಡಿಕೊಂಡು ಮುಂದೆ ತೀರ್ಮಾನ ಮಾಡುತ್ತೇವೆ. ಚುನಾವಣೆ ಆಯೋಗದವರು ಘೋಷಣೆ ಮಾಡಿ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಅದರ ಬಗ್ಗೆ ರಾಜೇಗೌಡ ಕೋರ್ಟ್ ಹೋಗ್ತಾರಾ ನೋಡಬೇಕು ಎಂದಿದ್ದಾರೆ. ಜೀವರಾಜ್ ಮೇಲೆ ಕೊಟ್ಟಿರೋ ದೂರಿಗೆ ಕೇಸ್ ದಾಖಲು ಮಾಡಿ ತನಿಖೆ ಮಾಡ್ತಾ ಇದ್ದೇವೆ. ಅಧಿಕಾರಿಗಳು ದೂರು ಕೊಟ್ಟಿಲ್ಲ. ರಾಜೇಗೌಡ ಕೊಟ್ಟಿದ್ದಾರೆ. ಯಾರೇ ದೂರು ಕೊಟ್ಟರೂ ದೂರು ತೆಗೆದುಕೊಳ್ಳಲಾಗುವುದು. ಅದಕ್ಕೆ ಅವಕಾಶ ಇದೆ. ಕ್ರಿಮಿನಲ್ ಪಿತೂರಿ ಎಂದು ಸಿಎಂ ಹೇಳಿದ್ದಾರೆ. ಅದು ಬೇರೆ. ಇದು ಖಾಸಗಿಯಾಗಿ ಕೊಟ್ಟಿರುವ ದೂರು. ಯಾವುದೇ ಕಂಪ್ಲೆಂಟ್ ಬಂದರೆ ಅದನ್ನು ಸ್ವೀಕಾರ ಮಾಡಬೇಕು. ಚುನಾವಣೆ ಆಯೋಗದ ಅಧಿಕಾರಿಗಳು ಲೋಪ ಮಾಡಿದ್ದರೆ ಆ ಕೇಸ್ ಬೇರೆ ಆಗುತ್ತದೆ ಎಂದು ಹೇಳಿದ್ದಾರೆ.

ಸಿಎಂ ಹುದ್ದೆ ಚರ್ಚೆ ಅಪ್ರಸ್ತುತ–ಪ್ರಿಯಾಂಕ್

ಬೆಂಗಳೂರು: ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ ಎಂದು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಯಾವುದೇ ಬದಲಾವಣೆ ಕುರಿತ ಚರ್ಚೆ ಅಪ್ರಸ್ತುತವಾಗಿದೆ ಎಂದು ಪ್ರಿಯಾಂಕ್ ಗಾಂಧಿ ತಿಳಿಸಿದರು.

ಜೂನ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆ ಸಾಧ್ಯತೆ ಇದೆ ಎಂಬ ಊಹಾಪೋಹಗಳ ನಡುವೆ ಅವರ ಈ ಹೇಳಿಕೆ ಮಹತ್ವ ಪಡೆದಿದೆ. ಕರ್ನಾಟಕ ಕಾಂಗ್ರೆಸ್ ವಲಯದಲ್ಲಿ ನಾಯಕತ್ವ ಹಾಗೂ ಸರ್ಕಾರದಲ್ಲಿ ಸಂಭವನೀಯ ಬದಲಾವಣೆಗಳ ಬಗ್ಗೆ ನಡೆಯುತ್ತಿರುವ ರಾಜಕೀಯ ಚರ್ಚೆಗಳ ನಡುವೆಯೇ ಈ ಪ್ರತಿಕ್ರಿಯೆ ಬಂದಿದೆ. ಪ್ರಸ್ತುತ ನಾಯಕತ್ವ ವ್ಯವಸ್ಥೆಯ ಕುರಿತು ಹೈಕಮಾಂಡ್‌ನ ನಿಲುವನ್ನು ಪ್ರಿಯಾಂಕ್ ಖರ್ಗೆ ಅವರ ಹೇಳಿಕೆ ಮತ್ತೊಮ್ಮೆ ಬಲಪಡಿಸಿದೆ. ಎಐಸಿಸಿ ಅಧ್ಯಕ್ಷರೂ ಆಗಿರುವ ತಮ್ಮ ತಂದೆಯೇ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ ಎಂದು ಹೇಳಿರುವುದರಿಂದ ಈ ವಿಷಯವಾಗಿ ಹೆಚ್ಚು ಚರ್ಚೆ ಬೇಡ ಎಂದು ಹೇಳಿದ್ದಾರೆ.

ದೇಶದಲ್ಲಿ ಸಿಎಂ ಸಿದ್ದು ಹಿರಿಯ ಮುಖ್ಯಮಂತ್ರಿ

ಬೆಂಗಳೂರು: ದೇಶದಲ್ಲಿ ಈಗ ಹಿರಿಯ ಮುಖ್ಯಮಂತ್ರಿ ಎಂದರೆ ಸಿದ್ದರಾಮಯ್ಯ ಅವರಾಗಿದ್ದಾರೆ. ಇಷ್ಟು ದಿನ ಕೇರಳದ ಮುಖ್ಯಮಂತ್ರಿಯಾಗಿದ್ದ 82 ವರ್ಷದ ಪಿಣರಾಯಿ ವಿಜಯನ್ ಆ ಸ್ಥಾನ ತುಂಬಿದ್ದರು. ಈಗ 77 ವರ್ಷ ವಯಸ್ಸಿನ ಸಿದ್ದರಾಮಯ್ಯ ಹಿರಿಯ ಸಿಎಂ ಎಂಬ ಖ್ಯಾತಿಗೆ ಒಳಗಾಗಿದ್ದಾರೆ.

ಈ ಮೊದಲು 82 ವರ್ಷದ ಪಿಣರಾಯಿ ವಿಜಯನ್ ದೇಶದ ಅತ್ಯಂತ ಹಿರಿಯ ಮುಖ್ಯಮಂತ್ರಿ ಎನಿಸಿದ್ದರು. ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಅವರ ಪಕ್ಷ ಸೋಲನುಭವಿಸಿದೆ. ಇದರಿಂದ ಪಿಣರಾಯಿ ವಿಜಯನ್ ರಾಜೀನಾಮೆ ನೀಡಿದ್ದು, ಎರಡನೇ ಸ್ಥಾನದಲ್ಲಿ 77 ವರ್ಷದ ಸಿದ್ದರಾಮಯ್ಯ ಅವರು ಹಿರಿಯ ಸಿಎಂ ಆಗಿ ಅಗ್ರಸ್ಥಾನಕ್ಕೇರಿದ್ದಾರೆ. ಇತ್ತೀಚೆಗಷ್ಟೇ ಕರ್ನಾಟಕದಲ್ಲಿ ಸುದೀರ್ಘಾವಧಿ ಮುಖ್ಯಮಂತ್ರಿ ಎಂಬ ಪಟ್ಟವನ್ನು ಸಿದ್ದರಾಮಯ್ಯ ಅವರು ಪಡೆದಿದ್ದರು. ಈಗ ಹಿರಿಯ ಮುಖ್ಯಮಂತ್ರಿಗಳ ಸ್ಥಾನದಲ್ಲಿ ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು (75), ಮಿಜೋರಂನ ಲಾಲ್ ದುಹೋಮಾ (74), ನಾಗಾಲ್ಯಾಂಡ್‌ನ ನೆಪ್ಪು ರಿಯೋ (74), ಪುದುಚೇರಿಯ ರಂಗಸ್ವಾಮಿ (74) ಇದ್ದಾರೆ. ಅರುಣಾಚಲ ಪ್ರದೇಶದ ಪೇಮಾ ಖಂಡು (46) ಅವರು ದೇಶದ ಅತಿ ಕಿರಿಯ ಸಿಎಂ ಆಗಿದ್ದಾರೆ.

ಕಾಂಗ್ರೆಸ್ ನಾಯಕರು ಈಗಲೇ ಎಚ್ಚೆತ್ತುಕೊಳ್ಳಬೇಕು– ಜಬ್ಬಾರ್

ಸಂ.ಕ. ಸಮಾಚಾರ ಬೆಂಗಳೂರು

ದಾವಣಗೆರೆ ಕ್ಷೇತ್ರದ ವಿಷಯವಾಗಿ ಕಾಂಗ್ರೆಸ್ ಮುಖಂಡರು ಈಗಲೇ ಎಚ್ಚೆತ್ತುಕೊಳ್ಳದೇ ಇದ್ದಲ್ಲಿ ಮುಂದೆ ರಾಜಕೀಯವಾಗಿ ಅನಾಹುತಗಳಾಗಲಿವೆ ಎಂದು ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ದಾವಣಗೆರೆ ಕ್ಷೇತ್ರದ ಉಪ ಚುನಾವಣೆಗೆ ಸಂಬಂಧಿಸಿದಂತೆ ಹಲವು ಗೊಂದಲಗಳ ನಡುವೆ ಕಾಂಗ್ರೆಸ್ ಅಭ್ಯರ್ಥಿ ಗೆದ್ದಿದ್ದರೂ ಮತಗಳ ಗಳಿಕೆ ಗಮನಿಸಿದರೆ ಕಡಿಮೆ ಆಗಿದೆ. ಅಲ್ಲಿ ಕಾಂಗ್ರೆಸ್ ಮತಗಳಲ್ಲಿ ಶೇ. 100ರಷ್ಟು ಮುಸ್ಲಿಂ ಮತಗಳನ್ನು ಎಸ್‌ಡಿಪಿಐ ಅಭ್ಯರ್ಥಿ ಗಳಿಸಿದ್ದಾರೆ. ಇದರಿಂದ ಕಾಂಗ್ರೆಸ್ ಮುಖಂಡರು ಈಗಲೇ ಎಚ್ಚೆತ್ತುಕೊಂಡು ಎಲ್ಲವನ್ನೂ ಸರಿ ಮಾಡಬೇಕು ಎಂದರು.

ನಾವು ಶಾಮನೂರು ಶಿವಶಂಕರಪ್ಪ ಇದ್ದಾಗಲೇ ಮುಸ್ಲಿಂ ಮುಖಂಡರಿಗೆ ಟಿಕೆಟ್ ಕೇಳಿದ್ದೆವು. ಆಗ ಹಿರಿಯರಾದ ಶಾಮನೂರು ಶಿವಶಂಕರಪ್ಪ ಅವರಿಗೆ ನೀಡಲಾಗಿತ್ತು. ಅವರ ನಂತರ ನಮಗೆ ನೀಡಬೇಕು ಎಂದು ಕೋರಿದ್ದೆವು. ಉಪ ಚುನಾವಣೆ ಸಂದರ್ಭದಲ್ಲಿ ಸಮುದಾಯದವರಿಗೆ ಟಿಕೆಟ್ ಸಿಗಲಿದೆ ಎಂದು ಭಾವಿಸಿದ್ದೆವು. ಆದರೆ, ತಮ್ಮನ್ನೇ ಪಕ್ಷದಿಂದ ಅಮಾನತು ಮಾಡಿದ್ದಾರೆ.

ಇಂತಹ ವಿಷಯದಲ್ಲಿ ಮುಖಂಡರು ಸರಿ ಮಾಡಬೇಕು. ಅದಕ್ಕೆ ಅವಕಾಶವೂ ಇದೆ. ಇಲ್ಲವಾದಲ್ಲಿ ಮುಂದೆ ಪಕ್ಷಕ್ಕೆ ಸಮಸ್ಯೆಯಾಗಿ ಅನಾಹುತಗಳಾಗುವುದು ಖಂಡಿತ ಎಂದು ಎಚ್ಚರಿಕೆ ನೀಡಿದರು.ಚುನಾವಣೆ ಫಲಿತಾಂಶ ಬರುವ ಮುಂಚೆಯೇ ಕಾಂಗ್ರೆಸ್ ಗೆಲ್ಲುತ್ತದೆ ಎಂದು ಹೇಳಿದ್ದೆ. ಮುಖ್ಯಮಂತ್ರಿಗಳ ಐದು ಗ್ಯಾರಂಟಿ ಯೋಜನೆಗಳು ಮತ್ತು ಸಚಿವ ಜಮೀರ್ ಅಹ್ಮದ್ ಅವರ ಭೇಟಿ ಕೂಡ ಕಾಂಗ್ರೆಸ್ ಗೆಲ್ಲುವುದಕ್ಕೆ ಪ್ರಮುಖ ಕಾರಣ.

ಒಂದು ವೇಳೆ ಕ್ಷೇತ್ರದಲ್ಲಿ ಇಂತಹವರಿಗೆ ಮತ ಹಾಕಬಾರದು ಎಂದು ನಿರ್ಧಾರ ತೆಗೆದುಕೊಂಡರೆ ಮುಗಿಯಿತು. ಏನೇ ಮಾಡಿದರೂ ಅಂತಹವರಿಗೆ ಮತ ಹಾಕುವುದಿಲ್ಲ. ಇಂತಹ ಸಂದರ್ಭದಲ್ಲಿ ಸಮುದಾಯದವರ ಮನವೊಲಿಸುವ ಕಾರ್ಯವಾಗಿದೆ. ಏಕೆಂದರೆ, ಪ್ರಚಾರಕ್ಕೆ ಜಮೀರ್ ಅಹ್ಮದ್ ಬಂದಿಲ್ಲ ಎಂದಿದ್ದರು. ಅವರು ಬಂದು ಹೋದಮೇಲೆ ಅಸಮಾಧಾನ ಹೋಗಿತ್ತು ಎಂದರು.

ಮುಖಂಡರ ಸಸ್ಪೆಂಡ್ ವಾಪಸ್: ಪಕ್ಷ ತೀರ್ಮಾನಿಸಲಿದೆ– ಡಿಕೆಶಿ

ಸಂ.ಕ. ಸಮಾಚಾರ ಬೆಂಗಳೂರು

ದಾವಣಗೆರೆಯಲ್ಲಿ ಮುಸ್ಲಿಂ ನಾಯಕರ ಅಮಾನತನ್ನು ವಾಪಸ್ ಪಡೆಯುವ ಸಾಧ್ಯತೆ ಕುರಿತು ಪಕ್ಷ ತೀರ್ಮಾನ ಮಾಡಲಿದೆ ಎಂದು ಉಪ ಮುಖ್ಯಮಂತ್ರಿ

ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಸುದ್ದಿಗಾರರ ಜೊತೆ ಮಾತನಾಡಿದ ಅವರು, ಅಮಾನತು ವಾಪಸ್ ವಿಷಯವಾಗಿ ನಾನು ಏನೂ ಮಾತನಾಡುವುದಿಲ್ಲ. ಅಮಾನತಿನ ಬಗ್ಗೆ ಪಕ್ಷ ಈ ತೀರ್ಮಾನ ಮಾಡಿದೆ. ಸಿಎಂ ರಾಜಕೀಯ ಕಾರ್ಯದರ್ಶಿಯವರನ್ನು ಕೈಬಿಡಬೇಕಾದರೆ, ಆ ಬಗ್ಗೆ ಮುಖ್ಯಮಂತ್ರಿಯವರು ಮಾತನಾಡಿದ್ದರು. ಮುಖ್ಯಮಂತ್ರಿಗಳಿಗೆ ತಮ್ಮದೇ ಆದ ಮಾಹಿತಿ ಇರುತ್ತದೆ. ಪಕ್ಷದ ಪದಾಧಿಕಾರಿಗಳು ಮಾರ್ಗದರ್ಶನ ಮಾಡಿದ್ದಾರೆ. ಪಕ್ಷ ಅವರಿಗೆ ಕೆಲವು ಜವಾಬ್ದಾರಿಗಳನ್ನು ನೀಡಿತ್ತು. ಅದನ್ನು ಅವರು ಸರಿಯಾಗಿ ನಿಭಾಯಿಸಲಿಲ್ಲ ಅದಕ್ಕೆ ಅವರನ್ನು ಆ ಸ್ಥಾನದಿಂದ ಇಳಿಸಲಾಯಿತು. ಜಬ್ಬಾರ್ ಅವರು ತಾವಾಗಿಯೇ ರಾಜೀನಾಮೆ ನೀಡಿದ್ದರು. ಅದನ್ನು ಸ್ವೀಕಾರ ಮಾಡಿದ್ದೇವೆ ಅಷ್ಟೇ ಎಂದರು.

ಎಂಜಿನಿಯರಿಂಗ್: ಕೌನ್ಸೆಲಿಂಗ್ ಮೊದಲೇ ಖಾಲಿ ಸೀಟುಗಳ ವಿವರ ನೀಡಲು ಸೂಚನೆ

ಸಂ.ಕ.ಸಮಾಚಾರ, ಬೆಂಗಳೂರು

ಸೀಟ್‌ಮ್ಯಾಟ್ರಿಕ್ ಸಂಬಂಧ ಕಳೆದ ವರ್ಷ ತೀವ್ರ ಗೊಂದಲ ಉಂಟಾಗಿದ್ದ ಹಿನ್ನೆಲೆಯಲ್ಲಿ ಈ ಬಾರಿ ಎಚ್ಚೆತ್ತುಕೊಂಡಿರುವ ಉನ್ನತ ಶಿಕ್ಷಣ ಇಲಾಖೆ ಕೌನ್ಸೆಲಿಂಗ್ ಆರಂಭಕ್ಕೂ ಮುನ್ನ ತಮ್ಮ ಕಾಲೇಜಿನಲ್ಲಿ ಭರ್ತಿಯಾಗದ ಸೀಟುಗಳ ವಿವರ ನೀಡಬೇಕು ಎಂದು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದೆ.

ಕಳೆದ ಬಾರಿ ನಿಗದಿತ ಅವಧಿಯೊಳಗೆ ಖಾಲಿ ಉಳಿದಿರುವ ಸೀಟುಗಳ ವಿವರ ನೀಡಿರಲಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು ತೀವ್ರ ಗೊಂದಲದಲ್ಲಿ ಬಿದ್ದಿದ್ದರು. ಪರೀಕ್ಷಾ ಪ್ರಾಧಿಕಾರವೂ ಸಹ ಅನೇಕ ಬಾರಿ ಸೀಟುಗಳ ವಿವರಣೆ ನೀಡುವಂತೆ ಕೇಳಿದ್ದರೂ ಕಾಲೇಜುಗಳವರು ಆ ಬಗ್ಗೆ ಲಕ್ಷ್ಯ ಕೊಟ್ಟಿರಲಿಲ್ಲ. ಈ ಬಾರಿಯೂ ಗೊಂದಲ ಪುನರಾವರ್ತಿ ಆಗಬಾರದು, ಬೇಗ ಸೀಟುಗಳ ವಿವರ ನೀಡಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದು ಕಾಲೇಜುಗಳಿಗೆ ಸೂಚನೆ ನೀಡಿದೆ.

ಕಳೆದ ವರ್ಷ ಒಟ್ಟು 15, 353 ಸೀಟುಗಳು ಖಾಲಿ ಇದ್ದವು. ಅವುಗಳ ಪೈಕಿ ಕಾಲೇಜುಗಳು ಕೇವಲ 6669 ಸೀಟುಗಳನ್ನು ಮಾತ್ರ ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದವು. ಮೊದಲೇ ಸೀಟುಗಳ ವಿವರ ನೀಡಿದರೆ ವಿದ್ಯಾರ್ಥಿಗಳು ತಮ್ಮ ಕೋರ್ಸು ಮತ್ತು ಕಾಲೇಜುಗಳನ್ನು ಆಯ್ಕೆ ಮಾಡಲು ಅನುಕೂಲವಾಗುತ್ತದೆ.

ಕಳೆದ ಬಾರಿ ಇಂಥದ್ದೇ ಗೊಂದಲ ಉಂಟಾಗಿ ಕಾಲೇಜುಗಳು ಆರಂಭವಾಗಿ ತಿಂಗಳು ಕಳೆದಿದ್ದರೂ ಸೀಟುಗಳ ಹಂಚಿಕೆ ಇನ್ನೂ ಪೂರ್ಣ ಮುಗಿದಿರಲಿಲ್ಲ. ಈ ಬಾರಿಯೂ ಅದೇ ರೀತಿ ಮುಂದುವರೆದರೆ ವಿದ್ಯಾರ್ಥಿಗಳು ತೀರ ಕಷ್ಟ ಅನುಭವಿಸಬೇಕಾಗುತ್ತದೆ.

ಕಳೆದ ಬಾರಿ ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಕೋರ್ಸುಗಳಿಗೆ ಸೇರಲು ವಿದ್ಯಾರ್ಥಿಗಳು ಆಸಕ್ತಿ ತೋರಿರಲಿಲ್ಲ. ಖಾಸಗಿ ಕಾಲೇಜುಗಳಲ್ಲಿ ಹೇಗಾದರೂ ಈ ಸೀಟು ಭರ್ತಿ ಮಾಡಿಕೊಳ್ಳಬೇಕು ಎಂದು ಸರ್ಕಾರಕ್ಕೆ ಉಳಿದ ಸೀಟುಗಳ ವಿವರ ನೀಡಿರಲಿಲ್ಲ.

ಈ ಬಾರಿ ಯಾವುದೇ ಪರಿಸ್ಥಿತಿಯಲ್ಲಿ ಕೌನ್ಸೆಲಿಂಗ್ ಮೊದಲೇ ಸೀಟುಗಳ ವಿವರ ನೀಡಬೇಕು ಎಂದು ಇಲಾಖೆ ಹೇಳಿದೆ. ಈ ಗೊಂದಲಗಳಿಗೆ ತೆರೆ ಹಾಡಲು ಪ್ರೊ. ಎಸ್. ಸದಗೋಪನ್ ಸಮಿತಿಯ ಶಿಫಾರಸಿನಂತೆ, ಹೊಸ ಕಾಲೇಜುಗಳಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಸಂಬಂಧಿತ ಕೋರ್ಸ್‌ಗಳ ಸೀಟುಗಳ ಸಂಖ್ಯೆಯನ್ನು ಮಿತಿಗೊಳಿಸಲು ಸರ್ಕಾರ ಆದೇಶ ಹೊರಡಿಸಬಹುದು ಎಂದು ಹೇಳಲಾಗುತ್ತಿದೆ.

ಐದು ವರ್ಷಗಳಲ್ಲಿ 25 ಕಾಲೇಜುಗಳು ಆರಂಭ
2022–23 –4 ಕಾಲೇಜುಗಳು
2023–24 –3 ಕಾಲೇಜುಗಳು
2024–25 –3 ಕಾಲೇಜುಗಳು
2025–26 –5 ಕಾಲೇಜುಗಳು

ಹೊಸ ಕಾಲೇಜಿಗೆ ಅರ್ಜಿ

ರಾಜ್ಯದಲ್ಲಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಗಣನೀಯ ಪ್ರಮಾಣದಲ್ಲಿ ಸೀಟುಗಳು ಖಾಲಿ ಉಳಿದಿರುವ ಪರಿಸ್ಥಿತಿ ಮುಂದುವರಿದಿದೆ. ಕಾಲೇಜುಗಳು ಸೀಟುಗಳನ್ನು ತುಂಬಿಸಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲೇ ಹೊಸ ಎಂಜಿನಿಯರಿಂಗ್ ಕಾಲೇಜುಗಳಿಗೆ ಅರ್ಜಿಗಳು ಹೆಚ್ಚುತ್ತಿರುವುದು ಆಶ್ಚರ್ಯಕಾರಿಯಾಗಿದೆ.

ಈ ವರ್ಷ ರಾಜ್ಯ ಸರ್ಕಾರಕ್ಕೆ ಒಟ್ಟು 10 ಹೊಸ ಎಂಜಿನಿಯರಿಂಗ್ ಕಾಲೇಜು ಆರಂಭಿಸಲು ಅರ್ಜಿಗಳು ಬಂದಿವೆ. ಇದರಲ್ಲಿ ಆರು ಅರ್ಜಿಗಳು ಬೆಂಗಳೂರಿನಿಂದ ಬಂದಿದ್ದು, ಬೆಳಗಾವಿ, ವಿಜಯಪುರ, ದೊಡ್ಡಬಳ್ಳಾಪುರ ಮತ್ತು ಹುಬ್ಬಳ್ಳಿ ನಗರಗಳಿಂದ ತಲಾ ಒಂದು ಅರ್ಜಿ ಸಲ್ಲಿಕೆಯಾಗಿದೆ. ಕಳೆದ ಐದು ವರ್ಷಗಳಲ್ಲಿ ಬಂದ ಅತ್ಯಧಿಕ ಅರ್ಜಿಗಳ ಸಂಖ್ಯೆ ಇದಾಗಿದೆ.

> **ಹಿಂದಿನ ವರ್ಷಗಳ ಪ್ರವೃತ್ತಿಯನ್ನು ಗಮನದಲ್ಲಿಟ್ಟುಕೊಂಡು, ಕೌನ್ಸೆಲಿಂಗ್ ಆರಂಭವಾಗುವ ಮೊದಲೇ ಸೀಟುಗಳನ್ನು ಬಿಟ್ಟುಕೊಡುವಂತೆ ನಾವು ಖಾಸಗಿ ಕಾಲೇಜುಗಳಿಗೆ ಕೇಳಿದ್ದೇವೆ. ಇದು ವಿದ್ಯಾರ್ಥಿಗಳಿಗೆ ಸರಿಯಾದ ಆಯ್ಕೆ ಮಾಡಲು ಅನುವು ಮಾಡಿಕೊಡುತ್ತದೆ.**
>
> ▪ಎಂ.ಸಿ. ಸುಧಾಕರ್ । ಉನ್ನತ ಶಿಕ್ಷಣ ಸಚಿವ

ಶಾಸಕರಾಗಿ ಜೀವರಾಜ್ ಪ್ರಮಾಣವಚನ

ಸಂ.ಕ. ಸಮಾಚಾರ ಬೆಂಗಳೂರು

ಅಂಚೆ ಮತಗಳ ಮರು ಎಣಿಕೆಯಿಂದಾಗಿ ಆಯ್ಕೆಯಾದ ಶೃಂಗೇರಿ ಶಾಸಕ ಡಿ.ಎನ್. ಜೀವರಾಜ್ ಅವರಿಗೆ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಪ್ರಮಾಣ ವಚನ ಬೋಧಿಸಿದ್ದಾರೆ. ಮೂರು ವರ್ಷಗಳ ನಂತರ ಶಾಸಕರಾಗಿ ಜೀವರಾಜ್ ಪ್ರಮಾಣ ವಚನ ಸ್ವೀಕರಿಸಿದರು.

ಬುಧವಾರ ಮಧ್ಯಾಹ್ನ ವಿಧಾನಸೌಧದ ಸ್ಪೀಕರ್ ಕೊಠಡಿಯಲ್ಲಿ ನೂತನ ಶಾಸಕ ಜೀವರಾಜ್ ಅವರಿಗೆ ಪ್ರಮಾಣ ಬೋಧಿಸಿ ಶಾಸಕರ ಕಿಟ್ ಅನ್ನು ನೀಡಿದರು. ಈ ವೇಳೆ ಪ್ರತಿಪಕ್ಷದ ನಾಯಕ ಆರ್. ಅಶೋಕ್, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಮುನಿರಾಜು ಮತ್ತಿತರರಿದ್ದು ಶುಭ ಕೋರಿದರು.

ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರುಎಣಿಕೆ ಬಳಿಕ ಉಂಟಾದ ರಾಜಕೀಯ ಗದ್ದಲದಿಂದ, ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಅವರು ಪ್ರಮಾಣ ವಚನ ಬೋಧನೆ ಮಾಡಲು ಮುಂದಾಗಿಲ್ಲ ಎಂದು ಅವರ ವಿರುದ್ಧ ಬಿಜೆಪಿ ವಿಳಂಬ ಆರೋಪ ಮಾಡಿತ್ತು. ಇತ್ತ ಕಾಂಗ್ರೆಸ್ ನಾಯಕರೂ ಸಹ ಬಿಜೆಪಿ ಅಕ್ರಮದಿಂದ ಗೆದ್ದಿದೆ ಎಂಬಿತ್ಯಾದಿ ಆರೋಪಗಳನ್ನು ಮಾಡಿದ್ದರು. ಕೊನೆಗೆ ಮಂಗಳವಾರ ಬಿಜೆಪಿ ಮುಖಂಡರು, ಬಿಜೆಪಿ ಪ್ರತಿನಿಧಿ ಮಂಡಳಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿ, ಸ್ಪೀಕರ್ ಲಭ್ಯವಿಲ್ಲದಿದ್ದರೆ ತಾವೇ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ಅವರಿಗೆ ಪ್ರಮಾಣವಚನ ಬೋಧಿಸಬೇಕು ಎಂದು ಮನವಿ ಮಾಡಿದ್ದರು. ಬಿಜೆಪಿ ರಾಜ್ಯಪಾಲರಿಗೆ ದೂರು ನೀಡಿದ ಒಂದು ದಿನದ ಒಳಗೇ ಯು.ಟಿ. ಖಾದರ್ ಅವರು ಪ್ರಮಾಣ ವಚನಕ್ಕೆ ಸಮಯ ನಿಗದಿ ಮಾಡಿ ಎಲ್ಲ ಗೊಂದಲಗಳಿಗೆ ತೆರೆ ಎಳೆದಿದ್ದಾರೆ.

ದಕ್ಷಿಣದ ಕೇಸರಿ ಪಥದ ಸಾರಥಿ ಬಿಎಸ್‌ವೈ

ರಾಮಶಿಲಾ ಪೂಜೆಯಿಂದ ರಾಮಮಂದಿರದವರೆಗೆ ಐದು ದಶಕಗಳ ಹಿಂದುತ್ವ ಪಯಣ

ಯಶ್ ಪಾಲ್ ಸುವರ್ಣ

ಶಾಸಕರು

ರಾಜ್ಯ ರಾಜಕಾರಣದ ಇತಿಹಾಸದಲ್ಲಿ ಬಿ.ಎಸ್. ಯಡಿಯೂರಪ್ಪ ಎಂಬ ಹೆಸರು ಕೇವಲ ಅಧಿಕಾರದ ಸಂಕೇತವಲ್ಲ ದಕ್ಷಿಣ ಭಾರತದ ಮಣ್ಣಿನಲ್ಲಿ ಹಿಂದುತ್ವದ ಸೈದ್ಧಾಂತಿಕ–ರಾಜಕೀಯ ಆಂದೋಲನವನ್ನು ಕರುನಾಡಿನ ಜನಮಾನಸದ ಶಿಖರಕ್ಕೆ ಕೊಂಡೊಯ್ದ ಸಾಹಸಗಾಥೆ. ಕಳೆದ ಐದು ದಶಕಗಳ ಸುದೀರ್ಘ ರಾಜಕೀಯ ಪಯಣದಲ್ಲಿ ಸಂಘರ್ಷ ಪೂರ್ಣ ಬದುಕಿನಲ್ಲಿ ಸವಾಲುಗಳನ್ನು ಮೆಟ್ಟಿ ಅವುಗಳನ್ನೇ ತಮ್ಮ ಯಶಸ್ಸಿನ ಮೆಟ್ಟಿಲನ್ನಾಗಿಸಿ ಬಿಜೆಪಿಗೆ ದಕ್ಷಿಣ ಭಾರತದ ಹೆಬ್ಬಾಗಿಲನ್ನು ತೆರೆದ ರೋಚಕ ಇತಿಹಾಸದ ದಿಗ್ದರ್ಶನ. ಶಿಕಾರಿಪುರದ ಆರ್‌ಎಸ್‌ಎಸ್ ಸ್ವಯಂಸೇವಕನಿಂದ ದಕ್ಷಿಣದ ಕೇಸರಿ ಪಥದ ಅಪ್ರತಿಮ ಸಾರಥಿಯಾಗಿ ಬೆಳೆದ ಈ ನಾಯಕನ ಜೀವನ, ಮುಂದಿನ ತಲೆಮಾರಿನ ಪ್ರತಿಯೊಬ್ಬ ಹಿಂದೂ ಕಾರ್ಯಕರ್ತನಿಗೆ ಸ್ಫೂರ್ತಿಯ ಕಥೆ.

ರಾಮಶಿಲಾ ಪೂಜೆ

1989ರ ರಾಮಶಿಲಾ ಪೂಜೆ ಅಭಿಯಾನದ ಸಂದರ್ಭದಲ್ಲಿ ಬಿ. ಎಸ್. ಯಡಿಯೂರಪ್ಪ ಅವರು ನೈಸರ್ಗಿಕ ವಿಕೋಪ ಹಾಗೂ ಭೌಗೋಳಿಕ ಸವಾಲುಗಳನ್ನು ಎದುರಿಸುತ್ತಲೇ ಪ್ರಯಾಸ ಪಟ್ಟರು. ಅಂದಿನ ಕಾಲದಲ್ಲಿ ಸಂಘಟನೆ ಆರ್ಥಿಕವಾಗಿ ಸದೃಢವಾಗಿರದ ಕಾರಣಕ್ಕೆ ಪ್ರವಾಸಕ್ಕೆ ಒಂದು ಸೈಕಲ್ ಅಥವಾ ಎರವಲು ಪಡೆದ ವಾಹನಗಳನ್ನು ಬಳಸಬೇಕಾದ ಅನಿವಾರ್ಯತೆ ಇತ್ತು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ರಾಮ ಶಿಲಾ ಯಾತ್ರೆ ಕನ್ನಡಿಗರ ಮನೆ ಮನ ಮುಟ್ಟುವಲ್ಲಿ ಸಂಘಟನೆಯು ಇವರಿಗೆ ಕೊಟ್ಟ ಜವಾಬ್ದಾರಿಯನ್ನು ಶ್ರದ್ಧೆಯಿಂದ ಪೂರೈಸಿದರು. 1990ರ ಸೆಪ್ಟೆಂಬರ್ 25ರಂದು ಎಲ್. ಕೆ. ಅಡ್ವಾಣಿ ಅವರ ರಾಮರಥ ಯಾತ್ರೆ ಸೋಮನಾಥದಿಂದ ಆರಂಭವಾದಾಗ, ಯಡಿಯೂರಪ್ಪ ಕರ್ನಾಟಕದ ಕಾರ್ಯಕರ್ತರನ್ನು ಸಂಘಟಿಸಿ ಅಯೋಧ್ಯೆಗೆ ತೆರಳುವಂತೆ ಮಾಡಿದರು. 1992ರ ಡಿಸೆಂಬರ್ 6ರಂದು ಸುಮಾರು 1,50,000 ಕರಸೇವಕರ ಉಪಸ್ಥಿತಿಯಲ್ಲಿ ವಿವಾದಿತ ಕಟ್ಟಡ ಧ್ವಂಸವಾಯಿತು. ಆ ನಂತರ ಕರ್ನಾಟಕದಲ್ಲಿ ನಡೆದ ಕೋಮು ಗಲಭೆಗಳಲ್ಲಿ 78 ಜನ ಮೃತಪಟ್ಟರು. ಈ ಅಶಾಂತಿಯ ಸಂದರ್ಭದಲ್ಲೂ ಯಡಿಯೂರಪ್ಪ ಹಿಂದೂ ಸಮಾಜದ ಸಂಘಟನೆಗೆ ಪರಿವಾರ ಸಂಘಟನೆಯ ಜೊತೆಗೆ ಪ್ರಬಲವಾಗಿ ನಿಂತರು. ಈ ಹೋರಾಟ ರಾಜ್ಯದಲ್ಲಿ ಬಿಜೆಪಿಯ ಪ್ರಭಾವ ಮತ್ತು ಪರಿಚಯ ಗಣನೀಯವಾಗಿ ಹೆಚ್ಚು ಮಾಡಿತು.

ರಾಷ್ಟ್ರಭಕ್ತಿಯ ಅಗ್ನಿಪರ್ವ

1992ರ ಗಣರಾಜ್ಯೋತ್ಸವದಂದು ಅನಂತ್ ಕುಮಾರ್ ಹೆಗ್ಡೆ ನೇತೃತ್ವದ 50 ಸದಸ್ಯರ ಆಹುತಿ ತಂಡ ಹುಬ್ಬಳ್ಳಿ ಈದ್ಗಾ ಮೈದಾನದ ಗೋಡೆ ದಾಟಿ ತ್ರಿವರ್ಣ ಧ್ವಜ ಹಾರಿಸಿ ರಾಷ್ಟ್ರಗೀತೆ ಹಾಡಿದ ಮೊದಲ ಹೋರಾಟ ನಡೆಯಿತು. ಈ ಹೋರಾಟವನ್ನು ರಾಜ್ಯವ್ಯಾಪಿ ಜನಾಂದೋಲನವಾಗಿ ಪರಿವರ್ತಿಸಿ ನೈತಿಕ ಬಲ ತುಂಬಿದವರು ಯಡಿಯೂರಪ್ಪನವರು. 1994ರ ಆಗಸ್ಟ್ 15ರಂದು ಕರ್ಫ್ಯೂ, ನಿಷೇಧಾಜ್ಞೆ ನಡುವೆಯೂ ಅನಂತ ಕುಮಾರ್, ಪ್ರಹ್ಲಾದ ಜೋಶಿ, ಜಗದೀಶ್ ಶೆಟ್ಟರ್ ಜೊತೆ ಸಾವಿರಾರು ಕಾರ್ಯಕರ್ತರು ಹೋರಾಟಕ್ಕೆ ನಿಂತರು.

ದತ್ತಪೀಠ ಮತ್ತು ಗೋಸಂರಕ್ಷಣೆ: ಸಂಕಲ್ಪ ಮತ್ತು ಕಾನೂನು

ಚಿಕ್ಕಮಗಳೂರು ಜಿಲ್ಲೆಯ ಚಂದ್ರ ದ್ರೋಣ ಪರ್ವತದ ದತ್ತಪೀಠ ಹೋರಾಟವನ್ನು ಸ್ಥಳೀಯ ವಿಚಾರದಿಂದ ರಾಜ್ಯದ ಹಿಂದೂ ಅಸ್ಮಿತೆಯ ಮಹಾಭಿಯಾನವಾಗಿ ರೂಪಿಸಿದ ಕೀರ್ತಿ ಯಡಿಯೂರಪ್ಪನವರಿಗೆ ಸಲ್ಲುತ್ತದೆ. ಪ್ರತಿ ವರ್ಷ ದತ್ತ ಜಯಂತಿಯ ಶೋಭಾ ಯಾತ್ರೆ ಮತ್ತು ತೀರ್ಥಯಾತ್ರೆಗಳ ಮೂಲಕ ಮಲೆನಾಡಿನ ಹಳ್ಳಿ ಹಳ್ಳಿಗಳಲ್ಲಿ ಹಿಂದೂ ಜಾಗೃತಿ ಮೂಡಿಸಿದರು. ಅಂದಿನ ಹಿಂದೂ ವಿರೋಧಿ ಸರ್ಕಾರಗಳ ದಮನಕಾರಿ ನೀತಿಗಳ ವಿರುದ್ಧ ದಿಟ್ಟವಾಗಿ ಹೋರಾಡಿದರು. ಚಿಕ್ಕಮಗಳೂರಿಗೆ ಸೀಮಿತವಾಗಿದ್ದ ಈ ಅಭಿಯಾನ ಯಡಿಯೂರಪ್ಪನವರ ನುರಿತ ಸಂಘಟನೆಯ ಕಾರಣಕ್ಕೆ ಕರ್ನಾಟಕದಾದ್ಯಂತ ಮನೆ ಮಾತಾಯಿತು, ಕನ್ನಡಿಗರ ಹಿಂದೂ ಅಸ್ಮಿತೆಯನ್ನು ಜಾಗೃತಿಗೊಳಿಸಿತು.

ದೇವಾಲಯ ಪುನರುತ್ಥಾನ ಮತ್ತು ಕಾರ್ಯಕರ್ತರ ರಕ್ಷಣೆ ಮಾಡಿದರು. 2008–2011ರ ನಡುವೆ 110 ಕೋಟಿ ದೇವಾಲಯ ಅನುದಾನ ನೀಡಿ ಪುರೋಹಿತರ ವೇತನವನ್ನು ದ್ವಿಗುಣಗೊಳಿಸಿದರು. 2019–20ರಲ್ಲಿ 294 ಕೋಟಿ ಮತ್ತು 2020–21ರಲ್ಲಿ 465 ಕೋಟಿ ಮುಜರಾಯಿ ಇಲಾಖೆಯ 35,000 ದೇವಾಲಯಗಳ ಅಭಿವೃದ್ಧಿಗೆ ಮೀಸಲಿಟ್ಟರು.

ಕಾಲಕ್ಕೂ ಮೀರಿದ ಧ್ರುವತಾರೆ

ಬಿ.ಎಸ್.ಯಡಿಯೂರಪ್ಪ ಎಂಬ ಹೆಸರು ಕೇಳಿದಾಗ ಮೊದಲು ನೆನಪಾಗುವುದು ಒಬ್ಬ ನಿಜ ಅರ್ಥದ ಕಾರ್ಯಕರ್ತರ ನಾಯಕ. ಜನಸಾಮಾನ್ಯ ಸಂಘದ ಸ್ವಯಂಸೇವಕನಾಗಿ ತನ್ನ ಸಂಸ್ಕಾರ ಮತ್ತು ಬಿಜೆಪಿ ತನಗೆ ಕೊಟ್ಟ ವೇದಿಕೆ ಈ ಎರಡನ್ನೂ ಸರಿಯಾದ ದಿಕ್ಕಿನಲ್ಲಿ, ಸರಿಯಾದ ಪ್ರಮಾಣದಲ್ಲಿ ಬಳಸಿ ರಾಜ್ಯದಲ್ಲಿ ಬಿಜೆಪಿಯನ್ನು ಗಟ್ಟಿಯಾಗಿ ಕಟ್ಟಿದರು. ಅಧಿಕಾರ ಇಲ್ಲದ ಕಾಲದಲ್ಲಿ ಕಾಂಗ್ರೆಸ್ ಎಂಬ ದೈತ್ಯ ರಾಜಕೀಯ ಪಕ್ಷವನ್ನು ಎದುರು ಹಾಕಿಕೊಂಡು, ಬೀದಿಯಲ್ಲಿ ನಿಂತು ಹೋರಾಡಿ, ಕರ್ನಾಟಕದ ಬಿಜೆಪಿಯನ್ನು ಇವತ್ತಿನ ಈ ಹಂತಕ್ಕೆ ತರುವಲ್ಲಿ ಯಡಿಯೂರಪ್ಪನವರ ಕೊಡುಗೆ ಬಲು ದೊಡ್ಡದು. ಸಿದ್ಧಾಂತದಲ್ಲಿ ಅಚಲ, ರಾಜಕೀಯ ಚಾಕಚಕ್ಯತೆಯಲ್ಲಿ ನಿಪುಣ ಎಲ್ಲ ರೀತಿಯಲ್ಲೂ ಪಕ್ಷಕ್ಕೆ ಬೆನ್ನೆಲುಬಾದರು, ಬಲ ಕೊಟ್ಟರು. ಇಂತಹ ನಾಯಕ ಇಂದು ತಮ್ಮ ರಾಜಕೀಯ ಜೀವನದ ಸಾರ್ಥಕ 50 ವರ್ಷಗಳನ್ನು ಪೂರೈಸಿರುವುದು ಇದು ಕೇವಲ ಒಬ್ಬ ವ್ಯಕ್ತಿಯ ಯಶಸ್ಸಲ್ಲ, ಇದು ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ ಎಂಬ ಒಬ್ಬ ಕಾರ್ಯಕರ್ತನ ಯಶಸ್ಸು ಆ ಸಂಭ್ರಮ ನಮ್ಮದು..

ಸುದ್ದಿ ಸಮಾಚಾರ

ದಲಿತರ ನಿಂದನೆ: ಶಾಸಕ ಹರೀಶ್‌ಗೆ ವಾರೆಂಟ್ ಜಾರಿ

ಬೆಂಗಳೂರು: ಶಾಸಕರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಶುಭಾಶಯ ಕೋರಲು ಬಂದಿದ್ದ ಪರಿಶಿಷ್ಟ ಜಾತಿಯ ಪೌರಕಾರ್ಮಿಕರ ಜಾತಿನಿಂದನೆ ಮಾಡಿದ ಆರೋಪದಲ್ಲಿ ವಿಚಾರಣೆಗೆ ಗೈರಾದ ಹರಿಹರ ಕ್ಷೇತ್ರದ ಬಿಜೆಪಿ ಶಾಸಕ ಬಿ.ಪಿ.ಹರೀಶ್ ಅವರನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ವಾರೆಂಟ್ ಜಾರಿ ಮಾಡಿದೆ. ಪ್ರಕರಣದ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್

ಗಜಾನನ ಭಟ್ ಅವರು, ಶಾಸಕರ ವಿರುದ್ಧ ಬಂಧನ ವಾರೆಂಟ್ ಜಾರಿಗೊಳಿಸಿ, ಮುಂದಿನ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿದ್ದಾರೆ.ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದ ಬಿ.ಪಿ.ಹರೀಶ್ ಅವರನ್ನು ಅಭಿನಂದಿಸಲು 2023ರ ಮೇ 16ರಂದು ಹರಿಹರ ನಗರಸಭೆಯ ಪೌರಕಾರ್ಮಿಕರು ಹಾಗೂ ಮಾದಿಗ ಸಮಾಜದ ಮುಖಂಡರು ಆಗಮಿಸಿದ್ದರು.

ಈ ವೇಳೆ ಒಳಮೀಸಲಾತಿ ನೀಡಿದ್ದರೂ ನಿಮ್ಮ ಸಮಾಜದವರು ನಮ್ಮ ಪಕ್ಷವನ್ನು ಬೆಂಬಲಿಸಿಲ್ಲ, ನಿಮಗೆ ಕೃತಜ್ಞತೆಯಿಲ್ಲ ಎಂದು ಜಾತಿಯ ಹೆಸರನ್ನು ಉಲ್ಲೇಖಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು ಎಂದು ಆರೋಪಿಸಲಾಗಿತ್ತು.

ಅದೇ ದಿನ ಸಮಾಜದ ಮುಖಂಡರೊಂದಿಗೆ ರಾಜಿ ಮಾತುಕತೆ ನಡೆದು ಶಾಸಕರು ಕ್ಷಮೆ ಕೇಳಿದ್ದರಿಂದ ವಿವಾದ ತಣ್ಣಗಾಗಿತ್ತು. ಆದರೆ, ಮರುದಿನ ಅಭಿನಂದನಾ ಕಾರ್ಯಕ್ರಮದ ವೇದಿಕೆಯಲ್ಲಿ ಶಾಸಕ ಹರೀಶ್, "ನಾನು ಆ ರೀತಿ ಹೇಳಿದ್ದು ನಿಜ ಮತ್ತು ಅದು ಸರಿಯಾಗಿಯೇ ಇದೆ" ಎಂದು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆಂದು ಆರೋಪಿಸಿ ಬಹುಜನ ಸಮಾಜ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಹನುಮಂತಪ್ಪ ಅವರು ಹರಿಹರ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಈ ದೂರಿನ ಸಂಬಂಧ ಎಫ್‌ಐಆರ್ ದಾಖಲಾಗಿದ್ದು, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಪ್ರಕರಣದ ವಿಚಾರಣೆ ನಡೆಸುತ್ತಿದೆ.

ಡಿಜಿಪಿ ರಾಮಚಂದ್ರರಾವ್ ಅಮಾನತು ತೆರವು ಆದೇಶ

ಬೆಂಗಳೂರು: ತಮ್ಮ ಕಚೇರಿಯ ಮಹಿಳಾ ಸಿಬ್ಬಂದಿ ಜೊತೆ ಅನುಚಿತವಾಗಿ ವರ್ತಿಸಿದ ಆರೋಪದ ಮೇಲೆ ಅಮಾನತಾಗಿದ್ದ ಡಿಜಿಪಿ ರಾಮಚಂದ್ರ ರಾವ್ ಅವರ ಅಮಾನತನ್ನು ಸರ್ಕಾರ ತೆರವು ಮಾಡಿ ಆದೇಶ ಹೊರಡಿಸಿದೆ.

ರಾಜ್ಯ ಸರ್ಕಾರ ನಿಯಮಾವಳಿ ಪ್ರಕಾರ ಅವರ ಅಮಾನತನ್ನು ರದ್ದು ಮಾಡಿ ಅವರನ್ನು ಸೇವೆಗೆ ಮರುಸೇರ್ಪಡೆ ಮಾಡಿಕೊಳ್ಳಲಾಗಿದೆಯಲ್ಲದೆ, ಪೊಲೀಸ್

ಮಹಾನಿರ್ದೇಶಕ (ಪೊಲೀಸ್ ಮ್ಯಾನ್ಯುವಲ್) ಆಗಿ ನಿಯೋಜಿಸಲಾಗಿದೆ.ಇವರ ಹುದ್ದೆಯನ್ನು ಪೊಲೀಸ್ ಮಹಾನಿರ್ದೇಶಕ, ಅಪರಾಧ ತನಿಖಾ ಇಲಾಖೆ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು ಅವರ ಕೇಡರ್ ಹುದ್ದೆಗೆ ಸ್ಥಾನಮಾನ ಮತ್ತು ಜವಾಬ್ದಾರಿಗಳಲ್ಲಿ ಸಮಾನವೆಂದು ಆದೇಶದಲ್ಲಿ ತಿಳಿಸಲಾಗಿದೆ. ರಾಮಚಂದ್ರ ರಾವ್ ಅವರು ಈ ಹಿಂದೆ ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಡಿಜಿಪಿ ಆಗಿದ್ದಾಗ ತಮ್ಮ ಕಚೇರಿಯಲ್ಲೇ ಮಹಿಳೆಯರೊಂದಿಗೆ ಅಸಭ್ಯವಾಗಿ ವರ್ತಿಸಿದ್ದರು ಎನ್ನುವ ಆರೋಪ ಕೇಳಿ ಬಂದಿತ್ತು. ಈ ಹಿನ್ನೆಲೆಯಲ್ಲಿ ಈ ವಿಷಯವಾಗಿ ವರದಿ ನೀಡುವಂತೆ ಸೂಚಿಸಲಾಗಿತ್ತಲ್ಲದೆ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿತ್ತು.

ಆರ್ಟ್ ಆಫ್ ಲಿವಿಂಗ್‌ಗೆ ಮೇ 10ರಂದು ಪ್ರಧಾನಿ ಭೇಟಿ

ಬೆಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೇ 10ರಂದು ಬೆಂಗಳೂರಿಗೆ ಭೇಟಿ ನೀಡಲಿದ್ದು, ಈ ಭೇಟಿ ವೇಳೆ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರಕ್ಕೆ ಭೇಟಿ ನೀಡಲಿದ್ದಾರೆ.

ಪ್ರಧಾನಿ ಮೋದಿ ಅವರು ಆಶ್ರಮದ ಆವರಣದಲ್ಲಿ ನಿರ್ಮಿಸಲಾದ ಹೊಸ ಧ್ಯಾನ ಮಂದಿರವನ್ನು ಉದ್ಘಾಟಿಸಲಿದ್ದಾರೆ. ಈ ವರ್ಷ ಆರ್ಟ್ ಆಫ್ ಲಿವಿಂಗ್



ತನ್ನ 45ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದು, ಸಂಸ್ಥೆಯ ಸ್ಥಾಪಕ ಶ್ರೀ ಶ್ರೀ ರವಿಶಂಕರ್ ಅವರು ತಮ್ಮ 70ನೇ ಹುಟ್ಟುಹಬ್ಬವನ್ನೂ ಇದೇ ಸಂದರ್ಭದಲ್ಲಿ ಆಚರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಆಶ್ರಮದಲ್ಲಿ ವಿಶೇಷ ಕಾರ್ಯಕ್ರಮಗಳು ಆಯೋಜಿಸಲಾಗುತ್ತಿವೆ. ಇದೇ ವೇಳೆ ಪ್ರಧಾನಿ ಅವರು ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ ಆಶ್ರಮಕ್ಕೆ ಭೇಟಿ ನೀಡಲಿದ್ದಾರೆ. ಆರ್ಟ್ ಆಫ್ ಲಿಂವಿಂಗ್ ಫೌಂಡೇಷನ್ ಕಳೆದ 45 ವರ್ಷಗಳಲ್ಲಿ ಯೋಗ, ಧ್ಯಾನ ಹಾಗೂ ಆಧ್ಯಾತ್ಮಿಕ ಶಿಕ್ಷಣದ ಜೊತೆಗೆ ಸಾಮಾಜಿಕ ಕಾರ್ಯಗಳಲ್ಲಿಯೂ ಮಹತ್ವದ ಪಾತ್ರವಹಿಸಿದೆ. ನದಿ ಪುನರುಜ್ಜೀವನ, ಶಿಕ್ಷಣ ಅಭಿವೃದ್ಧಿ ಮತ್ತು ವಿಪತ್ತು ನಿರ್ವಹಣೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ.

ಕರ್ತವ್ಯದ ವೇಳೆ ಮದ್ಯಪಾನ ಇಬ್ಬರು ವೈದ್ಯರ ಅಮಾನತು

ಬೆಂಗಳೂರು: ಕರ್ತವ್ಯದ ಅವಧಿಯಲ್ಲಿ ಮದ್ಯಪಾನ, ಗುಟ್ಕಾ ಸೇವನೆ ಹಾಗೂ ದುರ್ನಡತೆ ತೋರಿದ ಆರೋಪದ ಮೇಲೆ ಇಬ್ಬರು ವೈದ್ಯರನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಿದೆ. ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ವಿ.ವಿ.ಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಚಂದ್ರಮೌಳಿ ಎಸ್ ಮತ್ತು ಮೈಸೂರು ಜಿಲ್ಲೆಯ ಮೆಲ್ಲಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಅನಿಲ್ ಕುಮಾರ್ ಅಮಾನತುಗೊಂಡ ವೈದ್ಯರಾಗಿದ್ದಾರೆ.

ಫೆಬ್ರವರಿ 8, 2025ರಂದು ಧರ್ಮಪುರ ಸಮುದಾಯ ಆರೋಗ್ಯ ಕೇಂದ್ರದ ರಾತ್ರಿ ಪಾಳಿಯಲ್ಲಿದ್ದಾಗ, ವಿ.ವಿ. ಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ.ಚಂದ್ರಮೌಳಿ ಎಸ್. ಆಸ್ಪತ್ರೆಯ ಅಡುಗೆ ಕೋಣೆಯಲ್ಲಿ ಮದ್ಯಪಾನ ಮಾಡುತ್ತಿರುವುದು ಕಂಡುಬಂದಿತ್ತು. ಅಲ್ಲದೆ, ಸಹೋದ್ಯೋಗಿಗಳೊಂದಿಗೆ ಗಲಾಟೆ ನಡೆಸಿ ದುರ್ನಡತೆ ತೋರಿದ ಆರೋಪವೂ ಇವರ ಮೇಲಿದೆ.

ಮೆಲ್ಲಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ. ಅನಿಲ್ ಕುಮಾರ್ ಕರ್ತವ್ಯದ ಅವಧಿಯಲ್ಲಿ ಮದ್ಯಪಾನ ಮಾಡಿ ಸಾರ್ವಜನಿಕರೊಂದಿಗೆ ಜಗಳವಾಡುವುದು ಹಾಗೂ ಅಧೀನದ ಮಹಿಳಾ ಸಿಬ್ಬಂದಿಗೆ ಮಧ್ಯರಾತ್ರಿ ವಾಟ್ಸಾಪ್ ವಿಡಿಯೋ ಕಾಲ್ ಮಾಡಿ ಅಶ್ಲೀಲವಾಗಿ ಮಾತನಾಡುವ ಮೂಲಕ ದುರ್ನಡತೆ ತೋರಿದ್ದರು. ಪಾನಮತ್ತರಾಗಿ ಆಸ್ಪತ್ರೆಗೆ ಬಂದು ಗಲಾಟೆ ಮಾಡುತ್ತಿದ್ದ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದವು.ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರಾದ ಗುರುದತ್ತ ಅವರು ಎರಡೂ ಪ್ರಕರಣಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಮೇ 6ರಂದು ಈ ಆದೇಶ ಹೊರಡಿಸಿದ್ದಾರೆ.

ಸಂದೀಪ್, ಅನುಪಮ್ ಸೇರಿ 3 ಐಪಿಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: ರಾಜ್ಯ ಸರ್ಕಾರವು ಮೂರು ಮಂದಿ ಐಪಿಎಸ್ ಅಧಿಕಾರಗಳ ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ. ಈ ಮೂಲಕ ಪೊಲೀಸ್ ಇಲಾಖೆಯಲ್ಲಿ ಮಹತ್ವದ ಬದಲಾವಣೆ ಮಾಡಿದೆ.ಕರ್ನಾಟಕ ರಾಜ್ಯ ರಿಸರ್ವ್ ಪೊಲೀಸ್‌ನ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಸಂದೀಪ್ ಪಾಟೀಲ್ ಅವರನ್ನು ಬೆಳಗಾವಿ ಉತ್ತರ ವಲಯದ ಐಜಿಪಿಯಾಗಿ ವರ್ಗಾವಣೆ ಮಾಡಲಾಗಿದೆ. ಬೆಳಗಾವಿ ಉತ್ತರ ವಲಯದ ಐಜಿಪಿಯಾಗಿದ್ದ ಡಾ.ಚೇತನ್ ಸಿಂಗ್ ರಾಥೋರ್ ಅವರನ್ನು ಅಪರಾಧ ತನಿಖಾ ಇಲಾಖೆ – ಆರ್ಥಿಕ–ಅಪರಾಧಗಳು–ವಿಭಾಗದ ಐಜಿಪಿ ಹುದ್ದೆಗೆ ನಿಯೋಜಿಸಲಾಗಿದೆ. ಸಂದೀಪ್ ಪಾಟೀಲ್ ಅವರ ವರ್ಗಾವಣೆಯಿಂದ ತೆರವಾದ ಕರ್ನಾಟಕ ರಾಜ್ಯ ರಿಸರ್ವ್ ಪೊಲೀಸ್‌ನ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಹುದ್ದೆಗೆ ಅನುಪಮ್ ಅಗ್ರವಾಲ್ ಅವರನ್ನು ನಿಯೋಜಿಸಿ ಸರ್ಕಾರ ಆದೇಶ ಹೊರಡಿಸಿದೆ.

ಬಿಎಸ್‌ವೈ ಉತ್ಸವಕ್ಕೆ ಸಾವಿರಾರು ಮಠಾಧೀಶರು

ಚಿತ್ರದುರ್ಗ ಕಾರ್ಯಕ್ರಮದಲ್ಲಿ ಸಮಯ ಬದಲಾವಣೆ । ಅಮಿತ್ ಶಾ ಆಗಮನ ಮಧ್ಯಾಹ್ನ 3.45ಕ್ಕೆ

ಸಂ.ಕ.ಸಮಾಚಾರ, ಚಿತ್ರದುರ್ಗ

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವವನ್ನು ನಗರದಲ್ಲಿ ಏ. 9ರಂದು ಬೆಳಗ್ಗೆ 11.30ಕ್ಕೆ ಹಮ್ಮಿಕೊಳ್ಳಲಾಗಿತ್ತು, ಆದರೆ, ಪಶ್ಚಿಮ ಬಂಗಾಳದಲ್ಲಿ ಸಿಎಂ ಪ್ರಮಾಣವಚನ ಹಿನ್ನೆಲೆಯಲ್ಲಿ ಸಮಯದಲ್ಲಿ ಬದಲಾವಣೆ ಮಾಡಿಕೊಳ್ಳಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ನಗರದ ಹೊರವಲಯ ಮಾದಾರ ಚೆನ್ನಯ್ಯ ಗುರುಪೀಠದ ಸಮೀಪದ ಮೈದಾನಕ್ಕೆ ಬುಧವಾರ ಭೇಟಿ ನೀಡಿ ಸಿದ್ಧತೆ ಪರಿಶೀಲಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶವೇ ಗಮನಸೆಳೆಯುವ ರೀತಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಅಲ್ಲಿ ಏ.9ರ ಬೆಳಗ್ಗೆ 11ಕ್ಕೆ ಮುಖ್ಯಮಂತ್ರಿ ಪ್ರಮಾಣವಚನ ಕಾರ್ಯಕ್ರಮ ನಿಗದಿ ಆಗಿದ್ದು, ಅಮಿತ್ ಶಾ 12.30ರವರೆಗೆ ಅಲ್ಲಿಯೇ ಇರುತ್ತಾರೆ. ಬಳಿಕ ಅಲ್ಲಿಂದ ನೇರ ಚಿತ್ರದುರ್ಗಕ್ಕೆ ಮಧ್ಯಾಹ್ನ 3.45ಕ್ಕೆ ಆಗಮಿಸಲಿದ್ದಾರೆ ಎಂದರು.

ಈ ಕಾರಣಕ್ಕೆ ಸಮಯದಲ್ಲಿ ಬದಲಾವಣೆ ಮಾಡಿಕೊಂಡಿದ್ದು, ಮಧ್ಯಾಹ್ನ 2 ಗಂಟೆಗೆ ಆರಂಭಗೊಂಡು ಸಂಜೆ 5ರ ವರೆಗೆ ನಡೆಯಲಿದೆ. ವೇದಿಕೆಯಲ್ಲಿ ಅಮಿತ್ ಶಾ ಒಂದೂಕಾಲು ಗಂಟೆ ಇರಲಿದ್ದಾರೆ ಎಂದು ತಿಳಿಸಿದರು.

ಸಾವಿರಕ್ಕೂ ಹೆಚ್ಚು ಮಠಾಧೀಶರಿಗೆ ಆಹ್ವಾನ: ಈಗಾಗಲೇ ಅನೇಕ ಮಠಾಧೀಶರನ್ನು ಭೇಟಿ ಮಾಡಿ ಖುದ್ದಾಗಿ ಆಹ್ವಾನಿಸಲಾಗಿದೆ. ಆದರೆ, ಸಮಯದ ಅಭಾವದಿಂದ ಕೆಲವರನ್ನು ಭೇಟಿ ಮಾಡಲಾಗುತ್ತಿಲ್ಲ. ಅಲ್ಲಿನ ಸ್ಥಳೀಯ ಮುಖಂಡರು ಆಹ್ವಾನ ಪತ್ರಿಕೆ ನೀಡಿ ಆಹ್ವಾನಿಸಿದ್ದು, ಒಂದು ಸಾವಿರಕ್ಕೂ ಹೆಚ್ಚು ಮಠಾಧೀಶರು ಪಾಲ್ಗೊಳ್ಳಲಿದ್ದಾರೆ ಎಂದರು.

ಈಗಾಗಲೇ 10 ಸಾವಿರ ಬಸ್‌ಗಳನ್ನು ಕಾಯ್ದಿರಿಸಲಾಗಿದೆ. ಜೊತೆಗೆ 50 ಸಾವಿರ ಕಾರು ಇತರೆ ವಾಹನಗಳು ಆಗಮಿಸಲಿವೆ. ಒಟ್ಟಾರೆ 10 ಲಕ್ಷ ಅಭಿಮಾನಿಗಳು ರಾಜ್ಯದ ವಿವಿಧೆಡೆಯಿಂದ ಆಗಮಿಸಲಿದ್ದು, ಊಟ, ತಿಂಡಿ, ಮಜ್ಜಿಗೆ, ನೀರು ಸೇರಿ ಯಾವುದೇ ರೀತಿ ಸಮಸ್ಯೆ ಆಗದ ರೀತಿ ವ್ಯವಸ್ಥಿತವಾಗಿ ಕಾರ್ಯಕ್ರಮ ಸಂಘಟಿಸಲಾಗುತ್ತಿದೆ ಎಂದು ತಿಳಿಸಿದರು.

ಸೋಲಿಗೆ ಎದೆಗುಂದಲ್ಲ: ರಾಜ್ಯದ ಎರಡು ಉಪ ಚುನಾವಣೆಯಲ್ಲಿನ ಸೋಲು ಅಭಿಮಾನೋತ್ಸದ ಮೇಲೆ ಯಾವುದೇ ರೀತಿ ಪರಿಣಾಮ ಬೀರುವುದಿಲ್ಲ. ಈಗಾಗಲೇ ಜನರು ಸಾಗರದ ರೀತಿ ಹರಿದುಬರಲು ಸಿದ್ಧತೆ ಮಾಡಿಕೊಂಡಿದ್ದಾರೆ ಎಂದರು. ಉಪ ಚುನಾವಣೆಗಳು ಆಳುವ ಸರ್ಕಾರದ ಪರ ಫಲಿತಾಂಶ ಹೊರಬೀಳುವುದು ನಡೆದುಕೊಂಡು ಬಂದ ಪದ್ಧತಿ. ಗ್ಯಾರಂಟಿ ಯೋಜನೆ, ಜನಪರ ಆಡಳಿತ ನೀಡಿದ್ದೇವೆ ಎಂದು ಬೊಬ್ಬೆ ಹಾಕುವ ಸಿಎಂ ಸಿದ್ದರಾಮಯ್ಯ, ಬಾಗಲಕೋಟೆಯಲ್ಲಿ 15 ದಿನ, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಐದು ದಿನ ಬೀಡುಬಿಟ್ಟು ಪ್ರಚಾರ ನಡೆಸಿದ್ದು ಏಕೆ. ಇಡೀ ಮಂತ್ರಿಮಂಡಲವೇ ಚುನಾವಣಾ ಅಖಾಡಕ್ಕೆ ಇಳಿದು ಕಷ್ಟಪಟ್ಟು ಗೆಲ್ಲಿಸಿಕೊಂಡಿದ್ದಾರೆ ಎಂದರು.

ಗೃಹಲಕ್ಷ್ಮೀ ಹಣ 'ಚುನಾವಣಾ ಲಕ್ಷ್ಮೀ' ಆಗಿ ಕಾಂಗ್ರೆಸ್ ಪಕ್ಷದವರು ಮಾರ್ಪಾಡು ಮಾಡಿದ್ದಾರೆ. ರಾಜ್ಯದ ಎರಡು ವಿಧಾನಸಭಾ ಕ್ಷೇತ್ರದಲ್ಲಿ ನಾಲ್ಕೈದು ತಿಂಗಳ ಗೃಹಲಕ್ಷ್ಮೀ ಹಣವನ್ನೇ ಒಮ್ಮೆಯೇ ಹಾಕಿದರು. ಈ ಮೂಲಕ ಅಕ್ರಮ ಮೂಲಕ ಚುನಾವಣೆಯಲ್ಲಿ ಗೆದ್ದಿದ್ದಾರೆ ಎಂದು ತಿಳಿಸಿದರು. ಸಂಸದ ಗೋವಿಂದ ಕಾರಜೋಳ, ಶಾಸಕ ಹರೀಶ್ ಪೂಂಜಾ, ಮಾಜಿ ಶಾಸಕರಾದ ಜಿ.ಎಚ್.ತಿಪ್ಪಾರೆಡ್ಡಿ, ಎಸ್.ಕೆ.ಬಸವರಾಜನ್ ಇತರರಿದ್ದರು.

ಚಿತ್ರದುರ್ಗದಲ್ಲಿ ನಡೆಯುತ್ತಿರುವ ಬಿಎಸ್‌ವೈ ಅಭಿಮಾನೋತ್ಸವ ಸಿದ್ಧತೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪರಿಶೀಲಿಸಿದರು. ಸಂಸದ ಗೋವಿಂದ ಕಾರಜೋಳ ಇತರರಿದ್ದರು.

ಕಾಂಗ್ರೆಸ್ ಕ್ಷಮೆಯಾಚಿಸಬೇಕು

> ಶೃಂಗೇರಿ ಮರು ಮತ ಎಣಿಕೆಯಲ್ಲಿ ಬಿಜೆಪಿ ಜೀವರಾಜ್ ಗೆದ್ದಿದ್ದು, ವೋಟ್‌ಚೋರ್ ಆಗಿರುವುದು ಫಲಿತಾಂಶದಿಂದ ದೃಢಪಟ್ಟಿದೆ. ವೋಟ್ ಚೋರಿ ಎಂದು ದೇಶಾದ್ಯಂತ ಬಿಜೆಪಿ ವಿರುದ್ಧ ಆಂದೋಲನ ನಡೆಸಿದ ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಇವರು ಜನರ ಬಳಿ ಕ್ಷಮೆ ಯಾಚಿಸಬೇಕು.
>
> ▪ ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

> ಬಿಎಸ್‌ವೈ ಅವರ ಕುರಿತ 'ಕಮಲದಲ್ಲಿ ಅರಳಿದ ಹೂವು', 'ಸದನ ಶಿಖಾರಿ' ಎಂಬ ಎರಡು ಕೃತಿಗಳನ್ನು ಅಭಿಮಾನೋತ್ಸವದಲ್ಲಿ ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಬಿಡುಗಡೆಗೊಳಿಸಲಿದ್ದಾರೆ.
>
> ▪ ಗೋವಿಂದ ಕಾರಜೋಳ, ಸಂಸದ

ಸುದ್ದಿ ಸಮಾಚಾರ

ಪಕ್ಷಾಂತರ ನಿಷೇಧ ಕಾನೂನು ಪರಿಶೀಲನೆಗೆ ಸಭೆ: ಸ್ಪೀಕರ್

ಸಂ.ಕ. ಸಮಾಚಾರ, ಮಂಗಳೂರು

ಪಕ್ಷಾಂತರ ನಿಷೇಧ ಕಾನೂನು ಪರಿಶೀಲನೆಗೆ ಸಂಬಂಧಿಸಿ ಲೋಕಸಭೆ ಸ್ಪೀಕರ್ ಓಂ ಪ್ರಕಾಶ್ ಬಿರ್ಲಾ ಅವರಿಂದ ರಚಿಸಲ್ಪಟ್ಟ ಉನ್ನತ ಮಟ್ಟದ ಸಮಿತಿಯ 3ನೇ ಸಭೆ ಕರ್ನಾಟಕದಲ್ಲಿ ಜೂನ್ ಅಂತ್ಯಕ್ಕೆ ನಡೆಯಲಿದೆ. ಬಳಿಕ ಸಮಿತಿ ತನ್ನ ವರದಿಯನ್ನು ಲೋಕಸಭೆಗೆ ಮಂಡಿಸಲಿದೆ ಎಂದು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಹೇಳಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಚುನಾಯಿತ ಪ್ರತಿನಿಧಿಗಳು ಪದೇ ಪದೇ ಪಕ್ಷಾಂತರ ಮಾಡುವುದನ್ನು ತಡೆಯಲು ಭಾರತದ ಸಂವಿಧಾನದ 10ನೇ ವಿಧಿಯನ್ನು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಮಹಾರಾಷ್ಟ್ರದ ಸ್ಪೀಕರ್ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ ಎಂದರು. ಕರ್ನಾಟಕ, ಮಹಾರಾಷ್ಟ್ರ, ಒಡಿಶಾ, ನಾಗಲ್ಯಾಂಡ್ ರಾಜ್ಯಗಳ ಸ್ಪೀಕರ್‌ಗಳ ಸಮಿತಿ ಇದಾಗಿದ್ದು, ಈಗಾಗಲೇ ಮಹಾರಾಷ್ಟ್ರ ಮತ್ತು ಒಡಿಶಾದಲ್ಲಿ ಸಮಿತಿ ಸಭೆ ನಡೆದಿದೆ. ಚುನಾಯಿತ ಜನಪ್ರತಿನಿಧಿ ಪಕ್ಷಾಂತರಗೊಂಡಾಗ ಅರ್ಹತೆ ಖಾತರಿಪಡಿಸುವುದು, ಪಕ್ಷದ ಜೊತೆಯಲ್ಲಿ ಇಲ್ಲದ ಸಂದರ್ಭದಲ್ಲಿ ವಿಶ್ವಾಸ ಮತದಲ್ಲಿ ಭಾಗವಹಿಸುವ ಅವಕಾಶವನ್ನು ನಿರಾಕರಿಸುವುದು, ಪಕ್ಷಾಂತರಗೊಂಡ ಶಾಸಕರಿಗೆ ಸಚಿವ ಹುದ್ದೆ ಅಥವಾ ನಿಗಮ, ಮಂಡಳಿಯಲ್ಲಿ ಸ್ಥಾನಮಾನ ಮಾಡಬಾರದು ಎಂಬ ಕುರಿತಾದ ಶಿಫಾರಸುಗಳ ಬಗ್ಗೆ ಚರ್ಚೆ ನಡೆದಿದೆ. ಅಂತಿಮ ಸಭೆ ಕರ್ನಾಟಕದಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ಅಂಬಾರಿ ಆನೆ ಅರ್ಜುನ ಸ್ಮಾರಕ ಲೋಕಾರ್ಪಣೆ ಮಾಡಿದ ಖಂಡ್ರೆ

ಸಕಲೇಶಪುರ: ಬಹುದಿನಗಳ ಬೇಡಿಕೆಯಾಗಿದ್ದ ಅಂಬಾರಿ ಆನೆ ಅರ್ಜುನನ ಸ್ಮಾರಕವನ್ನು ಬುಧವಾರ ಅರಣ್ಯ ಸಚಿವ ಈಶ್ವರ ಖಂಡ್ರೆ ಲೋಕಾರ್ಪಣೆಗೊಳಿಸಿದರು.

ಸಕಲೇಶಪುರ ತಾಲೂಕಿನ ದಬ್ಬಳ್ಳಿಕಟ್ಟೆ ಮೀಸಲು ಅರಣ್ಯದಲ್ಲಿ 2023ರ ಡಿ.4ರಂದು ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಮದಗಜದೊಂದಿಗೆ ಕಾದಾಡಿ ಅರ್ಜುನ ವೀರಮರಣ ಹೊಂದಿದ್ದ. ಡಿ. 5ರಂದು ಅರಣ್ಯ ಇಲಾಖೆ ಅರ್ಜುನನ ಮೃತದೇಹವನ್ನು ಮೃತಪಟ್ಟ ಸ್ಥಳದಲ್ಲಿಯೇ ಅಂತ್ಯಕ್ರಿಯೆ ನೆರವೇರಿಸಿತ್ತು. ಸುಮಾರು ಎರಡೂವರೆ ವರ್ಷಗಳ ಬಳಿಕ ಅದೇ ಸಮಾಧಿ ಸ್ಥಳದಲ್ಲೇ ಸ್ಮಾರಕ ನಿರ್ಮಿಸಿ ಸಾರ್ವಜನಿಕರಿಗೆ ಸಮರ್ಪಿಸಲಾಗಿದೆ.

ಸ್ಮಾರಕದ ವಿಶೇಷತೆ ಎಂದರೆ, ಅರ್ಜುನನ ಜೀವಂತ ರೂಪವನ್ನು ಪ್ರತಿಬಿಂಬಿಸುವಂತೆ ನಿರ್ಮಿಸಿರುವ 10 ಅಡಿ ಎತ್ತರ ಹಾಗೂ 13 ಅಡಿ ಉದ್ದದ ಪ್ರತಿಮೆಯನ್ನು ಫೈಬರ್ ಗ್ಲಾಸ್ ಬಳಸಿ ಶಿಲ್ಪಿ ಧನಂಜಯ ಪಡು ಅವರು ರೂಪಿಸಿದ್ದಾರೆ.

ಮಾವುತ ವಿನು ಆಕ್ರೋಶ: ಆನೆ ಅರ್ಜುನನನ್ನು ಕುಟುಂಬದ ಸದಸ್ಯನಂತೆ ಸಾಕಿದ್ದೆ. ಆದರೆ ಸ್ಮಾರಕ ಲೋಕಾರ್ಪಣೆ ಬಗ್ಗೆ ನನಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿಲ್ಲ ಎಂದು ಅದರ ಮಾವುತ ವಿನು ಆಕ್ರೋಶ ವ್ಯಕ್ತಪಡಿಸಿ ತಮ್ಮ ಪ್ರೀತಿಯ ಆನೆಯ ನೆನೆದು ಭಾವುಕರಾದರು.

3 ವರ್ಷದ ಬಾಲಕನನ್ನು 100 ಮೀ. ಎಳೆದೊಯ್ದ ಬೀದಿ ನಾಯಿ

ಸಂ.ಕ.ಸಮಾಚಾರ ವಿಜಯಪುರ

ಮೂರು ವರ್ಷದ ಮಗುವಿನ ಮೇಲೆ ಬೀದಿ ನಾಯಿಗಳು ದಾಳಿ ನಡೆಸಿ 100 ಮೀಟರ್ ದೂರ ಎಳೆದೊಯ್ದಿರುವ ಘಟನೆ ವಿಜಯಪುರದಲ್ಲಿ ನಡೆದಿದೆ. ನಗರದ ರಾಜಕುಮಾರ ಲೇಔಟ್‌ನಲ್ಲಿ ಬೀದಿ ನಾಯಿ ದಾಳಿಯಿಂದ ವಿರಾಜ್ ಸಂತೋಷ ಬಿರಾದಾರ(3) ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಮಂಗಳವಾರ ಸಂಜೆ ಮನೆ ಮುಂದೆ ಆಟವಾಡುತ್ತಿದ್ದ ಈತನ ಮೇಲೆ ಬೀದಿ ನಾಯಿಗಳು ಬಾಯಿಯಲ್ಲಿ ಕಚ್ಚಿ ಸುಮಾರು 100 ಮೀಟರ್ ದೂರದವರೆಗೆ ಎಳೆದುಕೊಂಡು ಹೋಗಿವೆ. ಬೀದಿನಾಯಿ ದಾಳಿಯ ಭೀಕರ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಬಾಲಕನ ಬೆನ್ನು, ತೊಡೆಗೆ ಭಾಗಕ್ಕೆ ಗಂಭೀರ ಗಾಯಗಳಾಗಿದ್ದು, ಮಹಾನಗರ ಪಾಲಿಕೆ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

'ಗ್ಯಾರಂಟಿ' ಯುವನಿಧಿ ಹಣ ಕಾಲೇಜಿಗೆ ನೀಡಿದ ಯುವಕ!

ಗಲಗಲಿ(ಬಾಗಲಕೋಟೆ): ಗ್ಯಾರಂಟಿಗಳಲ್ಲೊಂದಾದ "ಯುವನಿಧಿ" ಹಣವನ್ನು ತಾನು ಕಲಿತ ಗಲಗಲಿಯ ಗಾಲವ ಶಿಕ್ಷಣ ಸಂಸ್ಥೆಗೆ ನೀಡಿ ಮಾದರಿಯಾಗಿದ್ದಾರೆ ಗಲಗಲಿಯ ಯುವಕ ಕಲ್ಮೇಶ ಬಸಪ್ಪ ನಾವಿ. ತನ್ನ ಖಾತೆಯಲ್ಲಿ ಜಮಾ ಆಗಿದ್ದ ಯುವನಿಧಿಯ ಹಣಕ್ಕೆ ಮತ್ತಷ್ಟು ಸೇರಿಸಿ ಮೂವತ್ತು ಸಾವಿರ ರೂ. ಗಳನ್ನು ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೀಡಿ ಅಳಿಲು ಸೇವೆ ಸಲ್ಲಿಸಿದ್ದಾರೆ. ಎಂ.ಎ., ಬಿ.ಎಡ್ ಕಲಿತಿರುವ ಕಲ್ಮೇಶ ಉದ್ಯೋಗ ಸಿಗದ ಕಾರಣ ಕುಟುಂಬದವರು ನಡೆಸಿಕೊಂಡು ಬಂದ ಸೆಲೂನ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ.

ಮತಪೆಟ್ಟಿಗೆ ಟ್ಯಾಂಪರಿಂಗ್ ಕೇಸ್: ಡಿವೈಎಸ್‌ಪಿ ನೇತೃತ್ವದಲ್ಲಿ ತನಿಖೆ

ಚಿಕ್ಕಮಗಳೂರು: ಮತಪೆಟ್ಟಿಗೆ ಟ್ಯಾಂಪರಿಂಗ್ ವಿಷಯಕ್ಕೆ ಸಂಬಂಧಿಸಿದಂತೆ ಡಿವೈಎಸ್‌ಪಿ ನೇತೃತ್ವದಲ್ಲಿ ತನಿಖೆ ಆರಂಭಗೊಂಡಿದೆ. ನ್ಯಾಯಾಲಯದ ಸೂಚನೆ ಮೇರೆಗೆ ಅಂಚೆ ಮತಪತ್ರಗಳ ಮರುಎಣಿಕೆ ಮೇ 2ರಂದು ನಡೆಯಿತು. ಸ್ಟ್ರಾಂಗ್ ರೂಮ್‌ನಿಂದ ಮತಪೆಟ್ಟಿಗೆ ತಂದಾಗ ಮತಪೆಟ್ಟಿಗೆ ಹೊಂದಿದ್ದ ಟ್ರಂಕ್‌ಗೆ ಹಾನಿಯಾಗಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಕೆಪಿಸಿಸಿ ವಕ್ತಾರ ಹಾಗೂ ವಕೀಲ ಸುಧೀರ್‌ಕುಮಾರ್ ಮುರೊಳ್ಳಿ ನಗರ ಠಾಣೆಗೆ ತೆರಳಿ ಮತಪೆಟ್ಟಿಗೆ ಟ್ಯಾಂಪರಿಂಗ್ ಆಗಿರುವ ಕುರಿತು ದೂರು ಸಲ್ಲಿಸಿದ್ದರು.

ಸ್ಟ್ರಾಂಗ್ ರೂಂ ಕೀ ನಾಪತ್ತೆ: ಸ್ವತಂತ್ರ ಸಂಸ್ಥೆ ತನಿಖೆ ನಡೆಸಿ

ದಾವಣಗೆರೆ ಪರಾಜಿತ ಅಭ್ಯರ್ಥಿ ಆಗ್ರಹ

ಸಂ.ಕ.ಸಮಾಚಾರ, ದಾವಣಗೆರೆ

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಮತ ಎಣಿಕೆ ಕೇಂದ್ರದ ಸ್ಟ್ರಾಂಗ್ ರೂಮ್‌ಗಳ ಕೀ ನಾಪತ್ತೆ ಪ್ರಕರಣವನ್ನು ರಾಜ್ಯ ಮತ್ತು ರಾಷ್ಟ್ರೀಯ ಚುನಾವಣಾ ಆಯೋಗವು ಸ್ವತಂತ್ರ ಸಂಸ್ಥೆಯ ಮೂಲಕ ಕೂಲಂಕಷ ತನಿಖೆ ನಡೆಸಬೇಕು ಎಂದು ಪರಾಜಿತ ಎಸ್‌ಡಿಪಿಐ ಅಭ್ಯರ್ಥಿ ಅಫ್ಸರ್ ಕೊಡ್ಲಿಪೇಟೆ ಆಗ್ರಹಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಟ್ರಾಂಗ್ ರೂಮಿನ ಮೂರು ಕೀಗಳು ಕಾಣೆಯಾಗಿವೆ ಎಂದು ಅಧಿಕಾರಿಗಳು ಹೇಳಿರುವುದು ಪ್ರಜಾಪ್ರಭುತ್ವದ ಅಣಕವಾಗಿದೆ ಎಂದು ಅವರು ಟೀಕಿಸಿದರು.

ಮತ ಎಣಿಕೆ ಸಂದರ್ಭದಲ್ಲಿ ಮೂರು ಸ್ಟ್ರಾಂಗ್ ರೂಮ್ ಓಪನ್ ಮಾಡುವ ವೇಳೆ ಬೀಗದ ಕೀಗಳು ಇಲ್ಲ ಎಂದು ಸುತ್ತಿಗೆಯಿಂದ ಒಡೆದು ಮತಯಂತ್ರ ಹೊರ ತೆಗೆಯಲಾಗಿದೆ. ಈ ಬಗ್ಗೆ ಯಾವ ಅಭ್ಯರ್ಥಿಗಳ ಗಮನಕ್ಕೆ ತಂದಿಲ್ಲ. ಒಂದು ವೇಳೆ ಕೀಗಳು ನಾಪತ್ತೆಯಾಗಿವೆ ಎಂದಾದರೆ, ಆ ಬಗ್ಗೆ ಅಭ್ಯರ್ಥಿಗಳ ಗಮನಕ್ಕೆ ತಂದು ಅವರ ಸಮ್ಮುಖದಲ್ಲಿ ಸ್ಟ್ರಾಂಗ್ ರೂಮ್ ಓಪನ್ ಮಾಡಬಹುದಿತ್ತು. ಹೀಗಾಗಿ ಇಲ್ಲಿ ಚುನಾವಣಾ ಅಕ್ರಮ ನಡೆದಿದೆ ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ ಚುನಾವಣಾ ಆಯೋಗ ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

ಇವಿಎಂ ತಾಂತ್ರಿಕ ದೋಷ: ಭಾಷಾ ನಗರ ಮತ್ತು ಆಜಾದ್ ನಗರದ ಸುಮಾರು ಮೂರು ಇವಿಎಂಗಳಲ್ಲಿ ತಾಂತ್ರಿಕ ದೋಷವಿದೆ ಎಂದು ಹೇಳಿ ಅವುಗಳ ಎಣಿಕೆಯನ್ನು ವಿಳಂಬ ಮಾಡಲಾಗಿದೆ. ಇದರಲ್ಲೂ ಕೂಡ ಅಕ್ರಮದ ವಾಸನೆ ಇದೆ. ಈ ಎಲ್ಲಾ ಅಕ್ರಮಗಳ ಬಗ್ಗೆ ರಾಜ್ಯ ಮತ್ತು ರಾಷ್ಟ್ರೀಯ ಚುನಾವಣಾ ಆಯೋಗವು ಸ್ವತಂತ್ರ ಸಂಸ್ಥೆಯ ಮೂಲಕ ಕೂಲಂಕುಷ ತನಿಖೆ ನಡೆಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಹಣಬಲ–ಅಧಿಕಾರ ದುರ್ಬಳಕೆ: ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಹಣಬಲ ಮತ್ತು ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಗೆದ್ದಿದೆ. ಕ್ಷೇತ್ರದ ವ್ಯಾಪ್ತಿಯ ಪ್ರತಿ ವಾರ್ಡ್‌ಗೆ ಒಬ್ಬೊಬ್ಬ ಸಚಿವರನ್ನು ಉಸ್ತುವಾರಿಯಾಗಿ ನಿಯೋಜಿಸಿ, ಆಡಳಿತ ಯಂತ್ರವನ್ನು ದುರುಪಯೋಗ ಮಾಡಿಕೊಳ್ಳಲಾಗಿದೆ ಎಂದು ಅವರು ದೂರಿದರು.

ವಿತ್ತ ಸಚಿವೆಯ ಹೆಸರಿನಲ್ಲಿ ವೃದ್ಧನಿಗೆ ಭಾರೀ ವಂಚನೆ

ಸಂ.ಕ.ಸಮಾಚಾರ ಬೆಳಗಾವಿ

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಹೆಸರು ದುರುಪಯೋಗಪಡಿಸಿಕೊಂಡು ಷೇರು ಮಾರುಕಟ್ಟೆ ಹೂಡಿಕೆ ಹೆಸರಿನಲ್ಲಿ ಹಿರಿಯ ನಾಗರಿಕರೊಬ್ಬರಿಗೆ ಲಕ್ಷಾಂತರ ರೂ. ವಂಚಿಸಿರುವ ಘಟನೆ ವರದಿಯಾಗಿದೆ.

ವಂಟಮುರಿ ಕಾಲನಿಯ ನಿವಾಸಿ ಪ್ರಕಾಶ ಗುಬ್ಬಿ (76) ಎಂಬುವರು ಈ ಬಗ್ಗೆ ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿದ್ದಾರೆ. ಕೊಲ್ಲಾಪುರ ಮೂಲದ ಆದರ್ಶ ಹಾಗೂ ಮಹಾರಾಷ್ಟ್ರದ ಬುಲ್ಧಾಣಾ ಮೂಲದ ದಾಮೋದರ ಎಂಬುವವರು ಸಾಮಾಜಿಕ ಜಾಲತಾಣದಲ್ಲಿ ಕೇಂದ್ರ ಸಚಿವೆ ಹೆಸರಿನಲ್ಲಿ ಆಕರ್ಷಕ ಜಾಹೀರಾತು ಪ್ರದರ್ಶಿಸಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಭಾರೀ ಲಾಭ ಪಡೆಯುವಂತೆ ಪ್ರಕಾಶ ಅವರಿಗೆ ಮನವೊಲಿಸಿದ್ದಾರೆ.

ಲಿಂಕ್ ಕ್ಲಿಕ್ ಮಾಡಿ ತಮ್ಮ ಹೆಸರು ಹಾಗೂ ಸಂಪರ್ಕ ವಿವರಗಳನ್ನು ನೋಂದಾಯಿಸಿಕೊಂಡ ಬಳಿಕ, ಆರೋಪಿಗಳು ಪ್ರಾರಂಭದಲ್ಲಿ ನಿಮ್ಮ ಖಾತೆ ಸಕ್ರಿಯಗೊಳಿಸಲು ಎಂಬ ನೆಪದಲ್ಲಿ ಫೋನ್ ಪೇ ಮೂಲಕ 16,500 ರೂ. ಪಾವತಿಸಿಕೊಂಡಿದ್ದಾರೆ. ಹಂತ ಹಂತವಾಗಿ ಇನ್ನಷ್ಟು ಹಣ ಹೂಡಿಕೆ ಮಾಡಲು ಒತ್ತಾಯಿಸಿದ್ದಾರೆ. ಪ್ರಕಾಶ ಗುಬ್ಬಿ ವಿವಿಧ ಹಂತಗಳಲ್ಲಿ ಆರ್‌ಟಿಜಿಎಸ್ ಮೂಲಕ ಒಟ್ಟು 7.39 ಲಕ್ಷ ರೂ.ಗಳನ್ನು ಆರೋಪಿಗಳ ಖಾತೆಗೆ ಜಮೆ ಮಾಡಿದ್ದಾರೆ. ಇನ್ನಷ್ಟು ಹಣ ಹೂಡಿಕೆ ಮಾಡಿದರೆ ಮಾತ್ರ ಲಾಭ ಹಾಗೂ ಮೊತ್ತ ಮರಳಿ ಸಿಗುತ್ತದೆ ಎಂದು ತಿಳಿಸಿದ್ದಾರೆ. ಆರೋಪಿಗಳ ವರ್ತನೆ ಮಾತುಕತೆಯಿಂದ ತಾವು ವಂಚನೆಗೆ ಒಳಗಾಗಿರುವುದು ಸ್ಪಷ್ಟವಾದಾಗ ಅವರು ಗುಬ್ಬಿ ಸೈಬರ್ ಠಾಣೆಯ ಕದ ತಟ್ಟಿದ್ದಾರೆ. ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಕಪ್ಪು ಹಣ ಬಿಳಿಯಾಗಿಸಲು ಟ್ರಸ್ಟ್-ಪೀಠ ಬಳಕೆ

ಮಾಜಿ ಶಾಸಕ ಶಿವಶಂಕರ್ ಆರೋಪ । ಪಂಚಮಸಾಲಿ ಲೆಕ್ಕಕೊಡಿ ಚಳವಳಿ

ಸಂ.ಕ.ಸಮಾಚಾರ ಹರಿಹರ

2008ರಲ್ಲಿ ಆರಂಭವಾಗಿರುವ ವೀರಶೈವ ಲಿಂಗಾಯತ ಪಂಚಮಸಾಲಿ ಟ್ರಸ್ಟ್ ಮತ್ತು ಹರಪೀಠವನ್ನು ತಮ್ಮ ವ್ಯಾಪಾರದ ಕಪ್ಪು ಹಣವನ್ನು ಬಿಳಿಯಾಗಿಸಿಕೊಳ್ಳಲು ಟ್ರಸ್ಟಿಗಳು ಬಳಸಿಕೊಂಡಿದ್ದಾರೆ ಎಂದು ಮಾಜಿ ಶಾಸಕ ಎಚ್.ಎಸ್.ಶಿವಶಂಕರ್ ಗಂಭೀರ ಆರೋಪ ಮಾಡಿದರು.

ಖಾಸಗಿ ಹೊಟೇಲ್ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ವೀರಶೈವ ಲಿಂಗಾಯತ ಪಂಚಮಸಾಲಿ ಶ್ರೀಪೀಠ, ಲೆಕ್ಕಕೊಡಿ ಚಳವಳಿ ಹೋರಾಟ ಸಮಿತಿ ಹಾಗೂ ರಾಜ್ಯ ಪಂಚಮಸಾಲಿ ಸಮಾಜ ಬಾಂಧವರ ಸಭೆಯಲ್ಲಿ, ಸಮಾಜಕ್ಕೆ ನೂತನ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ, ಶಂಕರಗೌಡ ಪಾಟೀಲ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಸಮಾಜದ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಔದ್ಯೋಗಿಕ ಅಭಿವೃದ್ಧಿಗೆ ಸಂಕಲ್ಪ ತೊಟ್ಟಿದ್ದ ಟ್ರಸ್ಟಿಗಳು ಸರ್ಕಾರದ ಕಣ್ಣಿಗೆ ಮಣ್ಣೆರಚಿ ಟ್ರಸ್ಟ್ ಮತ್ತು ಪೀಠವನ್ನು ತಮ್ಮ ಕಪ್ಪುಹಣವನ್ನು ಬಿಳಿಯಾಗಿಸಿಕೊಳ್ಳಲು ಬಳಸಿಕೊಂಡಿದ್ದಾರೆ, ಇದು ಸಮಾಜಕ್ಕಾಗಿರುವ ದೊಡ್ಡ ನಷ್ಟವಾಗಿದೆ ಎಂದರು.

ಕಳೆದ 18 ವರ್ಷಗಳಲ್ಲಿ ದೇಣಿಗೆ ಹಾಗೂ ಸರ್ಕಾರದಿಂದ ಬಂದ ಒಟ್ಟು ಅಂದಾಜು 70 ಕೋಟಿಗೂ ಅಧಿಕ ಹಣವನ್ನು ಪೀಠದ ಟ್ರಸ್ಟಿಗಳು ಬಳಸಿದ್ದು ಲೆಕ್ಕ ನೀಡುವಲ್ಲಿ, ಭಾರೀ ಅವ್ಯವಹಾರ ನಡೆಸಿದ್ದಾರೆಂದು ಟ್ರಸ್ಟಿನಿಂದ ಕರೆದಿದ್ದ ಸಭೆಯಲ್ಲಿಯೇ ಬಾವಿ ಬೆಟ್ಟಪ್ಪನವರು ಬಹಿರಂಗಪಡಿಸಿದ್ದು ಸತ್ಯ ಸಂಗತಿಯಾಗಿದೆ. ಅದರ ಫಲವಾಗಿ ಇಂದು ಲೆಕ್ಕ ಕೊಡಿ ಚಳವಳಿ ಹುಟ್ಟಿಕೊಂಡಿದೆ. ಚಳವಳಿಯ ಕಾವು ಹೆಚ್ಚಾದ ಕಾರಣ, ಕಳೆದ ತಿಂಗಳು 27ರಂದು ಟ್ರಸ್ಟ್ ಕಮಿಟಿಯಿಂದ ನೀಡಿರುವ 27.5 ಕೋಟಿ ಲೆಕ್ಕ ಶುದ್ಧ ಸುಳ್ಳಿನ ಲೆಕ್ಕವಾಗಿದೆ. 175 ಕೆ.ಜಿ ಬೆಳ್ಳಿ ಎಲ್ಲಿದೆ. ಟ್ರಸ್ಟ್ ಹೆಸರಿನಲ್ಲಿ ಎಷ್ಟು ಅಕೌಂಟ್‌ಗಳಿವೆ ಎಂದು ಪ್ರಶ್ನಿಸಿದರು.

ಟ್ರಸ್ಟಿಗಳನ್ನು ನಂಬಿ ಹಣ ನೀಡಿ ಮೋಸಕ್ಕೊಳಗಾದ ಸಮಾಜದ ಮಾಜಿ ಶಾಸಕರಾದ ಸೋಮಣ್ಣ ಬೇವಿನಮರದ, ಅರುಣಕುಮಾರ ಪೂಜಾರ, ನಂದಿಹಳ್ಳಿ ಹಾಲಪ್ಪ, ಎಂ.ಜಿ ಪರಮೇಶ್ವರಗೌಡ್ರ, ಹೊನ್ನಾಳ್ಳಿ ಬಾಬಣ್ಣ, ಪೀಠದ ಆಡಳಿತಾಧಿಕಾರಿ ಡಾ. ಎಚ್.ಪಿ ರಾಜಕುಮಾರ್ ಸೇರಿದಂತೆ ಇನ್ನಿತರರ ಒತ್ತಾಯದ ಮೇರೆಗೆ, ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವುದಕ್ಕಾಗಿ, ಪೀಠದಲ್ಲಿ ನಡೆಯುತ್ತಿರುವ ಎಲ್ಲಾ ಅವ್ಯವಹಾರಗಳನ್ನು ಬಯಲಿಗೆಳೆಯಲು ನಾನು ಬಂದಿದ್ದೇನೆ ಎಂದರು.

ತೆರಿಗೆ ಹಣ ಉಳಿಸಲು ಕಳ್ಳ ಲೆಕ್ಕ

ತಮ್ಮ ಬಟ್ಟೆ ವ್ಯಾಪಾರದ ಹೆಸರಿನಲ್ಲಿ ಸರ್ಕಾರಕ್ಕೆ ಕಟ್ಟಬೇಕಾಗಿರುವ ಕೋಟ್ಯಂತರ ತೆರಿಗೆಯನ್ನು ಉಳಿಸಿಕೊಂಡ ಕಪ್ಪು ಹಣವನ್ನು ಬಿಳಿಯಾಗಿಸಿಕೊಳ್ಳಲು ಸರ್ಕಾರದ ಕಣ್ಣಿಗೆ ಮಣ್ಣೆರಚಲು, ಇಡಿಗೆ ಸುಳ್ಳು ಲೆಕ್ಕ ತೋರಿಸಿ ಸಾಚಾ ಎನ್ನಿಸಿಕೊಳ್ಳಲು, ಬಿ.ಸಿ ಉಮಾಪತಿಯವರು ಟ್ರಸ್ಟ್ ಮತ್ತು ಪೀಠವನ್ನು ಬಳಸಿಕೊಳ್ಳುತ್ತಿದ್ದಾರೆ.

ಇವೆಲ್ಲಾ ಕಳ್ಳ–ಸುಳ್ಳ ಲೆಕ್ಕ ನಮಗೆ ಗೊತ್ತು. ಇವರು ತಮ್ಮ ವರ್ತನೆಯನ್ನು ತಿದ್ದಿಕೊಳ್ಳದಿದ್ದರೆ ಇಡಿಗೆ ನಾನೇ ಖುದ್ದು ಮಾಹಿತಿ ನೀಡುವ ಕಾಲ ದೂರವಿಲ್ಲ, ವಚನಾನಂದ ಶ್ರೀಗಳನ್ನು ಪೀಠದಿಂದ ಹೊರಗೆ ಹಾಕುತ್ತೇವೆ ಎಂದು ಹೇಳುತ್ತಿರುವ ಟ್ರಸ್ಟಿಗಳು ಇಲ್ಲಿಯವರೆಗೂ ಏಕೆ ಹೊರಗೆ ಹಾಕಿಲ್ಲ ಎಂದು ಪ್ರಶ್ನಿಸಿದರು.

ಶಿಕ್ಷಣ ನೀಡಿದವರೇ ಸಂಗಾತಿಯನ್ನೂ ಹುಡುಕಿಕೊಟ್ಟರು!

ನರಗುಂದದಲ್ಲಿ ಘಟನೆ । ಮಾತು ಬಾರದ, ಕಿವಿ ಕೇಳದ ಜೋಡಿಗೆ ಕಂಕಣಬಾಗ್ಯ

▪ ಉಮೇಶ ಬೋಳಶೆಟ್ಟಿ

ಸಂ.ಕ.ಸಮಾಚಾರ ನರಗುಂದ(ಗದಗ)

ಸ್ವರ್ಗದಲ್ಲೇ ಹೆಣ್ಣಿಗೊಂದು ಗಂಡು, ಗಂಡಿಗೊಂದು ಹೆಣ್ಣನ್ನು ದೇವರು ನಿಶ್ಚಯ ಮಾಡಿರುತ್ತಾನೆಂಬ ಮಾತಿನಂತೆ ಮಾತು ಬಾರದ, ಕಿವಿಯೂ ಕೇಳದ ಮೂಕ ಹಕ್ಕಿಗಳಿಬ್ಬರು ಪಟ್ಟಣದಲ್ಲಿ ಸತಿ–ಪತಿಗಳಾಗಿ ಹೊಸ ಜೀವನಕ್ಕೆ ಪದಾರ್ಪಣೆ ಮಾಡುವ ಮೂಲಕ ಅಪರೂಪದ ಘಟನೆಗೆ ಸಾಕ್ಷಿಯಾದರು.

ನರಗುಂದ ದಂಡಾಪೂರ ಬಡಾವಣೆಯ ಶ್ರೀವಿಠ್ಠಲ–ರುಕ್ಮಿಣಿ ಪಾಂಡುರಂಗ ಮಂದಿರದಲ್ಲಿ ನಡೆದ ಸರಳ ವಿವಾಹ ಮಹೋತ್ಸವದಲ್ಲಿ ಅಪರೂಪದ ಜೋಡಿ ದಾಂಪತ್ಯ ಜೀವನಕ್ಕೆ ಕಾಲಿಟ್ಟಿತು. ಈ ಮದುವೆಗೆ ನೆಂಟರು, ಸ್ನೇಹಿತರು, ಬಂಧು–ಮಿತ್ರರು ಆಗಮಿಸಿ ಮೌನ ಹಕ್ಕಿಗಳ ಜೀವನ ಸುಖಕರವಾಗಿರಲೆಂದು ಶುಭ ಹಾರೈಸಿದರು.

ಧಾರವಾಡ ಜಿಲ್ಲೆ ಸತ್ತೂರಿನ ಯಲ್ಲವ್ವ–ಮಾರುತಿ ಇಂಗನಹಳ್ಳಿ ದಂಪತಿಯ ತೃತೀಯ ಸುಪುತ್ರಿ ರಾಧಿಕಾ ಹಾಗೂ ನರಗುಂದ ಜಮಲಾಪೂರ ಬಡಾವಣೆಯ ರೇಣುಕಾಬಾಯಿ ಪರಶುರಾಮ ಬೋಯಿಟೆ ದಂಪತಿಯ ತೃತೀಯ ಸುಪುತ್ರ ವಿಷ್ಣು ಗುರು–ಹಿರಿಯರ ಸಮ್ಮುಖದಲ್ಲಿ ನವಜೀವನಕ್ಕೆ ಕಾಲಿಟ್ಟರು.

ಹುಟ್ಟಿನಿಂದಲೇ ಕಿವುಡ ಹಾಗೂ ಮೂಕಳಾಗಿರುವ ರಾಧಿಕಾ ಸತ್ತೂರಿನಲ್ಲಿ 1 ರಿಂದ 3ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದರು. ಆ ಬಳಿಕ 4 ರಿಂದ 10ನೇ ತರಗತಿವರೆಗೆ ಧಾರವಾಡದ ಹೊನ್ನಮ್ಮ ಕಿವುಡ ಮತ್ತು ಮೂಕರ ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಪೂರೈಸಿ ಮೈಸೂರಿನ ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಡಿಪ್ಲೊಮಾ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ವಿದ್ಯಾಭ್ಯಾಸ ಪೂರ್ಣಗೊಳಿಸಿದರು. ಮಾತು ಬಾರದಿದ್ದರೂ 1 ವರ್ಷ ವರನ ಹುಡುಕಾಟದೊಂದಿಗೆ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡಿರುವ ಅನುಭವ ಹೊಂದಿದ್ದಾರೆ.

ನರಗುಂದದ ವಿಷ್ಣು ಬೋಯಿಟೆ ಕೂಡ ಹುಬ್ಬಳ್ಳಿಯ ಪ್ರಿಯದರ್ಶಿನಿ ಕಿವುಡ ಮತ್ತು ಮೂಕರ ವಸತಿ ಶಾಲೆಯಲ್ಲಿ 1 ರಿಂದ 10ನೇ ತರಗತಿವರೆಗೆ ವಿದ್ಯಾಭ್ಯಾಸ ಪೂರೈಸಿ, ಮೈಸೂರಿನಲ್ಲಿ ಡಿಪ್ಲೊಮಾ ಜೆಡಿ ಅಂಡ್ ಟಿ ಕೋರ್ಸ್ ಪಡೆದು ನರಗುಂದ ಪುರಸಭೆಯಲ್ಲಿ ದಿನಗೂಲಿ ಕೆಲಸ ಮಾಡುತ್ತಿದ್ದಾರೆ.

ಇವರಿಬ್ಬರೂ ತಾವು ವಿದ್ಯಾಭ್ಯಾಸ ಮಾಡಿದ ಮೈಸೂರಿನ ಜೆಎಸ್ ಕಾಲೇಜಿಗೆ ಕುಟುಂಬಸ್ಥರೊಂದಿಗೆ ಪ್ರತ್ಯೇಕವಾಗಿ ತೆರಳಿ ವಿಷ್ಣು ವಧು ಬೇಕೆಂದು, ರಾಧಿಕಾ ಕುಟುಂಬಸ್ಥರು ವರ ಬೇಕೆಂದು ಸ್ವ–ವಿವರ ಮಾಹಿತಿ ನೀಡಿ ಬಂದಿದ್ದರು. ಯೋಗಾಯೋಗ ಎಂಬಂತೆ ಶಿಕ್ಷಣವನ್ನು ಧಾರೆ ಎರೆದಿದ್ದ ವಿದ್ಯಾ ಮಂದಿರವೇ ಮರಾಠಿ ಸ್ವಜಾತಿಯ ಮೂಕ ಹಕ್ಕಿಗಳಿಬ್ಬರನ್ನು ಒಂದುಗೂಡಿಸುವ ಮೂಲಕ ಅವರ ಬಾಳಿನ ಬೆಸುಗೆಯಾಗಿ ಕುಟುಂಬಸ್ಥರ ನೆಮ್ಮದಿಯ ಸಂತೋಷಕ್ಕೆ ಕಾರಣವಾಗಿದೆ.



ನರಗುಂದ ದಂಡಾಪೂರ ಬಡಾವಣೆಯ ವಿಠ್ಠಲ ಮಂದಿರದಲ್ಲಿ ವಿಷ್ಣು ಹಾಗೂ ರಾಧಿಕಾ ವಿವಾಹ ಮಹೋತ್ಸವ ಜರುಗಿತು.

> ದೈಹಿಕ, ಮಾನಸಿಕ, ಆರ್ಥಿಕವಾಗಿ ಅದೆಷ್ಟೇ ಸ್ಥಿತಿವಂತರಿದ್ದರೂ ಇಂದಿನ ಕಾಲದಲ್ಲಿ ಯುವಕರಿಗೆ ಹೆಣ್ಣು ಸಿಗುತ್ತಿಲ್ಲ. ರೈತರ ಮಕ್ಕಳಿಗಂತೂ ಕನ್ಯೆ ಸಿಗುವುದು ದೂರದ ಮಾತಾಗಿದೆ. ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಮಾತು ಬಾರದ ನಮ್ಮ ಮಗನಿಗೆ ಒಳ್ಳೆಯ ವಧು ಸಿಕ್ಕಿರುವುದು ನಮ್ಮ ಪೂರ್ವ ಜನ್ಮದ ಪುಣ್ಯವೇ ಸರಿ.
>
> ▪ ರೇಣುಕಾಬಾಯಿ ಬೋಯಿಟೆ, ವರನ ತಾಯಿ

ಬಿಸಿಲ ಧಗೆಗೆ ಮುದುಡಿದ ಕೆಂಗುಲಾಬಿ

40 ಡಿಗ್ರಿವರೆಗೂ ಹೆಚ್ಚಿದ ಉಷ್ಣಾಂಶ । ಬೆಳೆಗಾರ ಕಂಗಾಲು

▪ ಸಿದ್ದಯ್ಯ ಹಿರೇಮಠ

ಸಂ.ಕ.ಸಮಾಚಾರ ಮೋಳೆ(ಬೆಳಗಾವಿ)

ದಿನಬೆಳಗಾದರೆ ಹೆಚ್ಚುತ್ತಿರುವ ಬಿಸಿಲಿನ ಧಗೆಗೆ ಮನುಷ್ಯರೇ ಬಸವಳಿದು ಹೋಗುತ್ತಿದ್ದಾರೆ. ಇನ್ನು, ಗಿಡ, ಮರ, ಹೂಬಳ್ಳಿ ಯಾವ ಲೆಕ್ಕ?

ಪ್ರಾಣಿ ಪಕ್ಷಿ ಸಂಕುಲ ಕಂಗೆಡಿಸಿರುವ ಈ ಬಿರು ಬಿಸಿಲಿನ ಧಗೆ, ರೈತನ ಹೂಗಿಡಗಳನ್ನೂ ಬಿಟ್ಟಿಲ್ಲ. ಹೌದು, ಬಿಸಿಲಿನ ತಾಪವು ಗಡಿ ಕಾಗವಾಡ ತಾಲೂಕಿನ ಮಂಗಸೂಳಿ ಗ್ರಾಮ ಹಾಗೂ ಈ ಭಾಗದ ಅನೇಕ ಹೂದೋಟಗಳು ಸಂಪೂರ್ಣವಾಗಿ ಒಣಗುವಂತೆ ಮಾಡಿದೆ. ಬೆಳಗ್ಗೆಯಿಂದಲೇ ಏರುತ್ತಿರುವ ಬಿಸಿಲಿನ ಕಾವು ಮಧ್ಯಾಹ್ನ ಉಷ್ಣಾಂಶ 39 ರಿಂದ 41 ಡಿಗ್ರಿ ಸೆಲ್ಸಿಯಸ್ ಇದ್ದು ಭೂಮಿ ಕಾದು ಕೆಂಡದಂತಾಗುತ್ತಿದೆ. ಹೊಲದಲ್ಲಿ ಮಣ್ಣು ಅಕ್ಷರಶಃ ಬೆಂಕಿಯಂತಾಗಿದ್ದು ಈ ಕಾವು ತೆಗೆದುಕೊಳ್ಳಲಾಗದ ಹೂ ಬೆಳೆ ಸಂಪೂರ್ಣವಾಗಿ ನೆಲಕಚ್ಚುತ್ತಿದೆ.

ನೀರು ಕಡಿಮೆ ಆಗಬಾರದೆಂದು ರೈತ ಹಗಲು–ರಾತ್ರಿ ತೋಟಕ್ಕೆ ನೀರು ಹರಿಸಿದರೂ ಪ್ರಯೋಜನವಾಗುತ್ತಿಲ್ಲ. ಬಿಸಿಲಿನ ಝಳಕ್ಕೆ ಗಿಡಗಳು ಬಾಡುತ್ತಿದ್ದು, ಮೊಗ್ಗು ಬಿಟ್ಟ ಹೂವು ಅರಳುವ ಮುಂಚೆಯೇ ಬಾಡಿ ಹೋಗುತ್ತಿವೆ. ಅರಳಿದ ಹೂವು ಮಧ್ಯಾಹ್ನಕ್ಕೆ ತಲೆತಗ್ಗಿಸಿ ನೆಲಕ್ಕೆ ಬೀಳುತ್ತಿವೆ. ಮಾರುಕಟ್ಟೆಗೆ ಕಳುಹಿಸಬೇಕಾದ ಹೂ ತೋಟದಲ್ಲೇ ಹಾಳಾಗುತ್ತಿದ್ದು, ಕೂಲಿ ಖರ್ಚು ಕೂಡ ಕೈಗೆ ಸಿಗದ ಸ್ಥಿತಿ ಬರದೆ ರೈತ ಕಂಗಾಲಾಗಿ ಹೋಗಿದ್ದಾನೆ.

> ಉತ್ತಮ ಇಳುವರಿ ಬರುವ ಹೊತ್ತಿನಲ್ಲಿಯೇ ಬಿಸಿಲು ಗುಲಾಬಿ ಬೆಳೆ ನಾಶ ಮಾಡಿದೆ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ಇನ್ನೂ ಎರಡು ದಿನ ಮಳೆ ಆಗದಿದ್ದರೆ ಉಳಿದ ಗಿಡಗಳೂ ಸಂಪೂರ್ಣ ಒಣಗಿ ಹೋಗುತ್ತವೆ. ಏನು ಮಾಡಬೇಕೆಂಬುದು ತಿಳಿಯದಾಗಿದೆ. ಸಾಲ ಸೋಲ ಮಾಡಿ ಬೆಳೆದಿದ್ದ ಗುಲಾಬಿ ಹೂದೋಟ ಕಣ್ಣೆದುರೇ ಹಾಳಾಗುತ್ತಿರುವುದನ್ನು ನೋಡಿ ಕಣ್ಣಲ್ಲಿ ನೀರು ಬರುತ್ತಿದೆ.
>
> ▪ ಲತೀಫ ಮುಲ್ಲಾ, ಮಂಗಸೂಳಿ

ದೌರ್ಜನ್ಯ : ವಚನಾನಂದ ಶ್ರೀಗೆ ನಿರೀಕ್ಷಣಾ ಜಾಮೀನು

ಸಂ.ಕ.ಸಮಾಚಾರ ಹರಿಹರ

ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಪೀಠಾಧಿಪತಿ, ವಚನಾನಂದ ಸ್ವಾಮೀಜಿಯವರಿಗೆ ಮಕ್ಕಳ ದುರ್ಬಳಕೆ ಹಾಗೂ ದೌರ್ಜನ್ಯದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಜಿಲ್ಲಾ ನ್ಯಾಯಾಲಯವು ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. ಮಠದ ಆಂತರಿಕ ವಿವಾದಗಳ ನಡುವೆಯೇ ಕೇಳಿಬಂದಿದ್ದ ಈ ಗಂಭೀರ ಆರೋಪದ ಹಿನ್ನೆಲೆಯಲ್ಲಿ ಶ್ರೀಗಳ ಪರವಾಗಿ ಏ. 21ರಂದು ನಿರೀಕ್ಷಣಾ ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯವು, ಸರ್ಕಾರಿ ಅಭಿಯೋಜಕರ ಆಕ್ಷೇಪಣೆ ಹಾಗೂ ಪ್ರತಿವಾದಗಳನ್ನು ಆಲಿಸಿದ ನಂತರ ಶ್ರೀಗಳಿಗೆ ಜಾಮೀನು ನೀಡಿ ಆದೇಶ ಹೊರಡಿಸಿದ್ದು, ಶ್ರೀಗಳಿಗೆ ತಾತ್ಕಾಲಿಕ ಸಮಾಧಾನ ಸಿಕ್ಕಂತಾಗಿದೆ. ಸುಪ್ರೀಂಕೋರ್ಟ್‌ನ ನಿರ್ದೇಶನದಂತೆ, ಅಪ್ರಾಪ್ತ ಮಕ್ಕಳು ಮತ್ತು ಸಂವೇದನಾಶೀಲ ಪ್ರಕರಣಗಳಿಗೆ ಸಂಬಂಧಿಸಿದ ಆದೇಶದ ಪ್ರತಿಗಳನ್ನು ಸಾರ್ವಜನಿಕವಾಗಿ ಆನ್‌ಲೈನ್‌ನಲ್ಲಿ ಲಭ್ಯವಾಗದಂತೆ ಗೌಪ್ಯವಾಗಿಡಲಾಗಿದೆ.

7 ಕುಟುಂಬಕ್ಕೆ ಊರಿನಿಂದ ಬಹಿಷ್ಕಾರ: ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲು

ಸಂ.ಕ.ಸಮಾಚಾರ ಬಾಗಲಕೋಟೆ

ಜಮಖಂಡಿ ತಾಲೂಕಿನ ಹುಣಸಿಕಟ್ಟಿಯಲ್ಲಿ ಹನುಮಂತದೇವರ ದೇವಸ್ಥಾನದ ಓಕಳಿಗೆ ದೇಣಿಗೆ ನೀಡದ ಏಳು ಕುಟುಂಬಗಳಿಗೆ ಬಹಿಷ್ಕಾರ ಹಾಕಿದ ಪ್ರಕರಣದ ಬಗ್ಗೆ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದ ವರದಿಯನ್ನಾಧರಿಸಿ ಮುಖ್ಯಮಂತ್ರಿಗಳ ಕಾರ್ಯಾಲಯವು ಸೂಕ್ತ ಕ್ರಮಕ್ಕೆ ಸೂಚಿಸಿದೆ. "ದೇವರ ಜಾತ್ರೆಗೆ ದೇಣಿಗೆ ಕೊಡದಿದ್ದಕ್ಕೆ 7 ಕುಟುಂಗಳಿಗೆ ಊರಿನಿಂದಲೇ ಬಹಿಷ್ಕಾರ" ಶೀರ್ಷಿಕೆಯಡಿ ಮೇ 2ರಂದು ಪತ್ರಿಕೆಯಲ್ಲಿ ವರದಿ ಪ್ರಕಟಗೊಂಡಿತ್ತು. ವರದಿ ಗಮನಿಸಿರುವ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಡಾ.ಕೆ.ವೈಷ್ಣವಿ ಅವರು ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವಂತೆ ಬಾಗಲಕೋಟೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚಿಸಿದ್ದಾರೆ. ಇದಕ್ಕೆ ಉತ್ತರಿಸಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹುಣಸಿಕಟ್ಟಿ ಗ್ರಾಮದ ಯಲ್ಲಪ್ಪ ಧರೆಪ್ಪ ಭಗನ್ನವರ, ಅಣ್ಣಪ್ಪ ರಂಗಪ್ಪ ಕಡಪಟ್ಟಿ, ಸಿದ್ದಪ್ಪ ಗದಿಗೆಪ್ಪ ಎಣ್ಣೆ, ಯಲ್ಲಪ್ಪ ಮಹಾದೇವ ಕಳ್ಳೊಳ್ಳಿ, ಧರೆಪ್ಪ ಎಣ್ಣೆ, ಮಲ್ಲಪ್ಪ ಬಟಕುರ್ಕಿ, ರಾಮಪ್ಪ ಬಟಕುರ್ಕಿ ಅವರ ಕುಟುಂಬಗಳಿಗೆ ದೇಣಿಗೆ ನೀಡದ್ದಕ್ಕಾಗಿ ಕಿರಾಣಿ ಅಂಗಡಿ, ಹಿಟ್ಟಿನ ಗಿರಣಿ ಹಾಗೂ ದೇವಸ್ಥಾನಗಳ ಕಡೆಗೆ ಬಾರದಂತೆ ನಿರ್ಬಂಧಿಸಿ ಬಹಿಷ್ಕಾರ ಹಾಕಿರುವುದು ಕಂಡುಬಂದಿದೆ. ಈ ಸಂಬಂಧ ತಹಶೀಲ್ದಾರ್ ಕಚೇರಿಯ ಕಂದಾಯ ನಿರೀಕ್ಷಕ ಮಂಜುನಾಥ ದೊಡಮನಿ ಅವರು ನೀಡಿರುವ ವರದಿಯನ್ನಾಧರಿಸಿ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವ ಡಂಗೂರ ಸಾರಿರುವ ವಿಡಿಯೋದಲ್ಲಿ ಕಾಣಿಸಿ ಕೊಂಡಿರುವ ಆರೋಪಿ ಪ್ರಭು ಹೂಗಾರ ಹಾಗೂ ಇತರರು ವಿರುದ್ಧ ದೂರು ದಾಖಲಿಸಲಾಗಿದೆ ಎಂದು ವಿವರಿಸಿದ್ದಾರೆ.

ಪ್ರಕರಣ ಸಂಬಂಧ ಜಮಖಂಡಿ ಗ್ರಾಮೀಣ ಠಾಣೆ ಪಿಎಸ್‌ಐ ಅವರು ಗ್ರಾಮಕ್ಕೆ ತೆರಳಿ ವಿಚಾರಿಸಿದಾಗ ಯಲ್ಲಪ್ಪ ಭಗನ್ನವರ ಹೊರತಾಗಿ ಇತರರು ಯಾರೂ, ಯಾವುದೇ ರೀತಿ ಬಹಿಷ್ಕಾರ ಹಾಕಿರುವುದಿಲ್ಲ ಎಂದು ತಿಳಿಸಿದ್ದಾರೆ. ಗ್ರಾಮದಲ್ಲಿ ಎಲ್ಲ ಸಮುದಾಯದ ಮುಖಂಡರನ್ನು ಸೇರಿಸಿ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಶಾಂತಿ ಸಭೆಯನ್ನು ನಡೆಸಲಾಗಿದೆ ಎಂದೂ ಎಸ್‌ಪಿ ವಿವರಿಸಿದ್ದಾರೆ.

▪ ಸಂ.ಕ. ವರದಿ ಉಲ್ಲೇಖಿಸಿ ಕ್ರಮಕ್ಕೆ ಸೂಚಿಸಿದ ಸಿಎಂ ಕಚೇರಿ

ಸಂಯುಕ್ತ ಕರ್ನಾಟಕ

ಸ್ಟಾಲಿನ್, ದೀದಿ ಸಲಹಾ ಸಂಸ್ಥೆ I-PACಗೆ ಅಖಿಲೇಶ್ ಗುಡ್‌ಬೈ

ಹಣದ ಕೊರತೆ ನೆಪ ಹೇಳಿ ಒಪ್ಪಂದ ರದ್ದು

ನವದೆಹಲಿ: ಉತ್ತರಪ್ರದೇಶದಲ್ಲಿ ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಗಾಗಿ ಚುನಾವಣಾ ನಿರ್ವಹಣಾ ಸಂಸ್ಥೆ ಐ-ಪ್ಯಾಕ್ ಜೊತೆ ಕೆಲಸ ಮಾಡುವುದಿಲ್ಲ ಎಂದು ಸಮಾಜವಾದಿ ಪಕ್ಷ ಹೇಳಿದೆ. ಹಣದ ಕೊರತೆಯಿಂದಾಗಿ ಒಪ್ಪಂದದಿಂದ ಹಿಂದೆ ಸರಿದಿರುವುದಾಗಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಬುಧವಾರ ಮಧ್ಯಾಹ್ನ ಸುದ್ದಿಗಾರರಿಗೆ ತಿಳಿಸಿದರು.

ಐ-ಪ್ಯಾಕ್ ಒಪ್ಪಂದವನ್ನು ಏಕೆ ರದ್ದುಗೊಳಿಸಲಾಯಿತು ಎಂದು ಯಾದವರನ್ನು ಕೇಳಿದಾಗ, ನಮ್ಮಲ್ಲಿ ಹಣವಿಲ್ಲ. ನೀವು (ಮಾಧ್ಯಮ) ನಮಗೆ ಹಣ ನೀಡಿದರೆ, ನಾವು ಬೇರೆ ಕಂಪನಿಯನ್ನು ನೇಮಿಸಿಕೊಳ್ಳಬಹುದು ಎಂದು ಹಗುರವಾದ ಧಾಟಿಯಲ್ಲಿ ಹೇಳಿದರು. 2022ರ ಚುನಾವಣೆಯಲ್ಲಿ ಸೋಲಿನ ಅಂತರ ಕಡಿಮೆ ಇದ್ದ ಕ್ಷೇತ್ರಗಳಲ್ಲಿ ಐ-ಪ್ಯಾಕ್ ಜೊತೆ ಕೆಲಸ ಮಾಡಬೇಕಿತ್ತು. ಆದರೆ ಇನ್ನು ಮುಂದೆ ಈ ಕ್ಷೇತ್ರಗಳಲ್ಲಿ ಯಾವುದೇ ಗುಂಪಿನ ಜೊತೆ ಕಾರ್ಯನಿರ್ವಹಿಸುವುದಿಲ್ಲ ಎಂದು ಮೂಲಗಳು ತಿಳಿಸಿವೆ. ಆದರೂ ಎರಡೂವರೆ ತಿಂಗಳ ಹಿಂದೆ ಅಖಿಲೇಶ್ ಯಾದವ್ ಸಹಿ ಹಾಕಿದ ಒಪ್ಪಂದದನುಸಾರ ಎರಡನೇ ಚುನಾವಣಾ ನಿರ್ವಹಣೆ ಮತ್ತು ಸಾಮಾಜಿಕ ಮಾಧ್ಯಮ ಸಂಸ್ಥೆಯಾದ ಶೋಟೈಮ್ ಜೊತೆ ಕೆಲಸ ಮಾಡುವುದನ್ನು ಮುಂದುವರಿಸಲಾಗುತ್ತದೆ ಎಂದೂ ವಿವರಿಸಿವೆ.

ನಾನು ರಾಜೀನಾಮೆ ನೀಡಲ್ಲ, ಬೇಕಾದ್ರೆ ವಜಾ ಮಾಡಲಿ: ಮಮತಾ ಭಂಡ ಹಟ

ಚುನಾವಣಾ ಅಕ್ರಮದಲ್ಲಿ ಮೋದಿ, ಶಾ ನೇರ ಭಾಗಿ: ದೀದಿ ಆರೋಪ



ಕೋಲ್ಕತಾ: ನನ್ನನ್ನು ಬೇಕಾದರೆ ವಜಾ ಮಾಡಲಿ. ಆದರೆ ನಾನು ರಾಜೀನಾಮೆ ನೀಡುವುದಿಲ್ಲ ಎಂದು ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ಹಠ ಹಿಡಿದಿದ್ದಾರೆ. ಪಕ್ಷದ ನೂತನ ಶಾಸಕರೊಂದಿಗೆ ಸಭೆ ನಡೆಸಿದ ಅವರು, ವಿಧಾನಸಭೆಯ ಮೊದಲ ದಿನವೇ ನಾವು ಕಪ್ಪು ಬಟ್ಟೆ ಧರಿಸಿ ಪ್ರತಿಭಟನೆ ನಡೆಸುವ ಮೂಲಕ ನಾವಿನ್ನೂ ಬಲಶಾಲಿಗಳೆಂದು ತೋರ್ಪಡಿಸಿಕೊಳ್ಳಬೇಕು. ಇದು ಕರಾಳ ದಿನವಾಗಬೇಕೆಂಬುದು ನನ್ನ ಅಪೇಕ್ಷೆ ಎಂದರು. ನಾನು ಅವರನ್ನು ನೈತಿಕವಾಗಿ ಸೋಲಿಸಿದೆ. ನಾನು ಈಗ ಸ್ವತಂತ್ರ ಹಕ್ಕಿ. ಗೃಹ ಸಚಿವರು ಹಾಗೂ ಪ್ರಧಾನಿ ಚುನಾವಣಾ ಅಕ್ರಮದಲ್ಲಿ ನೇರವಾಗಿ ಭಾಗಿಯಾಗಿದ್ದಾರೆ ಎಂದೂ ನೇರವಾಗಿ ಆರೋಪಿಸಿದರು.

ರಾಜೀನಾಮೆ ನಿರಾಕರಣೆ ಸರಿ: ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡದಿರುವ ಮಮತಾ ಬ್ಯಾನರ್ಜಿ ನಿರ್ಧಾರವನ್ನು ಶಿವಸೇನೆ ರಾಜ್ಯಸಭಾ ಸದಸ್ಯ ಸಂಜಯ್ ರಾವುತ್ ಬೆಂಬಲಿಸಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡುತ್ತಾ, ರಾಜೀನಾಮೆ ನಿರಾಕರಣೆಯು ಕೇಂದ್ರ ಹಾಗೂ ಚುನಾವಣಾ ಆಯೋಗದ ವಿರುದ್ಧದ ಪ್ರತಿಭಟನೆಯ ಒಂದು ಭಾಗವಾಗಿದೆ ಎಂದರು.

ಕೋಲ್ಕತಾ ಟಿಎಂಸಿ ಕಚೇರಿಗೆ ಬುಲ್ಡೋಜರ್: ಬಿಜೆಪಿ ಆಕ್ಷೇಪ

ಕೋಲ್ಕತ್ತಾದ ನ್ಯೂ ಮಾರ್ಕೆಟ್ ಪ್ರದೇಶದಲ್ಲಿರುವ ಟಿಎಂಸಿ ಪಕ್ಷದ ಕಚೇರಿಯನ್ನು ಬುಲ್ಡೋಜರ್ ಬಳಸಿ ಬಿಜೆಪಿ ಧ್ವಂಸ ಮಾಡಿದೆ ಎಂದು ಟಿಎಂಸಿ ಆರೋಪಿಸಿದೆ. ಮಂಗಳವಾರ ಸಂಜೆ ಬುಲ್ಡೋಜರ್ ತಂದ ಅಪರಿಚಿತರ ಗುಂಪೊಂದು ನ್ಯೂ ಮಾರ್ಕೆಟ್ ಬಳಿಯಿದ್ದ ಟಿಎಂಸಿ ಯುನಿಯನ್ ಕಚೇರಿಯನ್ನು ನೆಲಸಮಗೊಳಿಸಿದೆ. ಬಿಜೆಪಿ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ, ಯಾವುದೇ ರೀತಿಯ ಹಿಂಸಾಚಾರ ಅಥವಾ ದಾಂಧಲೆಯನ್ನು ನಮ್ಮ ಪಕ್ಷ ಬೆಂಬಲಿಸುವುದಿಲ್ಲ ಎಂದು ತಿಳಿಸಿದ್ದಾರೆ.

ದೀದಿ ನೇಮಿಸಿದ ಅಧಿಕಾರಿಗಳ ರಾಜೀನಾಮೆ ಪರ್ವ ಆರಂಭ

ಬಿಜೆಪಿ ವಿಜಯ ಬೆನ್ನಲ್ಲೇ ಭಾರಿ ಬೆಳವಣಿಗೆ

ಕೋಲ್ಕತಾ: ಪಶ್ಚಿಮಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಭಾರೀ ಸೋಲು ಕಂಡ ಹಿನ್ನೆಲೆಯಲ್ಲಿ ಆಕೆಯ ಆಡಳಿತ ನೇಮಿಸಿದ್ದ ಹಲವಾರು ಮಾಜಿ ಅಧಿಕಾರಿಗಳು ಹಾಗೂ ಸಲಹೆಗಾರರು ರಾಜೀನಾಮೆ ನೀಡಿದ್ದಾರೆ. ಈ ರೀತಿ ರಾಜೀನಾಮೆ ನೀಡಿದವರಲ್ಲಿ ಅಲಪನ್ ಬಂಡೋಪಾಧ್ಯಾಯ, ಎಚ್‌ಕೆ ದ್ವಿವೇದಿ, ಮನೋಜ್ ಪಂತ್ ಹಾಗೂ ಅಭಿರೂಪ್ ಸರ್ಕಾರ್ ಪ್ರಮುಖರು. ಅಭಿರೂಪ್ ಸರ್ಕಾರ್ ಪ್ರತಿಕ್ರಿಯಿಸಿ ತಮ್ಮದು ರಾಜಕೀಯ ನೇಮಕಾತಿಯಾಗಿದ್ದರಿಂದ ಮಮತಾ ಆಡಳಿತ ಅಂತ್ಯ ಕಂಡ ನಂತರ ಸರ್ಕಾರದಲ್ಲಿ ಮುಂದುವರಿಯುವುದು ನೈತಿಕವಾಗಿ ಸೂಕ್ತವಲ್ಲ ಎಂದಿದ್ದಾರೆ. ಏತನ್ಮಧ್ಯೆ, ರಾಜ್ಯದ ಅಡ್ವೊಕೇಟ್ ಜನರಲ್ ಕಿಶೋರ್ ದತ್ತ ಕೂಡ ರಾಜ್ಯಪಾಲ ಆರ್.ಎನ್.ರವಿ ಅವರಿಗೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿದರು. ಮಮತಾ ಆಡಳಿತ ಕಾಲದಲ್ಲಿ ಅಲಪನ್ ಬಂಡೋಪಾಧ್ಯಾಯ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದಾಗ ಪ್ರಧಾನಿ ಸಭೆಗೆ ಗೈರುಹಾಜರಾಗುವ ಮೂಲಕ ವಿವಾದ ಸೃಷ್ಟಿಸಿದ್ದರು. ಈ ಹಿನ್ನೆಲೆಯಲ್ಲಿ ಅವರನ್ನು ಕೇಂದ್ರ ಸೇವೆಗೆ ಸೇರಿಸಿಕೊಳ್ಳಲು ಮೋದಿ ಸರ್ಕಾರ ಸೂಚಿಸಿತ್ತು. ಆದರೆ ಕೇಂದ್ರ ಸೇವೆ ಮಾಡಲು ಇಷ್ಟವಿಲ್ಲದೆ ನಿವೃತ್ತರಾಗಿದ್ದರು. ಹೀಗಾಗಿ ಮಮತಾ ಅವರನ್ನು ಮುಖ್ಯ ಸಲಹೆಗಾರರನ್ನಾಗಿ ನೇಮಿಸಿಕೊಂಡಿದ್ದರು.

ವಿದೇಶ ಸಮಾಚಾರ

ಇರಾನ್-ಅಮೆರಿಕ ಕದನ ಕೆಲವೇ ದಿನದಲ್ಲಿ ಅಂತ್ಯ?

ಪ್ರಾಜೆಕ್ಟ್ ಫ್ರೀಡಂ ಬಂದ್ ಮಾಡಿದ ಟ್ರಂಪ್



ವಾಷಿಂಗ್ಟನ್: ಕಳೆದ ಕೆಲ ದಿನಗಳಿಂದ ಜಾಗತಿಕ ಆತಂಕಕ್ಕೆ ಕಾರಣವಾಗಿದ್ದ ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧ ಈಗ ಕೊನೆಗೊಳ್ಳುವ ಲಕ್ಷಣಗಳು ಕಾಣಿಸುತ್ತಿವೆ. ಇರಾನ್ ಜೊತೆಗಿನ ಮಾತುಕತೆಯಲ್ಲಿ ಅದ್ಭುತ ಪ್ರಗತಿ ಕಂಡುಬಂದಿರುವ ಹಿನ್ನೆಲೆಯಲ್ಲಿ, ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರಕ್ಕೆ ರಕ್ಷಣೆ ನೀಡಲು ಆರಂಭಿಸಿದ್ದ ಪ್ರಾಜೆಕ್ಟ್ ಫ್ರೀಡಂ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸುವುದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಘೋಷಿಸಿದ್ದಾರೆ. ವಿಶ್ವಸಂಸ್ಥೆ ಮತ್ತು ನೆರೆಯ ರಾಷ್ಟ್ರಗಳ ಮಧ್ಯಸ್ಥಿಕೆಯಲ್ಲಿ ಉಭಯ ದೇಶಗಳು 67 ದಿನದ ಬಳಿಕ ಯುದ್ಧ ನಿಲ್ಲಿಸುವ ನಿಟ್ಟಿನಲ್ಲಿ ಒಂದು ಪುಟದ ತಿಳಿವು ಪತ್ರಕ್ಕೆ ಸಹಿ ಹಾಕಲು ಸಜ್ಜಾಗಿವೆ ಎಂದು ವರದಿಯಾಗಿದೆ.

ಈ ಕುರಿತು ಸಾಮಾಜಿಕ ತಾಣ ಟ್ರುತ್ ಸೋಷಿಯಲ್‌ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, ಪಾಕಿಸ್ತಾನ ಮತ್ತು ಇತರ ರಾಷ್ಟ್ರಗಳ ಮನವಿಯ ಮೇರೆಗೆ ಹಾಗೂ ಇರಾನ್ ಪ್ರತಿನಿಧಿಗಳೊಂದಿಗೆ ನಡೆಯುತ್ತಿರುವ ಮಾತುಕತೆಯಲ್ಲಿ ಉತ್ತಮ ಪ್ರಗತಿ ಕಂಡುಬಂದಿರುವುದರಿಂದ, ಹೊರ್ಮುಜ್ ಜಲಸಂಧಿಯಲ್ಲಿನ ಸೈನಿಕ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುತ್ತಿದೆ ಎಂದಿದ್ದಾರೆ. ಅಲ್ಲದೆ, ಮುಂಬರುವ 48 ಗಂಟೆಗಳು ಈ ಶಾಂತಿ ಪ್ರಕ್ರಿಯೆಯಲ್ಲಿ ಅತ್ಯಂತ ನಿರ್ಣಾಯಕವಾಗಲಿವೆ ಎಂದು ಶ್ವೇತಭವನದ ಮೂಲಗಳು ತಿಳಿಸಿವೆ. ಯುದ್ಧ ನಿಲ್ಲುವ ಮುನ್ಸೂಚನೆ ಸಿಗುತ್ತಿದ್ದಂತೆಯೇ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಯಲ್ಲಿ ಇಳಿಕೆ ಕಂಡುಬಂದಿದೆ.

ಗುರಿ ಮುಟ್ಟಿದ್ದೇವೆ, ಆಪರೇಷನ್ ಫ್ಯೂರಿ ಮುಗಿದಿದೆ: ರುಬಿಯೋ



ವಾಷಿಂಗ್ಟನ್: ಜಗತ್ತಿನ ಭೂಪಟದಿಂದಲೇ ಇರಾನ್‌ಅನ್ನು ಅಳಿಸಿಹಾಕಲು ಅಮೆರಿಕ ಆರಂಭಿಸಿದ್ದ ಆಪರೇಷನ್ ಎಪಿಕ್ ಫ್ಯೂರಿ ಯುಶಸ್ವಿಯಾಗಿ ಮುಕ್ತಾಯಗೊಂಡಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕ್ ರೂಬಿಯೋ ಘೋಷಿಸಿದ್ದಾರೆ. ಕಾರ್ಯಾಚರಣೆಯ ಆಕ್ರಮಣಕಾರಿ ಹಂತ ಮುಕ್ತಾಯವಾಗಿದೆ. ಇರಾನ್ ವಿರುದ್ಧದ ಯುದ್ಧದಲ್ಲಿ ನಮ್ಮ ಗುರಿಯನ್ನು ಸಾಧಿಸಿದ್ದೇವೆ. ಇದೀಗ ನಾವು ಶಾಂತಿಯ ಹಾದಿಯನ್ನು ಬಯಸುತ್ತೇವೆ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ಜೊತೆಗೆ ಹೊಸ ಒಪ್ಪಂದಕ್ಕೆ ಆದ್ಯತೆ ನೀಡುತ್ತಾರೆ ಎಂದು ತಿಳಿಸಿದರು. ಫೆಬ್ರವರಿ 28 ರಂದು ಇಸ್ರೇಲ್ ಮತ್ತು ಅಮೆರಿಕ ಜಂಟಿಯಾಗಿ ಆರಂಭಿಸಿದ್ದ ಈ ಮಿಲಿಟರಿ ಕಾರ್ಯಾಚರಣೆಯು ಇರಾನ್‌ನ ಪ್ರಮುಖ ಮಿಲಿಟರಿ ಮೂಲಸೌಕರ್ಯಗಳನ್ನು ನಾಶಪಡಿಸುವಲ್ಲಿ ಯಶಸ್ವಿಯಾಗಿದೆ ಎಂದು ರೂಬಿಯೋ ಹೇಳಿದ್ದಾರೆ.

ಚೀನಾ, ರಷ್ಯಾ ಜತೆ ಮೈತ್ರಿಕೂಟ ರಚನೆಗೆ ಇರಾನ್ ಕಾರ್ಯತಂತ್ರ?



ಟೆಹ್ರಾನ್: ಅಮೆರಿಕ ಜೊತೆ ಶಾಂತಿ ಮಾತುಕತೆ ಮುಂದುವರಿದಿರುವ ನಡುವೆಯೇ ಇರಾನ್ ಈಗ ಚೀನಾ ಮತ್ತು ರಷ್ಯಾ ಜೊತೆ ತನ್ನ ಬಾಂಧವ್ಯ ಬಲಪಡಿಸುವುದರೊಂದಿಗೆ ಅಮೆರಿಕಕ್ಕೆ ಸೆಡ್ಡುಹೊಡೆಯುವ ಮೈತ್ರಿಕೂಟ ರಚನೆಗೆ ಮುಂದಾಗಿದೆ. ಅಮೆರಿಕದೊಂದಿಗೆ ಯುದ್ಧ ಆರಂಭವಾದ ನಂತರ ಇದೇ ಮೊದಲ ಬಾರಿ ಇರಾನಿನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಚೀನಾ ಪ್ರವಾಸ ಕೈಗೊಂಡಿದ್ದಾರೆ. ಜಾಗತಿಕ ಮಟ್ಟದಲ್ಲಿ ಚೀನಾ ಜೊತೆ ಸೇರಿಕೊಂಡು ಒತ್ತಡ ತಂತ್ರ ಹೇರುವುದು ಅರಾಘ್ಚಿ ಭೇಟಿಯ ಉದ್ದೇಶವಾಗಿದೆ. ಕಳೆದ ತಿಂಗಳು ರಷ್ಯಾ ಸಚಿವ ಸೆರ್ಗಿಯೋ ಲಾವ್ರೋವ್ ಕೂಡಾ ಚೀನಾ ಪ್ರವಾಸ ಕೈಗೊಂಡು ವ್ಯೂಹಾತ್ಮಕ ಕಾರ್ಯತಂತ್ರ ಬಲಪಡಿಸುವ ಕುರಿತು ಚರ್ಚಿಸಿದ್ದರು. ಹೀಗಾಗಿ ಇದೊಂದು ಜಾಗತಿಕ ಮಟ್ಟದಲ್ಲಿ ದಕ್ಷಿಣ ಭಾಗದ ದೇಶಗಳ ಏಕತೆಯ ಪ್ರಯತ್ನ ಎಂದು ಬಣ್ಣಿಸಲಾಗುತ್ತಿದೆ.

ವಂದೇ ಮಾತರಂಗೆ ಅಗೌರವ ತೋರಿದರೆ ಜೈಲು, ದಂಡ ಫಿಕ್ಸ್

ರಾಷ್ಟ್ರಗೀತೆ ಸ್ಥಾನಮಾನ ನೀಡಲು ಕೇಂದ್ರ ಸಂಪುಟ ಅಸ್ತು

ಬಂಗಾಳ ಗೆದ್ದ ಬೆನ್ನಲ್ಲೇ ತೀರ್ಮಾನ | ಸಂಸತ್ತಲ್ಲಿ ಪಾಸ್ ಬಾಕಿ

ನವದೆಹಲಿ: ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಐತಿಹಾಸಿಕ ವಿಜಯ ಸಾಧಿಸಿದ ಎರಡೇ ದಿನಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಚಿವ ಸಂಪುಟ ಸಭೆ ವಂದೇ ಮಾತರಂ ಹಾಡಿಗೆ 'ಜನ ಗಣ ಮನ'ಕ್ಕೆ ನೀಡುವ ಸ್ಥಾನಮಾನವನ್ನು ನೀಡಲು ಓಕೆ ಎಂದಿದೆ. ಈ ಬಗ್ಗೆ ಸಲ್ಲಿಕೆಯಾಗಿದ್ದ ಪ್ರಸ್ತಾವನೆಗೆ ಮಂಗಳವಾರದ ಕ್ಯಾಬಿನೆಟ್ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ಆ ಮೂಲಕ ಬಂಗಾಳಿ ನೆಲದಲ್ಲಿ ಋಷಿಸದೃಷ ವ್ಯಕ್ತಿ ಬಂಕಿಂಚಂದ್ರ ಚಟರ್ಜಿ ಅವರಿಂದ ರಚಿತವಾದ ಹಾಡಿಗೆ ರಾಷ್ಟ್ರೀಯ ಗೌರವವನ್ನು ಸಲ್ಲಿಸಿದೆ.

ರಾಷ್ಟ್ರ ಗೌರವದ ವಿಷಯ ಹಾಗೂ ಆಸ್ತಿಗಳಿಗೆ ಆಗುವ ಅಥವಾ ಮಾಡುವ ಅವಮಾನವನ್ನು ತಡೆಗಟ್ಟುವ ನಿಟ್ಟಿನಲ್ಲಿ (ಪ್ರಿವೆನ್‌ಶನ್ ಆಫ್ ಇನ್‌ಸಲ್ಟ್ ಟು ನ್ಯಾಷನಲ್ ಆನರ್ ಆ್ಯಕ್ಟ್) ಪ್ರತ್ಯೇಕ ಕಾಯ್ದೆಯೊಂದನ್ನು 1971ರಲ್ಲೇ ರಚನೆ ಮಾಡಲಾಗಿದೆ. ಈ ಕಾಯ್ದೆಯಡಿ ರಾಷ್ಟ್ರಗೀತೆಯಾದ ಜನ ಗಣ ಮನಕ್ಕೆ ರಕ್ಷಣೆ ಇದ್ದು, ಯಾರಾದರೂ ಅದರ ಬಗ್ಗೆ ನಿಂದನೀಯ ಅಥವಾ ಅವಮಾನಕರ ಭಾಷೆಯಲ್ಲಿ ಮಾತನಾಡಿದರೆ, ಅಗೌರವವನ್ನು ತೋರಿದರೆ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ. ಆದರೆ ವಂದೇ ಮಾತರಂಗೆ ಇಂಥ ಯಾವುದೇ ರಕ್ಷಣೆ ಇರಲಿಲ್ಲ. ಈಗ ಮೋದಿ ಸಂಪುಟ ಸಭೆಯಲ್ಲಿ ರಾಷ್ಟ್ರಗೀತೆಯ ಸ್ಥಾನಮಾನವನ್ನೇ ವಂದೇ ಮಾತರಂಗೂ ನೀಡಿರುವ ಕಾರಣ, ಅದನ್ನು ಹಾಡುವಾಗ ಅಗೌರವ ತೋರುವ, ಅಡಚಣೆ ಉಂಟು ಮಾಡುವ ಅಥವಾ ಅವಹೇಳನಕ್ಕೆ ಗುರಿ ಮಾಡುವ ಕೃತ್ಯವನ್ನು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಲಾಗುತ್ತದೆ.

1971ರ ಕಾಯ್ದೆಯು ರಾಷ್ಟ್ರಧ್ವಜ, ಸಂವಿಧಾನ ಅಥವಾ ರಾಷ್ಟ್ರಗೀತೆಗೆ ಅವಮಾನ ಮಾಡಿದ ಪ್ರಕರಣಗಳಲ್ಲಿ ಮಾತ್ರ ಜೈಲು ಶಿಕ್ಷೆ ಅಥವಾ ದಂಡವನ್ನು ವಿಧಿಸುತ್ತದೆ. ಆದರೆ ಈ ಕಾಯ್ದೆಯನ್ನೇ ಈಗ ಮೋದಿ ಕ್ಯಾಬಿನೆಟ್ ತಿದ್ದುಪಡಿ ಮಾಡಿದ್ದು ರಾಷ್ಟ್ರ ಗೌರವದ ವಿಷಯಗಳಲ್ಲಿ ವಂದೇ ಮಾತರಂ ಅನ್ನು ಕೂಡ ಬರುತ್ತದೆ.

ತಿಳಿದೋ ತಿಳಿಯದೆಯೂ ರಾಷ್ಟ್ರಧ್ವಜಕ್ಕೆ ಅಗೌರವ ತೋರುವ ರೀತಿಯಲ್ಲಿ ಜನ ಅದನ್ನು ಬಳಸುತ್ತಿರುವುದನ್ನು ಗಮನಿಸಿದ ಸರ್ಕಾರ 2005ರಲ್ಲೂ ಈ ಕಾಯ್ದೆಗೆ ತಿದ್ದುಪಡಿಯನ್ನು ಮಾಡಿತ್ತು.

ತಿದ್ದುಪಡಿ ಬಿಲ್ ಶೀಘ್ರ ಸಂಸತ್ತಿನಲ್ಲಿ ಮಂಡನೆ

ವಂದೇ ಮಾತರಂಗೆ ರಾಷ್ಟ್ರ ಗೀತೆ ಸ್ಥಾನಮಾನ ನೀಡುವ ಕಾಯ್ದೆ ತಿದ್ದುಪಡಿಯನ್ನು ಶೀಘ್ರವೇ ಮೋದಿ ಸರ್ಕಾರ ಸಂಸತ್ತಿನಲ್ಲಿ ಮಂಡಿಸಲಿದೆ ಎಂದು ಮೂಲಗಳು ತಿಳಿಸಿವೆ. ಸದ್ಯ ಸಂಪುಟ ಸಭೆಯಲ್ಲಿ ಈ ತಿದ್ದುಪಡಿಗೆ ಒಪ್ಪಿಗೆ ಸಿಕ್ಕಿದ್ದು ಸಂಸತ್ತಿನಲ್ಲೂ ಸರ್ವಾನು ಮತದಿಂದ ಅಂಗೀಕಾರವಾಗುವ ನಿರೀಕ್ಷೆ ಇದೆ.

ಸಿಎಂ ಸ್ಥಾನಕ್ಕೆ ಹಿಮಂತ್ ರಿಸೈನ್: 11ರ ನಂತರ ಪ್ರಮಾಣ ವಚನ

ಗುವಾಹಟಿ: ಅಸ್ಸಾಂ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಭರ್ಜರಿ ಜಯ ದಾಖಲಿಸಿದ ಬೆನ್ನಲ್ಲೇ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಬುಧವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಲೋಕಭವನದಲ್ಲಿ ರಾಜ್ಯಪಾಲ ಲಕ್ಷ್ಮಣ ಪ್ರಸಾದ್ ಆಚಾರ್ಯ ಅವರನ್ನು ಭೇಟಿ ಮಾಡಿದ ಶರ್ಮಾ, ರಾಜೀನಾಮೆ ಪತ್ರವನ್ನು ಸಲ್ಲಿಸಿದರು. ಈ ವೇಳೆ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುವವರೆಗೆ ಉಸ್ತುವಾರಿ ಮುಖ್ಯಮಂತ್ರಿಯಾಗಿ ಮುಂದುವರಿಯುವಂತೆ ರಾಜ್ಯಪಾಲರು ಶರ್ಮಾ ಅವರಿಗೆ ಸೂಚಿಸಿದ್ದಾರೆ. ರಾಜೀನಾಮೆ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ನೂತನ ಸರ್ಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭ ಮೇ11ರ ನಂತರ ನಡೆಯಲಿದೆ.

ಮುಂಬೈನ ತಾಜ್ ಹೋಟೆಲ್‌ಗೆ ಬಾಂಬ್ ಬೆದರಿಕೆ ಕರೆ: ಅಲರ್ಟ್

ಮುಂಬೈ: ವಾಣಿಜ್ಯ ನಗರಿಯಾದ ಮುಂಬೈಯಲ್ಲಿರುವ ತಾಜ್ ಹೋಟೆಲ್ ಹಾಗೂ ಟ್ರೈಡೆಂಟ್ ಹೋಟೆಲ್‌ಗಳಿಗೆ ಬಾಂಬ್ ಬೆದರಿಕೆ ಕರೆಗಳು ಬಂದಿರುವ ಹಿನ್ನೆಲೆಯಲ್ಲಿ ಮತ್ತೊಮ್ಮೆ ಕಟ್ಟೆಚ್ಚರ ವಹಿಸಲಾಗಿದೆ. ಈ ಹೋಟೆಲ್‌ಗಳ ಮೇಲೆ ಭಯೋತ್ಪಾದಕ ದಾಳಿ ಸನ್ನಿಹಿತವಾಗಿದೆ ಎಂದು ದೂರವಾಣಿ ಮುಖಾಂತರ ಎರಡೂ ಹೋಟೆಲ್‌ಗಳಿಗೆ ಬಾಂಬ್ ಬೆದರಿಕೆ ಹಾಕಿ ಬಂದ ನಂತರ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದರು. ಇದೇ ವೇಳೆ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು ಮುಂಬೈನ ಸಿಯಾನ್‌ನಲ್ಲಿ ಬಾಂಬ್ ಬೆದರಿಕೆ ಹಾಕಿದ ವ್ಯಕ್ತಿಯನ್ನು ಪತ್ತೆ ಹಚ್ಚಿ ಬಂಧಿಸಿದ್ದಾರೆ. ಈ ರೀತಿಯ ಬೆದರಿಕೆಯ ಹಿಂದೆ ಭಾರೀ ದೊಡ್ಡ ಕಾರ್ಯತಂತ್ರ ನಡೆದಿದೆಯೋ ಅಥವಾ ವದಂತಿ ಹಬ್ಬುವ ಪ್ರಯತ್ನವೋ ಎಂಬುದನ್ನು ಗುರುತಿಸಲು ಪೊಲೀಸರು ಪ್ರಯತ್ನ ನಡೆಸುತ್ತಿದ್ದಾರೆ.

ನಿತೀಶ್ ಪುತ್ರ ನಿಶಾಂತ್ ಇಂದು ಬಿಹಾರ ಸಚಿವರಾಗಿ ಪ್ರಮಾಣ?

ಪಾಟ್ನಾ: ಬಿಹಾರ ಮಾಜಿ ಸಿಎಂ ನಿತೀಶ್ ಕುಮಾರ್ ಪುತ್ರ ನಿಶಾಂತ್ ಕುಮಾರ್ ಇಂದು ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರ ಸಚಿವ ಸಂಪುಟ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಗಳಿವೆ ಎಂದು ವರದಿಯಾಗಿದೆ. ಇಲ್ಲಿಯವರೆಗೆ ಅಧಿಕೃತ ರಾಜಕೀಯದಿಂದ ದೂರವೇ ಉಳಿದಿದ್ದ ನಿಶಾಂತ್ ಈಗ ತಂದೆಯ ಸ್ಥಾನವನ್ನು ತುಂಬಲು ಮುಂದಾಗಿದ್ದು, ಆ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಮಂತ್ರಿಯಾಗುವ ಆಸೆಯನ್ನು ವ್ಯಕ್ತಪಡಿಸಿದ್ದಾರೆ ಎಂದು ಹೇಳಲಾಗಿದೆ. ಇದಕ್ಕೆ ಪೂರಕವೆಂಬಂತೆ ತಮ್ಮ ಮೊದಲ ರಾಜಕೀಯ ರ್‍ಯಾಲಿಯನ್ನು ನಿಶಾಂತ್ ಬಿಹಾರದಲ್ಲಿ ಶುರು ಮಾಡಿದ್ದು, ಆ ಮೂಲಕ ಬಲಪ್ರದರ್ಶನ ನಡೆಸಿದ್ದಾರೆ.

ಸಿಬಿಎಫ್‌ಸಿಯ ಅಧ್ಯಕ್ಷರಾಗಿ ಶಶಿ ಶೇಖರ್ ನೇಮಿಸಿದ ಕೇಂದ್ರ

ನವದೆಹಲಿ: ಪ್ರಸಾರ ಭಾರತಿಯ ಮಾಜಿ ಸಿಇಒ ಶಶಿ ಶೇಖರ್ ವೆಂಪತಿ ಅವರನ್ನು ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಯ (ಸಿಬಿಎಫ್‌ಸಿ) ನೂತನ ಅಧ್ಯಕ್ಷರನ್ನಾಗಿ ಕೇಂದ್ರ ಸರ್ಕಾರ ಬುಧವಾರ ನೇಮಕ ಮಾಡಿದೆ. ವೆಂಪತಿ ಅವರು ಅಧಿಕಾರ ವಹಿಸಿಕೊಂಡ ದಿನದಿಂದ ಮೂರು ವರ್ಷಗಳ ಅವಧಿಗೆ ಈ ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ. ಇಲ್ಲಿಯವರೆಗೆ ಸಿಬಿಎಫ್‌ಸಿ ಅಧ್ಯಕ್ಷರಾಗಿದ್ದ ಖ್ಯಾತ ಸಾಹಿತಿ ಪ್ರಸೂನ್ ಜೋಶಿ ಅವರನ್ನು ಪ್ರಸಾರ ಭಾರತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ತೆರವಾದ ಸ್ಥಾನಕ್ಕೆ ಶಶಿ ಶೇಖರ್ ವೆಂಪತಿ ಅವರನ್ನು ಆಯ್ಕೆ ಮಾಡಲಾಗಿದೆ.

ಗುಜರಾತ್: ಪಾಕ್ ದೋಣಿ ಸೀಜ್

ಅಹ್ಮದಾಬಾದ್: ಭಾರತ ಮತ್ತು ಪಾಕಿಸ್ತಾನದ ನಡುವಿನ ಕಡಲ ಗಡಿಯ ಸಮೀಪವಿರುವ ಗುಜರಾತ್‌ನ ಕಚ್ ಜಿಲ್ಲೆಯ ಹರಾಮಿ ನಾಲಾ ಕರಾವಳಿ ಪ್ರದೇಶದಲ್ಲಿ ಪಾಕಿಸ್ತಾನದ ದೋಣಿಯನ್ನು ಬಿಎಸ್‌ಎಫ್ ಅಧಿಕಾರಿಗಳು ಬುಧವಾರ ವಶಪಡಿಸಿಕೊಂಡಿದ್ದಾರೆ. ಗಡಿ ಭದ್ರತಾ ಪಡೆಯ ಯೋಧರು ಬುಧವಾರ ಬೆಳಿಗ್ಗೆ ಗಸ್ತು ತಿರುಗುತ್ತಿದ್ದಾಗ, ಅರಬ್ಬಿ ಸಮುದ್ರದ ಕ್ರೀಕ್ ಪ್ರದೇಶದಲ್ಲಿ ನಿಂತಿದ್ದ ಮರದ ದೋಣಿಯೊಂದನ್ನು ಪತ್ತೆ ಹಚ್ಚಿದ್ದಾರೆ. ಕೂಡಲೇ ಕಾರ್ಯಾಚರಣೆ ನಡೆಸಿದ ತಂಡ ದೋಣಿಯನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಿದೆ. ಪ್ರಾಥಮಿಕ ತನಿಖೆಯಲ್ಲಿ ದೋಣಿಯಲ್ಲಿ ಕೇವಲ ಮೀನುಗಾರಿಕೆ ಉಪಕರಣಗಳು, ಬಲೆಗಳು ಮತ್ತು ಕೆಲವು ಆಹಾರ ಪದಾರ್ಥಗಳು ಪತ್ತೆಯಾಗಿವೆ. ಆದರೆ ಯಾವುದೇ ಅನುಮಾನಾಸ್ಪದ ವಸ್ತುಗಳು ಅಥವಾ ಸ್ಫೋಟಕಗಳು ಕಂಡುಬಂದಿಲ್ಲ.

ಪಂಜಾಬ್ ಸೇನಾ ನೆಲೆಗಳ ಬಳಿ 3 ತಾಸಲ್ಲಿ 2 ಸ್ಫೋಟ

ಸ್ಫೋಟದ ಹಿಂದೆ ಐಎಸ್‌ಐ ಕೈವಾಡ ಶಂಕೆ



ಜಲಂಧರ್: ಪಂಜಾಬ್‌ನಲ್ಲಿ ಮಂಗಳವಾರ ರಾತ್ರಿ ಕೆಲವೇ ಗಂಟೆಗಳ ಅಂತರದಲ್ಲಿ ಎರಡು ಪ್ರಬಲ ಸ್ಫೋಟಗಳು ಸಂಭವಿಸಿದ್ದು, ಇಡೀ ರಾಜ್ಯದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಜಲಂಧರ್‌ನಲ್ಲಿ ಬಿಎಸ್‌ಎಫ್ ಕೇಂದ್ರ ಕಚೇರಿ ಬಳಿ ನಡೆದ ಸ್ಫೋಟದ ಬೆನ್ನಲ್ಲೇ, ಅಮೃತಸರದ ಖಾಸಾ ಪ್ರದೇಶದಲ್ಲಿರುವ ಸೇನಾ ಕಂಟೋನ್ಮೆಂಟ್ ಬಳಿ ಮತ್ತೊಂದು ಸ್ಫೋಟ ಸಂಭವಿಸಿದೆ. ಆಪರೇಷನ್ ಸಿಂದೂರ್ ವರ್ಷಾಚರಣೆ ಹಿನ್ನೆಲೆಯಲ್ಲಿ ಈ ದುರ್ಘಟನೆ ನಡೆದಿರುವ ಸಾಧ್ಯತೆಯಿದ್ದು, ಇದರ ಹಿಂದೆ ಪಾಕಿಸ್ತಾನದ ಐಎಸ್‌ಐ ಕೈವಾಡವಿದೆ ಎಂದು ಪಂಜಾಬ್ ಡಿಜಿಪಿ ಗೌರವ್ ಯಾದವ್ ಹೇಳಿದ್ದಾರೆ. ಮಂಗಳವಾರ ರಾತ್ರಿ ಸುಮಾರು 8 ಗಂಟೆಗೆ ಜಲಂಧರ್‌ನ ಬಿಎಸ್‌ಎಫ್ ಪಂಜಾಬ್ ಫ್ರಾಂಟಿಯರ್ ಪ್ರಧಾನ ಕಚೇರಿಯ ಹೊರಗೆ ಮೊದಲ ಸ್ಫೋಟ ಸಂಭವಿಸಿದೆ. ಇಲ್ಲಿ ಪಾರ್ಕ್ ಮಾಡಲಾಗಿದ್ದ ಡೆಲಿವರಿ ಬಾಯ್ ಒಬ್ಬನ ಸ್ಕೂಟರ್ ಸ್ಫೋಟಗೊಂಡು ಬೆಂಕಿಗೆ ಆಹುತಿಯಾಗಿದೆ. ಈ ಘಟನೆ ನಡೆದ ಕೇವಲ ಮೂರು ಗಂಟೆಗಳ ನಂತರ, ಅಂದರೆ ರಾತ್ರಿ 10:50ರ ಸುಮಾರಿಗೆ ಅಮೃತಸರದ ಖಾಸಾ ಸೇನಾ ಕಂಟೋನ್ಮೆಂಟ್‌ನ ಬಳಿ ಮತ್ತೊಂದು ಸ್ಫೋಟ ಕೇಳಿಬಂದಿದೆ. ಅದೃಷ್ಟವಶಾತ್ ಘಟನೆಗಳಲ್ಲಿ ಪ್ರಾಣಾಪಾಯ ಸಂಭವಿಸಿಲ್ಲ.

ಸಿಂದೂರಕ್ಕೆ ಸೇಡು ತೀರಿಸುವ ಪಣ?

ಘಟನೆ ನಡೆದ ಬೆನ್ನಲ್ಲೇ ಪಂಜಾಬ್ ಡಿಜಿಪಿ ಗೌರವ್ ಯಾದವ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪಾಕ್‌ನ ಐಎಸ್‌ಐ ಮಾದರಿ ಯಲ್ಲಿ ಸ್ಫೋಟ ಸಂಭವಿಸಿದೆ ಎಂದು ದೃಢಪಡಿಸಿದ್ದಾರೆ. ಇದು ಆಪರೇಷನ್ ಸಿಂದೂರ್ ಕಾರ್ಯಾಚರಣೆಗೆ ವರ್ಷ ತುಂಬಿದ ಹಿನ್ನೆಲೆಯಲ್ಲಿ ರಾಜ್ಯದ ಶಾಂತಿ ಕದಡಲು ಪಾಕಿಸ್ತಾನದ ಉಗ್ರ ನಡೆಸಿರುವ ಸಂಚಿನಂತೆ ಕಾಣುತ್ತಿದೆ ಎಂದು ಹೇಳಿದ್ದಾರೆ.

ಸ್ಟಾಲಿನ್ ಭೇಟಿಯಾದ ನಟ ರಜಿನಿ

ತಮಿಳುನಾಡು ಚುನಾವಣೆಯಲ್ಲಿ ಡಿಎಂಕೆ ಪರಾಭವ ಬೆನ್ನಲ್ಲೇ ಸೂಪರ್ ಸ್ಟಾರ್ ರಜಿನಿಕಾಂತ್ ಎಂ.ಕೆ.ಸ್ಟಾಲಿನ್ ಅವರನ್ನು ಭೇಟಿ ಆಗಿ ಮಾತುಕತೆ ನಡೆಸಿದ್ದಾರೆ. ಭೇಟಿಗೆ ನಿಖರ ಕಾರಣ ಏನು ಎಂಬುದು ತಿಳಿದುಬಂದಿಲ್ಲ.

ಜಗತ್ತಿನ ಮೊದಲ 24/7 ಸುದ್ದಿ ವಾಹಿನಿ ಸ್ಥಾಪಕ ಟೆಡ್ ನಿಧನ



ವಾಷಿಂಗ್ಟನ್: ಜಗತ್ತಿನ 24/7 ಸುದ್ದಿವಾಹಿನಿ ಸಿಎನ್‌ಎನ್ ಟಿವಿ ಸಂಸ್ಥಾಪಕ ಮತ್ತು ಮಾಧ್ಯಮ ಪರಿಣತ ಟೆಡ್ ಟರ್ನರ್ ಬುಧವಾರ ನಿಧನರಾದರು. ಅವರಿಗೆ 87 ವರ್ಷ ವಯಸ್ಸಾಗಿತ್ತು.

ಓಹಿಯೋದಲ್ಲಿ ಜನಿಸಿದ ಅಟ್ಲಾಂಟಾ ಉದ್ಯಮಿ, ತಮ್ಮ ನೇರ ನುಡಿಯ ಸ್ವಭಾವಕ್ಕಾಗಿ ದಿ ಮೌತ್ ಆಫ್ ದಿ ಸೌತ್ ಎಂಬ ಅಡ್ಡಹೆಸರು ಹೊಂದಿದ್ದರು, ಕೇಬಲ್‌ನ ಮೊದಲ ಸೂಪರ್‌ಸ್ಟೇಷನ್ ಮತ್ತು ಚಲನಚಿತ್ರಗಳು ಮತ್ತು ಕಾರ್ಟೂನ್‌ಗಳಿಗಾಗಿ ಜನಪ್ರಿಯ ಚಾನೆಲ್‌ಗಳು ಮತ್ತು ಅಟ್ಲಾಂಟಾ ಬ್ರೇವ್ಸ್‌ನಂತಹ ವೃತ್ತಿಪರ ಕ್ರೀಡಾ ತಂಡಗಳನ್ನು ಒಳಗೊಂಡ ಮಾಧ್ಯಮ ಸಾಮ್ರಾಜ್ಯವನ್ನು ನಿರ್ಮಿಸಿದರು. ಟರ್ನರ್ ಅಂತಾರಾಷ್ಟ್ರೀಯವಾಗಿ ಪ್ರಸಿದ್ಧರಾದ ದೋಣಿ ವಿಹಾರ ನೌಕೆಗಳನ್ನೂ ಹೊಂದಿದ್ದರು.

ಮೊದಲ ಬಾರಿ ಚುನಾವಣೆ ಶಾಂತ, ಆಮೇಲೆ ಹಿಂಸಾಚಾರ

ಸ್ವಾತಂತ್ರ್ಯ ಬಂದಾಗಿನಿಂದಲೂ ಪಶ್ಚಿಮ ಬಂಗಾಳ ರಾಜಕೀಯವಾಗಿ ಅತಿ ಸೂಕ್ಷ್ಮವಾದ ರಾಜ್ಯವೆಂದೇ ಪರಿಗಣಿಸಲ್ಪಟ್ಟಿದೆ. ಅದರಲ್ಲೂ ಕಮ್ಯುನಿಸ್ಟರು ಮತ್ತು ಮಮತಾ ಬ್ಯಾನರ್ಜಿ ನಡುವೆ ತೀವ್ರ ಹಣಾಹಣಿ ಏರ್ಪಟ್ಟ ಮೇಲಂತೂ ಹಾದಿ ಬೀದಿಯಲ್ಲಿ ರಾಜಕೀಯ ಕಾಳಗ, ಆ ಕಾಳಗದ ಪರಿಣಾಮ ಕಂಡಕಂಡಲ್ಲಿ ಹರಿದು ಹೋಗುತ್ತಿದ್ದ ನರ ರಕ್ತ ಬಂಗಾಳಿಗಳಿಗೆ ಸಾಮಾನ್ಯ ದೃಶ್ಯವೇ ಆಗಿಹೋಗಿತ್ತು. ಕಮ್ಯುನಿಸ್ಟರು ಮೂಲೆಗುಂಪಾದ ಮೇಲೂ, ಮಮತಾ ಅಧಿಕಾರ ಗದ್ದುಗೆ ಏರಿದ ಮೇಲೂ ಈ ರಕ್ತಚೆಲ್ಲಾಟ ಕಡಿಮೆ ಆಗಲಿಲ್ಲ. ಬದಲಾಗಿ ಈಗ ಬಿಜೆಪಿ ಹಾಗೂ ದೀದಿ ಪಡೆಯ ನಡುವೆ ಹೊಡಿಬಡಿ ಶುರು ಆಯಿತು. ಹಾಗಾಗಿ ಯಾವುದೇ ಚುನಾವಣೆಯೂ ಅಲ್ಲಿ ಸಾವಿಲ್ಲದೆ ನಡೆದದ್ದೇ ಇಲ್ಲ. ಅಚ್ಚರಿಯೆಂಬಂತೆ ಈ ಸಲ ಚುನಾವಣೆ ಹಾಗೂ ಮತದಾನ ಪ್ರಕ್ರಿಯೆ ಯಾವುದೇ ಸಾವಿಲ್ಲದೆ ಶಾಂತವಾಗಿ ನಡೆದಿದೆ. ಆದರೆ ಫಲಿತಾಂಶ ಬಂದ ನಂತರ ಹಿಂಸಾಚಾರ ಮತ್ತೆ ಶುರುವಾಗಿ ನಾಲ್ಕು ಜನ ಸತ್ತಿದ್ದಾರೆ.

ಬಂಗಾಳದಲ್ಲಿ ಈ ಸಲದ ಅಚ್ಚರಿ

ಕಳೆದೆರಡು ದಶಕದ್ದು ರಕ್ತಸಿಕ್ತ ಚುನಾವಣೆ

ಅನೇಕರು ಭಾವಿಸುವಂತೆ ಕೇವಲ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಯಲ್ಲಿ ಮಾತ್ರ ಬಂಗಾಳದಲ್ಲಿ ರಕ್ತ ಹರಿಯುವುದಿಲ್ಲ, ಸಾವು ನೋವು ಸಂಭವಿಸುವುದಿಲ್ಲ. ಬದಲಾಗಿ ಒಂದು ಸಣ್ಣ ಪಂಚಾಯತ್ ಚುನಾವಣೆಯಲ್ಲೂ ಅಲ್ಲಿ ಸಾಮಾನ್ಯ ಜನರ ಹಾಗೂ ರಾಜಕೀಯ ಕಾರ್ಯಕರ್ತರ ಹೆಣಗಳು ಉರುಳಿವೆ. ಪಶ್ಚಿಮ ಬಂಗಾಳದಲ್ಲಿ ಕಳೆದ 20 ವರ್ಷಗಳಲ್ಲಿ ನಾನಾ ಸ್ತರದ ಚುನಾವಣೆಗಳು ನಡೆದಿವೆ. ಆ ಎಲ್ಲ ಚುನಾವಣೆಗಳಲ್ಲೂ ಭಾರಿ ಸಂಖ್ಯೆಯ ಜನ ತಮ್ಮ ಪ್ರಾಣವನ್ನು ಬಿಡುವಂತಾಗಿದೆ.

ಪಂಚಾಯತ್ ಚುನಾವಣೆ

ವರ್ಷ	ಸಾವು
2008	45
2013	20
2018	75
2023	57

ವಿಧಾನಸಭೆ ಚುನಾವಣೆ

ವರ್ಷ	ಸಾವು
2006	05
2011	17
2016	08
2021	17

ಲೋಕಸಭಾ ಚುನಾವಣೆ

ವರ್ಷ	ಸಾವು
2009	15
2014	07
2019	12
2024	06

ಪ್ರತಿವರ್ಷ 20 ಪೊಲಿಟಿಕಲ್ ಕಿಲ್ಲಿಂಗ್ಸ್: ಎನ್‌ಸಿಆರ್‌ಬಿ

ನ್ಯಾಷನಲ್ ಕ್ರೈಂ ಬ್ಯೂರೊ ಅಂಕಿಸಂಖ್ಯೆಗಳ ಪ್ರಕಾರ, ಪಶ್ಚಿಮ ಬಂಗಾಳದಲ್ಲಿ 1999ರಿಂದ 2016ರವರೆಗೆ ಪ್ರತಿವರ್ಷವೂ ಸರಾಸರಿ 20 ರಾಜಕೀಯ ಹತ್ಯೆಗಳಾಗುತ್ತ ಬಂದಿವೆ. ಈ ಎಲ್ಲ ಕೊಲೆಗಳ ಹಿಂದಿನ ಉದ್ದೇಶ ರಾಜಕೀಯ ಪ್ರೇರಿತವೇ ಆಗಿತ್ತು ಎಂಬುದನ್ನು ಎನ್‌ಸಿಆರ್‌ಬಿಯ ವರದಿ ಬಹಳ ಸ್ಪಷ್ಟವಾಗಿ ದಾಖಲು ಮಾಡಿದೆ. ಇನ್ನು ದೇಶದ ಗೃಹ ಇಲಾಖೆಯ ಪ್ರಕಾರ 2016ರಲ್ಲಿ 36 ಸಾವು, 2017ರಲ್ಲಿ 25, 2018ರಲ್ಲಿ 96, 2019ರಲ್ಲಿ 26 ಸಾವುಗಳು ಸಂಭವಿಸಿವೆ ಹಾಗೂ ಇವೆಲ್ಲವೂ ಪೊಲಿಟಿಕಲ್ ಕಿಲ್ಲಿಂಗ್‌ಗಳೇ ಆಗಿವೆ.

ಫಲಿತಾಂಶ ಬಳಿಕ ನಡೆದ ಹಿಂಸೆಗೆ ನಾಲ್ಕು ಜನ ಬಲಿ

ಫಲಿತಾಂಶ ಹೊರಬಿದ್ದ ಬೆನ್ನಲ್ಲೇ ಬಂಗಾಳದಲ್ಲಿ ಈ ಸಲ ಹಿಂಸಾಚಾರ ತಾಂಡವವಾಡಿದ್ದು ಇದುವರೆಗೆ ನಾಲ್ಕು ಜನರು ಬಲಿಯಾಗಿದ್ದಾರೆ. ಇಬ್ಬರು ಬಿಜೆಪಿ ಕಾರ್ಯಕರ್ತರು ಸಾವಿಗೀಡಾಗಿದ್ದರೆ, ಇನ್ನಿಬ್ಬರು ಟಿಎಂಸಿ ಪಕ್ಷದ ಕಾರ್ಯಕರ್ತರು ಮೃತಪಟ್ಟಿದ್ದಾರೆ. ಇದು ಮತ್ತೆ ರಾಜಕೀಯ ಹಿಂಸೆಯನ್ನು ಭುಗಿಲೆಬ್ಬಿಸಿದೆ.

2021ರ ಚುನಾವಣೆ ನಂತರ ನಡೆದದ್ದು ಊಹೆಗೂ ಮೀರಿದ ಹಿಂಸೆ, ದಾಂಧಲೆ

- 1900 ಹಿಂಸಾಚಾರ ಸಂಬಂಧಿ ಘಟನೆಗಳು ಬಂಗಾಳದಾದ್ಯಂತ ನಡೆದವು
- 29 ಕೊಲೆಗಳು 2021ರ ಎಲೆಕ್ಷನ್‌ನಲ್ಲಿ ಮಮತಾ ಗೆದ್ದ ಬಳಿಕ ವರದಿಯಾದವು
- 12 ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲು, ಮಹಿಳಾ ಸುರಕ್ಷತೆಯೇ ಸವಾಲು
- 391 ಗಂಭೀರ ಗಾಯದ ಪ್ರಕರಣಗಳು, ದಾಖಲಾಗದೆ ಉಳಿದವು ಲೆಕ್ಕಕ್ಕಿಲ್ಲ
- 940 ಬೆಂಕಿ ಹಚ್ಚಿದ ಹಾಗೂ ಇನ್ನೂ ಹಲವು ರೀತಿಯ ವಿಧ್ವಂಸಕ ಕೃತ್ಯ ಕೇಸ್
- 562 ಬೆದರಿಕೆ ಸಂಬಂಧಿ ಕೇಸ್‌ಗಳು ದಾಖಲಾದ ಬಗ್ಗೆ ವರದಿಯಾಗಿದೆ
- 9300: ಮೇಲಿನ ಪ್ರಕರಣಗಳಿಗೆ ಸಂಬಂಧಿಸಿದ ಆರೋಪಿಗಳ ಸಂಖ್ಯೆ
- 1345: 9300 ಜನ ಆರೋಪಿಗಳ ಪೈಕಿ ಬಂಧನಕ್ಕೊಳಗಾದ ಅತ್ಯಲ್ಪ ಮಾತ್ರ

(ಮಾಹಿತಿ: ನ್ಯಾಷನಲ್ ಹ್ಯುಮನ್ ರೈಟ್ಸ್ ಕಮಿಷನ್)

2026: 20 ವರ್ಷಗಳಲ್ಲಿ ಸಾವಿಲ್ಲದೆ ನಡೆದ ಮೊದಲ ಚುನಾವಣೆ, ಬಿಜೆಪಿ ಜಯಭೇರಿ

5–75. ಇದು ಬಂಗಾಳದ ಚುನಾವಣೆಗಳಲ್ಲಾದ ಕನಿಷ್ಠ ಹಾಗೂ ಗರಿಷ್ಠ ಸಾವಿನ ಸಂಖ್ಯೆ. ಆದರೆ ಇದೇ ಮೊದಲ ಬಾರಿಗೆ (2 ದಶಕದಲ್ಲಿ) ಒಂದೇ ಒಂದು ಸಾವೂ ಸಂಭವಿಸದೆ 2026 ಚುನಾವಣೆ ನಡೆದಿದೆ. ಇದನ್ನ ಒಂದು ಹೊಸ ದಾಖಲೆ ಎಂದೇ ಬಣ್ಣಿಸಲಾಗುತ್ತಿದೆ. ಜತೆಗೆ ಹಿಂಸಾಚಾರ, ನೋವು, ದಬ್ಬಾಳಿಕೆಗಳ ಸಂಖ್ಯೆಗಳು ಕೂಡ ಈ ಸಲ ಗಣನೀಯವಾಗಿ ಕುಸಿದಿದೆ.

ಸುದ್ದಿ ಮಿಂಚು

ಸರ್ಕಾರಿ ಐಟಿಐ ಪ್ರವೇಶಾತಿ ಆರಂಭ

ಕಲಬುರಗಿ: ಅಫಜಲಪುರ ತಾಲೂಕಿನ ಸ್ಟೇಷನ್ ಗಾಣಗಾಪುರದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಯಲ್ಲಿ 2026-27 ನೇ ಸಾಲಿನ ಪ್ರವೇಶ ಆರಂಭವಾಗಿದ್ದು, ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಸಂಸ್ಥೆಯಲ್ಲಿ ಎರಡು ವರ್ಷದ ಅವಧಿಯ ಎಲೆಕ್ಟ್ರಿಷಿಯನ್ ಹಾಗೂ ಫಿಟ್ಟರ್ ವೃತ್ತಿಗಳಲ್ಲಿ ತರಬೇತಿ ನೀಡಲಾಗುವುದು. ಪ್ರತಿ ವೃತ್ತಿಯಲ್ಲಿ 20 ಸೀಟುಗಳು ಮಾತ್ರ ಲಭ್ಯವಿದೆ. 8 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಸಾಮಾನ್ಯ ಅಭ್ಯರ್ಥಿಗಳಿಗೆ ಕೇವಲ ರೂ. 1,200 ಬೋಧನಾ ಶುಲ್ಕ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ಉಚಿತ ಪ್ರವೇಶ. ಅರ್ಹ ಅಭ್ಯರ್ಥಿಗಳು ಇಲಾಖೆಯ ಅಧಿಕೃತ ವೆಬ್‌ಸೈಟ್ ತಿತಿತಿ. ಛಿiಜಿಜ.ಞಚಿಡಿಟಿಚಿಣಚಿಞಚಿ.gov.iಟಿ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಅಥವಾ ಅಗತ್ಯ ದಾಖಲೆಗಳೊಂದಿಗೆ ಸ್ಟೇಷನ್ ಗಾಣಗಾಪುರದ ಕೊಣ್ಣೂರ ಕ್ರಾಸ್‌ನಲ್ಲಿರುವ ಸಂಸ್ಥೆಗೆ ಖುದ್ದಾಗಿ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

ಸಹಕಾರ ಸಂಘಗಳಿಗೆ ಸೂಚನೆ

ಕಲಬುರಗಿ: ಜಿಲ್ಲೆಯ ಕಾರ್ಯವ್ಯಾಪ್ತಿಯಲ್ಲಿ ಬರುವ ಸಹಕಾರ ಸಂಘ/ಸಂಸ್ಥೆ/ಬ್ಯಾಂಕ್‌ಗಳಲ್ಲಿ ಹಾಗೂ ಮಹಾಮಂಡಳಗಳಲ್ಲಿ, ಸಹಕಾರ ಸಂಘಗಳಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು-1958 ರ ನಿಯಮ 441 ರನ್ವಯ ಹಾಗೂ ಅನ್ಯಸೇವೆಗೆ ಮಂಜೂರಾಗಿರುವ ವಿವಿಧ ವೃಂದಗಳ ಹುದ್ದೆಗಳು ನಿರ್ದಿಷ್ಟ ಅವಧಿಗೆ ಮಂಜೂರಾಗಿದ್ದು, ಹುದ್ದೆಗಳ ಅವಶ್ಯಕತೆ ಇದಲ್ಲಿ ಹುದ್ದೆಯ ಅವಧಿ ಮುಕ್ತಾಯಗೊಳ್ಳುವ ಮುಂಚಿತವಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲೆಯ ಎಲ್ಲಾ ಸಂಘ ಸಂಸ್ಥೆಗಳಿಗೆ ಸಹಕಾರ ಸಂಘಗಳ ಉಪ ನಿಬಂಧಕರು ತಿಳಿಸಿದ್ದಾರೆ.

ಮೂರ್ತಿ ಸ್ಥಾಪನೆ ಪರ್ಯಾಯ ಮೂರ್ತಿಗೆ ಆಗ್ರಹ

ಕಲಬುರಗಿ: ಮಹಾನಗರ ಪಾಲಿಕೆಯಿಂದ ನಗರದಲ್ಲಿನ ವಿವಿಧ ಸ್ಥಳಗಳಲ್ಲಿ ಮಹಾತ್ಮ ಗಾಂಧಿ, ನೆಹರು, ಇಂದಿರಾ ಗಾಂಧಿ ಹಾಗೂ ರಾಜೀವ ಗಾಂಧಿ ಮೂರ್ತಿಗಳನ್ನು ಸ್ಥಾಪಿಸಲು ಮುಂದಾಗಿರುವ ಕ್ರಮಕ್ಕೆ ಜಾತ್ಯತೀತ ಜನತಾದಳ ಪಕ್ಷದ ಮುಖಂಡ ಕೃಷ್ಣರೆಡ್ಡಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಮಹಾತ್ಮ ಗಾಂಧಿ ಅವರ ಮೂರ್ತಿ ಟೌನ್ ಹಾಲ್ ಎದುರು ಇದ್ದು, ಹೊಸದಾಗಿ

ವಿವಿಧ ಮಹನೀಯರ ಮೂರ್ತಿಗಳನ್ನು ಸ್ಥಾಪಿಸಲು ಲಕ್ಷಾಂತರ ರೂ. ವೆಚ್ಚ ಮಾಡುವ ಬದಲು ಪಾಲಿಕೆಯ ದಿನಗೂಲಿ ಹಾಗೂ ಖಾಯಂ ಕಾರ್ಮಿಕರ ಬಾಕಿ ವೇತನ ಪಾವತಿಗೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು.

ಕಲ್ಯಾಣ ಕರ್ನಾಟಕ ಭಾಗಕ್ಕೆ ವಿಶೇಷ ಕೊಡುಗೆ ನೀಡಿದ ನಾಯಕರಾದ ಮಾಜಿ ಪ್ರಧಾನಿ ದೇವೇಗೌಡ, 371(ಜೆ) ಜಾರಿಗಾಗಿ ಶ್ರಮಿಸಿದ ವೈಜನಾಥ ಪಾಟೀಲ್ ಹಾಗೂ ಕೃಷ್ಣ ಮೇಲ್ದಂಡೆ ಯೋಜನೆಗೆ ಚಾಲನೆ ನೀಡಿದ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಮೂರ್ತಿಗಳನ್ನು ಸ್ಥಾಪಿಸಿದರೆ ಅದು ಪ್ರದೇಶದ ಜನತೆಗೆ ಹೆಚ್ಚು ಅರ್ಥಪೂರ್ಣವಾಗಲಿದೆ ಎಂದು ಅಭಿಪ್ರಾಯಪಟ್ಟರು. ಒಂದು ವೇಳೆ ಈಗ ಪ್ರಸ್ತಾಪಿಸಿರುವ ನಾಲ್ವರು ರಾಷ್ಟ್ರೀಯ ನಾಯಕರ ಮೂರ್ತಿಗಳನ್ನು ಸ್ಥಾಪಿಸುವುದಾದರೆ, ಜತೆಗೆ ಈ ಭಾಗಕ್ಕೆ ಸೇವೆ ಸಲ್ಲಿಸಿದ ನಾಯಕರ ಮೂರ್ತಿಗಳನ್ನೂ ಪ್ರತಿಷ್ಠಾಪಿಸಬೇಕು ಎಂದು ಅವರು ಸರ್ಕಾರ ಹಾಗೂ ಪಾಲಿಕೆಗೆ ಮನವಿ ಮಾಡಿದರು. ಜತೆಗೆ ಪಾಲಿಕೆ ಕಾರ್ಮಿಕರ ವೇತನ ಸಮಸ್ಯೆ ಬಗೆಹರಿಸಬೇಕೆಂದು ಆಗ್ರಹಿಸಿದರು.

ಪ್ರವಚನ ಇಂದಿನಿಂದ

ಕಲಬುರಗಿ: ಶ್ರೀ ಜಗದ್ಗುರು ರೇವಣಸಿದ್ದೇಶ್ವರ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ನಿಮಿತ್ತ 7 ರಿಂದ 11ರವರೆಗೆ ನಗರದ ಗಾಂಧಿ ನಗರದ ಶ್ರೀ ರೇವಣಸಿದ್ದೇಶ್ವರ ದೇವಸ್ಥಾನದಲ್ಲಿ ಪ್ರವಚನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 7 ರಂದು ಸಂಜೆ 7 ಗಂಟೆಗೆ ಅಧ್ಯಾತ್ಮಿಕ ಪ್ರವಚನ ಕಾರ್ಯಕ್ರಮ ಶ್ರೀ ಗಂಗಾಧರ ಶಿವಾಚಾರ್ಯರು ಉದ್ಘಾಟಿಸಲಿದ್ದಾರೆ. ಡಾ.ರಾಜಶೇಖರ ಶಿವಾಚಾರ್ಯರು ಸಾನ್ನಿಧ್ಯ, ಶ್ರೀ ಕೆಂಚಬಸವ ಶಿವಾಚಾರ್ಯರು ಸಮ್ಮುಖ ವಹಿಸಲಿದ್ದಾರೆ. ರಟಕಲ್‌ನ ಶ್ರೀ ವೇದಮೂರ್ತಿ ಶಂಭುಲಿಂಗ ಶಾಸ್ತ್ರಿ ಪ್ರವಚನ ನೀಡಲಿದ್ದಾರೆ.

ಆನ್‌ಲೈನ್ ಅರ್ಜಿ ಕಾಲಾವಧಿ ವಿಸ್ತರಣೆ

ಕಲಬುರಗಿ: ಕಲಬುರಗಿ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಈ ಕೆಳಕಂಡ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ, 2025-26ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ "ಶುಲ್ಕ ಮರುಪಾವತಿ" ಕಾರ್ಯಕ್ರಮದ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ 16ರವರೆಗೆ ಪೋಷಕರು /ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಸಂಸ್ಥೆಗಳ ಮನವಿಯ ಮೇರೆಗೆ ವಿಸ್ತರಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

ಮೆಟ್ರಿಕ್ ನಂತರದ ಕೋರ್ಸುಗಳು ಇಂತಿವೆ.

ಬಿ.ಆರ್ಕ್.ಎಂ.ಸಿ.ಎ.ಎಂ.ಸಿ.ಎಚ್ (ವೈದ್ಯಕೀಯ), ಎಂ.ಡಿ. ಎಂ.ಎಸ್ (ಮಾಸ್ಟರ್ ಆಫ್ ಸರ್ಜರಿ), ಎಂ.ಎಸ್, ಎಂ.ಎಸ್ಸಿ (ಅಲೈಡ್ ಸೈನ್ಸಸ್), ಎಂಪಿಟಿ (ಫಿಸಿಯೋಥೆರಪಿ), ಎಂಎಚ್‌ಎ, ಮಾಸ್ಟರ್ ಆಫ್ ಪಬ್ಲಿಕ್ ಹೆಲ್ತ್, ಎಂಪಿಎಚ್ (ಅಲೈಡ್ ಸೈನ್ಸಸ್), ಎಂ.ಎಸ್ಸಿ. ನರ್ಸಿಂಗ್, ಎಂ.ಎಸ್ಸಿ, ಎಂ.ಟೆಕ್, ಎಂಬಿಎ, ಎಂಬಿಎ ಫಿನ್‌ಟೆಕ್, ಎಂಬಿಎ (ಲಾಜಿಸ್ಟಿಕ್ಸ್ ಮ್ಯಾನೇಜ್‌ಮೆಂಟ್), ಎಂಬಿಬಿಎಸ್, ಎಂಎಸ್ ಆಯುರ್ವೇದ, ಎಂಡಿ (ಆಯುರ್ವೇದ), ಎಂಡಿ (ಹೋಮ್), ಎಂಡಿಎಸ್, ಪಿಜಿ ಡಿಪ್ಲೊಮಾ ಇನ್ ಡೆಂಟಲ್, ಫಾರ್ಮ್.ಡಿ (ಪೋಸ್ಟ್ ಬ್ಯಾಕಲೌರಿಯೇಟ್), ಎಂ.ಫಾರ್ಮ್, ಬಿ.ಇ. ಬಿ.ಟೆಕ್, ಬಿ.ಎಸ್ಸಿ.(ಆನರ್ಸ್), ಬಿ.ವಿ.ಎಸ್ಸಿ.&ಎ.ಎಚ್, ಬಿಎಎಂಎಸ್ (ಆಯುರ್ವೇದ), ಬಿಎಚ್‌ಎಂಎಸ್ (ಹೋಮಿಯೋಪತಿ), ಬಿಎನ್‌ವೈಎಸ್ (ಯೋಗ ಮತ್ತು ಪ್ರಕೃತಿ ಚಿಕಿತ್ಸೆ), ಬಿಯುಎಂಎಸ್ (ಯುನಾನಿ), ಬಿಎಎಂಎಸ್, ಬಿಡಿಎಸ್, ಎಂ.ಆರ್ಕ್, ಬಿ.ಎಫ್.ಎಸ್ಸಿ, ಬಿ.ಫಾರ್ಮ್, ಫಾರ್ಮ್.ಡಿ, ಬಿ.ಎಸ್ಸಿ (ಅಲೈಡ್ ಸೈನ್ಸಸ್). ಬಿಪಿಟಿ (ಭೌತಚಿಕಿತ್ಸೆ). ವೃತ್ತಿಪರ ಚಿಕಿತ್ಸೆಯಲ್ಲಿ ಪದವಿ, ಬಿ.ಡಿ.ಎಸ್, ಬಿ.ಎಸ್ಸಿ. (ನರ್ಸಿಂಗ್), ಬಿ.ಎಸ್ಸಿ. (ಪೋಸ್ಟ್ ಬೇಸಿಕ್), ಬಿ.ಎಡ್, ಬಿ.ಪ್ಲಾನ್, ಡಿಎಂ (ವೈದ್ಯಕೀಯ), ಎಂ.ಫಿಲ್, ಬಿ ಟೆಕ್ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ (ಪೂರ್ಣ ಸ್ಟಾಕ್ ಅಭಿವೃದ್ಧಿ), ಬಿ ಟೆಕ್ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ (ಎಲೆಕ್ಟ್ರಿಕ್ ವೆಹಿಕಲ್ ಟೆಕ್ನಾಲಜಿ), ಪಿ.ಎಚ್‌ಡಿ, ಪ್ಯಾರಾಮೆಡಿಕಲ್ ಕೋರ್ಸ್‌ಗಳು ಮತ್ತು ಎಲ್ಲಾ ಡಿಪ್ಲೊಮಾ ಕೋರ್ಸ್‌ಗಳು.

ರೈತರು, ಕೃಷಿ ಕಾರ್ಮಿಕರ ಹಕ್ಕುಗಳಿಗೆ ಮನವಿ

ಭಾರತೀಯ ಖೇತ್ ಮಜ್ದೂರ್ ಯೂನಿಯನ್, ಕಿಸಾನ್ ಸಭಾದಿಂದ ಆಳಂದ ಆಡಳಿತ ಸೌಧ ಮುಂದೆ ಪ್ರತಿಭಟನೆ

ಸಂ.ಕ. ಸಮಾಚಾರ ಆಳಂದ: ಭಾರತೀಯ ಖೇತ್ ಮಜ್ದೂರ್ ಯೂನಿಯನ್ ಮತ್ತು ಕಿಸಾನ್ ಸಭಾ ಸಂಘಟನೆಗಳ ನೇತೃತ್ವದಲ್ಲಿ ತಾಲೂಕು ಆಡಳಿತ ಸೌಧದ ಮುಂದೆ ಪ್ರತಿಭಟನೆ ನಡೆಯಿತು. ರೈತರು ಮತ್ತು ಕೃಷಿ ಕೂಲಿ ಕಾರ್ಮಿಕರ ಪರವಾಗಿ ಹಮ್ಮಿಕೊಳ್ಳಲಾದ ನಿರಂತರ ಧರಣಿ ಸತ್ಯಾಗ್ರಹವು 43 ದಿನಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ, ಪ್ರತಿಭಟನಾಕಾರರು ತಹಸೀಲ್ದಾರ್ ಅಣ್ಣಾರಾವ್ ಪಾಟೀಲ್‌ಗೆ ತಮ್ಮ ಪ್ರಮುಖ ಬೇಡಿಕೆಗಳ ಮನವಿ ಸಲ್ಲಿಸಿದರು.

ಪಟ್ಟಣದ ಪ್ರವಾಸಿ ಮಂದಿರದ ಮುಂದೆ ಕಿಸಾನ್ ಸಭಾ ಹಲವಾರು ರೈತ ಪರ ಬೇಡಿಕೆಗಳಿಗಾಗಿ ನಿರಂತರ ಧರಣಿ ನಡೆಸುತ್ತ ಬಂದಿದ್ದು, ಅದರ ಮಧ್ಯೆ ತಾಲೂಕು ಕಚೇರಿ ಮುಂದೆ ಬುಧವಾರ ಪ್ರತಿಭಟನೆ ನಡೆಸಲಾಯಿತು. ರೈತರು ಮತ್ತು ಕೃಷಿ ಕಾರ್ಮಿಕರು ಭಾಗವಹಿಸಿದರು.

ಖಾಸಗಿ ಲೇವಾದೇವಿ: ಕ್ಯಾನ್ಸರ್ ಮತ್ತು ಎಚ್‌ಐವಿಗಿಂತಲೂ ಭೀಕರ ಸಾಮಾಜಿಕ ಸಮಸ್ಯೆಯಾಗಿ ಇಂದಿನ ಪ್ರತಿಭಟನೆಯ 11 ಬೇಡಿಕೆಗಳ ಪೈಕಿ ಖಾಸಗಿ ಲೇವಾದೇವಿ ವಿಷಯವು ಮಹತ್ವದ ಅಂಶವಾಗಿ ಮುನ್ನೆಲೆಗೆ ಬಂದಿದ್ದು, ಇದರ ಬಗ್ಗೆ ತಹಸೀಲ್ದಾರ್ ಅಣ್ಣಾರಾವ್



ಆಳಂದ ಪ್ರವಾಸಿ ಮಂದಿರದ ಮುಂದೆ ಕಿಸಾನಸಭಾ ಅನಿರ್ದಿಷ್ಟಾವಧಿ ಧರಣಿ ನಡುವೆ ಆಡಳಿತಸೌಧ ಮುಂದೆ ಕಿಸಾನಸಭಾ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಅಣ್ಣಾರಾವ್ ಪಾಟೀಲಗೆ ಮನವಿ ಸಲ್ಲಿಸಿದರು.

ಪಾಟೀಲ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು.

ಸಂಘಟನೆಯ ಮುಖಂಡರು ಮಾತನಾಡಿ, ಖಾಸಗಿ ಲೇವಾದೇವಿ ವ್ಯವಹಾರಗಳು ಕ್ಯಾನ್ಸರ್ ಮತ್ತು ಎಚ್.ಐ.ವಿ.ಗಿಂತಲೂ ಭೀಕರವಾದ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಸೃಷ್ಟಿಸಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭೂರಹಿತ ಕೃಷಿ ಕೂಲಿ ಕಾರ್ಮಿಕರು ಭೂರಹಿತ ನಿರುದ್ಯೋಗಿಗಳಾಗಿದ್ದು, ಅವರಿಗೆ ಸ್ವಯಂ ಉದ್ಯೋಗ

> ಆಳಂದ ತಾಲೂಕಿನಲ್ಲಿ ನೋಂದಾಯಿತ ಮತ್ತು ನೋಂದಾಯಿಸದ ಲೇವಾದೇವಿ ಸಂಸ್ಥೆಗಳ ಸಂಖ್ಯೆ ಹೆಚ್ಚಾಗಿದ್ದು, ಲೇವಾದೇವಿ ಮಾಡುತ್ತಿರುವ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು.
> ■ **ಮೌಲಾ ಮುಲ್ಲಾ,** ರಾಜ್ಯ ಕಾರ್ಯಾಧ್ಯಕ್ಷ, ಕಿಸಾನಸಭಾ ಸಂಘಟನೆ.

ನಿರ್ಮಿಸಿಕೊಡಲು ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕು. ಮುಖ್ಯವಾಗಿ ಹೈನುಗಾರಿಕೆ, ಕುರಿ ಮತ್ತು ಕೋಳಿ ಸಾಕಾಣಿಕೆ ಘಟಕ ಸ್ಥಾಪನೆಗೆ ಸರ್ಕಾರಿ ಬ್ಯಾಂಕ್‌ಗಳಿಂದ ರಿಯಾಯಿತಿ ದರದಲ್ಲಿ ಆರ್ಥಿಕ ನೆರವು ನೀಡಬೇಕು. ಅಗತ್ಯ ಇರುವವರಿಗೆ ಸರ್ಕಾರಿ ಗ್ಯಾರಂಟಿ ಜಾಗದಲ್ಲಿ ನಿವೇಶನ ಮತ್ತು ಮನೆ ನಿರ್ಮಿಸಿ ಕೊಡಬೇಕು. ಕೃಷಿಗೆ ನೀರು ಮತ್ತು ಕುಡಿಯುವ ನೀರಿಗಾಗಿ ಅಂತರ್ಜಲ ಯೋಜನೆ ಅನುಷ್ಠಾನ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಕೃಷಿ ಮತ್ತು ಕುಡಿಯುವ ನೀರಿಗಾಗಿ ಹಣಮಂತರಾವ್ ಸಮಿತಿಯ ಮಾರ್ಗದರ್ಶನದ ಪ್ರಕಾರ ತಾಲೂಕಿನಾದ್ಯಂತ ಅಂತರ್ ಅಂತರ್ಜಲ ಸಂಪರ್ಕ ಯೋಜನೆ ಕೈಗೊಳ್ಳಬೇಕು. ಈ ಯೋಜನೆ ಅನುಷ್ಠಾನದಿಂದ ಕೃಷಿ ನೀರಾವರಿ, ಕುಡಿಯುವ ನೀರಿನ ಸಮಸ್ಯೆ ಮತ್ತು ನಿರುದ್ಯೋಗ ಮೂರು ಸಮಸ್ಯೆಗಳನ್ನು ಒಂದೇ ಬಾರಿ ನಿವಾರಿಸಲು ಸಾಧ್ಯ ಎಂದು ಮುಖಂಡರು, ಜೊತೆಗೆ ಈ ಕಾಮಗಾರಿಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಮನರೇಗಾ) ಅಡಿಯಲ್ಲಿ ನಿರಂತರವಾಗಿ ನಡೆಸಿಕೊಂಡು ಹೋಗಬೇಕೆಂದು ಪ್ರತಿಭಟನೆಯಲ್ಲಿ ಭಾಗವಹಿಸಿದ ಕಿಸಾನ್ ಸಭಾ ರಾಜ್ಯ ಕಾರ್ಯಾಧ್ಯಕ್ಷ ಮೌಲಾ ಮುಲ್ಲಾ, ತಾಲೂಕಾಧ್ಯಕ್ಷ ಧರ್ಮಣ್ಣ ಪೂಜಾರಿ, ಉಪಾಧ್ಯಕ್ಷ ಮಹಾದೇವ ಮಂಟಗಿ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮೈಲಾರಿ ಜೋಗೆ, ನ್ಯಾಯವಾದಿ ಪಂಡಿತ್ ಸಲ್ಗರ್, ಕಮಲೇಶ ಅವಟೆ, ಮಹಾದೇವ ಜಿಡ್ಡೆ, ಕಬೀರಾ ಬೇಗಂ, ರಮೇಶ ಹಾತ್ರಿಗೆಳ, ಅಶ್ರಫ್ ಮುಲ್ಲಾ, ಬಾಷಾ ಯಳಸಂಗಿ, ರತನಲಾಲ ಕಲಶೆಟ್ಟಿ, ಶರಣಗೌಡ ಪಾಟೀಲ ಸೇರಿ ಹಲವಾರು ಮುಖಂಡರು ಮತ್ತು ಕಾರ್ಯಕರ್ತರು ಒತ್ತಾಯಿಸಿದರು.

ಕಲಬುರಗಿಯಲ್ಲಿ ನಾದಸ್ವರ ಸಂಗೀತ ಪಾಠಶಾಲೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಸಂಗೀತ ಸಾಂಸ್ಕೃತಿಕ ಕಲಾ ಸಂಭ್ರಮವನ್ನು ಕಾಂಗ್ರೆಸ್ ಮುಖಂಡ ನೀಲಕಂಠರಾವ ಮೂಲಗೆ ಉದ್ಘಾಟಿಸಿದರು. ಡಾ.ರಾಜೇಂದ್ರ ಯರನಾಳೆ, ಡಾ.ಸೀಮಾ ಪಾಟೀಲ, ರೇವಯ್ಯ ವಸ್ತ್ರದಮಠ ಮುಂತಾದವರಿದ್ದಾರೆ.

ಪಶ್ಚಿಮ ಬಂಗಾಳ ರಾಜ್ಯದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಗೆ ಅಭೂತಪೂರ್ವ ಜಯಭೇರಿ ದೊರೆತ ಹಿನ್ನೆಲೆಯಲ್ಲಿ ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಅಶೋಕ ಬಗಲಿ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು ಬೈಕ್ ರ‍್ಯಾಲಿ ನಡೆಸಿ ವಿಜಯೋತ್ಸವ ಆಚರಿಸಿದರು. ಕಾಡಾ ಮಾಜಿ ಅಧ್ಯಕ್ಷ ಶರಣಪ್ಪ ತಳವಾರ, ಮುಖಂಡರಾದ ಬಸವರಾಜ ಬೆಣ್ಣೂರ್, ಧರ್ಮಣ್ಣ ಇಟಗಾ ಮತ್ತಿತರರಿದ್ದರು.

ಯುವ ಉದ್ಯಮಶೀಲತೆಗೆ ಕೋಕೋಪೀಟ್ ಉತ್ಪಾದನೆ ಸಹಕಾರಿ

ಸಂ.ಕ. ಸಮಾಚಾರ ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕೃಷಿ ಆಧಾರಿತ ಉದ್ಯಮಶೀಲತೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಯುವ ಉದ್ಯಮಿಗಳು ನಡೆಸುತ್ತಿರುವ ಕೋಕೋಪೀಟ್ ಉತ್ಪಾದನಾ ಘಟಕಕ್ಕೆ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಹಾಗೂ ಕೃಷಿ ಜಂಟಿ ನಿರ್ದೇಶಕ ಸಮದ್ ಪಟೇಲ್ ಭೇಟಿ ನೀಡಿದರು.

"ಯುವಕರು ಕೇವಲ ಉದ್ಯೋಗ ಅರಸುವವರಾಗದೆ, ಉದ್ಯೋಗ ಸೃಷ್ಟಿಸುವ ಉದ್ಯಮಿಗಳಾಗಬೇಕು. ಇಂತಹ ಪ್ರಯತ್ನಗಳು ಸ್ಥಳೀಯ ಆರ್ಥಿಕಾಭಿವೃದ್ಧಿಗೆ ಹಾಗೂ ಉದ್ಯೋಗ ಸೃಷ್ಟಿಗೆ ಪೂರಕವಾಗುತ್ತವೆ" ಎಂದು ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಂ ಮೆಚ್ಚುಗೆ

ಕೋಕೋಪೀಟ್ ಉತ್ಪಾದನಾ ಘಟಕಕ್ಕೆ ಡಿಸಿ ಫೌಜಿಯಾ ತರನ್ನುಂ ಭೇಟಿ ನೀಡಿದರು.

ವ್ಯಕ್ತಪಡಿಸಿದರು. ಉತ್ತಮ ಗುಣಮಟ್ಟದ ಕೋಕೋಪೀಟ್ ಉತ್ಪಾದಿಸಿ ಅಮೆರಿಕಾ, ಯುನೈಟೆಡ್ ಕಿಂಗ್‌ಡಮ್, ಮಧ್ಯಪ್ರಾಚ್ಯ ಹಾಗೂ ನೆದರ್‌ಲ್ಯಾಂಡ್ಸ್ ಸೇರಿದಂತೆ ವಿವಿಧ ರಾಷ್ಟ್ರಗಳಿಗೆ ರಫ್ತು ಮಾಡುವ ಗುರಿ ಹೊಂದಿದೆ ಎಂದರು.

ಕೃಷಿ ಜಂಟಿ ನಿರ್ದೇಶಕ ಸಮದ್ ಪಟೇಲ್ ಮಾತನಾಡಿ, ಕೃಷಿ ಆಧಾರಿತ ಉತ್ಪಾದನಾ ಕ್ಷೇತ್ರಕ್ಕೆ ಬರಲು ಕೃಷಿ ಇಲಾಖೆ ಸಂಪೂರ್ಣ ಬೆಂಬಲ ನೀಡಲಿದೆ. ಸ್ಥಳೀಯ ಉತ್ಪನ್ನಗಳನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಕಲಬುರಗಿ ರೊಟ್ಟಿ ಯೋಜನೆಯ ಯಶಸ್ಸು ಉತ್ತಮ ಉದಾಹರಣೆಯಾಗಿದೆ" ಎಂದರು. ತ್ಯಾಜ್ಯವನ್ನು ಸಂಪನ್ಮೂಲವನ್ನಾಗಿ ಪರಿವರ್ತಿಸುವ "ಕಸದಿಂದು ರಸ" ಎಂಬ ಪರಿಕಲ್ಪನೆಯನ್ನು ಅಳವಡಿಸಿಕೊಂಡಿರುವುದು ವಿಶೇಷವಾಗಿದೆ. ಕೃಷಿ ಆಧಾರಿತ ಕೈಗಾರಿಕೆಗಳು ಹಾಗೂ ರಫ್ತು ಕೇಂದ್ರವಾಗಿ ಬೆಳೆಸುವ ದಿಕ್ಕಿನಲ್ಲಿ ಪ್ರಮುಖ ಹೆಜ್ಜೆಯಾಗಿದೆ ಎಂದರು. ಜಗದೀಶ ಗಾಜರೆ ಮತ್ತಿತರರಿದ್ದರು.

ಒತ್ತಡ ಮುಕ್ತಿಗೆ ಮನರಂಜನೆ ಅಗತ್ಯ : ಜ್ಯೋತಿ ಪಾಟೀಲ್

ಸಂ.ಕ.ಸಮಾವಾರ ಕಲಬುರಗಿ: ಕಲೆಗಳು ನಮ್ಮ ದೈನಂದಿನ ಒತ್ತಡಗಳಿಂದ ಮುಕ್ತಿ ಹೊಂದಲು ಸಹಾಯಕವಾಗುತ್ತವೆ, ಸಮಾಜದಲ್ಲಿನ ಒತ್ತಡವನ್ನು ತಿಳಿಗೊಳಿಸಲು ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಅವಶ್ಯ ಎಂದು ಬಿಜೆಪಿ ಮಹಿಳಾ ಮೋರ್ಚಾ ದಕ್ಷಿಣ ವಲಯ ಅಧ್ಯಕ್ಷೆ ಜ್ಯೋತಿ ಪಾಟೀಲ್ ಅಭಿಪ್ರಾಯಪಟ್ಟರು.

ಕಲಬುರಗಿ ಜನಪ್ರಿಯ ಸಾಂಸ್ಕೃತಿಕ ಕಲಾ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ನಗರದ ರಂಗಾಯಣದ ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ "ಜನಪ್ರಿಯ ಸಾಂಸ್ಕೃತಿಕ ಸಂಭ್ರಮೋತ್ಸವ" ಉದ್ಘಾಟಿಸಿ ಮಾತನಾಡಿದರು.

ನಟ ಡಾ. ವಿಜಯಕುಮಾರ ಗೊತಗಿ ಮಾತನಾಡಿ, ಕಲೆಗಳು ಮನರಂಜನೆ ಜತೆಗೆ ಮನೋವಿಕಾಸಕ್ಕೆ ಬೇಕಾದ ಅಂಶಗಳನ್ನು ಒದಗಿಸುವ ಕೆಲಸ ಮಾಡುತ್ತವೆ. ಆದರಿಂದ

ರಂಗಾಯಣದ ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ಜನಪ್ರಿಯ ಸಾಂಸ್ಕೃತಿಕ ಸಂಭ್ರಮೋತ್ಸವ ಉದ್ಘಾಟಿಸಲಾಯಿತು.

ಎಲ್ಲರೂ ತಿಂಗಳಿಗೆ ಒಮ್ಮೆಯಾದರೂ ಇಂತಹ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಇಡೀ ಕುಟುಂಬದೊಂದಿಗೆ ಪಾಲ್ಗೊಳ್ಳಬೇಕು ಎಂದರು. ನಟಿ ಹಾಗೂ ಜನಪದ ಆಯುರ್ವೇದ ವೈದ್ಯರಾದ ಡಾ. ವೀಣಾ ಪಾಟೀಲ್ ಮಾತನಾಡಿ, ಮಕ್ಕಳು ಪಾಠದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಪಾಲಕರು ಪ್ರೋತ್ಸಾಹಿಸಬೇಕು ಎಂದರು. ರಂಗಕರ್ಮಿ ಕಲ್ಯಾಣಿ ಭಜಂತ್ರಿ ಇದ್ದರು. ಜನಪ್ರಿಯ ಸಾಂಸ್ಕೃತಿಕ ಕಲಾ ಸಂಘದ ಅಧ್ಯಕ್ಷ ಶಾಂತಲಿಂಗಯ್ಯ ಮಠಪತಿ ಅಧ್ಯಕ್ಷತೆ ವಹಿಸಿದ್ದರು. ಅಕ್ಷರಾ ಅಣಕಲ್ ಭರತನಾಟ್ಯ ಪ್ರದರ್ಶಿಸಿದರು. ಬಸಯ್ಯ ಗುತ್ತೆದಾರ ಸುಗಮ ಸಂಗೀತ, ದತ್ತರಾಜ ಕಲ್ಲಶೆಟ್ಟಿ ತತ್ವಪದ ಗಾಯನ ಹಾಗೂ ಸೈದಪ್ಪಾ ಸಪ್ಪನಗೋಳ ಅವರಿಂದ ಜನಪದ ಗಾಯನ ನೇರವೇರಿದವು. ಅಶ್ವಿನಿ ಮೂಲಗೆ ದಾಸವಾಣಿ ಹಾಡಿದರು. ಜನಪ್ರಿಯ ಸಂಗೀತ ಹಾಗು ನೃತ್ಯ ಶಾಲೆಯ ಮಕ್ಕಳಿಂದ ಜಾನಪದ ನೃತ್ಯ, ಶಾಸ್ತ್ರೀಯ ನೃತ್ಯ, ವಚನ ಗಾಯನ, ಭಕ್ತಿಗೀತೆ ಮುಂತಾದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಗಮನ ಸೆಳೆದವು. ಅವಧೂತ ಪಾಟೀಲ್ ತಬಲಾ ಸಾಥ್ ನೀಡಿದರು. ಮನಸ್ವಿ ನೃತ್ಯ ತಂಡದಿಂದ ಜಾನಪದ ನೃತ್ಯ ಪ್ರದರ್ಶಿಸಲಾಯಿತು. ಗಂಗೋತ್ರಿ ಮಠಪತಿ ನಿರೂಪಿಸಿದರು. ವೇದಕಂಠ ವಂದಿಸಿದರು.

ರಜಾ ಹತ್ಯೆ ಪ್ರಕರಣ: ನ್ಯಾಯಕ್ಕಾಗಿ ಪ್ರತಿಭಟನೆ

ಸಂ.ಕ. ಸಮಾಚಾರ ಆಳಂದ: ಉತ್ತರ ಪ್ರದೇಶದ ಬರೇಲಿಯಲ್ಲಿ ಚಲಿಸುವ ರೈಲಿನಿಂದ ಎಸೆದು ಹತ್ಯೆ ಮಾಡಲಾಗಿದೆ ಎನ್ನಲಾದ ಮದರಸಾ ಶಿಕ್ಷಕ ಮೌಲಾನಾ ತೌಸಿಫ್ ರಜಾ ಮರ್ಹಾರಿ ಅವರ ಪ್ರಕರಣದಲ್ಲಿ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿ, ತಾಲೂಕು ಆಡಳಿತ ಸೌಧದ ಮುಂದೆ ಸುನಿ ಉಲ್ಮಾ ಈ ಕೌನ್ಸಿಲ್ ಸಂಘಟನೆ ಆಶ್ರಯದಲ್ಲಿ ಪ್ರತಿಭಟನೆ ನಡೆಸಿ, ಮನವಿಪತ್ರವನ್ನು ತಹಸೀಲ್ದಾರ್ ಅಣ್ಣಾರಾವ್ ಪಾಟೀಲ್‌ಗೆ ನ್ಯಾಯ ಒದಗಿಸುವಂತೆ ಮನವಿ ಸಲ್ಲಿಸಿದರು.

ಬಿಹಾರದ ಕಿಶನ್‌ಗಂಜ್‌ನ ಮದರಸಾ ಶಿಕ್ಷಕ ಮತ್ತು ಇಮಾಮ್ ಆಗಿದ್ದ ಮೌಲಾನಾ ತೌಸಿಫ್ ರಜಾ ಮರ್ಹಾರಿ ಅವರ ಶವ ಏ. 26 ರಂದು ಉತ್ತರ ಪ್ರದೇಶದ ಬರೇಲಿ ರೈಲು ನಿಲ್ದಾಣದ ಬಳಿ ರೈಲು ಹಳಿಗಳ ಮೇಲೆ ಪತ್ತೆಯಾಯಿತು. ಸ್ಥಳೀಯ ಪೊಲೀಸರು ಇದನ್ನು ಆಕಸ್ಮಿಕ ಘಟನೆ ಎಂದು ಹೇಳಿದ್ದರೂ, ಮೃತರ ಕುಟುಂಬ ಇದನ್ನು ತೀವ್ರವಾಗಿ ಅಲ್ಲಗಳೆದಿದೆ.

ಪ್ರಕರಣದ ಸ್ವತಂತ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಬೇಕು. ದೋಷಿಗಳನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು. ಮೃತರ ಕುಟುಂಬಕ್ಕೆ



ಆಳಂದ ಆಡಳಿತ ಸೌಧ ಮುಂದೆ ಸುನಿ ಉಲ್ಮಾ ಇ-ಕೌನ್ಸಿಲ್ ಸಂಘದನೆಯಿಂದ ಮೌಲಾನಾ ತೌಸಿಫ್ ರಜಾ ಹತ್ಯೆ ಪ್ರಕರಣ ಖಂಡಿಸಿ ತಹಸೀಲ್ದಾರ್‌ಗೆ ಅಣ್ಣಾರಾವ್ ಪಾಟೀಲಗೆ ಪ್ರಮುಖರು ಮನವಿ ಸಲ್ಲಿಸಿದರು.

50ಲಕ್ಷ ರೂ. ಸೂಕ್ತ ಪರಿಹಾರ ಮತ್ತು ರಕ್ಷಣೆ ನೀಡಬೇಕು. ದೇಶದಲ್ಲಿ ಕೋಮು ಸಾಮರಸ್ಯ ಕಾಪಾಡಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮುಸ್ಲಿಂ ಧಾರ್ಮಿಕ ಮುಖಂಡರು ಸೇರಿ ಅಬ್ದುಲ್ ಸಲಾಂ ಸಗರಿ, ಭಾಕರ್‌ಅಲಿ ಜಮಾದಾರ, ಮೌಲಾ ಮುಲ್ಲಾ ಸೇರಿದಂತೆ ಸಮುದಾಯ ಅನೇಕರು ಭಾಗವಹಿಸಿದ್ದರು.

ಅಂಬೇಡ್ಕರ್ ಸ್ಮರಣಾರ್ಥ ಸ್ಪರ್ಧಾಕೂಟದ ಸಪ್ತಾಹ ಕಾರ್ಯಕ್ರಮದಲ್ಲಿ ಪ್ರೊ. ಎಚ್. ಟಿ. ಪೋತೆ ಮಾತನಾಡಿದರು.

ಅಹಿಂಸವಾದಿಯಾಗಿದ್ದ ಡಾ. ಅಂಬೇಡ್ಕರ್

ಸಂ.ಕ.ಸಮಾಚಾರ ಜೇವರ್ಗಿ: ಡಾ. ಅಂಬೇಡ್ಕರ್ ಅವರನ್ನು ಕೇವಲ ದಲಿತ ಸಮುದಾಯಕ್ಕೆ ಸೀಮಿತಗೊಳಿಸಬಾರದು. ಅಂಬೇಡ್ಕರ್ ರವರು ಅಹಿಂಸಾವಾದಿಯಾಗಿದ್ದರು ಎಂದು ಗುಲ್ಬರ್ಗ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ, ವಿಶ್ವವಿದ್ಯಾಲಯದ ಕಲಾ ನಿಕಾಯದ ಡೀನರಾದ ಪ್ರೊ. ಎಚ್. ಟಿ. ಪೋತೆ ಅಭಿಮತಪಟ್ಟರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಐಕ್ಯುಎಸಿ ಹಾಗೂ ಡಾ. ಅಂಬೇಡ್ಕರ್ ಸ್ಮರಣಾರ್ಥ ಸ್ಪರ್ಧಾ ಕೂಟದ ಸಹಯೋಗದಲ್ಲಿ ಹಮ್ಮಿಕೊಂಡ 2025 -26 ನೇ ಸಾಲಿನ ಅಂಬೇಡ್ಕರ್ ಸ್ಮರಣಾರ್ಥ ಸ್ಪರ್ಧಾಕೂಟದ ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಿ, ಬಾಬಾ ಸಾಹೇಬರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಚಾಲನೆ ನೀಡಿ ಮಾತನಾಡಿ, ಅಂಬೇಡ್ಕರ್ ಯುವಕರಿಗೆ ಪೆನ್ನು ಕೊಟ್ಟರು ಗನ್ನು ಕೊಡಲಿಲ್ಲ.ವಿದ್ಯಾರ್ಥಿಗಳಿಗೆ ಗ್ರಂಥಾಲಯಗಳಿಗೆ ಕಳಿಸಿದರು. ದೇವಾಲಯಗಳಿಗೆ ಕಳಿಸಲಿಲ್ಲ. ಅಂಬೇಡ್ಕರ್ ಮುಖ್ಯವಾಗಿ ಮಹಿಳೆಯರ ವಿಮೋಚನೆಗಾಗಿ ಸಾಕಷ್ಟು ಕೆಲಸ ಮಾಡಿದರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಡಾ. ಶಾಂತಾ ಅಸ್ಟಿಗೆ ಮಾತನಾಡಿದರು. ಐಕ್ಯುಎಸಿ ಸಂಯೋಜಕ ಡಾ. ಸಂದೀಪ್ ತಿವಾರಿ, ಹಿರಿಯ ಪ್ರಾಧ್ಯಾಪಕಿ ಪ್ರೊ. ರಾಬಿಯಾ ಬೇಗಂ, ಡಾ. ಬಿ.ಆರ್. ಅಂಬೇಡ್ಕರ್ ಸ್ಮರಣಾರ್ಥ ಸ್ಪರ್ಧಾ ಕೂಟದ ಸಂಚಾಲಕ ಭೀಮಣ್ಣ ಬೆಡಕಪಳ್ಳಿ, ಡಾ. ಖಾಜಾವಲಿ ಈಚನಾಳ, ಡಾ. ರಾಮುಲು. ಡಾ. ಮೋಹನ್ ಬೈಲಪತ್ತಾರ, ಸೇರಿದಂತೆ ಎಲ್ಲಾ ವಿಭಾಗಗಳ ಅಧ್ಯಾಪಕರು, ಅತಿಥಿ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಜರಿದ್ದರು.

ಕುಡಿಯುವ ನೀರಿಗೆ ಆಗ್ರಹಿಸಿ 11 ರಂದು ಪ್ರತಿಭಟನೆ

ಸಂ.ಕ. ಸಮಾಚಾರ ಕಲಬುರಗಿ: ಜಿಲ್ಲೆಯಾದ್ಯಂತ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವಂತೆ ಆಗ್ರಹಿಸಿ ಸಿಪಿಐನಿಂದ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಮೇ 11 ರಂದು ಪ್ರತಿಭಟನೆ ನಡೆಸಲಾಗುವುದು ಎಂದು ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಹೇಶಕುಮಾರ ರಾಠೋಡ ತಿಳಿಸಿದರು.

ಸಾರ್ವಜನಿಕರಿಗೆ ಕುಡಿಯುವ ನೀರು ಒದಗಿಸಲು ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದೆ. ಶಾಸಕರು ಸಹ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಉಸ್ತುವಾರಿ ಸಚಿವರು ಜಿಲ್ಲೆಯಲ್ಲಿ ವಾಸ್ತವ್ಯ ಹೂಡಿ ಸಮಸ್ಯೆಗಳಿಗೆ ಪರಿಹಾರ ನೀಡಬೇಕು ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

ಜಾನುವಾರುಗಳಿಗೂ ಕುಡಿಯುವ ನೀರು ಸಿಗುತ್ತಿಲ್ಲ. ಜನ-ಜಾನುವಾರುಗಳಿಗೆ ನೀರಿನ ಸೌಲಭ್ಯ

> ನಗರದ ಆಶ್ರಯ ಕಾಲೊನಿ, ದುಬೈ ಕಾಲೊನಿ ಸೇರಿ ವಿವಿಧೆಡೆ ನೀರಿಗಾಗಿ ಜನ ಪರದಾಡುವಂತಾಗಿದೆ. ವಾರದಲ್ಲಿ ಒಂದು ಅಥವಾ ಎರಡು ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ.
> ■ **ಪ್ರಭುದೇವ ಯಳಸಂಗಿ,** ಜಿಲ್ಲಾ ಸಹ ಕಾರ್ಯದರ್ಶಿ, ಸಿಪಿಐ

ಕಲ್ಪಿಸಲು ನಾರಾಯಣಪುರ ಜಲಾಶಯದಿಂದ ಇಂಡಿ ಶಾಖೆ ಹಾಗೂ ಜೇವರ್ಗಿ ಶಾಖಾ ಕಾಲುವೆಗಳಿಗೆ ಮತ್ತು ಮಹಾರಾಷ್ಟ್ರದ ಉಜನಿ ಡ್ಯಾಂನಿಂದ ಸೊನ್ನ ಬ್ಯಾರೇಜ್ ಮೂಲಕ ನೀರು ಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಬಡವರು, ದುಡಿಮೆಗೆ ಊರು ಬಿಟ್ಟು ಬಂದ ಜನ ಬಳಸುವ 5 ಕೆ.ಜಿಯ ಸಿಲಿಂಡರ್ ದರ ಕೂಡ ಹೆಚ್ಚಿಸಲಾಗಿದೆ. ರೂ. 549 ಇದ್ದ ದರ ರೂ. 810 ಆಗಿದೆ. ಕೇಂದ್ರ ಸರ್ಕಾರ ಎಲ್ಲಾ ತರಹದ ಸಿಲಿಂಡರ್‌ಗಳ ದರ ಕಡಿಮೆ ಮಾಡಬೇಕು. ಅರ್ಜಿ ಸಲ್ಲಿಸಿ ತಿಂಗಳಾದರೂ ಸಾರ್ವಜನಿಕರಿಗೆ ಇ-ಸ್ವತ್ತು ಪಡೆಯಲು ಸಾಧ್ಯವಾಗುತ್ತಿಲ್ಲ. ಅರ್ಜಿ ಯಾವ ಹಂತದಲ್ಲಿವೆ ಎಂಬುದು ಸಹ ಅಧಿಕಾರಿಗಳಿಗೆ ಗೊತ್ತಾಗುತ್ತಿಲ್ಲ. ಸರ್ಕಾರ ಇಂಥ ತಾಂತ್ರಿಕ ಸಮಸ್ಯೆ ಪರಿಹರಿಸಬೇಕು ಎಂದು ಒತ್ತಾಯಿಸಿದರು.

ಪಕ್ಷದ ಜಿಲ್ಲಾ ಖಜಾಂಚಿ ಭೀಮಾಶಂಕರ ಮಾಡಿಯಾಳ ಮಾತನಾಡಿ, 'ನಗರದ ರಸ್ತೆಗಳು ಅಧೋಗತಿ ಸ್ಥಿತಿಗೆ ಬಂದಿವೆ. ಗುಂಡಿಗಳು ಬಿದ್ದು, ವಾಹನಗಳ ಸುಗಮಸಂಚಾರಕ್ಕೆ ತೊಂದರೆಯಾಗಿದೆ. ಮಳೆಗಾಲ ಆರಂಭ ಆಗುವಷ್ಟರಲ್ಲಿ ರಸ್ತೆಗಳ ಸುಧಾರಿಸಬೇಕು ಎಂದು ಒತ್ತಾಯಿಸಿದರು. ಸಾಜೀದ್ ಅಹಮದ್, ರಾಜಾ ಪಟೇಲ್ ಇದ್ದರು.

ಲಿಂಗ ನಿರ್ಣಯ, ಲಿಂಗ ಆಯ್ಕೆ ಪದ್ಧತಿ ನಿಷೇಧ ಶಿಕ್ಷಾರ್ಹ ಅಪರಾಧ

ಕಲಬುರಗಿ: ಕಲಬುರಗಿಯ ಸಹಾಯಕ ಆಯುಕ್ತರು ಲಿಂಗ ನಿರ್ಣಯ ಮತ್ತು ಲಿಂಗ-ಆಯ್ಕೆ ಪದ್ಧತಿಗಳನ್ನು ನಿಷೇಧಿಸುವ ಗರ್ಭಧಾರಣೆ ಪೂರ್ವ ಮತ್ತು ಪ್ರಸವ ಪೂರ್ವ ರೋಗನಿರ್ಣಯ ತಂತ್ರಗಳ ಕಾಯ್ದೆ 1994 ರ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದೆ. ಕಾಯ್ದೆಯ ಯಾವುದೇ ಉಲ್ಲಂಘನೆಯು ಜೈಲು ಶಿಕ್ಷೆ, ದಂಡ ಮತ್ತು ವೈದ್ಯಕೀಯ ಪರವಾನಗಿಗಳನ್ನು ರದ್ದುಗೊಳಿಸುವ ಮೂಲಕ ಶಿಕ್ಷಾರ್ಹ ಅಪರಾಧವಾಗಿದೆ. ನಾಗರಿಕರು ಅಂತಹ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಾರದು ಅಥವಾ ಬೆಂಬಲಿಸಬಾರದು ಎಂದು ಕೋರಲಾಗಿದೆ. ಯಾವುದೇ ಶಂಕಿತ ಉಲ್ಲಂಘನೆಗಳನ್ನು ವರದಿ ಮಾಡಲು ಸಾರ್ವಜನಿಕರನ್ನು ಪ್ರೋತ್ಸಾಹಿಸಲಾಗುತ್ತದೆ. ವಿಶ್ವಾಸಾರ್ಹ ಮಾಹಿತಿ ಒದಗಿಸುವ ಮಾಹಿತಿದಾರರಿಗೆ ಬಹುಮಾನ ನೀಡಲಾಗುವುದು ಮತ್ತು ಅವರ ಗುರುತನ್ನು ಕಟ್ಟುನಿಟ್ಟಾಗಿ ಗೌಪ್ಯವಾಗಿಡಲಾಗುತ್ತದೆ. ಜಾಗೃತಿ ಅಭಿಯಾನಗಳು, ರೋಗನಿರ್ಣಯ ಕೇಂದ್ರಗಳ ಕಟ್ಟುನಿಟ್ಟಿನ ಮೇಲ್ವಿಚಾರಣೆ ಮತ್ತು ಅಪರಾಧಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಮೂಲಕ ಲಿಂಗ ಅನುಪಾತವನ್ನು ಸುಧಾರಿಸಲು ಜಿಲ್ಲಾಡಳಿತವು ಸಕ್ರಿಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಶುಭ ವಿವಾಹ

ಶಿವರಾಜ - ಸುನೀತಾ

ಕಲಬುರಗಿ: ತಾಲೂಕಿನ ಮೇಳಕುಂದಾ (ಬಿ) ಗ್ರಾಮದ ದಿ. ನೀಲಮ್ಮ ಮತ್ತು ಮಲ್ಲಿಕಾರ್ಜುನ ಪೊಲೀಸ್ ಪಾಟೀಲ್ ಅವರ ಪುತ್ರ ಶಿವರಾಜ ವಿವಾಹವು, ಕಡಣಿಯ ಕನ್ನುಬಾಯಿ ಮತ್ತು ಭೀಮಾಶಂಕರ ಬಾಗಲಕೋಟೆಯವರ ಪುತ್ರಿ ಸುನೀತಾ ಜತೆ ಹಡಗಿಲಹಾರುತಿಯ ಶ್ರೀ ಕಂಠಿ ಬಸವೇಶ್ವರ ದೇವಾಲಯದ ಆದರ್ಶ ಕಲ್ಯಾಣ ಮಂಟಪದಲ್ಲಿ 6ರಂದು ಜರುಗಿತು.

ಚಂದನಾ- ವಿನೋದ

ಕಲಬುರಗಿ: ಇಲ್ಲಿಯ ಕವಿತಾ ಮತ್ತು ವಿಜಯಕುಮಾರ ಬಾಡಾ ಅವರ ಪುತ್ರಿ ಚಂದನಾ ವಿವಾಹವು ಶೈಲಜಾ ಮತ್ತು ಲಕ್ಷ್ಮಣ ಕೊಕ್ಕನವರ್ ಅವರ ಪುತ್ರ ವಿನೋದ ಜತೆ ನಗರದ ನಿಗ್ಗುಡಗಿ ಫಂಕ್ಷನ್ ಹಾಲ್‌ನಲ್ಲಿ 6ರಂದು ಜರುಗಿತು.

ದೇಶದ ಏಕತೆ, ಐಕ್ಯತೆ, ಅಖಂಡತೆಗೆ ಶ್ರಮಿಸಿ

ಸಂ.ಕ. ಸಮಾಚಾರ ಕಲಬುರಗಿ : ನಗರದ ಪಬ್ಲಿಕ್ ಗಾರ್ಡನ ವೀರಶೈವ ಕಲ್ಯಾಣ ಮಂಟಪದಲ್ಲಿ ನವದೆಹಲಿಯ ಜೈ ಭಾರತ ಮಾತಾ ಸೇವಾ ಸಮಿತಿ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ಹವಾ ಮಲ್ಲಿನಾಥ ಮಹಾರಾಜ ನೀರಗುಡಿ ಅವರ ಸಾನ್ನಿಧ್ಯದಲ್ಲಿ ಸರ್ವಧರ್ಮಗಳ ಶ್ರೇಷ್ಠ ಗ್ರಂಥಗಳ ಅಭಿವಂದನ ಸಮಾರಂಭ ನಡೆಯಿತು.

ಸಂವಿಧಾನ ಹಾಗು ಎಲ್ಲಾ ಧರ್ಮಗಳ ಗ್ರಂಥಗಳಿಗೆ ಭಕ್ತಿಯಿಂದ ಗೌರವಪೂರ್ವಕವಾಗಿ ಅಭಿವಂದನೆ ಸಲ್ಲಿಸುವ ಮೂಲಕ ಸರ್ವಧರ್ಮ ಸಮಭಾವ, ಸಹೋದರತೆ ಮತ್ತು ರಾಷ್ಟ್ರೀಯ ಏಕತೆಯ ಸಂದೇಶ ಸಾರಲಾಯಿತು. ಪ್ರಸ್ತುತ ಭಾರತದಲ್ಲಿ ಹವಾ ಮಲ್ಲಿನಾಥರ ಈ ದೇಶಭಕ್ತಿ ಕಾರ್ಯಕ್ರಮ ದೇಶಬಾಂಧವರಲ್ಲಿ ಸಹೋದರತ್ವ ಮತ್ತು ಸೌಹಾರ್ದತೆ ಮೂಡಿಸುತ್ತಿದ್ದು, ಸರ್ವರಿಗೂ ಮಾದರಿಯಾಗಿದೆ ಎಂದರು.

ಫಾದರ್ ಪ್ರಾನ್ಸಿಸ್ (ಸೆಂಟ್ ಮೇರಿ ಚರ್ಚ್), ಖಾಜಿ ರಿಜ್ವಾನ್ ಬಹುಮನಿ ದರ್ಗಾ ಮತವಲ್ಲಿ, ಶ್ರೀ ಅಪ್ಪಾರಾವ ದೇವಿ ಮುತ್ಯಾ, ಗುರುನಾನಕ್ ಗುರುದ್ವಾರದ ಭಾಯಿ ದೀಪ್ ಸಿಂಗ್, ಅಣದೂರಿನ ಭಂತೇಜಿ, ಅಖಿಲ ಭಾರತ ಉರ್ದು ಮಂಚ್ ಮುಖ್ಯಸ್ಥ ಸೈಯದ್ ರವೂಫ್ ಖಾದ್ರಿ ಸೇರಿ ಹಲವು ಧರ್ಮಗುರುಗಳು ಭಾಗವಹಿಸಿದ್ದರು. ಜೈ ಭಾರತ ಮಾತಾ ಸೇವಾ ಸಮಿತಿ ರಾಷ್ಟ್ರೀಯ ವಕ್ತಾರ, ನ್ಯಾಯವಾದಿ ವೈಜನಾಥ ಎಸ್ ಝಳಕಿ, ಪ್ರಮುಖರಾದ ವಿಕಾಸ್ ಆರ್ ಪಾಠಕ್, ಶಾಹಾಜಿರಾವ ಪಾಟೀಲ, ಡಾ. ಬಾಬು ಬೆಂಗಳೂರು, ಮಲ್ಲಿಕಾರ್ಜುನ ಸಾರವಾಡ, ಸಂದೇಶ್ ಪವಾರ, ಮಂಜುನಾಥ ಬಿರಾದಾರ, ಹಣಮಂತರಾವ ಪಾಟೀಲ ಮಾಲಾಜಿ, ಸಂತೋಷ ಬೊನೆ, ಗುರುಸಿದ್ದಪ್ಪ ಬೆನಕನಹಳ್ಳಿ, ರೇವಪ್ಪ ಮಮದಾಪುರ, ಶೈಲಾ, ಗಂಗಪ್ಪ ಗೌಡ ಬೋಧಾನ, ಡಾ. ಮಾರುತಿ ಬೀದರ್, ಗಣೇಶ್ ಬಿದರ್, ರಾಹುಲ್, ನಾಮದೇವ ಬಬಲಾದ, ಅಸ್ಲಾಂ ಚುಂಗಿ ಸೇರಿ ಅನೇಕರು ಭಾಗವಹಿಸಿದ್ದರು.



ಸರ್ವಧರ್ಮಗಳ ಶ್ರೇಷ್ಠ ಗ್ರಂಥಗಳ ಅಭಿವಂದನ ಸಮಾರಂಭವನ್ನು ನವದೆಹಲಿಯ ಜೈ ಭಾರತ ಮಾತಾ ಸೇವಾ ಸಮಿತಿ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ಹವಾ ಮಲ್ಲಿನಾಥ ಮಹಾರಾಜ ಉದ್ಘಾಟಿಸಿದರು.

ಕಾಮಗಾರಿ ಗುಣಮಟ್ಟದಿಂದ ಕೂಡಿರಲಿ

ಶಾಸಕ ಚನ್ನಾರಡ್ಡಿ ಪಾಟೀಲ್ ತುನ್ನೂರ ತಾಕೀತು | ವಿವಿಧ ಅಭಿವೃದ್ಧಿ ಕಾಮಗಾರಿಗೆ ಅಡಿಗಲ್ಲು ಸಮಾರಂಭ

ಸಂ.ಕ. ಸಮಾಚಾರ ಯಾದಗಿರಿ/ವಡಗೇರಾ: ನನ್ನ ಕ್ಷೇತ್ರದಲ್ಲಿ ಯಾವುದೆ ಇಲಾಖೆಯಿಂದ ಕೈಗೊಳ್ಳುವ ಅಭಿವೃದ್ಧಿ ಕಾಮಗಾರಿಗಳನ್ನು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಉತ್ತಮ ಗುಣಮಟ್ಟದ ಕಾಮಗಾರಿ ಮಾಡಬೇಕೆಂದು ಶಾಸಕ ಚನ್ನಾರಡ್ಡಿ ಪಾಟೀಲ್ ತುನ್ನೂರ ತಾಕೀತು ಮಾಡಿದರು. ತಾಲೂಕಿನ ಗುರಸಣಿಗಿ ಗ್ರಾಮದ ಶ್ರೀ ಸಿದ್ದಲಿಂಗೇಶ್ವರ ದೇವಸ್ಥಾನ ಆವರಣದಲ್ಲಿ ಲೋಕೋಪಯೋಗಿ ಇಲಾಖೆಯಿಂದ ದೇವಸ್ಥಾನದಿಂದ ಮುಖ್ಯರಸ್ತೆಯವರೆಗೆ 2 ಕೋಟಿ ರೂ. ವೆಚ್ಚದಲ್ಲಿ ಸಿಮೆಂಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಅಡಿಗಲ್ಲು ನೆರವೇರಿಸಿ ಮಾತನಾಡಿದ ಅವರು, ಈ ದೇವಸ್ಥಾನಕ್ಕೆ ಸಾವಿರಾರು ವರ್ಷಗಳ ಭವ್ಯ ಇತಿಹಾಸವಿದೆ. ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಿಸುತ್ತೇನೆಂಬ ಭರವಸೆ ನೀಡಿದರು.

ಗುರಸುಣಿಗಿ ಗ್ರಾಮದ ಬೆಟ್ಟದ ಶ್ರೀ ಸಿದ್ಧಲಿಂಗೇಶ್ವರ ದೇವಸ್ಥಾನದಿಂದ ಮುಖ್ಯರಸ್ತೆವರೆಗೆ ಸಿಮೆಂಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅಡಿಗಲ್ಲು ನೆರವೇರಿಸಿ ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಜನರಿಗೆ ನೀಡಿದ ಭರವಸೆಯಂತೆ ಪಂಚ ಗ್ಯಾರಂಟಿಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಮೂಲಕ ಅದರ ಲಾಭ ಎಲ್ಲಾ ವರ್ಗದ ಜನರಿಗೆ ತಲುಪಿವೆ. ಅಲ್ಲದೆ ಅಭಿವೃದ್ಧಿಗೆ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಸಾಕಷ್ಟು ಅನುದಾನ ನೀಡುತ್ತಿದ್ದಾರೆ. ಈಗಾಗಲೆ ನಗರದಲ್ಲಿ ಜನರ ಬೇಡಿಕೆಯಂತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಬರುವ ದಿನಗಳಲ್ಲಿ ಮತಕ್ಷೇತ್ರದ ಎಲ್ಲಾ ಹೋಬಳಿಗಳ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳ ಜನರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುವುದು ಎಂದು ತಿಳಿಸಿದರು.

ದೇವಸ್ಥಾನದ ಕಾರ್ಯದರ್ಶಿ ಮಲ್ಲಿಕಾರ್ಜುನ ಸ್ವಾಮಿ ಹೊಸಮಠ ಮಾತನಾಡಿದರು. ನಂತರ ಬೇಡಿಕೆಗಳ ಮನವಿಯನ್ನು ಶಾಸಕರಿಗೆ ಸಲ್ಲಿಸಿದರು. ಲೋಕೋಪಯೋಗಿ ಇಲಾಖೆ ಇಂಜಿನಿಯರ್ ರಮೇಶ ರಾಠೋಡ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಿದ್ದಣ್ಣಗೌಡ ಹಿರೇಗೌಡ, ತಾಪಂ ಮಾಜಿ ಸದಸ್ಯ ಶರಣಭೂಪಾಲರಡ್ಡಿ, ಮಲ್ಲಿಕಾರ್ಜುನರಡ್ಡಿ ಗೋಸ್ವಾಮಿ ನಾಯ್ಕಲ್, ಬಸರಾಜಪ್ಪಗೌಡ ಶಾಂತವೀರ, ಗ್ಯಾರಂಟಿ ಯೋಜನೆ ಸಮಿತಿ ತಾಲೂಕು ಅಧ್ಯಕ್ಷ ಖಾಜಾ ಮೈನೊದ್ದೀನ್ ಮಿರ್ಚಿ ನಾಯ್ಕಲ್, ಶಿವರಾಜಗೌಡ, ಗುತ್ತಿಗೆದಾರ ಶಿವಬಸವರಡ್ಡಿ ನಾಯ್ಕಲ್, ಬಸವರಾಜಪ್ಪಗೌಡ ಶಾಂತವೀರ, ಸಿದ್ಧಬಸ್ಸಯ್ಯಸ್ವಾಮಿ ಗುಡಿಮಠ, ಭಾಗಣ್ಣ, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸೂಗೂರೆಡ್ಡಿ ಬೆಂಡೆಬೆಂಬಳಿ, ಸಹಾಯಕ ಇಂಜಿನಿಯರ ದೇವದಾಸ ಹಲವರು ಉಪಸ್ಥಿತರಿದ್ದರು. ಶಿಕ್ಷಕ ಚಂದ್ರಾಯಗೌಡ ಸ್ವಾಗತಿಸಿದರು. ಸಿದ್ದಲಿಂಗಯ್ಯಸ್ವಾಮಿ ವಂದಿಸಿದರು.

'ದೋರನಹಳ್ಳಿಯಲ್ಲಿ ದೊರೆತ ಪಿಯುಸಿ ವ್ಯಾಸಂಗ'

ದೋರನಹಳ್ಳಿ: ಇಲ್ಲಿಯ ಸರಕಾರಿ ಪ್ರೌಢ ಶಾಲೆಗೆ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರು ಅವರು ಭೇಟಿ ನೀಡಿ ನೂತನ ಸರಕಾರಿ ಪಿಯು ಕಾಲೇಜು ಪ್ರಾರಂಭಿಸುವ ಕುರಿತು ಸಮಗ್ರವಾಗಿ ಪರಿಶೀಲಸಿದರು. ಶಾಲೆಯ ವಿಶಾಲವಾದ ಆವರಣವನ್ನು ನೋಡಿ ಉಲ್ಲಸಿತರಾಗಿ ಕಂಡು ಬಂದರು. ಕಾಲೇಜು ಆರಂಭಕ್ಕೆ ಅಗತ್ಯವಾದ ಮೂಲ ಸೌಕರ್ಯಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ ಪ್ರಥಮ ಪಿಯುಸಿ ವಾಣಿಜ್ಯ ವಿಭಾಗವನ್ನು ಆರಂಭಿಸಲಾಗುವುದು ತುನ್ನೂರು ತಿಳಿಸಿದರು.

ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಈ ಕಾಲೇಜಿನ ಸೌಲಭ್ಯ ಸದುಪಯೋಗಪಡಿಸಿಕೊಂಡು ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯಬೇಕು ಎಂದು ಮನವಿ ಮಾಡಿದರು. ಹತ್ತಿರದಲ್ಲೇ ಪಿಯುಸಿ ಶಿಕ್ಷಣ ಸೌಲಭ್ಯ ದೊರೆಯುವುದರಿಂದ ವಿದ್ಯಾರ್ಥಿಗಳಿಗೆ ದೂರದ ಊರುಗಳಿಗೆ ತೆರಳುವ ಅವಶ್ಯಕತೆ ಕಡಿಮೆಯಾಗಿ ಸಮಯ ಮತ್ತು ಹಣ ಎರಡೂ ಉಳಿತಾಯವಾಗಲಿದೆ ಎಂದರು. ಉಪ ನಿರ್ದೇಶಕ ಪಂಡಿತ ಪವರ ಮಾತನಾಡಿ, ಇಂದಿನಿಂದ (ಮೇ 6ರಿಂದ) ಪ್ರಥಮ ಪಿಯುಸಿ ವಾಣಿಜ್ಯ ಸೇರಿ ಇನ್ನಿತರ ವಿಭಾಗಕ್ಕೆ ಪ್ರವೇಶಗಳು ಪ್ರಾರಂಭವಾಗುತ್ತಿವೆ. ಆಸಕ್ತ ವಿದ್ಯಾರ್ಥಿಗಳು ಸೂಕ್ತ ದಾಖಲೆಗಳೊಂದಿಗೆ ಕಾಲೇಜಿಗೆ ಭೇಟಿ ನೀಡಿ ಪ್ರವೇಶ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ದೋರನಹಳ್ಳಿಯ ಸರಕಾರಿ ಪ್ರೌಢ ಶಾಲೆಗೆ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರು ಭೇಟಿ ನೀಡಿ ಪರಿಶೀಲಿಸಿದರು.

ಯಾದಗಿರಿ ಬಾಲಕರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರುದ್ರುಗೌಡ ಪಾಟೀಲ್, ಪಪಂ ಮುಖ್ಯಾಧಿಕಾರಿ ಸಿದ್ರಾಮೇಶ್ವರ ಶಖಾಪುರ, ಮುಖ್ಯ ಶಿಕ್ಷಕ ಶಾಂತಪ್ಪ ಕೆರಟಗಿ ಗ್ರಂಥಪಾಲಕ ಹೈಯಾಳಪ್ಪ ಗುಂಟನೂರು, ಗಣ್ಯರಾದ ಮಾನಪ್ಪ ಹುಲಸೂರು, ಬಾಷಾ ಅರ್ಜಣಿಗಿ, ಹಳ್ಳೆಪ್ಪ ಹುಡೆದ, ಗಫೂರ್ ಗೋಗಿ ಇದ್ದರು.

ಮಲ್ಲಮ್ಮ ಜಯಂತಿ: ಪೂರ್ವಭಾವಿ ಸಭೆ

ಸುರಪುರ: ತಾಲೂಕ ಆಡಳಿತದಿಂದ ಮಹಾ ಸಾಧ್ವಿ ಹೇಮರೆಡ್ಡಿ ಮಲ್ಲಮ್ಮನವರ ಜಯಂತಿ ಆಚರಣೆ ಅಂಗವಾಗಿ ನಗರದ ತಹಸೀಲ್ದಾರ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಜರುಗಿತು. ತಹಸೀಲ್ದಾರ್ ಹುಸೇನ ಸಾಬ್ ಎ ಸರಕಾವಸ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಸರಕಾರದ ಆದೇಶದಂತೆ ಮೇ 10ನೇ ತಾರೀಕು ಬೆಳಿಗ್ಗೆ ಈ ಕಚೇರಿ ಸಭಾಂಗಣದಲ್ಲಿ ಮಹಾ ಸಾಧ್ವಿ ಹೇಮರೆಡ್ಡಿ ಮಲ್ಲಮ್ಮನವರ ಜಯಂತಿಯನ್ನು ಆಚರಿಸಲಾಗುವುದು. ಶಾಸಕರು ಉದ್ಘಾಟಿಸಲಿದ್ದಾರೆ. ಅಲ್ಲದೆ ಉಪನ್ಯಾಸ ಕಾರ್ಯಕ್ರಮವು ಕೂಡ ನಡೆಯಲಿದ್ದು, ತಾಲೂಕ ಆಡಳಿತದ ಕಾರ್ಯಕ್ರಮದಲ್ಲಿ ಎಲ್ಲ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸುವಂತೆ ತಿಳಿಸಿದರು. ಅಲ್ಲದೆ ತಾಲೂಕಿನ ಎಲ್ಲಾ ಕಚೇರಿಗಳಲ್ಲಿ ಗ್ರಾಮ ಪಂಚಾಯಿತಿ ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕೆಂದರು. ಟಿಎಚ್‌ಓ ಡಾ. ರಾಜಾ ವೆಂಕಪ್ಪ ನಾಯಕ, ಅಖಂಡ ಕರ್ನಾಟಕ ವೀರಶೈವ ಲಿಂಗಾಯತ ಸಮಾಜ ಸಂಘಟನೆಯ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ರೆಡ್ಡಿ ಅಮ್ಮಾಪುರ, ವಕೀಲ ಯಲ್ಲಪ್ಪ ಹುಲಿಕಲ್, ಮುಖಂಡ ನಿಂಗಣ್ಣ ಬುಡ್ಡಾ, ಮಲ್ಲು ಬಾದ್ಯಾಪುರ ಇನ್ನಿತರರು ಇದ್ದರು.

ಗೃಹಭಾಗ್ಯ ಯೋಜನೆಯಲ್ಲಿ ವ್ಯಾಪಕ ಭ್ರಷ್ಟಾಚಾರ

ಶಹಾಪುರ: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗಾಗಿ ಜಾರಿಗೆ ತಂದ ಗೃಹಭಾಗ್ಯ ಯೋಜನೆಯಡಿ 2022ರಲ್ಲಿ ಬಿಡುಗಡೆಗೊಂಡ 81.10 ಕೋಟಿ ರೂ. ಅನುದಾನದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಸರ್. ಎಂ. ವಿಶ್ವೇಶ್ವರಯ್ಯ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಪ್ರದೀಪ ಅಣಬಿ ತಹಸೀಲ್ದಾರಗೆ ದೂರು ಸಲ್ಲಿಸಲಾಯಿತು. ಯೋಜನೆಯಡಿ ಯಾವುದೇ ಫಲಾನುಭವಿಗಳಿಗೆ ಮನೆಯೇ ಮಂಜೂರಾಗಿಲ್ಲ. ಮಾಹಿತಿ ಹಕ್ಕು ಅಧಿನಿಯಮ ಮೂಲಕ ವಿವಿಧ ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಂದ ಪಡೆದ ಮಾಹಿತಿಯ ಪ್ರಕಾರ, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯೇ ನಡೆದಿಲ್ಲ.

ಒಟ್ಟು 4055 ಮನೆಗಳ ಪೈಕಿ ಸುಮಾರು 2910 ಮನೆಗಳಿಗೆ ಸಂಬಂಧಿಸಿದ ಮಾಹಿತಿ ಕೇಳಿದಾಗ ಸಮರ್ಪಕ ಉತ್ತರ ನೀಡುತ್ತಿಲ್ಲ. ಉಳಿದ 1145 ಫಲಾನುಭವಿಗಳ ಕುರಿತು ಯಾವುದೇ ಸ್ಪಷ್ಟ ಮಾಹಿತಿ ನೀಡಲಾಗಿಲ್ಲ. ಕಾರ್ಮಿಕ ಸಚಿವರಿಗೆ, ವಸತಿ ಸಚಿವರಿಗೆ ಹಾಗೂ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಆಯುಕ್ತರು ಸೇರಿ ಹಲವು ಉನ್ನತ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಇದುವರೆಗೆ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಳ್ಳದಿರುವುದು ಸಾರ್ವತ್ರಿಕವಾಗಿ ಅಸಮಾಧಾನಕ್ಕೆ ಕಾರಣವಾಗಿದೆ. ಈ ನಿಟ್ಟಿನಲ್ಲಿ ಸೂಕ್ತ ಕ್ರಮಕ್ಕೆ ಅಣಬಿ ಆಗ್ರಹಿಸಿದ್ದಾರೆ.

ಶಹಾಪುರದ ಸರ್. ಎಂ. ವಿಶ್ವೇಶ್ವರಯ್ಯ ಕಟ್ಟಡ ಕಾರ್ಮಿಕರ ಸಂಘದಿಂದ ತಹಸೀಲ್ದಾರಗೆ ದೂರು ಸಲ್ಲಿಸಲಾಯಿತು.

ಆಂಜನೇಯ ಅಣಬಿ, ಅಂಬ್ರೇಶ ಶಿರವಾಳ, ಭೋಜಪ್ಪ ಮುಂಡಾಸ, ಆಂಜನೇಯ ಇಬ್ರಾಹಿಂಪುರ, ಶರಣು ದಿಗ್ಗಿ, ಪ್ರಕಾಶ ದಿಗ್ಗಿ, ಮಲ್ಲಣ್ಣ ಮದ್ರಕಿ ಇತರರು ಇದ್ದರು.

ಶಕ್ತಿಯೋಜನೆ ಪರಿಶೀಲನೆ 12ರಂದು

ಸಂ.ಕ.ಸಮಾಚಾರ ಹುಮನಾಬಾದ್ : ಮೇ 12ರಂದು ಬೆಳಿಗ್ಗೆ 10ಕ್ಕೆ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳ ಒಂದಾದ ಶಕ್ತಿ ಯೋಜನೆ ಅನುಷ್ಠಾನ ಕುರಿತು ಗ್ಯಾರಂಟಿ ಸಮಿತಿ ಅಧ್ಯಕ್ಷ ಅಹ್ಮದ್ ಮೈನೋದ್ದಿನ ಅಫಸರಮಿಯ್ಯ ಹಾಗೂ ಸದಸ್ಯರ ತಂಡ ಪರಿಶೀಲನೆ ನಡೆಸಲಿದೆ.

ಕಾರಣ ಸಂಬಂಧಿತ ಅನುಷ್ಠಾನ ಸಮಿತಿ ಸದಸ್ಯರು ಹಾಗೂ ಅನುಷ್ಠಾನ ಅಧಿಕಾರಿಗಳು ಸಕಾಲಕ್ಕೆ ಕೇಂದ್ರ ಬಸದ್ ನಿಲ್ದಾಣದಲ್ಲಿ ಅಗತ್ಯ ದಾಖಲೆಗಳ

ಸಮೇತ ಹಾಜರ್ ಇರುವಂತೆ ಮನವಿ ಮಾಡಲಾಗಿದೆ. ಜೊತೆಗೆ ಶಕ್ತಿ ಯೋಜನೆಗಳ ಫಲಾನುಭವಿಗಳಿಗೆ ಯಾವುದೇ ರೀತಿ ತೊಂದರೆ ಇದ್ದಲ್ಲಿ ಗ್ಯಾರಂಟಿ ಸಮಿತಿ ಅಧ್ಯಕ್ಷ ಹಾಗೂ ಸದಸ್ಯರ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬಹುದು. ಕಾರಣ ಈ ಸೌಲಭ್ಯದಿಂದ ಫಲಾನುಭವಿಗಳು ಪ್ರಯೋಜನ ಪಡೆಯಬೇಕೆಂದು ಗ್ಯಾರಂಟಿ ಸಮಿತಿ ಕಾರ್ಯದರ್ಶಿ ದೀಪಿಕಾ ನಾಯ್ಕರ್ ಈ ಮೂಲಕವಾಗಿ ಕೋರಿದ್ದಾರೆ.

ರೈತ ಮಹಿಳೆಯರಿಗೆ "ರೈತ ಸೇವಾ ಶ್ರೀ" ಪ್ರಶಸ್ತಿ ಪ್ರದಾನ

ಕಲಬುರಗಿ: ನಗರದ ಸುವರ್ಣ ಭವನ (ಕನ್ನಡ ಭವನ)ದಲ್ಲಿ ಬುಧವಾರ ಶ್ರೀ ದಾನೇಶ್ವರಿ ಸೇವಾ ಸಂಸ್ಥೆ ಸಂಸ್ಥೆಯ 11ನೇ ವಾರ್ಷಿಕೋತ್ಸವ ಅಂಗವಾಗಿ ಪ್ಲಾಸ್ಟಿಕ್ ನಿಷೇಧ ಜಾಗೃತಿ ಕಾರ್ಯಕ್ರಮ, ರೈತ ಮಹಿಳೆಯರಿಗೆ ಉಡಿತುಂಬುವ ಕಾರ್ಯಕ್ರಮ, ಉಚಿತ ಟೈಲರಿಂಗ್ ತರಬೇತಿ ಉದ್ಘಾಟನಾ ಸಮಾರಂಭ ಹಾಗೂ 5 ಜನ ಪ್ರಗತಿಪರ ರೈತ ಮಹಿಳೆಯರಿಗೆ "ರೈತ ಸೇವಾ ಶ್ರೀ" ಪ್ರಶಸ್ತಿಯನ್ನು ವಿತರಣೆ ಮಾಡಲಾಯಿತು.

ಸಂಸ್ಥೆಯ ಅಧ್ಯಕ್ಷರಾದ ಜ್ಯೋತಿ ಹಿರೇಮಠ ನೇತೃತ್ವದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಸಮಾಜಮುಖಿ ಕಾರ್ಯಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ರೈತ ಮಹಿಳೆಯರ ಸಾಧನೆ ಗುರುತಿಸಿ ರೈತ ಮಹಿಳೆಯರಿಗೆ "ರೈತ ಸೇವಾ ಶ್ರೀ" ಪ್ರಶಸ್ತಿ ಪ್ರದಾನ ನೀಡಲಾಯಿತು. ಕಾರ್ಯಕ್ರಮದಲ್ಲಿ ಮಾಜಿ ಶಾಸಕ ದತ್ತಾತ್ರೇಯ ಸಿ. ಪಾಟೀಲ ರೇವೂರ, ಡಾ. ಸುಧಾ ಹಾಲಕಾಯಿ, ವಿಜಯಕುಮಾರ ಪಾಟೀಲ ತೆಗಲತಿಪ್ಪಿ, ಜ್ಯೋತಿ ಎಂ. ಮರಗೋಳ, ಬಾಬುರಾವ ಪಾಟೀಲ್, ವೀರಸ್ವಾಮಿ, ರಾಚೋಟಯ್ಯ ಹಿರೇಮಠ, ವಿಶ್ವನಾಥ ಸಾಲಿಮಠ, ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸದಸ್ಯರಾದ ಸುಧಾಕರ ಇಟಗಿ, ನಾಗಮ್ಮ ಮಠಪತಿ, ನೀಲಮ್ಮ ಹಿರೇಮಠ ಸೇರಿ ಸದಸ್ಯರು ಇದ್ದರು.

ಶ್ರೀನಿವಾಸ ಸರಡಗಿ ಶ್ರೀಗಳ ಕೊಡುಗೆ ಅನನ್ಯ

ಸಂ.ಕ. ಸಮಾಚಾರ ಕಲಬುರಗಿ: ಮೌಲ್ಯಗಳ, ಧರ್ಮದ, ಸೇವಾಭಾವದ ಮತ್ತು ಸಮಾಜಮುಖಿ ಚಿಂತನೆಯ ಹಬ್ಬವಾಗಿದೆ ಎಂದು ಶಿಕ್ಷಣ ಪ್ರೇಮಿ ಶಿವಾನಂದ ಖಜೂರಗಿ ಹೇಳಿದರು.

ನಗರ ಹೊರವಲಯದ ತಾಜ ಸುಲ್ತಾನಾಪುರದ ಚಿನ್ನದಕಂತಿ ಚಿಕ್ಕವಿಕ್ಕವೀರೇಶ್ವರ ಸಂಸ್ಥಾನ ಹಿರೇಮಠದಲ್ಲಿ ಶ್ರೀಮಠದ ಪೀಠಾಧಿಪತಿ ಪೂಜ್ಯ ಡಾ. ರೇವಣಸಿದ್ಧ ಶಿವಾಚಾರ್ಯರ ಜನ್ಮ ದಿನದ ನಿಮಿತ್ತ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನಿಸಿ ಮಾತನಾಡಿದ ಅವರು, ಪೀಠಾಧಿಪತಿಗಳು ನಮ್ಮ ಸಮಾಜಕ್ಕೆ ನೀಡಿರುವ ಮಾರ್ಗದರ್ಶನ ಅಪಾರ. ಅವರು ಕೇವಲ ಆಧ್ಯಾತ್ಮಿಕ ನಾಯಕರಲ್ಲ, ಸಮಾಜವನ್ನು ಸರಿಯಾದ ದಾರಿಯಲ್ಲಿ ನಡೆಸುವ ದೀಪಸ್ತಂಭರಾಗಿದ್ದಾರೆ ಎಂದು

ಗುಣಗಾನ ಮಾಡಿದರು.

ಮಠದ ಪೀಠಾಧಿಪತಿ ಪೂಜ್ಯ ಡಾ. ರೇವಣಸಿದ್ಧ ಶಿವಾಚಾರ್ಯರು ಆಶೀರ್ವಚನ ನೀಡಿದರು. ಇದುವರೆಗೂ ಮಠಕ್ಕೆ ನಾನು ಮಾಡಿದ್ದೂ ಕಡಿಮೆ, ಆದರೆ ಭಕ್ತರೇ ಶ್ರೀನಿವಾಸ ಸರಡಗಿ, ಕುರಕೋಟಿ, ತಾಜ ಸುಲ್ತಾನಪುರ ಮಠದ ಭಕ್ತರಿಂದಲೇ ಮಠ ಬೆಳಕಿಗೆ ಬಂದಿದೆ ಎಂದರು.

ಸಾಹಿತಿ, ಶಿಕ್ಷಣ ಪ್ರೇಮಿ ಬಿ. ಎಚ್. ನಿರಗುಡಿ, ಶಿಕ್ಷಣ ಪ್ರೇಮಿ ಶಿವಾನಂದ ಖಜುರ್ಗಿ, ಆನಂದ ಪೂಜಾರಿ, ಸುಭಾಷ ಓಗಿ, ಸಂಗೀತ ಕಲಾವಿದರಾದ ಸೂರ್ಯಕಾಂತ ಡುಮ್ಮಾ, ಶಿವಶಂಕರ ಬಿರಾದಾರ, ಶಿವಕುಮಾರ ಜಾಲಹಳ್ಳಿ, ರವಿಸ್ವಾಮಿ ಗೋಟೂರ ಅವರನ್ನು ಗೌರವಿಸಲಾಯಿತು. ಉಪ ತಹಸೀಲ್ದಾರ ವೀರಯ್ಯ ಹೊಸಮಠ, ಗ್ರಾಮ ಪಂಚಾಯತ ಮಾಜಿ ಅಧ್ಯಕ್ಷರಾದ ಚಂದ್ರಶೇಖರ ಜಿ. ಪಾಟೀಲ ವೇದಿಕೆಯಲ್ಲಿದ್ದರು. ಶಿವಶಂಕರ ಬಿರಾದಾರ ಪ್ರಾರ್ಥಿಸಿದರು. ವಿನೋದ ಮಾಳಾ ಸ್ವಾಗತಿಸಿದರು. ನ್ಯಾಯವಾದಿ ಹಣಮಂತರಾಯ ಅಟ್ಟೂರ ಪ್ರಾಸ್ತಾವಿಕವಾಗಿ ಮಾತನಾಡಿದರು.

ರವಿಕುಮಾರ ಶಹಾಪುರಕರ್ ನಿರೂಪಿಸಿ, ವಂದಿಸಿದರು. ಕಾರ್ಯಕ್ರಮದಲ್ಲಿ ಅಂಬಾರಾಯ ಕೋಣೆ, ಮಹಾಂತಯ್ಯ ಬಾಳಿ, ವಿನೋದ ಚಿಮದಿ, ಬಸವರಾಜ ಶೀಲವಂತ, ಸುಚಿತ ಮಾಳಾ, ಮಹಾದೇವ ನಾಗೂರ ಸೇರಿ ಅನೇಕರಿದ್ದರು.

ಕಸ್ತೂರಿ ತಪ್ಪದೆ ಓದಿ

ಕೆರೆ ಹೂಳೆತ್ತುವ ಕಾಮಗಾರಿಯಲ್ಲಿಯೂ ಅಪೂರ್ಣ

ಕುಡಿಯುವ ನೀರಿನ ಟಾಸ್ಕ ಪೋರ್ಸ ಸಮಿತಿ ಸಭೆ | ಜಲ ಜೀವನ್ ಮಿಷನ್ ಕಾಮಗಾರಿ ತನಿಖೆಗೆ ಶಾಸಕಿ ಕರೆಮ್ಮ ಸೂಚನೆ

ದೇವದುರ್ಗ : ತಾಲೂಕಿನಲ್ಲಿ ಕುಡಿಯುವ ನೀರಿಗಾಗಿ ಕೇಂದ್ರ ಸರಕಾರದ ಯೋಜನೆಯಾದ ಜಲ ಜೀವನ ಮಿಷನ್ ಕಾಮಗಾರಿ ಅಪೂರ್ಣವಾಗಿದ್ದು, ಸಾರ್ವಜನಿಕರಿಗೆ ಕುಡಿಯುವ ನೀರು ಸಿಗಲಾರದಂತಾಗಿದೆ. ಕೆರೆ ಹೂಳೆತ್ತುವ ಕಾಮಗಾರಿಯಲ್ಲಿಯೂ ಅಪೂರ್ಣವಾಗಿದ್ದು, ಈ ಬಗ್ಗೆ ತನಿಖೆ ನಡೆಸಬೇಕೆಂದು ಶಾಸಕಿ ಕರೆಮ್ಮ ಜಿ ನಾಯಕ ಸೂಚನೆ ನೀಡಿದರು.

ಅವರು ಇಂದು ತಾಲೂಕ ಪಂಚಾಯತಿ ಸಭಾಂಗಣದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ನಡೆದ ಕುಡಿಯುವ ನೀರಿನ ಟಾಸ್ಕ ಪೋರ್ಸ ಸಮಿತಿ ಸಭೆಯಲ್ಲಿ ಮಾತನಾಡಿ, ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದ್ದು ವಿಶೇಷವಾಗಿ ದೊಡ್ಡಿ, ತಾಂಡ ಸೇರಿದಂತೆ ತಾಲೂಕಿನ ಅನೇಕ ಹಳ್ಳಿಗಳಲ್ಲಿ ಜನರು ನೀರಿಗಾಗಿ ಪರದಾಡುವ ಪರಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಜನ ಜೀವನ್ ಮಿಷನ್ ಯೋಜನೆಯಡಿ ಕೈಗೊಂಡ ಕಾಮಗಾರಿಗಳಲ್ಲಿ ಭಾರೀ ಅವ್ಯವಸ್ಥೆ ನಡೆದಿದೆ ಎಂದು ಶಾಸಕರು ಆರೋಪಿಸಿದರು.

ಬಹುತೇಕ ಗ್ರಾಮಗಳಲ್ಲಿ ಪೈಪ್‌ಲೈನಗಳು ಸರಿಯಾಗಿ ಅಳವಡಿಕೆಯಾಗಿಲ್ಲ. ಹೊಸ ಬೋರ್‌ವೆಲಗಳನ್ನು ತೋಡಿದರೂ ಅವುಗಳನ್ನು ನೀರಿನ ಸಂಪರ್ಕಕ್ಕೆ ಜೋಡಿಸದೇ ಬಿಟ್ಟು ಹೋಗಲಾಗಿದೆ. ಕೆಲವೆಡೆ ಹಳೆಯ ಬೋರ್‌ವೆಲಗಳಿಗೆ ಮಾತ್ರ ಸಂಪರ್ಕ ನೀಡಿ ಕಾಮಗಾರಿ ಪೂರ್ಣಗೊಳಿಸಿದಂತೆ ತೋರಿಸಲಾಗಿದೆ ಎಂಬ ಆರೋಪ ಕೇಳಿಬರುತ್ತಿದೆ. ಇನ್ನೂ ಕೆಲವು ಕಡೆ ಬೋರ್‌ವೆಲ್ ಕೊರೆದು ನೀರು ಸಿಗಲಿಲ್ಲ ಎಂಬ ನೆಪ ಹೇಳಿ ಕಾಮಗಾರಿ ಅರ್ಧದಲ್ಲೇ ನಿಲ್ಲಿಸಲಾಗಿದೆ.

ತಾಲೂಕ ಪಂಚಾಯತಿ ಸಭಾಂಗಣದಲ್ಲಿ ಶಾಸಕಿ ಕರೆಮ್ಮ ಜಿ ನಾಯಕ ಅವರ ಅಧ್ಯಕ್ಷತೆಯಲ್ಲಿ ಕುಡಿಯುವ ನೀರಿನ ಟಾಸ್ಕ ಪೋರ್ಸ ಸಮಿತಿ ಸಭೆ ನಡೆಯಿತು.

ಈ ಬಗ್ಗೆ ದೊಡ್ಡ ಮಟ್ಟದ ಅವ್ಯವಹಾರ ನಡೆದಿದೆ ಎಂದು ಶಾಸಕರು ಹೇಳಿ, ತಕ್ಷಣ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಉಪ ನಿರ್ದೇಶಕರಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು ನಾನು ಪ್ರತಿದಿನ ಹಳ್ಳಿಗಳಿಗೆ ಭೇಟಿ ನೀಡುತ್ತಿದ್ದೇನೆ ಮದುವೆ ಹಾಗೂ ಇತರ ಕಾರ್ಯಕ್ರಮಗಳಿಗೆ ಹೋಗುವಾಗ ಜನರು ನೀರಿನ ಸಮಸ್ಯೆ ಬಗ್ಗೆ ನನ್ನನ್ನು ಪ್ರಶ್ನಿಸುತ್ತಿದ್ದಾರೆ. ಬಹುತೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ತೀವ್ರ ಅವಶ್ಯಕತೆ ಇದೆ. ನಾನು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ಆದರೆ ನಿಮ್ಮ ಕೆಲಸದ ರೀತಿಯೇ ಅದಕ್ಕೆ ಕಾರಣವಾಗುತ್ತದೆ. ಎಂದು ಅಸಮಾಧನ ವ್ಯಕ್ತಪಡಿಸಿದರು.

ಕುಡಿಯುವ ನೀರಿನ ಇಂಜಿನಿಯರಿಂಗ್ ಇಲಾಖೆಯ ಎಇಇ ಇರಲಾಲ್ ಅವರನ್ನು ತರಾಟೆಗೆ ತೆಗೆದುಕೊಂಡು, ನಿಮ್ಮ ಕೆಲಸ ಸರಿಯಾಗಿ ಕಾಣುತ್ತಿಲ್ಲ. ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು, ತಾಲ್ಲೂಕ ಕೇಂದ್ರದಲ್ಲಿ ಇದ್ದು ಕಾರ್ಯನಿರ್ವಹಿಸಿ ಎಂದು ಜಿಲ್ಲಾ ಕೇಂದ್ರಕ್ಕೆ ತೆರಳುತ್ತೀರಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಜನರು ಪೋನ್ ಮಾಡಿದರೆ ಪೋನ್ ಎತ್ತುವದಿಲ್ಲ, ಜನರು ನನಗೆ ಮಾತನಾಡುತ್ತಾರೆ, ಅಧಿಕಾರಿಗಳ ಕೆಲಸವೇನು ಎಂದು ಪ್ರಶ್ನಿಸಿದರು.

ದೇವದುರ್ಗ ತಾಲೂಕಿನ ರಾಮದುರ್ಗ ಅಗ್ರಹಾರ, ಪಲಕನಮರಡಿ, ಗೋವಿಂದಪಲ್ಲಿ, ಪಿಲಿಗುಂಡ, ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಜೆಜೆಎಂ ಕುಡಿಯುವ ನೀರಿನ ಅಭಿವೃದ್ಧಿ ಕಾಮಗಾರಿಗಳ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಲಾಗಿದೆ.

ಆದರೆ, ಈ ಕಾಮಗಾರಿಗಳಿಂದ ಸಾಮಾನ್ಯ ಜನರಿಗೆ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂಬ ಗಂಭೀರ ಆರೋಪ ಮಾಡಿದರು. ವಿವಿಧ ಗ್ರಾಮಗಳಲ್ಲಿ ಕೆರೆಗಳು ಸಂಬಂಧಿತ ಕಾಮಗಾರಿಗಳ ನಿರ್ಮಾಣದ ಹೆಸರಿನಲ್ಲಿ ದೊಡ್ಡ ಪ್ರಮಾಣದ ಅನುದಾನ ಬಳಸಲಾಗಿದೆ. ಆದರೆ, ಬಹುತೇಕ ಕಡೆ ಕಾಮಗಾರಿಗಳು ಅಸಮರ್ಪಕವಾಗಿ ನಡೆದಿದ್ದು, ಹಲವೆಡೆ ಹಳ್ಳ ಹಿಡಿದಿವೆ, ಇದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟವಾಗಿದೆ ಎಂದ ಅವರು ಈ ಕುರಿತು ತೀವ್ರ ಅಸಮಧಾನ ವ್ಯಕ್ತಪಡಿಸಿದ ಶಾಸಕರು, ಇಂತಹ ಪ್ರಯೋಜನರಹಿತ ಕಾಮಗಾರಿಗಳಿಗೆ ಟೆಂಡರ್ ನೀಡಬೇಕಾದ ಅಗತ್ಯವೇನು? ಜನರಿಗೆ ಉಪಯೋಗವಾಗದ ಕೆಲಸಗಳಿಗೆ ಕೋಟ್ಯಾಂತರ ಹಣ ವ್ಯರ್ಥಮಾಡಲಾಗಿದೆ. ಎಂದು ಪ್ರಶ್ನಿಸಿದರು.

ಜಿಲ್ಲಾ ಯೋಜನಾ ನಿರ್ದೇಶಕರಾದ ಶರಣಬಸವ, ದೇವದುರ್ಗ ತಹಸಿಲ್ದಾರ ನಾಗಮ್ಮ, ಅರಕೇರಾ ತಹಸಿಲ್ದಾರ ಅಮರೇಶ ಬಿರದಾರ, ತಾ.ಪಂ.ಇಓ ರಾಜೇಂದ್ರ ಕುಮಾರ ಅರಕೇರಾ ತಹಸಿಲ್ದಾರ ವಾಲ್ಮಿಕಿ ಹಾಗೂ ಜೆಸ್ಕಾಂ, ಕೃಷಿ ಇಲಾಖೆ, ಜಿ.ಪಂ.ಇಂಜನಿಯರಿಂಗ್ ಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು.

ಸುದ್ದಿ ಮಿಂಚು

ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

ರಾಯಚೂರು: ಜಿಲ್ಲೆಯ ಲಿಂಗಸುಗೂರು ತಾಲೂಕಿನ ಮುದಗಲ್ ಸರ್ಕಾರಿ ಐಟಿಟಿ ಕಾಲೇಜಿನಲ್ಲಿ 2026ನೇ ಸಾಲಿನಲ್ಲಿ ಪ್ರಥಮ ವರ್ಷದ ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕಾಲೇಜಿನಲ್ಲಿ ವಿವಿಧ ವೃತ್ತಿಗಳಾದ ವಿದ್ಯುತ್ ಕರ್ಮಿ (Electrician) ಮತ್ತು ಜೋಡಣೆಗಾರ (Fitter) 2 ವರ್ಷಗಳ ಕೋರ್ಸುಗಳಿದ್ದು, ಸಂಸ್ಥೆಯು ಅತ್ಯಾಧುನಿಕ ಯಂತ್ರೋಪರಣಗಳು, ಸುಸಜ್ಜಿತವಾದ ಕಂಪ್ಯೂಟರ್ ಲ್ಯಾಬ್ ಹೊಂದಿದ್ದು, ಆಸಕ್ತರು ವೆಬ್‌ಸೈಟ್ ವಿಳಾಸ: ತಿತಿತಿ.ಛಿಣಜ.ಇಚಿಡಿಟಿಚಿಣಚಿಞಚಿ.ರಠತಿ.ಟಿ ನಲ್ಲಿ ಆನ್‌ಲೈನ್ ಅಥವಾ ನೇರವಾಗಿ ಸಂಸ್ಥೆಗೆ ಭೇಟಿ ನೀಡಿ, 2026ರ ಮೇ.08ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ತರಬೇತಿ ಅಧಿಕಾರಿಗಳಾದ ಮಹಾದೇವ ಕೆ. ಸರ್ಜಾಪುರ ಮೊಬೈಲ್ ಸಂಖ್ಯೆ: 7892955100 ಅಥವಾ ಪ್ರಥಮ ದರ್ಜೆ ಸಹಾಯಕರ ಮೊಬೈಲ್ ಸಂಖ್ಯೆ: 9742063355ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಮುದಗಲ್ ಸರ್ಕಾರಿ ಐಟಿಟಿ ಕಾಲೇಜಿನ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾದರ್ಲಿಗೆ ಸಚಿವ ಸ್ಥಾನ ನೀಡಲು ಮನವಿ

ರಾಯಚೂರು: ಸಚಿವ ಸಂಪುಟ ಪುನರ್ ವಿಸ್ತರಣೆಯಲ್ಲಿ ಜಿಲ್ಲೆಯ ಹಿರಿಯ ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಜಿಲ್ಲಾ ವೀರಶೈವ ಲಿಂಗಾಯತ್ ಸಮಾಜದ ಗೌರವಾಧ್ಯಕ್ಷ ಹರವಿ ನಾಗನಗೌಡ ಅವರು ಮನವಿ ಮಾಡಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ನಾಲ್ಕು ದಶಕಗಳಿಂದಲೂ ಸಾರ್ವಜನಿಕ ಜೀವನದಲ್ಲಿ ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ಅವರಿದ್ದಾರೆ. ವಿವಿಧ ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ನಿರ್ವಹಿಸಿದ್ದಾರೆ. ರಾಜಕೀಯ ಅನುಭವವನ್ನು ಹೊಂದಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಹೇಳಿದರು.

ಅತ್ಯಂತ ಹಿರಿಯರಾದ ಅವರಿಗೆ ಸಚಿವ ಸ್ಥಾನ ನೀಡಿದರೇ ಪಕ್ಷಕ್ಕೂ ಒಂದು ಗೌರವ ಮತ್ತು ಪಕ್ಷದಲ್ಲಿ ದುಡಿಯುವ ಕಾರ್ಯಕರ್ತರಿಗೆ ಸ್ಥಾನಮಾನ ದೊರಕುತ್ತದೆ ಎಂಬ ವಿಶ್ವಾಸ ಹೆಚ್ಚಾಗುತ್ತದೆ. ಅವರಿಗೆ ಸಚಿವ ಸ್ಥಾನ ನೀಡಿದರೇ ಇಡೀ ವೀರಶೈವ ಲಿಂಗಾಯತ ಸಮಾಜವೂ ಸ್ವಾಗತಿಸುತ್ತದೆ ಎಂದು ತಿಳಿಸಿದರು.

ಸಮಾಜದ ಉಪಾಧ್ಯಕ್ಷ ಅಶೋಕ ಪಾಟೀಲ್ ಅತ್ತನೂರು ಮಾತನಾಡಿ, ಹಂಪನಗೌಡ ಬಾದರ್ಲಿ ಐದು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು, ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಕೋರಿದರು.

ಸಮಾಜದ ಮುಖಂಡರಾದ ಟಿ.ಬಸವರಾಜ, ಚುಕ್ಕಿ ಸಿವಾನಂದ, ವಿರುಪನಗೌಡ ಬಂಡಿ, ಅರಳಿ, ಶರಣಬಸವ, ಚನ್ನಬಸವ, ಆನಂದ ಪಾಟೀಲ್, ಶರಣರೆಡ್ಡಿ ಹಾಗೂ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

ರಂಗಾಯಣದ ಮಕ್ಕಳ ಬೇಸಿಗೆ ರಂಗ ತರಬೇತಿ ಶಿಬಿರ ಸಮಾರೋಪ ನಾಳೆ

ಮುಕ್ತಾಯ ಹಂತಕ್ಕೆ ವರ್ಣರಂಜಿತ ಮಕ್ಕಳ ಹಬ್ಬ

ಸಂ.ಕ.ಸಮಾಚಾರ ಕಲಬುರಗಿ : ಏ. 7 ರಿಂದ ಆರಂಭವಾದ ಮಕ್ಕಳ ಬೇಸಿಗೆ ರಂಗತರಬೇತಿ ಶಿಬಿರ ಮಕ್ಕಳ ಹಬ್ಬವು 8ರಂದು ಸಮಾರೋಪಗೊಳ್ಳಲಿದೆ. ಈ ಶಿಬಿರದಲ್ಲಿ 78 ಮಕ್ಕಳು ದಾಖಲಾತಿ ಪಡೆದಿದ್ದು, ಸಂಗೀತ, ನೃತ್ಯ , ಮೈಮು, ನಾಟಕ, ತರಬೇತಿ ಪಡೆದಿದ್ದಾರೆ. ಪ್ರತಿ ದಿನ ಒಂದೊಂದು ಕಲಾ ಪ್ರಕಾರದ ಪರಿಚಯ ಮಾಡಿಕೊಡಲಾಗಿದೆ. ಪ್ರಮುಖವಾಗಿ ಹೆಜ್ಜೆ ಮೇಳ, ಡೊಳ್ಳು ಕುಣಿತ, ಜಾನಪದ ಜಾದು, ಕುಂಬಾರನ ಕಲೆ ಪ್ರದರ್ಶನ, ಮಕ್ಕಳಿಂದ ಕೈಗೊಂಬೆ, ಚಿತ್ರಕಲೆ, ಕ್ಲೇ ಮಾಡಲಿಂಗ್, ವಿವಿಧ ಕ್ಷೇತ್ರದ ಸಾಧಕರೊಂದಿಗೆ ಸಂವಾದ, ಮಕ್ಕಳಿಗೆ ಕಥಾವಾಚನ, ಮಕ್ಕಳಿಂದ ಕಥೆ ಹೇಳಿಸುವುದು ಹೀಗೆ ಎಲ್ಲಾ ಪ್ರಕಾರಗಳ ಪರಿಚಯ ಮಕ್ಕಳಿಗೆ ಮಾಡಿಕೊಡಲಾಗಿದೆ.

ಅಂಧ ವಿಕಲಚೇತನರಾದ ಬಸವರಾಜ ಅವರು, ಮಕ್ಕಳಿಗೆ ಗಣಿತ ವಿಷಯ ಕುರಿತು ಸರಳವಾದ ಸೂತ್ರಗಳನ್ನು ಹೇಳಿದರು. ಕಬ್ಬಿಣದ ಕಡಲೆಯಂತೆ ಇರುವ ಗಣಿತವನ್ನು ಹೇಗೆ ಸರಳೀಕರಿಸಿಕೊಂಡು ಅರಿತುಕೊಳ್ಳಬೇಕು ಎಂಬುದರ ಮನನ ಮಾಡಿಸಿದರು. ನಾಗರಾಜ ಯಾದಗಿರ ಅವರು ಸ್ಥಳೀಯ ಪಕ್ಷಿಗಳು ಹಾಗೂ ಕಲಬುರಗಿಗೆ ಬರುವ ಬೇರೆ ಬೇರೆ ರಾಜ್ಯ, ದೇಶಗಳಿಂದ, ಖಂಡಗಳಿಂದ ಬರುವ ಪಕ್ಷಿಗಳ ಪರಿಚಯ ಮಾಡಿಕೊಟ್ಟರು. ಪಕ್ಷಿ ಪ್ರಪಂಚದ ವಿಚಿತ್ರ ಸಂಗತಿಗಳನ್ನು ಹಂಚಿಕೊಂಡರು. ಅಗ್ನಿ ಶಾಮಕ ದಳದವರನ್ನು ಕರೆಯಿಸಿ ಅಗ್ನಿ ದುರಂತ ನಡೆದರೆ ಮೊದಲು ಏನು ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು, ಬೆಂಕಿಯನ್ನು ಯಾವರೀತಿ ನಂದಿಸಬೇಕು ಎಂದು ಪ್ರಾತ್ಯಕ್ಷತೆ ನೀಡಿ ಮಕ್ಕಳಿಗೆ ಅರಿವು ನೀಡಿದರು. ಈire Engine ನಲ್ಲಿ ಇರುವ ನೀರನ್ನು ಕಾರಂಜಿ ತರ ನೀರು ಬಿಟ್ಟು ಅದರಲ್ಲಿ ಮಕ್ಕಳು ಬಿಸ್ಸದ ಆಡವಾಡಿ ಸಂಭ್ರಮಿಸಿದರು. ಸ್ಥಳೀಯ ಪ್ರೇಕ್ಷಣಿಯ ಮತ್ತು ಐತಿಹಾಸಿಕ ಸ್ಥಳಗಳ ಕುರಿತು ಮತ್ತು ಮಕ್ಕಳಿಗಾಗಿಯೆ ಸಿದ್ಧಪಡಿಸಿದ ಕಿರುಚಿತ್ರಗಳನ್ನು ಪ್ರದರ್ಶಿಸಲಾಯಿತು. ಈ ಮೊದಲು ಎಲ್ಲಾ ಹಳ್ಳಿಗಳಲ್ಲಿ ಮಣ್ಣಿನ ಗಡಿಗೆಯಲ್ಲಿ ಆಹಾರ ತಯಾರಿಸಲಾಗುತ್ತಿತ್ತು. ಕ್ರಮೇಣವಾಗಿ ಮಣ್ಣಿನ ಮಡಿಕೆಗಳ ಬದಲು ಜರ್ಮನ್, ಸ್ಟೀಲ್ ಪಾತ್ರಗಳು ಬಂದವು. ಆದ್ದರಿಂದ ಮಕ್ಕಳಿಗೆ ಮಣ್ಣಿನ ಗಡಿಗೆಗಳ ಮಹತ್ವವನ್ನು ತಿಳಿಸಲು ಮಣ್ಣಿನ ಗಡಿಗೆಯಲ್ಲಿ ಅಡುಗೆಯ ರೂಪದಲ್ಲಿ ಮಕ್ಕಳಿಂದ ಮಣ್ಣಿನ ಗಡಿಗೆಯಲ್ಲಿ ವಿವಿಧ ತರಹದ ಅನೇಕ ರೀತಿಯ ತಿಂಡಿ ತಿನಿಸುಗಳನ್ನು ಅಡುಗೆ ಮಾಡಿದ ರುಚಿಕರ ಆಹಾರ ಬಂದ ಸಾರ್ವಜನಿಕರು, ಮಕ್ಕಳ ಪಾಲಕರು, ಮಕ್ಕಳೇ ಸಿದ್ಧಪಡಿಸಿದ ಆಹಾರ ಸವಿದು ಮಕ್ಕಳೊಂದಿಗೆ ಸಂಭ್ರಮಿಸಿದರು. ಈ ಎಲ್ಲ ಚಟುವಟಿಕೆಗಳಿಗೆ ನಿರ್ದೇಶಕ ಡಾ. ಸುಜಾತಾ ಜಂಗಮಶೆಟ್ಟಿ, ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಸವರಾಜ ಹೂಗಾರ, ಆಡಳಿತಾಧಿಕಾರಿ ಸಿದ್ರಾಮ ಸಿಂಧೆ ಅವರ ಮಾರ್ಗದರ್ಶನದಲ್ಲಿ ಹಾಗೂ ರಾಜಕುಮಾರ ಎಸ್.ಕೆ ಸಂಚಾಲಕತ್ವದಲ್ಲಿ ರೆಪರ್ಟರಿ ಕಲಾವಿದರ ಶ್ರದ್ಧೆಯಿಂದ ಮಕ್ಕಳಿಗೆ ತರಬೇತಿ ನೀಡಿದರು.

ವಿಯೆಟ್ನಾಂನಲ್ಲಿ ಕೆಲಸದ ಆಮಿಷವೊಡ್ಡಿ ಕೂಡಿ ಹಾಕಿದ್ರು

ಕಲಬುರಗಿ: ವಿದೇಶದಲ್ಲಿ ಡಾಟಾ ಎಂಟ್ರಿ ಆಪರೇಟರ್ ಕೆಲಸ ಕೊಡಿಸುವುದಾಗಿ ನಂಬಿಸಿ, ಯುವಕರನ್ನು ಕಾಂಬೋಡಿಯಾಕ್ಕೆ ಕರೆದೊಯ್ದು ಅಲ್ಲಿ ಸೈಬರ್ ಅಪರಾಧ ಎಸಗುವಂತೆ ಒತ್ತಾಯಿಸಿ ಕೂಡಿ ಹಾಕಿದ್ದ ಘಟನೆ ಬೆಳಕಿಗೆ ಬಂದಿದೆ.

ಈ ಕುರಿತು ಇಲ್ಲಿನ ಸೈಬರ್ ಪೊಲೀಸ್ ಠಾಣೆಯಲ್ಲಿ ಕಲಬುರಗಿಯ ತಾಜ್ ನಗರದ ನಿವಾಸಿ ಸೈಯದ್ ಸೋಫಿಯಾನ್ (27) ಎಂಬುವವರು ಬೆಂಗಳೂರು ಮೂಲದ ಏಜೆಂಟ್ ಮದನ್ ವಡಿವೇಲ್ ವಿರುದ್ಧ ದೂರು ನೀಡಿದ್ದಾರೆ.

ಬೆಂಗಳೂರಿನಲ್ಲಿ ಓಲಾ ಚಾಲಕರಾಗಿದ್ದ ಇವರು, ಫೇಸ್‌ಬುಕ್‌ನಲ್ಲಿ ಬಂದ ಜಾಹೀರಾತು ನೋಡಿ ಮದನ್ ವಡಿವೇಲ್ ಎಂಬ ಏಜೆಂಟ್‌ನನ್ನು ಸಂಪರ್ಕಿಸಿದ್ದರು. ವಿಯೆಟ್ನಾಂನಲ್ಲಿ ತಿಂಗಳಿಗೆ 700 (ಸುಮಾರು 58,000 ರೂ.) ಸಂಬಳದ ಡಾಟಾ ಎಂಟ್ರಿ ಕೆಲಸ ಕೊಡಿಸುವುದಾಗಿ ಮದನ್ ನಂಬಿಸಿದ್ದನು. 2025ರ ಡಿಸೆಂಬರ್‌ನಲ್ಲಿ ಸೋಫಿಯಾನ್ ಮತ್ತು ಅವರ ತಮ್ಮ ವಿಯೆಟ್ನಾಂಗೆ ತೆರಳಿದರು.

ಆದರೆ ಅಲ್ಲಿಂದ ಅವರನ್ನು ರಸ್ತೆ ಮಾರ್ಗದ ಮೂಲಕ ಕಾಂಬೋಡಿಯಾ ಗಡಿಗೆ ಕರೆದೊಯ್ಯಲಾಯಿತು. ಕಾಂಬೋಡಿಯಾದ ಪೋನೆಕಲ್ ಸಿಟಿಯ ಚೀನಾ ಮೂಲದ ಕಂಪನಿಯೊಂದರಲ್ಲಿ ಇವರನ್ನು ಕೂಡಿ ಹಾಕಲಾಯಿತು. ಅಲ್ಲಿ ಇವರಿಗೆ ಡೇಟಿಂಗ್ ಆಪ್‌ಗಳ ಮೂಲಕ ನಕಲಿ ಐಡಿ ಸೃಷ್ಟಿಸಿ ಭಾರತೀಯರಿಗೆ ಹಣ ಹೂಡಿಕೆ ಮಾಡುವಂತೆ ವಂಚಿಸುವ ಕೆಲಸ ನೀಡಲಾಯಿತು.

ಕೆಲಸ ಮಾಡಲು ನಿರಾಕರಿಸಿದಾಗ ಏಜೆಂಟ್‌ಗೆ ನೀಡಲಾದ 3 ಲಕ್ಷ ರೂ. ವಾಪಸ್ ನೀಡಬೇಕು, ಇಲ್ಲದಿದ್ದರೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿ ಮೊಬೈಲ್‌ಗಳನ್ನು ಕಸಿದುಕೊಳ್ಳಲಾಗಿತ್ತು. ಜೀವಭಯದಿಂದ ಇಬ್ಬರು ಯುವಕರು ಕೆಲ ದಿನಗಳ ಕಾಲ ಅಲ್ಲಿ ಕೆಲಸ ಮಾಡಬೇಕಾಯಿತು.

ಪ್ರಗತಿಪರ ಕೃಷಿಕ ಬಾಲಿರೆಡ್ಡಿ ನಿಧನ

ರಾಯಚೂರು: ನಗರದ ಬಾಲಂಕು ಆಸ್ಪತ್ರೆಯ ಖ್ಯಾತ ವೈದ್ಯ ಡಾ.ಶ್ರೀಧರರೆಡ್ಡಿ ಅವರ ತಂದೆ ಬಾಲಿರೆಡ್ಡಿ(90) ವರ್ಷ ಅವರು ಬುಧವಾರ ಬೆಳಿಗ್ಗೆ 6.30ಕ್ಕೆ ಜಿಲ್ಲೆಯ ಸಿಂಧನೂರು ತಾಲ್ಲೂಕಿನ ರೈತನಗರ ಗ್ರಾಮದಲ್ಲಿ ನಿಧನರಾಗಿದ್ದಾರೆ.



ಬಾಲಿರೆಡ್ಡಿ ಅವರು ರೈತಗ್ರಾಮದ ಸ್ಥಾಪಕರಲ್ಲೊಬ್ಬರಾಗಿದ್ದರು. ಪ್ರಗತಿಪರ ಕೃಷಿಕರಾಗಿದ್ದರು. ಮೃತರಿಗೆ ಮೂವರು ಪುತ್ರರು ಹಾಗೂ ಓರ್ವ ಪುತ್ರಿಯಿದ್ದಾರೆ. ಮೃತರ ಅಂತ್ಯಕ್ರಿಯೆ ರೈತನಗರ ಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಕ್ಸ್‌ಟ್ರಾ ಕವರ್

ವಿಶ್ವಕಪ್ ಪಂದ್ಯಗಳ ವೀಕ್ಷಿಸಲು 41 ಲಕ್ಷ ನೀಡಲಿರುವ ವಾಹಿನಿ

ವಾಷಿಂಗ್ಟನ್: ಫಾಕ್ಸ್ ಸ್ಪೋರ್ಟ್ಸ್ ಫುಟ್ಬಾಲ್ ಪ್ರೇಮಿಗಳಿಗಾಗಿ ಸುವರ್ಣ ಅವಕಾಶವೊಂದನ್ನು ಘೋಷಿಸಿದೆ. 2026ರ ಫಿಫಾ ವಿಶ್ವಕಪ್‌ನ ಎಲ್ಲಾ 104 ಪಂದ್ಯಗಳನ್ನು ವೀಕ್ಷಿಸಲು ಕಂಪನಿಯು ಒಬ್ಬ ಅಭ್ಯರ್ಥಿಯನ್ನು ನೇಮಿಸಿಕೊಳ್ಳಲಿದ್ದು, ಈ ಕೆಲಸಕ್ಕೆ ಬರೋಬ್ಬರಿ $50,000 (ಸುಮಾರು 41 ಲಕ್ಷ) ಸಂಭಾವನೆ ನೀಡಲಿದೆ. ಆಯ್ಕೆಯಾದ ವ್ಯಕ್ತಿಯು ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್‌ನಲ್ಲಿರುವ ವಿಶೇಷ ಗಾಜಿನ ಕ್ಯೂಬ್‌ನಲ್ಲಿ ಕುಳಿತು ಪಂದ್ಯಗಳನ್ನು ವೀಕ್ಷಿಸಬೇಕು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಲೈವ್ ಪ್ರತಿಕ್ರಿಯೆಗಳನ್ನು ನೀಡಬೇಕು.

ತಂಡದ ಆಟಗಾರರ ಜತೆ ಪ್ರಯಾಣಿಸದ ಹಾರ್ದಿಕ್

ಮುಂಬೈ: ಎಂಐ ತಂಡದ ನಾಯಕ ಹಾರ್ದಿಕ್ ಪಾಂಡ್ಯ ತಂಡದೊಂದಿಗೆ ಪ್ರಯಾಣಿಸದಿರುವುದು ಈಗ ದೊಡ್ಡ ಚರ್ಚೆಗೆ ಕಾರಣವಾಗಿದೆ. ವರದಿಗಳ

ಪ್ರಕಾರ, ರಾಯ್‌ಪುರದಲ್ಲಿ ನಡೆಯಲಿರುವ ಆರ್‌ಸಿಬಿ ವಿರುದ್ಧದ ಪಂದ್ಯಕ್ಕೆ ಹಾರ್ದಿಕ್ ಅಲಭ್ಯರಾಗುವ ಸಾಧ್ಯತೆಯಿದೆ. ಬೆನ್ನು ನೋವಿನ ಕಾರಣದಿಂದ ಅವರು ಕಳೆದ ಪಂದ್ಯದಿಂದ ಹೊರಗುಳಿದಿದ್ದರು. ಅವರ ಅನುಪಸ್ಥಿತಿಯಲ್ಲಿ ಸೂರ್ಯಕುಮಾರ್ ಯಾದವ್ ತಂಡವನ್ನು ಮುನ್ನಡೆಸುತ್ತಿದ್ದಾರೆ. ಕಳಪೆ ಫಾರ್ಮ್ ಮತ್ತು ತಂಡದ ಸತತ ಸೋಲುಗಳ ನಡುವೆ ಪಾಂಡ್ಯ ಅವರ ಈ ಗೈರುಹಾಜರಿ ಹಲವು ಅನುಮಾನಗಳಿಗೆ ದಾರಿ ಮಾಡಿಕೊಟ್ಟಿದೆ.

ಐಸಿಸಿ ಟಿ20 ರ‍್ಯಾಂಕಿಂಗ್‌ನಲ್ಲಿ ಭಾರತದ ಅಭಿಷೇಕ್ ನಂ.1

ದುಬೈ: ಐಸಿಸಿ ಟಿ20 ರ‍್ಯಾಂಕಿಂಗ್‌ನಲ್ಲಿ ಭಾರತದ ಯುವ ಆಟಗಾರರ ಅಬ್ಬರ ಮುಂದುವರಿದಿದೆ. ಇತ್ತೀಚಿನ ವರದಿಯ ಪ್ರಕಾರ, ಅಭಿಷೇಕ್ ಶರ್ಮಾ ಬ್ಯಾಟಿಂಗ್ ವಿಭಾಗದಲ್ಲಿ ವಿಶ್ವದ ನಂಬರ್ 1 ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಮತ್ತೊಂದೆಡೆ, ಇಶಾನ್ ಕಿಶನ್ ಎರಡನೇ ಸ್ಥಾನದಲ್ಲಿದ್ದು, ಪಾಕಿಸ್ತಾನದ ಸ್ಟಾರ್ ಆಟಗಾರನಿಗಿಂತ 23 ಪಾಯಿಂಟ್‌ಗಳ ಮುನ್ನಡೆ ಸಾಧಿಸಿದ್ದಾರೆ. ಈ ಮೂಲಕ ಅಗ್ರ ಎರಡು ಸ್ಥಾನಗಳಲ್ಲಿ ಭಾರತೀಯರೇ ಇರುವುದು ಅಭಿಮಾನಿಗಳಲ್ಲಿ ಸಂಭ್ರಮ ತಂದಿದೆ. ಭಾರತ ತಂಡ ಕೂಡ ಟಿ20 ಶ್ರೇಯಾಂಕದಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ.

ಚಿಯರ್ ಲೀಡರ್‌ಗೆ ಫ್ಯಾನ್: ಅಭಿಮಾನಿ ಕೆಲಸಕ್ಕೆ ಮೆಚ್ಚುಗೆ

ನವದೆಹಲಿ: ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯವೊಂದರಲ್ಲಿ ಮನಸೆಳೆಯುವ ಘಟನೆಯೊಂದು ನಡೆದಿದೆ. ದೆಹಲಿಯ 45 ಡಿಗ್ರಿ ಸೆಲ್ಸಿಯಸ್ ಸುಡುವ ಬಿಸಿಲಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಚೀಯರ್ ಲೀಡರ್‌ಗೆ ಪುಟ್ಟ ಬಾಲಕಿಯೊಬ್ಬಳು ಸಣ್ಣ ಹ್ಯಾಂಡ್ ಫ್ಯಾನ್ ಉಡುಗೊರೆಯಾಗಿ ನೀಡಿದ್ದಾಳೆ. ಈ ಅನಿರೀಕ್ಷಿತ ಪ್ರೀತಿಯ ಉಡುಗೊರೆ ಕಂಡು ಚೀಯರ್ ಲೀಡರ್ ಭಾವುಕರಾಗಿ ಆಕೆಗೆ ಧನ್ಯವಾದ ತಿಳಿಸಿದರು. ಈ ಹೃದಯಸ್ಪರ್ಶಿ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗಿದ್ದು, ನೆಟ್ಟಿಗರು ಬಾಲಕಿಯ ಕಾಳಜಿಯನ್ನು ಮುಕ್ತಕಂಠದಿಂದ ಶ್ಲಾಘಿಸುತ್ತಿದ್ದಾರೆ.

ಆರ್‌ಸಿಬಿಗೆ 7ನೇ ಜಯದ ನಿರೀಕ್ಷೆ

ಲಖನೌಗಿಂದು ಚಾಲೆಂಜರ್ಸ್ ಸವಾಲು | ಎಲ್‌ಎಸ್‌ಜಿಗೆ ಡು ಆರ್ ಡೈ ಪಂದ್ಯ

ಲಖನೌ: ಐಪಿಎಲ್ 2026ರ ರೋಚಕ ಘಟ್ಟದಲ್ಲಿ ಇಂದು ಲಖನೌನ ಏಕಾನ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಅತಿಥೇಯ ತಂಡ ಲಖನೌ ಸೂಪರ್ ಜೈಂಟ್ಸ್ ತಂಡಗಳು ಮುಖಾಮುಖಿಯಾಗುತ್ತಿವೆ.

ಈವರೆಗಿನ ಐಪಿಎಲ್ ಇತಿಹಾಸದಲ್ಲಿ ಉಭಯ ತಂಡಗಳು ಒಟ್ಟು 7 ಬಾರಿ ಮುಖಾಮುಖಿಯಾಗಿದ್ದು, ಆರ್‌ಸಿಬಿ 5 ಪಂದ್ಯಗಳಲ್ಲಿ ಜಯಗಳಿಸಿ ಸ್ಪಷ್ಟ ಮೇಲುಗೈ ಸಾಧಿಸಿದೆ. ಲಖನೌ ತಂಡ ಕೇವಲ 2 ಬಾರಿ ಮಾತ್ರ ಗೆದ್ದಿದೆ. ಈ ಸೀಸನ್‌ನ ಮೊದಲ ಮುಖಾಮುಖಿಯಲ್ಲೂ ಬೆಂಗಳೂರು ತಂಡ 5 ವಿಕೆಟ್‌ಗಳ ಜಯ ಸಾಧಿಸಿತ್ತು.

ಬೆಂಗಳೂರಿನಲ್ಲಿ ಈ ತಂಡಗಳು ಮುಖಾಮುಖಿಗೊಂಡ ವೇಳೆ ಆರ್‌ಸಿಬಿ ಭರ್ಜರಿ ಜಯ ಗಳಿಸಿತ್ತು. ಈಗಾಗಲೇ ಲಖನೌ ಕೊನೆ ಸ್ಥಾನದಲ್ಲಿದ್ದು, ಈ ಪಂದ್ಯ ಗೆದ್ದರೆ ಮಾತ್ರ ಪ್ಲೇಆಫ್ ಆಸೆ ಜೀವಂತವಾಗಿರಲಿದೆ. ಹಾಗಾಗಿ, ಒತ್ತಡದ ಮಧ್ಯೆಯೂ ರಿಶಬ್ ಪಂತ್ ಮುಂದಾಳತ್ವದ ತಂಡ ಗೆಲ್ಲಲೇಬೇಕಿದೆ.

ಕಳೆದ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಸೋತಿದ್ದರೂ, ಆರ್‌ಸಿಬಿ ಅಂಕಪಟ್ಟಿಯಲ್ಲಿ 2ನೇ ಸ್ಥಾನದಲ್ಲಿದೆ. ವಿರಾಟ್ ಕೊಹ್ಲಿ ಅದ್ಭುತ ಫಾರ್ಮ್‌ನಲ್ಲಿದ್ದು (379 ರನ್), ತಂಡದ ಶಕ್ತಿಯಾಗಿದ್ದಾರೆ. ಆದರೆ ಆರಂಭಿಕ ಆಟಗಾರ ಫಿಲ್ ಸಾಲ್ಟ್ ಗಾಯದ ಕಾರಣ ಟೂರ್ನಿಯಿಂದ ಹೊರಬಿದ್ದಿರುವುದು ತಂಡಕ್ಕೆ ಹಿನ್ನಡೆಯಾಗಿದೆ. ಅವರ ಜಾಗದಲ್ಲಿ ಜೇಕಬ್ ಬೆಥೆಲ್ ಇನ್ನಿಂಗ್ಸ್ ಆರಂಭಿಸುವ ಸಾಧ್ಯತೆಯಿದೆ. ಲಖನೌ ತಂಡಕ್ಕೆ ಈ ಸೀಸನ್ ಅಷ್ಟೇನೂ ಆಶಾದಾಯಕವಾಗಿಲ್ಲ. ಆಡಿದ 9 ಪಂದ್ಯಗಳಲ್ಲಿ ಕೇವಲ 2 ಜಯದೊಂದಿಗೆ ಅಂಕಪಟ್ಟಿಯ ಕೊನೆಯ ಸ್ಥಾನದಲ್ಲಿದೆ.

ಲಖನೌನ ಏಕಾನ ಕ್ರಿಕೆಟ್ ಸ್ಟೇಡಿಯಂ ಸಾಂಪ್ರದಾಯಿಕವಾಗಿ ಬೌಲರ್‌ಗಳಿಗೆ, ವಿಶೇಷವಾಗಿ ಸ್ಪಿನ್ನರ್‌ಗಳಿಗೆ ಹೆಚ್ಚು ಸಹಕಾರಿ.

ಇಲ್ಲಿನ ಸರಾಸರಿ ಮೊತ್ತ 155–160 ರನ್ ಆಗಿದ್ದು, ಬ್ಯಾಟರ್‌ಗಳಿಗೆ ರನ್ ಗಳಿಸಲು ಕಷ್ಟವಾಗಬಹುದು. ಪಂದ್ಯದ ವೇಳೆ ತಾಪಮಾನ 29ರ ಸೆಲ್ಸಿಯಸ್ ಆಸುಪಾಸಿನಲ್ಲಿರಲಿದ್ದು, ಹವಾಮಾನವು ತಿಳಿಯಾಗಿರಲಿದೆ. ಉಭಯ ತಂಡಗಳಲ್ಲಿರುವ ಆಟಗಾರರ ಮುಖಾಮುಖಿಯೂ ಗಮನ ಸೆಳೆದಿದ್ದು, ವಿರಾಟ್ ಕೊಹ್ಲಿ ಹಾಗೂ ಮೊಹಮ್ಮದ್ ಶಮಿ ನಡುವಿನ ಕಾದಾಟ ಪಂದ್ಯದ ಹೈಲೈಟ್ ಆಗಲಿದೆ. ಶಮಿ ಈ ಹಿಂದೆ ಕೊಹ್ಲಿಯನ್ನು 5 ಬಾರಿ ಔಟ್ ಮಾಡಿದ್ದಾರೆ. ಅದೇ ರೀತಿ ಎಲ್‌ಎಸ್‌ಜಿ ನಾಯಕ ರಿಷಬ್ ಪಂತ್ ಹಾಗೂ ಭುವನೇಶ್ವರ್ ಕುಮಾರ್ ಮಧ್ಯೆಯೂ ಪೈಪೋಟಿ ಆಸಕ್ತಿಕರವಾಗಿರಲಿದೆ. ಏಕೆಂದ್ರೆ, ಲಖನೌ ನಾಯಕ ಪಂತ್ ಫಾರ್ಮ್‌ಗೆ ಮರಳಲು ಕಾಯುತ್ತಿದ್ದಾರೆ, ಆದರೆ ಭುವಿ ಅವರ ಸ್ವಿಂಗ್ ಬೌಲಿಂಗ್ ಅವರಿಗೆ ಸವಾಲಾಗಬಹುದು. ಆರ್‌ಸಿಬಿ ಪರ ಜೋಶ್ ಹೇಜಲ್ವುಡ್ ಮತ್ತು ಭುವನೇಶ್ವರ್ ಕುಮಾರ್ ಮಿಂಚುತ್ತಿದ್ದರೆ, ಲಖನೌ ಪರ ಪ್ರಿನ್ಸ್ ಯಾದವ್ ವಿಕೆಟ್ ಬೇಟೆಯಾಡುತ್ತಿದ್ದಾರೆ. ಸೋಲಿನಿಂದ ಚೇತರಿಸಿಕೊಂಡು ಅಗ್ರಸ್ಥಾನಕ್ಕೇರಲು ಬೆಂಗಳೂರು ಹವಣಿಸುತ್ತಿದ್ದರೆ, ಲಖನೌ ತನ್ನ ತವರು ಮೈದಾನದಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಡಲಿದೆ.

ಇತ್ತ ಅಂಕಪಟ್ಟಿಯಲ್ಲಿ ಆರ್‌ಸಿಬಿ ಕೂಡ ಅಗ್ರಸ್ಥಾನದಕ್ಕೇರಲು ಅವಕಾಶವಿದ್ದು, ಈ ಆವೃತ್ತಿಯಲ್ಲಿ ತನ್ನ 7ನೇ ಗೆಲುವು ಸಾಧಿಸಬೇಕಿದೆ. ಉಳಿದ 5 ಪಂದ್ಯಗಳಲ್ಲಿ ಕನಿಷ್ಠ 3 ಪಂದ್ಯ ಗೆದ್ದರೆ, ಆರ್‌ಸಿಬಿ ಪ್ಲೇಆಫ್ ಪ್ರವೇಶಿಸಬಹುದು.

ಪಂದ್ಯದಾರಂಭ: ಮಧ್ಯಾಹ್ನ 3:30ಕ್ಕೆ

ಎರಡನೇ ಸುತ್ತಿಗೆ ಮುನ್ನಡೆದ ಸಿನಿಯಾಕೊವಾ, ಒಸ್ಟಾಪೆಂಕೊ

ರೋಮ್: ಜೆಕ್ ಆಟಗಾರ್ತಿ ಕೆಟೆರಿನಾ ಸಿನಿಯಾಕೋವಾ ಹಾಗೂ ಲ್ಯಾಟ್ವಿನ್ ಆಟಗಾರ್ತಿ ಜೆಲೆನಾ ಒಸ್ಟಾಪೆಂಕೊ ಇಲ್ಲಿ ಪ್ರಾರಂಭವಾಗಿರುವ ಪ್ರತಿಷ್ಠಿತ ಇಟಾಲಿಯನ್ ಓಪನ್ ಟೆನಿಸ್ ಟೂರ್ನಿಯ 83ನೇ ಆವೃತ್ತಿಯಲ್ಲಿ ಮಹಿಳೆಯರ ಸಿಂಗಲ್ಸ್ ಎರಡನೇ ಸುತ್ತು ಪ್ರವೇಶಿಸಿದ್ದಾರೆ.

ಇಲ್ಲಿಯ ಹೊರಾಂಗಣ ಕೆಂಪು ಮಣ್ಣಿನಂಕಣದ ಮೇಲೆ ಪ್ರಾರಂಭವಾಗಿರುವ ಈ ಮಾಸ್ಟರ್ಸ್–1000 ಟೂರ್ನಿಯಲ್ಲಿ ಬುಧವಾರ ನಡೆದ ಮೊದಲ ಸುತ್ತಿನ ಪಂದ್ಯಗಳಲ್ಲಿ ಸಿನಿಯಾಕೋವಾ ಫ್ರಾನ್ಸಿನ ಲೊಯಿಸ್ ಬೊಯ್ಸನ್ ಅವರನ್ನು ಎರಡು ನೇರ ಸೆಟ್‌ಗಳಲ್ಲಿ 6–2, 6–3 ರಿಂದ ಸೋಲಿಸಿದರೆ, ಒಸ್ಟಾಪೆಂಕೊ 6–0, 6–1 ಅಂತರದಿಂದ ಲುಕ್ರೆಜಿಯಾ ಸ್ಟೆಫಾನಿನಿ ಅವರನ್ನು ಹಣಿದರು.

ಪುರುಷರ ವಿಭಾಗದ ಮೊದಲ ಸುತ್ತಿನ ಪಂದ್ಯವೊಂದರಲ್ಲಿ ಜರ್ಮನಿಯ ಡೆನಿಯಲ್ ಅಲ್ಟ್‌ಮೈಯರ್ ಚೀನದ ಝೂಂಗ್ ಝಿಜೆನ್ ಎದುರು 4–6, 7–6(7–3), 6–4 ಆಟಗಳ ಪ್ರಯಾಸದ ಗೆಲುವು ದಾಖಲಿಸಿದರು.

ರಾಡುಕಾನು ಹಿಂದಕ್ಕೆ : ಬ್ರಿಟಿಷ್ ನಂಬರ್ 1 ಆಟಗಾರ್ತಿ ಎಮ್ಮಾ ರಾಡುಕಾನು ಅನಾರೋಗ್ಯದ ಕಾರಣ ಅಂತಿಮ ಕ್ಷಣಗಳಲ್ಲಿ ಇಟಾಲಿಯನ್ ಓಪನ್ ಟೆನಿಸ್ ಟೂರ್ನಿಯಿಂದ ಹಿಂದೆಗೆದುಕೊಂಡಿದ್ದಾರೆ. ಮಂಗಳವಾರ ಪಂದ್ಯದ ಮುನ್ನ ಪತ್ರಿಕಾ ಗೋಷ್ಠಿಯಲ್ಲಿ ಮಾತ ನಾಡಿ ತಾನು ತುಂಬಾ ಚೆನ್ನಾಗಿದ್ದೇನೆ ಅಂದಿದ್ದ ಅವರು ಪತ್ರಿಕಾ ಗೋಷ್ಠಿ ಮುಗಿಸಿದ ಅರ್ಧ ತಾಸಿನಲ್ಲೇ ವೈರಸ್ ನಂತರದ ಅನಾರೋಗ್ಯದ ಕಾರಣ ನೀಡಿ ಟೂರ್ನಿಯಿಂದ ಹಿಂದೆ ಸರಿಯುತ್ತಿರುವುದಾಗಿ ಪ್ರಕಟಿಸಿದರು.

ಡೆಲ್ಲಿ ಕ್ಯಾಪಿಟಲ್ಸ್ ಎದುರು ಕೆಕೆಆರ್ ಕಾದಾಟ ಇಂದು

ನವದೆಹಲಿ: ಐಪಿಎಲ್ 2026ರ ರೋಚಕ ಹಂತದಲ್ಲಿ ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ದೆಹಲಿ ಕ್ಯಾಪಿಟಲ್ಸ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ (ಕೆಕೆಆರ್) ತಂಡಗಳು ಮುಖಾಮುಖಿಯಾಗುತ್ತಿವೆ. ಇತಿಹಾಸವನ್ನು ಗಮನಿಸಿದರೆ, ಈ ಎರಡೂ ತಂಡಗಳ ನಡುವಿನ ಸ್ಪರ್ಧೆ ಯಾವಾಗಲೂ ಕುತೂಹಲಕಾರಿಯಾಗಿರುತ್ತದೆ. ಇದುವರೆಗೆ ನಡೆದ 35 ಪಂದ್ಯಗಳಲ್ಲಿ ಕೆಕೆಆರ್ 19 ಬಾರಿ ಜಯಗಳಿಸಿದ್ದರೆ, ಡೆಲ್ಲಿ ಕ್ಯಾಪಿಟಲ್ಸ್ 15 ಪಂದ್ಯಗಳಲ್ಲಿ ಗೆಲುವು ಸಾಧಿಸಿದೆ.ಅಕ್ಷರ್ ಪಟೇಲ್ ನೇತೃತ್ವದ ದೆಹಲಿ ತಂಡಕ್ಕೆ ತವರು ಮೈದಾನದ ಬೆಂಬಲವಿದೆ. ಕೆ.ಎಲ್. ರಾಹುಲ್ ಅವರ ಸ್ಥಿರ ಪ್ರದರ್ಶನ ಮತ್ತು ಟ್ರಿಸ್ಟಾನ್ ಸ್ಟಬ್ಸ್ ಅವರ ಸ್ಫೋಟಕ ಬ್ಯಾಟಿಂಗ್ ತಂಡದ ಬಲವಾಗಿದೆ. ಬೌಲಿಂಗ್‌ನಲ್ಲಿ ಕುಲದೀಪ್ ಯಾದವ್ ಮತ್ತು ಎನ್ಗಿಡಿ ಪ್ರಮುಖ ಅಸ್ತ್ರಗಳಾಗಿದ್ದಾರೆ.

ಅಜಿಂಕ್ಯ ರಹಾನೆ ಸಾರಥ್ಯದ ಕೋಲ್ಕತ್ತಾ ತಂಡವು ಸಮತೋಲಿತವಾಗಿದೆ. ಸುನಿಲ್ ನರೈನ್ ಮತ್ತು ಕ್ಯಾಮರೂನ್ ಗ್ರೀನ್ ಅವರಂತಹ ಆಲ್‌ರೌಂಡರ್‌ಗಳು ಪಂದ್ಯದ ಗತಿಯನ್ನು ಬದಲಿಸಬಲ್ಲರು. ರಿಂಕು ಸಿಂಗ್ ಫಿನಿಶರ್ ಪಾತ್ರದಲ್ಲಿ ಮಿಂಚುತ್ತಿದ್ದಾರೆ. ದೆಹಲಿಯ ಪಿಚ್ ಸಾಮಾನ್ಯವಾಗಿ ಬ್ಯಾಟರ್‌ಗಳಿಗೆ ಹೆಚ್ಚು ಸಹಕಾರಿ. ಆದರೂ ಪಂದ್ಯ ಸಾಗುತ್ತಿದ್ದಂತೆ ಸ್ಪಿನ್ನರ್‌ಗಳು ಇಲ್ಲಿ ನಿರ್ಣಾಯಕ ಪಾತ್ರ ವಹಿಸಬಹುದು. ಪ್ಲೇ–ಆಫ್ ರೇಸ್‌ನಲ್ಲಿ ಮುಂದುವರಿಯಲುಇಬ್ಬರಿಗೂಗೆಲುವು ಅತಿ ಮುಖ್ಯವಾಗಿದೆ.

ಪಂದ್ಯ: ರಾತ್ರಿ 7.30ಕ್ಕೆ

ಕಾನ್ಲಿ ಶತಕಕ್ಕೂ ಬೆದರದ ರೈಸರ್ಸ್

ಕ್ಯಾಚ್ ಬಿಟ್ಟ ಮ್ಯಾಚ್ ಸೋತ ಪಂಜಾಬ್ ಕಿಂಗ್ಸ್

ಹೈದ್ರಾಬಾದ್: ಐಪಿಎಲ್ 2026ರ ರೋಚಕ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಪರ ಕಾನ್ಲಿ ಶತಕ ಬಾರಿಸಿದರೂ ಗೆಲುವು ಸಾಧಿಸಲು ಸಾಧ್ಯವಾಗಲಿಲ್ಲ. ಎಸ್‌ಆರ್‌ಎಚ್ ನೀಡಿದ್ದ 236 ರನ್‌ಗಳಿಗೆ ಪ್ರತಿಯಾಗಿ 202 ರನ್‌ಗಳಿಸಿ 34 ರನ್‌ಗಳಿಂದ ಪಂಜಾಬ್ ಸೋಲುಂಡಿದೆ. ಆರಂಭದಲ್ಲೇ ಪ್ರಮುಖ 3 ವಿಕೆಟ್‌ಗಳನ್ನು ಕಳೆದುಕೊಂಡಿದ್ದು ಪಂಜಾಬ್‌ಗೆ ಹೊಡೆತ ಬಿತ್ತು. ಕಳಪೆ ಕ್ಷೇತ್ರರಕ್ಷಣೆ ಹಾಗೂ ಬ್ಯಾಟರ್‌ಗಳ ವೈಫಲ್ಯ ಕಿಂಗ್ಸ್ ಸೋಲಿನ ಕಾರಣವಾಗಿದ್ದು, ರೈಸರ್ಸ್ ಅಗ್ರಸ್ಥಾನಕ್ಕೇರಿದ್ದಾರೆ.

ಹೈದ್ರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಎಸ್‌ಆರ್‌ಎಚ್ ತಂಡಕ್ಕೆ ಆರಂಭಿಕರಾದ ಅಭಿಷೇಕ್ ಶರ್ಮಾ (35) ಮತ್ತು ಟ್ರಾವಿಸ್ ಹೆಡ್ (38) ಸ್ಫೋಟಕ ಆರಂಭ ನೀಡಿದರು. ನಂತರ ಬಂದ ಇಶಾನ್ ಕಿಶನ್ 32 ಎಸೆತಗಳಲ್ಲಿ 55 ರನ್ ಸಿಡಿಸಿ ಪಂಜಾಬ್ ಬೌಲರ್‌ಗಳನ್ನು ದಂಡಿಸಿದರು.

ಇನ್ನಿಂಗ್ಸ್‌ನ ಅಂತಿಮ ಹಂತದಲ್ಲಿ ಅಬ್ಬರಿಸಿದ ಹೆನ್ರಿಚ್ ಕ್ಲಾಸೆನ್ ಕೇವಲ 43 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 3 ಬೌಂಡರಿಗಳ ನೆರವಿನಿಂದ 69 ರನ್ ಚಚ್ಚಿದರು.

ಇವರಿಗೆ ಸಾಥ್ ನೀಡಿದ ನಿತೀಶ್ ಕುಮಾರ್ ರೆಡ್ಡಿ (29*) ಬಿರುಸಿನ ಬ್ಯಾಟಿಂಗ್ ನಡೆಸಿದರು. ಪಂಜಾಬ್ ಪರ ಅರ್ಶ್‌ದೀಪ್ ಸಿಂಗ್ ಮತ್ತು ಚಹಲ್ ತಲಾ ಒಂದು ವಿಕೆಟ್ ಪಡೆದರಾದರೂ ರನ್ ವೇಗಕ್ಕೆ ಬ್ರೇಕ್ ಹಾಕಲು ಸಾಧ್ಯವಾಗಲಿಲ್ಲ. ಪಂಜಾಬ್ ತಂಡದ ಕಳಪೆ ಫೀಲ್ಡಿಂಗ್ ಹೈದರಾಬಾದ್ ಬೃಹತ್ ಸ್ಕೋರ್ ಗಳಿಸಲು ನೆರವಾಯಿತು.

ಸಂಕ್ಷಿಪ್ತ ಸ್ಕೋರ್: ಸನ್‌ರೈಸರ್ಸ್ ಹೈದ್ರಾಬಾದ್ 4 ವಿಕೆಟ್‌ಗೆ 235 ರನ್. ಹೆನ್ರಿಕ್ ಕ್ಲಾಸೆನ್ 69(43). ಕಿಶನ್ 55(32). ಪಂಜಾಬ್ ಕಿಂಗ್ಸ್ 7 ವಿಕೆಟ್‌ಗೆ 202 ರನ್.

ಐಟಿಎಫ್ ಟೆನಿಸ್: ಝೀಲ್‌ಗೆ ಗೆಲುವು

ತುಮಕೂರು: ಇಲ್ಲಿ ನಡೆಯುತ್ತಿರುವ ಐಟಿಎಫ್ ಡಬ್ಲ್ಯೂ15 ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಭಾರತೀಯ ಆಟಗಾರರು ಮಿಶ್ರ ಫಲಿತಾಂಶ ಅನುಭವಿಸಿದ್ದಾರೆ. ಬುಧವಾರ ನಡೆದ 32ರ ಘಟ್ಟದ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕಿತೆ ಝೀಲ್ ದೇಸಾಯಿ ಅವರು ಜೀತೇಶ್ ಕುಮಾರಿ ವಿರುದ್ಧ 6–0, 6–0 ಅಂತರದ ಭರ್ಜರಿ ಜಯ ಸಾಧಿಸಿ ಪಾರುಪತ್ಯ ಮೆರೆದರು. ಮತ್ತೊಂದೆಡೆ, ಮೂರನೇ ಶ್ರೇಯಾಂಕಿತೆ ವೈದೇಹಿ ಚೌಧರಿ ಅವರು ಸೋಹಾ ಸಾದಿಕ್ ವಿರುದ್ಧ 6–3, 6–4 ಅಂತರದಲ್ಲಿ ಗೆದ್ದು ಮುನ್ನಡೆದರು.

ಆದರೆ, ಟೂರ್ನಿಯ ಎಂಟನೇ ಶ್ರೇಯಾಂಕಿತೆ ಆಕಾಂಕ್ಷಾ ದಿಲೀಪ್ ನಿಟ್ಟೂರೆ ಅವರು ಅರಿನಾ ಅರಿಪುಲ್ಲಿನಾ ವಿರುದ್ಧ 1–6, 1–6 ಅಂತರದಲ್ಲಿ ಸೋಲುವ ಮೂಲಕ ಟೂರ್ನಿಯಿಂದ ಹೊರಬಿದ್ದಿರುವುದು ಅಭಿಮಾನಿಗಳಿಗೆ ನಿರಾಸೆ ಮೂಡಿಸಿದೆ. ಇನ್ನುಳಿದ ಪಂದ್ಯಗಳಲ್ಲಿ ಲಕ್ಷ್ಮಿಸಿರಿ ದಂಡು, ಕಶಿಶ್ ಭಾಟಿಯಾ ಮತ್ತು ಜೆನ್ನಿಫರ್ ಲೂಯಿಕಮ್ ತಂತಮ್ಮ ಪಂದ್ಯಗಳನ್ನು ಗೆದ್ದು ಮುಂದಿನ ಹಂತಕ್ಕೆ ಪ್ರವೇಶಿಸಿದ್ದಾರೆ.

ಒಟ್ಟಾರೆಯಾಗಿ, ಭಾರತದ ಅಗ್ರ ಶ್ರೇಯಾಂಕಿತ ಆಟಗಾರ್ತಿಯರು ಪ್ಲೇ–ಆಫ್ ರೇಸ್‌ನಲ್ಲಿ ಭರವಸೆ ಮೂಡಿಸಿದ್ದಾರೆ.

ಅಹಮದಾಬಾದ್‌ಗೆ ಫೈನಲ್ ಪಂದ್ಯ ಶಿಫ್ಟ್

ಬೆಂಗಳೂರಿಗೆ ಭಾರಿ ಹಿನ್ನಡೆ

ಮುಂಬೈ: ಐಪಿಎಲ್ 2026ರ ಪ್ಲೇಆಫ್ ಹಂತದ ಪಂದ್ಯಗಳ ವೇಳಾಪಟ್ಟಿಯನ್ನು ಬಿಸಿಸಿಐ ಅಧಿಕೃತವಾಗಿ ಪ್ರಕಟಿಸಿದ್ದು, ಈ ಬಾರಿಯ ಭವ್ಯ ಸಮಾರೋಪಕ್ಕೆ ಅಹಮದಾಬಾದ್ ಸಜ್ಜಾಗಿದೆ. ವಿಶ್ವದ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣವಾದ ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಮೇ 31ರಂದು ಫೈನಲ್ ಪಂದ್ಯ ನಡೆಯಲಿದೆ.

ವಾಸ್ತವವಾಗಿ, ಹಾಲಿ ಚಾಂಪಿಯನ್ ಆರ್‌ಸಿಬಿ ತಂಡದ ತವರು ನೆಲವಾದ ಬೆಂಗಳೂರಿನಲ್ಲಿ ಫೈನಲ್ ಪಂದ್ಯ ನಡೆಯುವ ಬಗ್ಗೆ ಸುದ್ದಿಗಳು ಹರಿದಾಡಿದ್ದವು. ಆದರೆ, ಭದ್ರತಾ ಕಾರಣಗಳು ಮತ್ತು ಸ್ಥಳೀಯ ಅಧಿಕಾರಿಗಳ ತಾಂತ್ರಿಕ ಮಾರ್ಗಸೂಚಿಗಳ ಅನ್ವಯ ಪಂದ್ಯವನ್ನು ಅಹಮದಾಬಾದ್‌ಗೆ ಸ್ಥಳಾಂತರಿಸಲು ನಿರ್ಧರಿಸಲಾಗಿದೆ. ಅಷ್ಟೇ ಅಲ್ಲದೇ, ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಶಾಸಕರು ಪಂದ್ಯದ ಟಿಕೆಟ್‌ಗಳಿಗೆ ಬೇಡಿಕೆ ಇಟ್ಟಿದ್ದೇ, ಫೈನಲ್ ಪಂದ್ಯವನ್ನು ಅಹಮದಾಬಾದ್‌ಗೆ ಸ್ಥಳಾಂತರಿಸಲು ಕಾರಣ ಎನ್ನಲಾಗಿದೆ. ಸತತ ಎರಡನೇ ವರ್ಷವೂ ಅಹಮದಾಬಾದ್ ಫೈನಲ್ ಪಂದ್ಯಕ್ಕೆ ಆತಿಥ್ಯ ವಹಿಸುತ್ತಿರುವುದು ವಿಶೇಷ. ಈಗಾಗಲೇ ಲೀಗ್ ಹಂತದಲ್ಲಿ ತೀವ್ರ ಪೈಪೋಟಿ ಕಂಡುಬರುತ್ತಿದ್ದು, ಯಾವ ನಾಲ್ಕು ತಂಡಗಳು ಈ ಐತಿಹಾಸಿಕ ಕ್ರೀಡಾಂಗಣಗಳಲ್ಲಿ ಸೆಣಸಾಡಲಿವೆ ಎಂಬ ಕುತೂಹಲ ಕ್ರಿಕೆಟ್ ಪ್ರೇಮಿಗಳಲ್ಲಿ ಮನೆಮಾಡಿದೆ. ಮುಂಬೈ ಮತ್ತು ಬೆಂಗಳೂರಿನಂತಹ ಬಲಿಷ್ಠ ತಂಡಗಳಿಗೆ ಈ ಪಂದ್ಯಗಳು ಅತ್ಯಂತ ನಿರ್ಣಾಯಕವಾಗಿವೆ.

ಕೆಎಸ್‌ಸಿಎ ಸ್ಪಷ್ಟನೆ: ಬೆಂಗಳೂರಿನಲ್ಲಿ ನಡೆಯಬೇಕಿದ್ದ ಐಪಿಎಲ್ 2026ರ ಪ್ಲೇಆಫ್ ಪಂದ್ಯಗಳನ್ನು ಸ್ಥಳಾಂತರಿಸಿರುವ ಬಿಸಿಸಿಐ ನಿರ್ಧಾರಕ್ಕೆ ಕೆಎಸ್‌ಸಿಎ ಸ್ಪಷ್ಟನೆ ನೀಡಿದೆ. ತಾವು ಪಂದ್ಯಗಳನ್ನು ಆಯೋಜಿಸಲು ಸಂಪೂರ್ಣ ಸಿದ್ಧರಾಗಿದ್ದರೂ, ತಾಂತ್ರಿಕ ಮತ್ತು ಕಾರ್ಯಾಚರಣೆಯ ವಿಷಯಗಳ ಬಗ್ಗೆ ನೀಡಿದ ಸ್ಪಷ್ಟನೆಯನ್ನು ಬಿಸಿಸಿಐ ತಪ್ಪಾಗಿ ಗ್ರಹಿಸಿರಬಹುದು ಎಂದು ಸಂಸ್ಥೆ ತಿಳಿಸಿದೆ. ಆಡಳಿತಾತ್ಮಕ ಪಾರದರ್ಶಕತೆಗಾಗಿ ನಾವು ಮಾಹಿತಿ ನೀಡಿದ್ದೆವು, ಆದರೆ ಬಿಸಿಸಿಐ ಬೇರೆ ನಗರಗಳಿಗೆ ಆತಿಥ್ಯ ನೀಡಲು ನಿರ್ಧರಿಸಿದೆ. ಈ ನಿರ್ಧಾರದಿಂದ ಬೆಂಗಳೂರಿನ ಕ್ರಿಕೆಟ್ ಅಭಿಮಾನಿಗಳಿಗೆ ತೀವ್ರ ನಿರಾಸೆಯಾಗಿದ್ದು, ಫೈನಲ್ ಅಹಮದಾಬಾದ್‌ನಲ್ಲಿ ನಡೆಯಲಿದೆ. ಬಿಸಿಸಿಐ ನಿರ್ಧಾರಕ್ಕೆ ಬದ್ಧರಾಗಿದ್ದೇವೆ ಎಂದು ಕೆಎಸ್‌ಸಿಎ ಪ್ರಕಟಣೆಯಲ್ಲಿ ಹೇಳಿದೆ

ಪ್ಲೇಆಫ್ ವೇಳಾಪಟ್ಟಿ ಹೀಗಿದೆ:

ಮೇ 26	ಕ್ವಾಲಿಫೈಯರ್ 1 (ಧರ್ಮಶಾಲಾ)
ಮೇ 27	ಎಲಿಮಿನೇಟರ್ (ಚಂಡೀಗಢ)
ಮೇ 29	ಕ್ವಾಲಿಫೈಯರ್ 2 (ಚಂಡೀಗಢ)
ಮೇ 31	ಫೈನಲ್ (ಅಹಮದಾಬಾದ್)

ಐಪಿಎಲ್ 2026

ನಂ	ತಂಡ	ಪಂದ್ಯ	ಜಯ	ಸೋಲು	ಅಂಕ
01	ಹೈದ್ರಾಬಾದ್	11	07	04	14
02	ಪಂಜಾಬ್	10	06	03	13
03	ಆರ್‌ಸಿಬಿ	09	06	03	12
04	ರಾಜಸ್ಥಾನ	10	06	04	12
05	ಗುಜರಾತ್	10	06	04	12
06	ಚೆನ್ನೈ	10	05	05	10
07	ಡೆಲ್ಲಿ	10	04	06	08
08	ಕೆಕೆಆರ್	09	03	05	07
09	ಮುಂಬೈ	10	03	07	06
10	ಲಖನೌ	09	02	07	04

'5 ವರ್ಷ ಕಾಂಗ್ರೆಸ್ ಸರ್ಕಾರ, ವರಿಷ್ಠರು ಹೇಳಿದ್ರೆ ನಾನೇ ಸಿಎಂ'

ಮೊದಲ ಪುಟದಿಂದ...

ನಾನು ಹೈಕಮಾಂಡ್ ಮಾತನ್ನೇ ಕೇಳುತ್ತೇನೆ. ಯಾರೇ ಏನೇ ಹೇಳಿದರೂ ಅಂತಿಮ ನಿರ್ಧಾರ ಹೈಕಮಾಂಡ್‌ನದ್ದೇ ಆಗಿರುತ್ತದೆ ಎಂದು ಹೇಳಿದರು. ದೆಹಲಿಗೆ ಭೇಟಿ ಕುರಿತು ಪ್ರತಿಕ್ರಿಯಿಸಿದ ಅವರು, ರಾಹುಲ್ ಗಾಂಧಿ ತಮ್ಮನ್ನು ಇನ್ನೂ ದೆಹಲಿಗೆ ಕರೆದಿಲ್ಲ. ನಾನು ಕೂಡ ಅವರ ಭೇಟಿಗೆ ಸಮಯ ಕೇಳಿಲ್ಲ. ಅವರು ಕರೆದರೆ ಮಾತ್ರ ಹೋಗುತ್ತೇನೆ. ಸಭೆ ನಡೆಯದೇ ಇದ್ದಾಗ ಅಜೆಂಡಾ ಹೇಗೆ ನಿಗದಿಯಾಗುತ್ತದೆ. ಸದ್ಯಕ್ಕೆ ದೆಹಲಿ ಪ್ರವಾಸದ ಯಾವುದೇ ಯೋಜನೆ ಇಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಶೃಂಗೇರಿ ಉಪಚುನಾವಣೆಯಲ್ಲಿ ಅಂಚೆ ಮತಗಳ ತಿರುಚುವಿಕೆ ನಡೆದಿದೆ. ಅಂದು ಬಿಜೆಪಿ ಸರ್ಕಾರ ಇತ್ತು. ಅವರ ನಿರ್ದೇಶನದಂತೆ ಚುನಾವಣಾ ಸಿಬ್ಬಂದಿಗಳು ಮತ್ತು ಜೀವರಾಜ್ ಸೇರಿಕೊಂಡು ಅಂಚೆ ಮತಗಳನ್ನು ತಿದ್ದಿದ್ದಾರೆ. ಫಲಿತಾಂಶದ ದಿನ ಮತಪತ್ರದಲ್ಲಿ ಇಲ್ಲದ ಗುರುತುಗಳು ಕಾಣಿಸಿಕೊಂಡಿವೆ. ಈ ವಿಚಾರದಲ್ಲಿ ನ್ಯಾಯಾಲಯದ ಮೆಟ್ಟಿಲೇರಲು ಕಾಂಗ್ರೆಸ್ ನಿರ್ಧರಿಸಿದೆ ಎಂದು ತಿಳಿಸಿದರು.

ವಿಜಯ್ ಹೆಗಲಿಗೆ ಕಾಂಗ್ರೆಸ್

ಮೊದಲ ಪುಟದಿಂದ...

ಇನ್ನು ತಮಿಳುನಾಡಲ್ಲಿ ಸರ್ಕಾರ ರಚಿಸುವ ಕಸರತ್ತಿನ ಭಾಗವಾಗಿ ಎಐಎಡಿಎಂಕೆಗೆ ಬೆಂಬಲ ಸೂಚಿಸುವಂತೆ ಟಿವಿಕೆ ಪಕ್ಷದ ನಾಯಕರು ಪತ್ರ ಬರೆದಿದ್ದಾರೆ ಎನ್ನಲಾಗಿದೆ. ಅಲ್ಲದೇ ಕೆಲ ಶಾಸಕರು ವಿಜಯ್ ಮನೆಗೆ ತೆರಳಿ ಮಾತುಕತೆ ನಡೆಸಿದ್ದಾರೆ ಎಂದೂ ವರದಿಯಾಗಿದೆ.

ಈ ಬೆನ್ನಲ್ಲೇ ಎಐಎಡಿಎಂಕೆ ಮುಖ್ಯಸ್ಥ, ಮಾಜಿ ಮುಖ್ಯಮಂತ್ರಿ ಜಯಲಲಿತಾ ಶಿಷ್ಯ ಪಳನಿಸ್ವಾಮಿಯೂ ಬೆಂಬಲ ಸೂಚಿಸಿದ್ದಾರೆ ಎನ್ನಲಾಗಿದೆ. ಇದು ಕೆಲ ಶಾಸಕರಲ್ಲಿ ಅಸಮಾಧಾನ ಉಂಟಾಗಿದ್ದು, ಇದೀಗ ಎಐಎಡಿಎಂಕೆ ಇಬ್ಭಾಗವಾಗುವ ಭೀತಿ ಎದುರಾಗಿದೆ. ಇದರ ಬೆನ್ನಲ್ಲೇ ಯಾವುದೇ ಕಾರಣಕ್ಕೂ ನಾವು ವಿಜಯ್‌ಗೆ ಬೆಂಬಲ ನೀಡುವುದಿಲ್ಲ ಎಂದು ಎಐಎಡಿಎಂಕೆ ನಾಯಕರೊಬ್ಬರು ಹೇಳಿದ್ದಾರೆ.

ಕೋಮುಶಕ್ತಿಗಳ ಹೊರಗಿಡಬೇಕು: ಕೈ ಷರತ್ತು: ಟಿವಿಕೆಗೆ ಬೆಂಬಲ ಸೂಚಿಸುವುದಕ್ಕೂ ಮುನ್ನ ಬಹುಮುಖ್ಯ ಷರತ್ತೊಂದನ್ನು ಕಾಂಗ್ರೆಸ್ ಪಕ್ಷ ವಿಜಯ್ ಅವರ ಮುಂದಿರಿಸಿದ್ದು, ಯಾವುದೇ ಕೋಮುವಾದಿ ಪಕ್ಷಗಳ ಜೊತೆಗೆ ಮೈತ್ರಿ ಮಾಡಿಕೊಳ್ಳಬಾರದು ಎಂದು ಕಟ್ಟಪ್ಪಣೆ ಮಾಡಿದೆ ಎಂದು ವರದಿಯಾಗಿದೆ. ಈ ಬಗ್ಗೆ ಕಾಂಗ್ರೆಸ್ ತಮಿಳುನಾಡು ಎಐಸಿಸಿ ಕಮಿಟಿ ಉಸ್ತುವಾರಿ ಗಿರೀಶ್ ಚೋಡಂಕರ್ ಹೇಳಿಕೆ ನೀಡಿದ್ದು, ಟಿವಿಕೆ ಜತೆಗಿನ ನಮ್ಮ ಮೈತ್ರಿ ಕೆಲ ಷರತ್ತುಗಳ ಮೇಲೆ ನಿಂತಿದೆ. ಸಂವಿಧಾನದಲ್ಲಿ ನಂಬಿಕೆ ಇರದ ಯಾವುದೇ ಕೋಮುವಾದಿ ಪಕ್ಷಗಳ ಜತೆ ಅವರು ಮೈತ್ರಿ ಮಾಡಿಕೊಳ್ಳಬಾರದು ಎಂದು ಹೇಳಿದ್ದಾರೆ.

ಬೆಳಗಾವೀಲಿ ಪ್ರಥಮ ಮುಂಗಾರು ಕಲಾಪ?

ಮೊದಲ ಪುಟದಿಂಥ...

ಕಳೆದ 25 ವರ್ಷಗಳಿಂದ ಹಾಗೂ ಸುವರ್ಣಸೌಧ ಸ್ಥಾಪನೆಗೊಂಡ 13 ವರ್ಷಗಳಿಂದ ಡಿಸೆಂಬರ್‌ನಲ್ಲಿ ಚಳಿಗಾಲದ ಅಧಿವೇಶನ ನಡೆಯಲು ಬೆಳಗಾವಿ ವೇದಿಕೆ ಆಗಿತ್ತು. ಡಿಸೆಂಬರ್‌ನಲ್ಲಿ ವಿಧಾನಮಂಡಲ ಅಧಿವೇಶನ ವರ್ಷಾಂತ್ಯದ ಕಾರ್ಯಕ್ರಮದಂತೆ ನಡೆದು ಹೋಗುತ್ತಿತ್ತು. ವರ್ಷಕೊಮ್ಮೆ ಬೆಳಗಾವಿಯಲ್ಲಿ ಅಧಿವೇಶನ ನಡೆಸಬೇಕೆಂಬ ಕಾಟಾಚಾರವು ಆಗಿತ್ತು. ಹೀಗಾಗಿ ಉಭಯ ಸದನಗಳಲ್ಲಿ ಅತ್ಯಂತ ಮಹತ್ವದ್ದು ಎಂದು ಭಾವಿಸಲಾದ ಮುಂಗಾರು ಅಧಿವೇಶನವನ್ನು ಈ ಬಾರಿ ಬೆಳಗಾವಿಯಲ್ಲಿ ನಡೆಸಿ ಹೊಸದೊಂದು ಪದ್ಧತಿಗೆ ಮುನ್ನುಡಿ ಬರೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದಾರೆ.

ಅಲ್ಲದೆ ಉತ್ತರ ಕರ್ನಾಟಕದ ಬೆಳಗಾವಿ ಅಧಿವೇಶನ ಕೇವಲ ಕಾಲಹರಣದ ಅಧಿವೇಶನ ಆಗದೆ ವರ್ಷದ ಮಹತ್ವದ ಅಧಿವೇಶನವನ್ನು ನಡೆಸುವ ಮೂಲಕ ಉತ್ತರ ಕರ್ನಾಟಕಕ್ಕೆ ತಮ್ಮ ಸರ್ಕಾರ ನೀಡುತ್ತಿರುವ ಆದ್ಯತೆಯನ್ನು ಮನದಟ್ಟು ಮಾಡುವ ಪ್ರಯತ್ನಕ್ಕೆ ಸಿದ್ದರಾಮಯ್ಯ ಮುಂದಾಗಿದ್ದಾರೆ. ಬೆಳಗಾವಿಯಲ್ಲಿ ನಿರ್ಮಾಣಗೊಂಡ ಸುವರ್ಣ ವಿಧಾನಸೌಧ 2012ರ ಅಕ್ಟೋಬರ್ 11ರಂದು ಅಂದಿನ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರಿಂದ ಉದ್ಘಾಟನೆಗೊಂಡಿತ್ತು.

ಅದಾದ ಬಳಿಕ ಪ್ರತಿವರ್ಷ ಡಿಸೆಂಬರ್ ನಲ್ಲಿ ಅಧಿವೇಶನ ನಡೆಸಲಾಗುತ್ತಿದೆ. ಅದಕ್ಕೂ ಮೊದಲು 2006ರಲ್ಲಿ ಬೆಳಗಾವಿಯ ಕೆಎಲ್‌ಇ ಸಂಸ್ಥೆಯ ಆವರಣದಲ್ಲಿ ಅಧಿವೇಶನ ನಡೆಸಲಾಗುತ್ತಿತ್ತು. ಆದರೆ ಈವರೆಗೆ ಮುಂಗಾರು ಅಧಿವೇಶನ ನಡೆಸಲಾಗಿಲ್ಲ.

ಪ್ರತಿವರ್ಷ ಡಿಸೆಂಬರ್‌ನಲ್ಲಿ ಬೆಳಗಾವಿ ಅಧಿವೇಶನ ನಡೆಯುವ ವೇಳೆ ಅನೇಕ ಪ್ರತಿಭಟನೆ ಹೋರಾಟಗಳು ನಡೆಯುವುದು ಸರ್ವೇಸಾಮಾನ್ಯ. ಅಲ್ಲದೆ ಡಿಸೆಂಬರ್‌ನಲ್ಲಿ ಕಬ್ಬು ಕಟಾವಿಗೆ ಬಂದು ಕಬ್ಬಿನ ದರದ ವಿವಾದ ಭುಗಿಲೇಳುವುದು ಕೂಡ ಚಳಿಗಾಲದ ಅಧಿವೇಶನದಷ್ಟೇ ಸಾಮಾನ್ಯ. ಇದರೊಂದಿಗೆ ಶಾಸಕರು ಹಾಗೂ ಅಧಿಕಾರಿಗಳಿಗೆ ಹೋಟೆಲ್‌ಗಳಲ್ಲಿ ಕೊಠಡಿಗಳನ್ನು ಕಾಯ್ದಿರಿಸುವುದು ಮತ್ತು ನಿಗದಿಪಡಿಸುವುದು ಡಿಸೆಂಬರ್‌ನಲ್ಲಿ ಕಷ್ಟಕರ. ಜೂನ್‌ನಲ್ಲಿ ಅಧಿವೇಶನ ನಡೆದರೆ ಬಿತ್ತನೆ ಸಮಯವಾದ್ದರಿಂದ ಪ್ರತಿಭಟನೆಗೆ ರೈತ ಸಮುದಾಯ ಮುಂದಾಗುವುದು ತೀರ ವಿರಳ.

ಅಲ್ಲದೆ ಶಾಸಕರು ಹಾಗೂ ಅಧಿಕಾರಿಗಳ ವಾಸ್ತವ್ಯಕ್ಕೆ ಪ್ರಶಸ್ತ ಸಮಯ ಎಂಬ ವರದಿಯನ್ನು ಬೆಳಗಾವಿ ಜಿಲ್ಲಾಡಳಿತ ಸರ್ಕಾರಕ್ಕೆ ಈ ಹಿಂದೆಯೇ ನೀಡಿತ್ತು.

ಇದೆಲ್ಲವನ್ನು ಪರಿಗಣಿಸಿ ಸಿಎಂ ಸಿದ್ದರಾಮಯ್ಯ ಈ ವರ್ಷ ಜೂನ್ ಎರಡನೇ ವಾರದಲ್ಲಿ ಬೆಳಗಾವಿ ಅಧಿವೇಶನ ನಡೆಸಲು ತೀರ್ಮಾನಿಸಿದ್ದಾರೆ ಎಂದು ಸರ್ಕಾರದ ಉನ್ನತ ಮೂಲಗಳು ಸಂಯುಕ್ತ ಕರ್ನಾಟಕಕ್ಕೆ ತಿಳಿಸಿವೆ.

ಬಿಜೆಪಿ ಮುಖಂಡ ಜಗದೀಶ್ ನಿಧನ

ಸಂ.ಕ.ಸಮಾಚಾರ ಬೆಂಗಳೂರು

ರಾಜ್ಯ ಬಿಜೆಪಿಯ ನಿಕಟಪೂರ್ವ ಕಾರ್ಯದರ್ಶಿಯಾಗಿದ್ದ ಜಗದೀಶ್ ಹಿರೇಮನಿ (52) ಬೆಂಗಳೂರಿನಲ್ಲಿ ಬುಧವಾರ ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಮೂಲತಃ ಬಾಗಲಕೋಟೆಯವರಾದ ಜಗದೀಶ್ ಹಿರೇಮನಿ ಅವರು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಮೂಲಕ ವಿದ್ಯಾರ್ಥಿ ದಿಸೆಯಲ್ಲಿ ಸಾರ್ವಜನಿಕ ಜೀವನ ಪ್ರವೇಶಿಸಿದರು.

ಕೇಂದ್ರ ಸರ್ಕಾರದ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಬಿಜೆಪಿಯ ಪ್ರಶಿಕ್ಷಣ ವಿಭಾಗದ ಸಂಚಾಲನಾ ತಂಡದಲ್ಲಿದ್ದರು.

ಅಂತಿಮ ದರ್ಶನ: ಬುಧವಾರ ಮಧ್ಯಾಹ್ನ ಬಿಜೆಪಿಯ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮೃತರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮುಂತಾದವರು ಅಂತಿಮ ದರ್ಶನ ಪಡೆದರು.

ಅವರ ಹುಟ್ಟೂರಾದ ಬಾಗಲಕೋಟೆಯಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿಸಲಾಗುತ್ತಿದೆ.

ಸಂತಾಪ: ಜಗದೀಶ್ ಹಿರೇಮನಿ ಅವರ ನಿಧನಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ್, ಮೇಲ್ಮನೆ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮತ್ತಿತರ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ಜೂನ್ ಅಂತ್ಯಕ್ಕೆ ಬೆಂಗ್ಳೂರು ಮುಂಬೈ ಸೂಪರ್‌ಫಾಸ್ಟ್ ರೈಲು

ನವದೆಹಲಿ: ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಆಶಯದಂತೆ ಉತ್ತರ ಕರ್ನಾಟಕ ಮತ್ತು ಮಧ್ಯ ಕರ್ನಾಟಕದ ಸಂಪರ್ಕ ಸೇತುವಾಗಿ "ಬೆಂಗಳೂರು–ಮುಂಬೈ ಸೂಪರ್ ಫಾಸ್ಟ್ ರೈಲು" ಜೂನ್ ಅಂತ್ಯದೊಳಗೆ ಸಂಚಾರ ಆರಂಭಿಸಲಿದೆ. ಅಲ್ಲದೆ, ನಂತರದ ದಿನಗಳಲ್ಲಿದು "ವಂದೇ ಭಾರತ್ ಸ್ಲೀಪರ್" ರೈಲಾಗಿ ಪರಿವರ್ತನೆಗೊಳ್ಳುವ ಸೂಚನೆ ಸಹ ಸಿಕ್ಕಿದೆ.

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರೊಂದಿಗೆ ಮಾಹಿತಿ ಹಂಚಿಕೊಂಡಿದ್ದಾರೆ. ರಾಜಧಾನಿ ಬೆಂಗಳೂರಿನಿಂದ ಪ್ರಮುಖ ವಾಣಿಜ್ಯ ನಗರಿ ಮುಂಬೈಗೆ ತೆರಳುವ ಈ "ಸೂಪರ್ ಫಾಸ್ಟ್" ರೈಲು ಮಧ್ಯ ಕರ್ನಾಟಕದ ತುಮಕೂರು, ದಾವಣಗೆರೆ, ಹಾವೇರಿ ಹಾಗೂ ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿ ಮಾರ್ಗದ ಮೂಲಕ ಸಂಚರಿಸಲಿದೆ. ತಮ್ಮ ಒತ್ತಾಸೆಯಂತೆ ರೈಲು ಸಂಚಾರ ಬಹುತೇಕ ಜೂನ್ ಅಂತ್ಯದೊಳಗೆ ಆರಂಭಿಸುವುದಾಗಿ ವೈಷ್ಣವ್ ತಿಳಿಸಿದ್ದಾರೆ.

ಬಂಗಾಳದಲ್ಲಿ ದಳ್ಳುರಿ: ಹಿಂಸೆ

ಮೊದಲ ಪುಟದಿಂದ..

ಟಿಎಂಸಿ ಪಕ್ಷದ ಹಲವಾರು ಕಚೇರಿಗಳನ್ನು ಲೂಟಿ ಮಾಡಿ ಧ್ವಂಸ ಮಾಡಿರುವ ವರದಿಗಳೂ ಬಂದಿವೆ. ಪೂರ್ವ ಕೋಲ್ಕತಾದಲ್ಲಿ ಟಿಎಂಸಿ ವಾರ್ಡ್ ಕೌನ್ಸಿಲರ್ ಸುಶಾಂತ್ ಕುಮಾರ್ ಘೋಷ್ ಕಚೇರಿ ಮೇಲೆ ದಾಳಿ ಮಾಡಲಾಗಿದೆ. ಟಾಲಿಗಂಜ್‌ನಲ್ಲಿ ಮಾಜಿ ಸಚಿವ ಅರೂಪ್ ಬಿವಾಸ್ ಅವರ ಪಕ್ಷದ ಕಚೇರಿಯ ಮೇಲೂ ದಾಳಿ ನಡೆಸಲಾಗಿದೆ. ಉತ್ತರ 24 ಪರಗಣದ ಪಾಣಿಹಟಿ, ಪಶ್ಚಿಮ ಮಿಡ್ನಾಪುರದ ಘಾಟಲ್, ಪಶ್ಚಿಮ ಬರ್ದ್ವಾನ್‌ನ ಅಸನ್ಸೋಲ್, ದಕ್ಷಿಣ 24 ಪರಗಣದ ಡೈಮಂಡ್ ಹಾರ್ಬರ್ ಮತ್ತು ಫಾಲ್ಟಾದಲ್ಲಿ ಟಿಎಂಸಿ ಕಚೇರಿಗಳನ್ನು ಸಹ ದೋಚಲಾಗಿದೆ.

ನೈಹತಿಯ ಮಾಮುದ್‌ಪುರದಲ್ಲಿ ಬಿಜೆಪಿ ಕಾರ್ಯಕರ್ತನ ಮನೆಯ ಮೇಲೆ ದಾಳಿ ನಡೆಸಿ ಮೂವರು ಗಾಯಗೊಂಡಿದ್ದಾರೆ ನಂತರ ಸ್ಥಳೀಯ ಕ್ಲಬ್‌ನ ಮೇಲೂ ದಾಳಿ ನಡೆಸಲಾಗಿದೆ.

ಲೆನಿನ್ ಪ್ರತಿಮೆ ಧ್ವಂಸ: ಜಾದವ್‌ಪುರದಲ್ಲಿ ಲೆನಿನ್ ಪ್ರತಿಮೆಗೆ ಸೋಮವಾರ ಕೇಸರಿ ಎರಚಲಾಗಿದ್ದರೆ, ಮುರ್ಷಿದಾಬಾದ್‌ನ ಜಿಯಾಗಂಜ್‌ನಲ್ಲಿರುವ ಶ್ರೀಪತ್ ಸಿಂಗ್ ಕಾಲೇಜಿನ ಮುಂಭಾಗದಲ್ಲಿರುವ ಲೆನಿನ್ ಪ್ರತಿಮೆಯನ್ನು ಯುವಕರ ಗುಂಪೊಂದು ಮಂಗಳವಾರ ಧ್ವಂಸಗೊಳಿಸಿದೆ. ಜೈ ಶ್ರೀರಾಮ್ ಘೋಷಣೆಯ ನಡುವೆ ಯುವಕರು ರಾಡ್‌ಗಳು, ಸುತ್ತಿಗೆಗಳು ಮತ್ತು ಕೊಡಲಿಗಳನ್ನು ತಂದು ಈ ಪ್ರತಿಮೆಯನ್ನು ಧ್ವಂಸ ಮಾಡಿದರು. ಪೊಲೀಸರ ಮುಂದೆಯೇ ಈ ಪ್ರತಿಮೆ ಧ್ವಂಸ ಮಾಡಲಾಗಿದೆ ಎಂದು ಪ್ರತ್ಯಕ್ಷದರ್ಶಿಗಳು ಆರೋಪಿಸಿದ್ದಾರೆ.

ಸುದ್ದಿ ಮಿಂಚು

ಸಿಎಂಗೆ ಪತ್ರ ಬರೆದ ಮಾಜಿ ಎಂಎಲ್ಸಿ ಅರಳಿ । ಕೃಷಿ ಡಿಪ್ಲೋಮಾ ಕಾಲೇಜು ಮೇಲ್ದರ್ಜೆಗೆ ಆಗ್ರಹ

ಬೀದರ್‌ಗೆ ಬಿಎಸ್ಸಿ ಕೃಷಿ ಕಾಲೇಜು ಕೊಡಿ

ಸಂ.ಕ.ಸಮಾಚಾರ ಬೀದರ್: ಇಲ್ಲಿ ನಡೆಯುತ್ತಿರುವ ಕೃಷಿ ಡಿಪ್ಲೋಮಾ ಕಾಲೇಜಿಗೆ ಬಿಎಸ್ಸಿ ಕೃಷಿ ಕಾಲೇಜು ಎಂದು ಮೇಲ್ದರ್ಜೆಗೇರಿಸುವಂತೆ ವಿಧಾನ ಪರಿಷತ್ ಮಾಜಿ ಸದಸ್ಯ ಅರವಿಂದಕುಮಾರ ಅರಳಿ ಆಗ್ರಹಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದ ಅವರು, ಗಡಿ ಭಾಗದ ಜಿಲ್ಲೆಯಲ್ಲಿ ಬಿಎಸ್ಸಿ ಕೃಷಿ ಕಾಲೇಜು ಸ್ಥಾಪನೆ ತೀರ ಅಗತ್ಯವಿದೆ. ಕೃಷಿ ಕಾಲೇಜು ಸ್ಥಾಪನೆಗೆ ಬೇಕಾದ ಎಲ್ಲ ಅರ್ಹತೆ, ಸೌಲಭ್ಯಗಳು ಇಲ್ಲಿವೆ. ಸರ್ಕಾರ ಈ ಭಾಗದ ಜನರ, ರೈತರ ದಶಕದ ಬೇಡಿಕೆಗೆ ಸ್ಪಂದಿಸಬೇಕೆಂದು ಗಮನ ಸೆಳೆದಿದ್ದಾರೆ.

ಬೀದರ್ ಕೃಷಿ ಅವಲಂಬಿತ ಜಿಲ್ಲೆಯಾಗಿದೆ. ಇಲ್ಲಿ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಸರ್ಕಾರಿ ತೋಟಗಾರಿಕೆ ಮಹಾ ವಿದ್ಯಾಲಯವಿದೆ. ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸಹ ಆರಂಭವಾಗಿದೆ. ಆದರೆ ಇಲ್ಲಿ ಕೃಷಿಕರಿಗೆ ಅನುಕೂಲವಾಗುವಂತಹ ಮತ್ತು ಬಡ ರೈತರ ಮಕ್ಕಳ ಜ್ಞಾನಾರ್ಜನೆಗೆ ಪೂರಕವಾಗುವಂತಹ ಬಿಎಸ್ಸಿ ಕೃಷಿ ಕಾಲೇಜು ಇಲ್ಲದಿರುವುದರಿಂದ ಈ ಭಾಗದ ಮಕ್ಕಳು ಕೃಷಿ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಕೃಷಿ ಕಾಲೇಜು ಮಾಡಿದರೆ ಈ ಎಲ್ಲ ಕಾಲೇಜುಗಳಿಗೆ ಪೂರಕ ವಾಗುವ ಜೊತೆಗೆ ಜಿಲ್ಲೆಯ ಶೈಕ್ಷಣಿಕ ಅಭಿವೃದ್ಧಿಗೂ ಉತ್ತೇಜನ ಸಿಗಲಿದೆ ಎಂದು ಹೇಳಿದ್ದಾರೆ.

ಕಳೆದ ಹನ್ನೊಂದು ವರ್ಷಗಳಿಂದ ಇಲ್ಲಿ ಕೃಷಿ ಕಾಲೇಜು ಸ್ಥಾಪನೆ ಬೇಡಿಕೆ ಮಂಡಿಸಿ ಸರ್ಕಾರದ ಮಟ್ಟದಲ್ಲಿ ಪ್ರಯತ್ನ ನಡೆದಿವೆ. 2015ರಲ್ಲಿ ಸಲ್ಲಿಸಿದ್ದ ಮನವಿಯಂತೆ ಸರ್ಕಾರವು ಈ ಸಂಬಂಧ ಸಮಿತಿ ರಚಿಸಿತ್ತು. ಜನಪ್ರತಿನಿಧಿಗಳು, ಅಧಿಕಾರಿಗಳು, ಕೃಷಿ ವಿಜ್ಞಾನಿಗಳು ಒಳಗೊಂಡ ಸಮಿತಿ 2017ರಲ್ಲಿ ಬೀದರ್‌ನಲ್ಲಿ ಕೃಷಿ ಕಾಲೇಜು ಆರಂಭಿಸಲು ಸೂಕ್ತ ಎಂದು ವರದಿ ನೀಡಿತ್ತು. ಈ ವರದಿ ಆಧಾರದಲ್ಲಿ ರಾಯಚೂರು ಕೃಷಿ ವಿವಿ ಕುಲಪತಿಗೆ ಪತ್ರ ಬರೆದು, ಕೃಷಿ ಕಾಲೇಜು ಸಂಬಂಧ ಸೂಕ್ತ ಸ್ಥಳ ಪರಿಶೀಲಿಸಿ, ಸಮಗ್ರ ವರದಿ ನೀಡುವಂತೆ ಸೂಚಿಸಲಾಗಿತ್ತು. ಇದಕ್ಕಾಗಿ ಮತ್ತೊಂದು ಸಮಿತಿ ರಚಿಸಿ, ವಿವರ ಮಾಹಿತಿಯನ್ನು ಸರ್ಕಾರಕ್ಕೆ 2017ರಲ್ಲಿ ಸಲ್ಲಿಕೆಯಾಗಿದೆ. ಆದರೆ ನಂತರ ಯಾವುದೇ ಬೆಳವಣಿಗೆ ನಡೆದಿಲ್ಲ ಎಂದಿದ್ದಾರೆ.ಬಿಜೆಪಿ ಸರ್ಕಾರದಲ್ಲಿ ಸಹ ಈ ಬೇಡಿಕೆ ಬಗ್ಗೆ ಸರ್ಕಾರಕ್ಕೆ ಸತತ ಒತ್ತಾಯಿಸಿರುತ್ತೇನೆ. ಇಲ್ಲಿ ಕೃಷಿ ಕಾಲೇಜು ಸ್ಥಾಪನೆ ಸಂಬಂಧ ಪೂರಕ ದಾಖಲೆಗಳೊಂದಿಗೆ ಎಲ್ಲ ಸಮಿತಿಗಳು ಸಕಾರಾತ್ಮಕ ವರದಿಯನ್ನೇ ಸಲ್ಲಿಸಿವೆ. ಆದರೆ ಇದನ್ನು ಯಾವ ಸರ್ಕಾರವೂ ಗಣನೆಗೆ ತೆಗೆದುಕೊಳ್ಳಲಿಲ್ಲ. ರೈತರ, ಹಿಂದುಳಿದ ಜಿಲ್ಲೆ ಬಗ್ಗೆ ಹೆಚ್ಚಿನ ಒತ್ತು ನೀಡುವ ತಾವು ಈ ಬಗ್ಗೆ ಗಮನಹರಿಸಿ ಕೃಷಿ ಕಾಲೇಜು ಆರಂಭಕ್ಕೆ ಮಂಜೂರಿ ನೀಡುವಂತೆ ಕೋರಿದ್ದಾರೆ.ಕೃಷಿ ಕಾಲೇಜಿಗೆ ಪೂರಕ ವಾತಾವರಣ ಇಲ್ಲಿದೆ. ಕೃಷಿ ಸಂಶೋಧನಾ ಕೇಂದ್ರ ಹಳ್ಳದಕೇರಿ ಮತ್ತು ಜನವಾಡದಲ್ಲಿ ಫಾರ್ಮ್ ಇದೆ. ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರ ಇಲ್ಲಿದೆ. ಇದಕ್ಕೆ 68.3 ಎಕರೆ ಜಮೀನು ಸಹ ಲಭ್ಯವಿದೆ. ಸುಸಜ್ಜಿತವಾದ ಕಾಲೇಜಿನ ಮತ್ತು ಕಚೇರಿ ಕಟ್ಟಡಗಳು, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿನಿಲಯ ಇವೆ. ಪರೀಕ್ಷಾ ಕೊಠಡಿಗಳು, ಸಂಗ್ರಹಣ ಗೋದಾಮು, ಪ್ರಯೋಗಾಲಯ, ಕೃಷಿ ಪದ್ಧತಿ ಘಟಕ, ಹೈನುಗಾರಿಕೆ ಘಟಕ, ವಿವಿಧ ಕೃಷಿ ತಾಂತ್ರಿಕತೆಗಳ ಪ್ರಾತ್ಯಕ್ಷಿಕೆ ಘಟಕಗಳು ಲಭ್ಯವಿರುತ್ತವೆ. ಹೀಗಾಗಿ ಇಲ್ಲಿ ನಡೆಯುತ್ತಿರುವ ಕೃಷಿ ಡಿಪ್ಲೋಮಾ ಕೋರ್ಸ್ ಮೇಲ್ದರ್ಜೆಗೇರಿಸಿ ಬಿಎಸ್ಸಿ ಕೃಷಿ ಕಾಲೇಜು ಮಾಡಿದರೆ ಜಿಲ್ಲೆಗೆ ಮತ್ತೊಂದು ಕೊಡುಗೆ ಸಿಕ್ಕಂತಾಗುತ್ತದೆ ಎಂದು ಅರಳಿ ಮನವಿ ಮಾಡಿದ್ದಾರೆ.

ವಾರದೊಳಗೆ ಕಬ್ಬಿನ ಬಿಲ್ ಪಾವತಿ

ಸಂ.ಕ.ಸಮಾಚಾರ ಬೀದರ್: ಓಂಕಾರ ಉದ್ಯೋಗ ಸಂಸ್ಥೆ ವಿರುದ್ಧ ಕೆಲ ವ್ಯಕ್ತಿಗಳು ಹಾಗೂ ಗುಂಪುಗಳು ಉದ್ದೇಶಪೂರ್ವಕವಾಗಿ ಸಾಮಾಜಿಕ ಜಾಲತಾಣ ಮೂಲಕ ಅಪಪ್ರಚಾರ ನಡೆಸುತ್ತಿವೆ ಎಂದು ಓಂಕಾರ ಉದ್ಯೋಗ ಗ್ರೂಪ್ ಮಾಲೀಕ ಬಾಬುರಾವ್ ಬೋತ್ರೆ ಪಾಟೀಲ್ ತಿಳಿಸಿದ್ದಾರೆ.

ಗ್ರುಪ್‌ನಿಂದ ನಡೆಯುತ್ತಿರುವ ಸಕ್ಕರೆ ಕಾರ್ಖಾನೆಗಳು ಕಬ್ಬು ಪೂರೈಸಿದ ರೈತರ 2,000–3,000 ಕೋಟಿ ರೂ.ಬಿಲ್ ಬಾಕಿ ಉಳಿಸಿಕೊಂಡಿವೆ ಎಂದು ಸುಳ್ಳು ಸುದ್ದಿ ಹರಡುತ್ತಿದ್ದಾರೆ. ಕಾರ್ಖಾನೆ ಹೆಸರಿಗೆ ಕೆಲವರು ಕಳಂಕ ತರುವ ಹಾಗೂ ರೈತರಲ್ಲಿ ಗೊಂದಲ ಸೃಷ್ಟಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಇಲ್ಲಿ ಹೊರಡಿಸಿದ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಓಂಕಾರ ಗ್ರುಪ್ ರೈತರ ಕಬ್ಬಿಗೆ ಅತ್ಯಧಿಕ ಬೆಲೆ ಕೊಡುತ್ತಿದೆ. ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ ಹಾಗೂ ಉತ್ತರಪ್ರದೇಶದಲ್ಲಿ ಗ್ರುಪ್‌ನ 17 ಸಕ್ಕರೆ ಕಾರ್ಖಾನೆ ಯಶಸ್ವಿಯಾಗಿ ನಡೆಯುತ್ತಿವೆ. ಈ ವರ್ಷ 75 ಲಕ್ಷ ಟನ್ ಕಬ್ಬು ನುರಿಸಿದ್ದು, ಬರುವ ಹಂಗಾಮಿನಲ್ಲಿ 1 ಕೋಟಿ ಟನ್ ಕ್ರಷಿಂಗ್ ಗುರಿಯಿದೆ. ಈಗಾಗಲೇ ಗ್ರುಪ್‌ನಿಂದ ಕಬ್ಬು ಸಾಗಿಸಿದ ರೈತರಿಗೆ ರೂ. 1,830 ಕೋಟಿ ಸಂದಾಯ ಮಾಡಲಾಗಿದೆ. ಕೇಂದ್ರ ಸರ್ಕಾರದ ಪೆಟ್ರೋಲ್ ಹಾಗೂ ಡಿಸೆಲ್‌ನಲ್ಲಿ ಶೇ.33ರಷ್ಟು ಎಥೆನಾಲ್ ಮಿಶ್ರಣ ಮಾಡುವ ಹೊಸ ನೀತಿಯಿಂದಾಗಿ ಈ ವರ್ಷದ ಎಥೆನಾಲ್ ಹಾಗೂ ಮೊಲ್ಯಾಸಿಸ್ ಇನ್ನೂ ಮಾರಾಟವಾಗಿಲ್ಲ. ಅದರಿಂದ ಗ್ರುಪ್‌ಗೆ ರೂ.600 ಕೋಟಿ ದೊರೆಯಲಿದೆ ಎಂದು ತಿಳಿಸಿದ್ದಾರೆ.

ರವಿರಾಜ ಸಬಲ್ ಪಾಟೀಲ್ ಎಂಬುವರು ಸಾಮಾಜಿಕ ಮಾಧ್ಯಮದ ಮೂಲಕ ಸುಳ್ಳು ಮಾಹಿತಿ ಹರಡಿಸುತ್ತಿರುವುದು ಖಂಡನೀಯ. ವಾರದೊಳಗೆ ಕಬ್ಬು ಪೂರೈಸಿದ ರೈತರ ಸಂಪೂರ್ಣ ಬಾಕಿ ಹಣ ಪಾವತಿಸಲಾಗುವುದು. ರೈತರು ಗ್ರುಪ್ ಕುರಿತ ಸುಳ್ಳು ವದಂತಿಗಳನ್ನು ನಂಬಬಾರದು ಎಂದು ಮನವಿ ಮಾಡಿದ್ದಾರೆ.

ಹೈಕೋರ್ಟ್ ಮಹತ್ವದ ತೀರ್ಪು

ಸಂ.ಕ.ಸಮಾಚಾರ ಬೀದರ್: ಭಾಲ್ಕಿಯ ಸತ್ಯನಿಕೇತನ ಶಿಕ್ಷಣ ಸಂಸ್ಥೆಗೆ 98.06 ಲಕ್ಷ ರೂ.ಆಸ್ತಿ ತೆರಿಗೆ ಕಟ್ಟುವ ಸಂಬಂಧ ಭಾಲ್ಕಿ ಪುರಸಭೆ ಮುಖ್ಯಾಧಿಕಾರಿ ನೀಡಿರುವ ನೋಟಿಸ್ ರದ್ದುಪಡಿಸಿ ಕಲಬುರಗಿ ಹೈಕೋರ್ಟ್ ಏಕಸದಸ್ಯ ಪೀಠ ಮಹತ್ವದ ತೀರ್ಪು ನೀಡಿದೆ. 2001ರಿಂದ 2025ರವರೆಗಿನ ಕಟ್ಟದ ಆಸ್ತಿ ತೆರಿಗೆ 98.06 ಲಕ್ಷ ರೂ.ಗಳನ್ನು 30 ದಿನದೊಳಗೆ ಕಟ್ಟುವಂತೆ ಪುರಸಭೆ ಮುಖ್ಯಾಧಿಕಾರಿ ನೋಟಿಸ್ ನೀಡಿದ್ದರು. ತೆರಿಗೆ ಕಟ್ಟದಿದ್ದರೆ ಪುರಸಭೆ ಕಾಯ್ದೆ ನಿಯಮ 143ರ ಪ್ರಕಾರ ಆಸ್ತಿ ಜಪ್ತಿ ಮಾಡುವುದಾಗಿಯೂ ತಿಳಿಸಿದ್ದರು.

ಈ ನೋಟಿಸ್ ವಿರುದ್ಧ ಸತ್ಯನಿಕೇತನ ಶಿಕ್ಷಣ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಸೂರ್ಯಕಾಂತ ಭಂಗೂರ ಅವರು ಕಲಬುರಗಿ ಹೈಕೋರ್ಟ್ ಪೀಠಕ್ಕೆ ಮೊರೆಯಿಟ್ಟಿದ್ದರು. ವಾದ, ಪ್ರತಿವಾದಗಳ ವಾದ ಆಲಿಸಿದ ನ್ಯಾಯಮೂರ್ತಿ ಎಸ್.ವಿಶ್ವಜೀತ ಶೆಟ್ಟಿ ಅವರು ಪುರಸಭೆ ಮುಖ್ಯಾಧಿಕಾರಿ ನೀಡಿದ್ದ ನೋಟಿಸ್ ರದ್ದುಪಡಿಸಿ ತೀರ್ಪು ನೀಡಿದ್ದಾರೆ ಎಂದು ಸಂಸ್ಥೆ ಪರವಾಗಿ ವಾದಿಸಿದ್ದ ಹಿರಿಯ ನ್ಯಾಯವಾದಿ ಜೈರಾಜ ಬುಕ್ಕಾ ತಿಳಿಸಿದ್ದಾರೆ. ಸತ್ಯನಿಕೇತನ ಶಿಕ್ಷಣ ಸಂಸ್ಥೆಯು 1965ರಲ್ಲಿ ಆರಂಭವಾಗಿದೆ. ಕಳೆದ ಆರು ದಶಕಗಳಿಂದ ನಿರಂತರವಾಗಿ ಭಾಲ್ಕಿ ತಾಲೂಕಿನ ಮಕ್ಕಳಿಗೆ ವಿದ್ಯಾದಾನ ಮಾಡುತ್ತಿದೆ.

ಆದರೆ ಭಾಲ್ಕಿ ಪುರಸಭೆಯಿಂದ ಕಟ್ಟಡದ ಆಸ್ತಿ ತೆರಿಗೆ ಸಂಬಂಧ ನೋಟಿಸ್ ಜಾರಿ ಮಾಡಿ, ಆಸ್ತಿ ಜಪ್ತಿ ಮಾಡುವುದಾಗಿ ಹೇಳಿದ್ದು ಸರಿಯಲ್ಲ. ಹೀಗಾಗಿ ಈ ನೋಟಿಸ್ ರದ್ದುಪಡಿಸಲು ಕೋರಲಾಗಿತ್ತು. ಶಿಕ್ಷಣ ಸಂಸ್ಥೆ ಕಟ್ಟಡಗಳು ಶೈಕ್ಷಣಿಕ ಉದ್ದೇಶಗಳಿಗೆ ಬಳಸಲಾಗುತ್ತದೆ. ವಿದ್ಯಾದಾನದ ಮಂದಿರಗಳಿಗೆ ಆಸ್ತಿ ತೆರಿಗೆ ವಿನಾಯ್ತಿ ನೀಡಲಾಗುವುದು ಎಂದು ನ್ಯಾಯಮೂರ್ತಿಗಳು ಈ ನೋಟಿಸ್ ರದ್ದುಪಡಿಸಿ ಮಹತ್ವದ ತೀರ್ಪು ಕೊಟ್ಟಿದ್ದಾರೆ ಎಂದು ಬುಕ್ಕಾ ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಕಠಿಣ ಪರಿಶ್ರಮದಿಂದಲೇ ಸಾಧನೆ ಸಾಧ್ಯ

ಶಾಸಕ ಬೆಲ್ದಾಳೆ ಅಭಿಮತ । ರಂಜೋಳಖೇಣಿ ಶಾಲೆಯಲ್ಲಿ ಸತ್ಕಾರ

ಸಂ.ಕ.ಸಮಾಚಾರ ಬೀದರ್ : ಕಠಿಣ ಪರಿಶ್ರಮ, ಸತತ ಅಧ್ಯಯನ ಹಾಗೂ ಶ್ರೇಷ್ಠ ಗುರಿಯೊಂದಿಗೆ ಹೆಜ್ಜೆಯಿಟ್ಟಾಗ ವಿದ್ಯಾರ್ಥಿಗಳು ಸಾಧನೆ ಮಾಡಲು ಸಾಧ್ಯ ಎಂದು ಬೀದರ್ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಹೇಳಿದರು.

ತಾಲೂಕಿನ ರಂಜೋಳಖೇಣಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಪ್ರಸಕ್ತ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳ ಸತ್ಕಾರ ಸಮಾರಂಭ ಹಾಗೂ ಶಾಲಾ ಉದ್ಯಾನವನದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಓದಿಗೆ ಹೆಚ್ಚು ಮಹತ್ವ ನೀಡಬೇಕು. ಶಿಸ್ತು ಹಾಗೂ ಸ್ಪಷ್ಟ ಗುರಿಯೊಂದಿಗೆ ಮುಂದುವರಿದರೆ ಉನ್ನತ ಸಾಧನೆ ಸಾಧ್ಯವಾಗಲಿದೆ. ಭವಿಷ್ಯದಲ್ಲಿ ಏನಾಗಬೇಕಿದೆ ಎಂಬ ಸ್ಪಷ್ಟವಾದ ಗುರಿ ಹಾಕಿಕೊಂಡು ಅದನ್ನು ಮುಟ್ಟಲು ಶ್ರಮಿಸಬೇಕು. ಶಾಲೆಗೆ ಉತ್ತಮ ಫಲಿತಾಂಶ ಬಂದಿರುವುದು ಖುಷಿ ತಂದಿದೆ ಎಂದರು.

ಶಾಲೆಯೊಳಗೆ ಪ್ರವೇಶಿಸಿದಾಗ ಉದ್ಯಾನವನದಂತೆ ಭಾಸವಾಗುತ್ತದೆ. ಹಳೆಯ ಗೋಡೆಗಳಿಗೆ ಹೊಸ ಜೀವ ತುಂಬಿದ ಚಿತ್ರಕಲಾ ಶಿಕ್ಷಕ ವಿಷ್ಣುಕಾಂತ ಠಾಕೂರ್ ಅವರ ಕಾರ್ಯ ಶ್ಲಾಘನೀಯ. ಶಾಲೆಯ ಸುಂದರ ವಾತಾವರಣ ನಿರ್ಮಾಣಕ್ಕೆ ಶ್ರಮಿಸಿದ ಮುಖ್ಯ ಗುರು ಮಂಜುನಾಥ ಎನ್.ಆರ್.ಅವರ ಸೇವೆ ಪ್ರಶಂಸನೀಯವಿದೆ. ಶಾಲೆಗೆ ಅಗತ್ಯ ಮೂಲಭೂತ ಸೌಕರ್ಯ ಒದಗಿಸಲು ಪ್ರಯತ್ನಿಸುವೆ ಎಂದು ಶಾಸಕರು ಭರವಸೆ ನೀಡಿದರು. ಮುಖ್ಯ ಗುರು ಮಂಜುನಾಥ ಎನ್.ಆರ್. ಮಾತನಾಡಿ, ಶಾಲೆಯ ಸಾಧನೆಗೆ ಶಿಕ್ಷಕರ ಸಮರ್ಪಿತ ಸೇವೆ ಹಾಗೂ ಪಾಲಕರ ಸಹಕಾರವೇ ಮುಖ್ಯ ಕಾರಣವಾಗಿದೆ. ಮುಂದಿನ ವರ್ಷ ಇನ್ನಷ್ಟು ಉತ್ತಮ ಫಲಿತಾಂಶ ತರುವ ದಿಟ್ಟ ನಿಲುವು ನಮ್ಮದು. ಇದಕ್ಕಾಗಿ ಶೈಕ್ಷಣಿಕ ವರ್ಷದ ಆರಂಭದಿಂದಲೇ ಕಾರ್ಯಯೋಜನೆ ಹಾಕಿಕೊಳ್ಳಲಾಗುವುದು ಎಂದರು.

ಬೀದರ್ ತಾಲೂಕಿನ ರಂಜೋಳಖೇಣಿಯಲ್ಲಿ ಎಸ್ಸೆಸ್ಸೆಲ್ಸಿ ಸಾಧಕರಿಗೆ ಸತ್ಕರಿಸಲಾಯಿತು. ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಕ್ಷೇತ್ರ ಶಿಕ್ಷಣಾಧಿಕಾರಿ ಮದರ್ ಖಾನ್, ಮುಖ್ಯ ಗುರು ಮಂಜುನಾಥ, ಝಾಕೀರ್ ಹುಸೇನ್, ಸಂತೋಷ ಪೂಜಾರಿ ಇತರರಿದ್ದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮದರ್ ಖಾನ್ ಮಾತನಾಡಿದರು. ಪಿಎಂ ಪೋಷಣ್ ಅಭಿಯಾನದ ಸಹಾಯಕ ನಿರ್ದೇಶಕ ಝಾಕೀರ್ ಹುಸೇನ್, ಡಯಟ್ ಉಪನ್ಯಾಸಕರಾದ ಸಂತೋಷ ಪೂಜಾರಿ, ಗೀತಾ ಗಡ್ಡಿ, ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಸದಸ್ಯರು ಪ್ರಮುಖರು ಇದ್ದರು. ಎಸ್ಎಸ್ಎಲ್‌ಸಿ ಸಾಧಕ ವಿದ್ಯಾರ್ಥಿಗಳು, ಶಾಲೆಯ ಸುಂದರೀಕರಣ, ಉದ್ಯಾನವನ ನಿರ್ಮಾಣಕ್ಕೆ ಸಹಕರಿಸಿದ ದಾನಿಗಳು, ಹಳೆಯ ವಿದ್ಯಾರ್ಥಿಗಳು, ಗ್ರಾಮದ ಪ್ರಮುಖರನ್ನು ಗೌರವಿಸಲಾಯಿತು. ಸತ್ಯನಾರಾಯಣ, ರೇಖಾ ನಿರೂಪಿಸಿದರು. ವಿಷ್ಣುಕಾಂತ ಠಾಕೂರ್ ಸ್ವಾಗತಿಸಿದರು. ಸಚಿನ್ ವಂದಿಸಿದರು.

'ಸಾಧನೆ ಕಠಿಣ ಪರಿಶ್ರಮ ಜೀವಿಗಳ ಸ್ವತ್ತು'

ಕಲ್ಯಾಣ ಕರ್ನಾಟಕ ಪ್ರತಿಷ್ಠಾನದ ಅಧ್ಯಕ್ಷ ಬಾಳೂರೆ ಅಭಿಮತ

ಸಂ.ಕ.ಸಮಾಚಾರ ಹುಮನಾಬಾದ್ : ಸಾಧನೆ ಸೋಂಬೇರಿಗಳ ಸ್ವತ್ತಲ್ಲ, ಕಠಿಣ ಪರಿಶ್ರಮ ಜೀವಿಗಳ ಸ್ವತ್ತಾಗಿದೆ ಎಂದು ಕಲ್ಯಾಣ ಕರ್ನಾಟಕ ಪ್ರತಿಷ್ಠಾನ ಅಧ್ಯಕ್ಷ ಪಂಡಿತ್ ಕೆ.ಬಾಳೂರೆ ಅವರು ಅಭಿಪ್ರಾಯಪಟ್ಟರು.

ನಗರದ ವಿಶ್ವಭಾರತಿ ಶಿಕ್ಷಣ ಸಂಸ್ಥೆ ವಿದ್ಯಾನಿಕೇತನ ಸಭಾಂಗಣದಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ 600ಕ್ಕೂ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗಾಗಿ ಕಲ್ಯಾಣ ಕರ್ನಾಟಕ ಪ್ರತಿಷ್ಠಾನ ಬುಧವಾರ ಏರ್ಪಡಿಸಿದ್ದ ಸಾಧಕ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಮಾತನಾಡಿ, ಸಾಧಿಸುವ ಇಚ್ಚಾಶಕ್ತಿ ಇದ್ದರೇ ಏನು ಬೇಕಾದರೂ ಸಾಧಿಸಲು ಸಾಧ್ಯ. ಅದಕ್ಕೆ ತಮಿಳುನಾಡಿನಲ್ಲಿ ಚಿತ್ರನಟ ವಿಜಯ್ ಜೋಸೆಫ್ ಅವರು ಪಕ್ಷ ಸ್ಥಾಪಿಸಿದ ಕೇವಲ 3ವರ್ಷಗಳಲ್ಲಿ ಪ್ರಥಮ ಚುನಾವಣೆಯಲ್ಲೇ 108ಸ್ಥಾನಗಳಲ್ಲಿ ಗೆಲುವು ಸಾಧಿಸಿರುವುದಕ್ಕೆ ಜನ ಬೆಂಬಲ ಜೊತೆಯಲ್ಲಿ ಅವರಲ್ಲಿದ್ದ ಆತ್ಮವಿಶ್ವಾಸವೇ ಕಾರಣ. ಕ್ಷೇತ್ರ ಯಾವುದೇ ಆಗಿರಲಿ ಸಾಧಿಸುವ ಛಲ ಇರಬೇಕು ಎಂದು ಮಾರ್ಮಿಕವಾಗಿ ನುಡಿದರು.

ವಿದ್ಯಾನಿಕೇತನ ಶಿಕ್ಷಣ ಮತ್ತು ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ರಾಜಕುಮಾರ ಕೆ.ಭೂರೇಶ ಮಾತನಾಡಿ, ವಿದ್ಯಾರ್ಥಿಗಳನ್ನು ಪ್ರೋತ್ಸಹಿಸುತ್ತಿರುವ ಕಲ್ಯಾಣ ಕರ್ನಾಟಕ ಪ್ರತಿಷ್ಠಾನ ಕಾರ್ಯ ಪ್ರಶಂಸನೀಯ ಎಂದು ಬಣ್ಣಿಸಿದರು. ವಿಶ್ವೇಶ್ವರಯ್ಯ ಆಂಗ್ಲ ಮಾಧ್ಯಮ ಶಾಲೆ ಮುಖ್ಯಶಿಕ್ಷಕ ಡ್ಡಯಾನಿಯಲ್ ಕೆ.ಭೂರೇಶ, ವಿಶ್ವಭಾರತಿ ಸಾಲೆಯ ಮುಖ್ಯಶಿಕಲ್ಷಕಿ ಚೆನ್ನಮ್ಮ ಪಾಟೀಲ, ಪ್ರತಿಷ್ಠಾನ ಉಪಾಧ್ಯಕ್ಷ ವಿಕಾಸ ಭೀಮಶೆಟ್ಟಿ, ವಿನೋದ ಭೀಮಶೆಟ್ಟಿ, ಗ್ಲೋಬಲ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಸುರೇಶ ನವಣಿ, ಕೆಕೆಪಿ ಸದಸ್ಯ ಕಪೀಲ ಬಂಧು, ವಿನಾಯಕ ಚೆಟ್ಟಿ ವೇದಿಕೆಯಲ್ಲಿದ್ದರು.

ಹುಮನಾಬಾದ್: ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ 600ಕ್ಕೂ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳನ್ನು ಕಲ್ಯಾಣ ಕರ್ನಾಟಕ ಪ್ರತಿಷ್ಠಾನ ವತಿಯಿಂದ ನಗರದ ವಿಶ್ವಭಾರತಿ ಶಾಲೆಯಲ್ಲಿ ಬುಧವಾರ ಸನ್ಮಾನಿಸಲಾಯಿತು. ಪ್ರತಿಷ್ಠಾನ ಅಧ್ಯಕ್ಷ ಪಂಡಿತ್ ಕೆ.ಬಾಳೂರೆ, ಸಂಸ್ಥೆ ಅಧ್ಯಕ್ಷ ರಾಜಕುಮಾರ ಕೆ.ಭೂರೇಶ ಮತ್ತಿತರರಿದ್ದರು.

ಈ ವೇಳೆ ಸಾಧಕ ವಿದ್ಯಾರ್ಥಿನಿ 615ಅಂಕ ಪಡೆದು ರಾಜ್ಯಕ್ಕೆ 121ನೇ ರ‍್ಯಾಂಕ್ ವಿಜೇತರಾದ ವಿಶ್ವೇಶ್ವರಯ್ಯ ಆಂಗ್ಲ ಮಾಧ್ಯಮ ಶಾಲೆ ಆಂಜಿಲ್ ರೂಸ್ಸಿ, 605ಅಂಕ ಪಡೆದ ದುಶ್ಯಂತ–606, ಗಂಗಾ ಭದ್ರಪ್ಪ, 607, ಭವಾನಿ 605ಮತ್ತಿತರರಿನ್ನು ಸನ್ಮಾನಿಸಿ, ಅಭಿನಂದಿಸಲಾಯಿತು.

ಸಂಯುಕ್ತ ಕರ್ನಾಟಕ
ಹುಬ್ಬಳ್ಳಿ-ಬೆಂಗಳೂರು-ಕಲಬುರಗಿ
ನಮ್ಮ ಕಲಬುರಗಿ ಆವೃತ್ತಿಯ ಕಚೇರಿ ಸ್ಥಳಾಂತರಗೊಂಡಿದೆ
: ನೂತನ ವಿಳಾಸ :
ನಂ. 1-94, 'ಶ್ರೀಕುಂಜ'
ಮಿನಿ ವಿಧಾನಸೌಧದ ಎದುರು, ಆರ್ ಬಂಗ್ಲೋ ಸ್ಟೇಷನ್ ಏರಿಯಾ, ಮುಖ್ಯ ರಸ್ತೆ,
ಕಲಬುರಗಿ – 585 102
ಮೊ: 9449985695-9481000249

ಮಾಜಿ ಶಾಸಕ ಪ್ರಕಾಶ ಖಂಡ್ರೆ ಹೇಳಿಕೆ। ಆಮಂತ್ರಣ ಪತ್ರಿಕೆ ಬಿಡುಗಡೆ। 9 ರಂದು ಚಿತ್ರದುರ್ಗದಲ್ಲಿ ಅಭಿಮಾನೋತ್ಸವ

'ಕರ್ನಾಟಕಕ್ಕೆ ಬಿ.ಎಸ್. ಯಡಿಯೂರಪ್ಪ ಕೊಡುಗೆ ಅಪಾರ'

ಸಂ.ಕ.ಸಮಾಚಾರ ಭಾಲ್ಕಿ: ಬಿ ಎಸ್ ಯಡಿಯೂರಪ್ಪ ರಾಜ್ಯದ ಮುಖ್ಯಮಂತ್ರಿಯಾಗಿ ಹಲವಾರು ಯೋಜನೆಗಳು ಅನುಷ್ಠಾನಗೊಳಿಸಿ ಕರ್ನಾಟಕ ಪ್ರಗತಿ ಪಥದತ್ತ ಕೊಂಡೊಯುವಲ್ಲಿ ಅವರ ಕೊಡುಗೆ ಅಪಾರವಾಗಿದೆ ಎಂದು ಮಾಜಿ ಶಾಸಕ ಪ್ರಕಾಶ ಖಂಡ್ರೆ ಹೇಳಿದರು.

ಪಟ್ಟಣದ ಬಿಜೆಪಿ ಕಛೇರಿಯಲ್ಲಿ ಬಿಎಸ್ ಯಡಿಯುರಪ್ಪ ಅವರ ಅಭಿಮಾನೋತ್ಸವ ಪ್ರಯುಕ್ತ ಕರೆದ ಪತ್ರಿಕಾಗೋಷ್ಠಿಯಲ್ಲಿ ಆಮಂತ್ರಣ ಪತ್ರಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಮೇ 09 ರಂದು ಚಿತ್ರದುರ್ಗದಲ್ಲಿ ನಡೆಯುವ ಬಿಎಸ್‌ವಾಯ್ ಅಭಿಮಾನೋತ್ಸವ ಸಮಾರಂಭ ದೇಶದ ಗೃಹಸಚಿವ ಅಮೀತಶಾ ಉದ್ಘಾಟಿಸಲಿದ್ದು,ಸಂಸದ ಗೋವಿಂದ ಕಾರಜೋಳ ಅಧ್ಯಕ್ಷತೆವಹಿಸಲಿದ್ದಾರೆ.ಭಾಲ್ಕಿಯಿಂದ ಸಾವಿರಾರು ಜನ ಭಾಗವಹಿಸಲಿದ್ದಾರೆ. ಜಾತ್ಯಾತೀತ,ಪಕ್ಷಾತೀತವಾಗಿ ನಡೆಯುವ ಕಾರ್ಯಕ್ರಮದಲ್ಲಿ ಡಾ.ಶಿವುಕುಮಾರ ಮಹಾಸ್ವಾಮೀಜಿ,ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಸೇರಿದಂತೆ ಸಾವಿರಾರು ಜನ ಭಾಲ್ಕಿಯಿಂದ ಭಾಗವಹಿಸಲಿದ್ದಾರೆ ಎಂದು ಹೇಳಿದರು. ತಾಲೂಕು ಬಿಜೆಪಿ ಮಂಡಲ ಅಧ್ಯಕ್ಷ ವೀರಣ್ಣ ಕಾರಬಾರಿ ಮಾತನಾಡಿ, ಬಿಎಸ್‌ವಾಯ್ ಅವರು 50 ವರ್ಷ ಯಶಸ್ವಿ ರಾಜಕೀಯ ಜೀವನ ಕಳೆದ ಒಬ್ಬ ಶ್ರೇಷ್ಠ ನಾಯಕ.ಎಲ್ಲ ಸಮುದಾಯದ ಏಳಿಗೆಗಾಗಿ ಹಗಲಿರಳು ಶ್ರಮಿಸಿದ ಕೀರ್ತಿ ಬಿಎಸ್‌ವಾಯ್ ಅವರಿಗೆ ಸಲ್ಲುತ್ತದೆ.ಅವರ ಅಭಿಮಾನೋತ್ಸವ ಸಮಾರಂಭದಲ್ಲಿ ಹೆಚ್ಚಿನ ಜನ ಭಾಗಿಯಾಗಿ ಕಾರ್ಯಕ್ರಮಕ್ಕೆ ಶೋಭೆ ತರಬೇಕು ಎಂದು ಮನವಿ ಮಾಡಿದರು. ಬಿಜೆಪಿಯ ಹಿರಿಯ ಧುರೀಣ ಶಿವರಾಜ ಗಂದಗೆ ಮಾತನಾಡಿ,ಬಿಎಸ್‌ವಾಯ್ ಅವರು ರಾಜಕೀಯ ಜೀವನದಲ್ಲಿ ಹಲವು ಏಳು–ಬೀಳು ಕಂಡವರು.ಪ್ರಸ್ತುತವಾಗಿ ಕರ್ನಾಟಕದಲ್ಲಿ ಆಡಳಿತ ವಿರೋಧಿ ಅಲೆ ಆರಂಭವಾಗಿದೆ.2028ರ ಚುನಾವಣೆಯಲ್ಲಿ ಭಾಲ್ಕಿಯಲ್ಲಿ ಬಿಜೆಪಿ ಬಾವುಟ ಹಾರುವುದು ಗ್ಯಾರಂಟಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸುಭಾಷರಾವ ಬಿರಾದಾರ, ಕಾರ್ಯದರ್ಶಿ ಗೋವಿಂದರಾವ ಬಿರಾದಾರ,ವಿಜಯಕುಮಾರ ಪಾಟೀಲ್,ಮಂಡಲ ಕಾರ್ಯದರ್ಶಿ ರೇವಣಸಿದ್ಧ ಜಾಡರ್ ,ಮನ್ಮತ ಸ್ವಾಮಿ ಇತರರಿದ್ದರು.

ಭಾಲ್ಕಿಯ ಬಿಜೆಪಿ ಕಛೇರಿಯಲ್ಲಿ ಬಿಎಸ್ ಯಡಿಯುರಪ್ಪ ಅವರ ಅಭಿಮಾನೋತ್ಸವ ಸಮಾರಂಭದ ಆಮಂತ್ರಣ ಪತ್ರಿಕೆ ಮಾಜಿ ಶಾಸಕ ಪ್ರಕಾಶ ಖಂಡ್ರೆ ನೇತೃತ್ವದಲ್ಲಿ ಬಿಡುಗಡೆ ಮಾಡಲಾಯಿತು.

> 'ತಳಮಟ್ಟದಿಂದ ಬಿಜೆಪಿ ಪಕ್ಷ ಕಟ್ಟಿ ಬೆಳೆಸಿದ ಕೀರ್ತಿ ಬಿಎಸ್‌ವಾಯ್ ಅವರಿಗೆ ಸಲ್ಲುತ್ತದೆ.ಬಿಎಸ್‌ವಾಯ್ ಅವರ ಜನಪರ,ರೈತಪರ ಕಾರ್ಯಗಳು ಇಂದಿಗೂ ಜೀವಂತವಾಗಿವೆ. ಕೃಷಿ ಬಜೇಟ್,ಭಾಗ್ಯಲಕ್ಷ್ಮೀ ಯೋಜನೆ, ಉಚಿತ ಪಂಪಸೆಟ್ ,ವಿದ್ಯಾರ್ಥಿನೀಯರಿಗಾಗಿ ಬೈಸಿಕಲ್ ವಿತರಣೆ ,ಬಡ್ಡಿರಹಿತ ಸಾಲ ಜನಪ್ರೀಯಗೊಂಡಿವೆ.'
> ■ ಪ್ರಕಾಶ ಖಂಡ್ರೆ ಮಾಜಿ ಶಾಸಕ ಭಾಲ್ಕಿ.

ಜನಪರ ಆಡಳಿತಕ್ಕೆ ಜನ ಮನ್ನಣೆ : ತಾಳಂಪಳ್ಳಿ

ಬಸವಕಲ್ಯಾಣ: ರಾಜ್ಯದಲ್ಲಿ ನಡೆದ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ ಪಕ್ಷದ ಅಭ್ಯರ್ಥಿಗಳು ಪ್ರಚಂಡ ಬಹುಮತದಿಂದ ಗೆಲವು ಸಾಧಿಸಿರುವುದಕ್ಕೆ ಕೆಪಿಸಿಸಿ ಸಹಕಾರ ವಿಭಾಗದ ರಾಜ್ಯಾಧ್ಯಕ್ಷ ಧನರಾಜ ತಾಳಂಪಳ್ಳಿ ಹರ್ಷ ವ್ಯಕ್ತಪಡಿಸಿದ್ದಾರೆ.

ರಾಜ್ಯ ಕಾಂಗ್ರೆಸ ಸರ್ಕಾರ ಜಾರಿಗೆ ತಂದ ಪಂಚ ಗ್ಯಾರಂಟಿ ಯೋಜನೆಗಳು ಹಾಗೂ ಜನಪರ ಆಡಳಿತ ಮೆಚ್ಚಿ ಈ ಎರಡು ಕ್ಷೇತ್ರದ ಮತದಾರರು ಕಾಂಗ್ರೆಸ ಅಭ್ಯರ್ಥಿಗಳನ್ನು ಪ್ರಚಂಡ ಬಹುಮತದಿಂದ ಗೆಲ್ಲಿಸಿದ್ದಾರೆ. ಪಂಚ ರಾಜ್ಯ ವಿಧಾಸಭಾ ಚುನಾವಣೆಯಲ್ಲಿ ಕೇರಳ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ ಮತ್ತು ಯುಡಿಎಫ್ ಮೈತ್ರಿ ಅತಿ ಹೆಚ್ಚು ಸ್ಥಾನಗಳು ಗೆಲ್ಲುವ ಮೂಲಕ ಸರ್ಕಾರ ರಚನೆ ಮಾಡುತ್ತಿದೆ ಎಂದು ತಾಳಂಪಳ್ಳಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ತೆರಿಗೆ ರಿಯಾಯಿತಿಗೆ ಕಾಲಾವಕಾಶ

ಸಂಕ ಸಮಾಚಾರ ಚಿಟಗುಪ್ಪ : ಸಕಾಲದಲ್ಲಿ ಚಿಟಗುಪ್ಪ ಪುರಸಭೆಗೆ ತೆರಿಗೆ ಪಾವತಿಸಿ ಶೇ5 ರಷ್ಟು ತೆರಿಗೆ ರಿಯಾಯತಿ ಪಡೆಯಲು ದಿನಾಂಕ 30 ಎಪ್ರಿಲ್ ವರೆಗೆ ಸರ್ಕಾರ ಕಾಲಾವಕಾಶ ನೀಡಿತ್ತು, ಆದರೆ ಈಗ ಸರ್ಕಾರ ದಿ 31 ಮೇ ವರೆಗೆ ಆಸ್ತಿ ತೆರಿಗೆ ಪಾವತಿಸಿ ತೆರಿಗೆ ರಿಯಾಯತಿ ಪಡೆಯಲು ಕಾಲಾವಕಾಶ ನೀಡಿದೆ.ಆದಕಾರಣ ಪುರಸಭೆ ವಾಸಿಗಳು 2026/27 ನೇ ಸಾಲಿನ ತಮ್ಮ ಆಸ್ತಿ ತೆರಿಗೆಯನ್ನು ಪಾವತಿಸಿ ಶೇ5ರಷ್ಟು ರಿಯಾಯತಿ ಪಡೆಯಬೇಕು ಹಾಗು ಈ ಹಿಂದಿನ ವರ್ಷಗಳ ಆಸ್ತಿ ತೆರಿಗೆ ನೀರಿನ ತೆರಿಗೆ ಹಾಗು ಉದ್ದಿಮೆ ಪರವಾನಗಿ ತೆರಿಗೆಯನ್ನು ಪಾವತಿಸಿ ಪಟ್ಟಣದ ಅಭಿವೃದ್ದಿಗೆ ಸಹಕರಿಸಬೇಕೆಂದು ಪುರಸಭೆ ಮುಖ್ಯಾಧಿಕಾರಿ ಸತೀಶ ಗುಡ್ಡೆ ಮನವಿ ಮಾಡಿದ್ದಾರೆ.

ಚಿಟಗುಪ್ಪದಲ್ಲಿ ಡಯಾಲಿಸಿಸ್ ಕೇಂದ್ರ ಆರಂಭ

ಸಂಕ ಸಮಾಚಾರ ಚಿಟಗುಪ್ಪ: ಪಟ್ಟಣದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕೆಲದಿನಗಳ ಹಿಂದೆ ಡಯಾಲಿಸಿಸ್ ಕೇಂದ್ರ ಆರಂಭಗೊಂಡಿದ್ದು ಈ ಭಾಗದ ಜನರ ಬಹುದಿನಗಳ ಬೇಡಿಕೆ ಈಡೇರಿದೆ ಹಾಗು ಕಿಡ್ನಿ ರೋಗಿಗಳಿಗೆ ವರದಾನವಾಗಿದೆ.

ಮಾನವ ದೇಹದಲ್ಲಿ ಮೂತ್ರಪಿಂಡಗಳು[ಕಿಡ್ನಿ] ರಕ್ತವನ್ನು ಶುದ್ಧೀಕರಿಸುವ ಪ್ರಮುಖ ಕಾರ್ಯ ನಿರ್ವಹಿಸುತ್ತವೆ. ಆದರೆ ಕಿಡ್ನಿ ಸರಿಯಾಗಿ ಕೆಲಸ ಮಾಡದ ಸಮಯದಲ್ಲಿ ನಮ್ಮ ದೇಹದಲ್ಲಿ ವಿಷಕಾರಿ ಪಧಾರ್ಥಗಳು ಹಾಗು ಅನಗತ್ಯ ದ್ರವಗಳು ಸಂಗ್ರಹವಾಗುತ್ತವೆ, ಇಂತಹ ಸಮಯದಲ್ಲಿ ಯಂತ್ರದ ಮೂಲಕ ರಕ್ತವನ್ನು ಶುದ್ಧೀಕರಿಸುವ ಪ್ರಕ್ರಿಯೆಗೆ ಡಯಾಲಿಸಿಸ್ ಎನ್ನುವರು. ಟಯಾಲಿಸಿಸ್ ಕಿಡ್ನಿ ವೈಫಲ್ಯ ಹೊಂದಿದ ರೋಗಿಗಳಿಗೆ ಜೀವ ಉಳಿಸುವ ಚಿಕಿತ್ಸೆಯಾಗಿದೆ.

ಈ ಹಿಂದೆ ಇಲ್ಲಿ ಡಯಾಲಿಸಿಸ್ ಚಿಕಿತ್ಸೆ ಇರದ ಕಾರಣ ಜನರು ಜಿಲ್ಲಾ ಸರ್ಕಾರಿ ಆಸ್ಪತ್ರೆ ಬೀದರ್ ಅಥವಾ ದೊಡ್ಡ ನಗರಗಳಾದ ಹೈದ್ರಾಬಾದ, ಸೋಲಾಪೂರ್, ಕಲಬುರಗಿಯ ಖಾಸಗಿ ಆಸ್ಪತ್ರೆಗಳಿಗೆ ಹೋಗಬೇಕಾಗಿತ್ತು, ಇದರಿಂದ ಗ್ರಾಮೀಣ ಜನರು ಆರ್ಥಿಕ ಮತ್ತು ಸಮಯದ ಸಂಕಷ್ಟ ಅನುಭವಿಸುತ್ತಿದ್ದರು. ಈಗ ಚಿಟಗುಪ್ಪ ಪಟ್ಟಣದಲ್ಲಿಯೇ ಈ ಸೌಲಭ್ಯ ಉಚಿತವಾಗಿ ಲಭ್ಯವಾಗಿರುವುದರಿಂದ ಪಟ್ಟಣ ಹಾಗು ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಸುಲಭವಾಗಿ ಚಿಕಿತ್ಸೆ ಲಭಿಸಲಿದೆ. ರಾಜ್ಯ ಸರ್ಕಾರ ಈ ಯೋಜನೆಗೆ ಹಣ ನೀಡಲಿದ್ದು ದೆಹಲಿ ಮೂಲದ ಡಿಸಿಡಿಸಿ ಕಿಡ್ನಿ ಕೇರ್ ಎಂಬ ಸಂಸ್ಥೆ ಡಯಾಲಿಸಿಸ್ ಮಷಿನ್ ಅಳವಡಿಕೆ ಹಾಗು ನಿರ್ವಹಣೆಯ ಗುತ್ತಿಗೆ ಪಡೆದಿದೆ.

ಚಿಟಗುಪ್ಪ ಪಟ್ಟಣದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿನ ಡಯಾಲಿಸಿಸ್ ಕೋಣೆ.

ಡಯಾಲಿಸಿಸ್ ನ ಎರಡು ಮಷಿನ್‌ಗಳಿದ್ದು ಇಬ್ಬರು ನಿರ್ವಹಣಾ ತಂತ್ರಜ್ಞರೂ ಸೇರಿ ಮೂವರು ಸಿಬ್ಬಂದಿಗಳಿದ್ದಾರೆ. ಈಗ ಸದ್ಯ ಐದು ಜನರಿಗೆ ಸರದಿ ಪ್ರಕಾರ ಡಯಾಲಿಸಿಸ್ ಚಿಕಿತ್ಸೆ ನೀಡಲಾಗುತ್ತಿದೆ, ಎಂಟು ಜನರು ಚಿಕಿತ್ಸೆಗಾಗಿ ನೊಂದಣಿ ಮಾಡಿಸಿದ್ದಾರೆ, ಡಯಾಲಿಸಿಸ್ ಚಿಕಿತ್ಸೆಯು ಅತ್ಯಂತ ನಾಜೂಕಾಗಿದ್ದು ಐಸಿಯು ಘಟಕಕ್ಕೆ ಸಮನಾಗಿದೆ ಡಯಾಲಿಸಿಸ್ ಘಟಕಕ್ಕೆ ಎಲ್ಲ ಮೂಲಸೌಕರ್ಯಗಳನ್ನು ಕಲ್ಪಿಸಲಾಗಿದೆ ಎಂದು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ವಿಜಯ ಹಿರಾಸ್ಕರ್ ಮಾಹಿತಿ ನೀಡಿದ್ದಾರೆ.

ಸರ್ಕಾರ ಈ ರೀತಿಯ ಆರೋಗ್ಯ ಸೇವೆಗಳನ್ನು ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸುತ್ತಿರುವುದು ಶ್ಲಾಘನೀಯ, ಚಿಟಗುಪ್ಪ ಡಯಾಲಿಸಿಸ್ ಕೇಂದ್ರವು ಅನೇಕ ಕಿಡ್ನಿ ಸಂಬಂಧಿತ ರೋಗಿಗಳಿಗೆ ಹೊಸ ಬದುಕು ನೀಡುವಲ್ಲಿ ಮಹತ್ವದ ಹೆಜ್ಜೆಯಾಗಿದ್ದು ಗ್ರಾಮೀಣ ಭಾಗದ ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಉಡಬಾಳ ಗ್ರಾಮದ ರಘು ಹೇಳಿದ್ದಾರೆ.

ಆಧಾರ್ ಹೌಸಿಂಗ್ ಫೈನಾನ್ಸ್ ಲಿ.

Aadhar Housing Finance Ltd

ಕಾರ್ಪೊರೇಟ್ ಕಛೇರಿ: ಕಛೇರಿ ಸಂಖ್ಯೆ 501 & 503, 5ನೇ ಮಹಡಿ, ಲೈಟ್‌ಬ್ರಿಡ್ಜ್, ಸಖಿ ವಿಹಾರ ರಸ್ತೆ, ಅಂದೇರಿ ಪೂರ್ವ, ಮುಂಬಯಿ ಸಬ್‌ಅರ್ಬನ್ (ಜಿಲ್ಲೆ), ಮಹಾರಾಷ್ಟ್ರ–400072.
ಬೀದರ್ ಶಾಖೆ: ಶಿಂಧೆ ಕಾಂಪ್ಲೆಕ್ಸ್, ಮೊದಲ ಮಹಡಿ, ಸಿಎಂಸಿ ನಂ.8–10–243/244, ನ್ಯೂ ಹೌಸಿಂಗ್ ಕಾಲೋನಿ, ಕೆಇಬಿ ರಸ್ತೆ, ಶರ್ಮಾ ಸ್ವೀಟ್ಸ್ ಎದುರು, ಹಳೇ ಬಸ್ ನಿಲ್ದಾಣದ ಹತ್ತಿರ, ಮೋಹನ್ ಮಾರುಕಟ್ಟೆ, ಬೀದರ್, ಕರ್ನಾಟಕ–585401.
ಹುಮನಾಬಾದ್ ಶಾಖೆ: ಏಷ್ಯನ್ ಪ್ಲಾಜಾ, ಟಿಎಂಸಿ ಸಂಖ್ಯೆ.22–419, ಸರ್ವೆ ಸಂಖ್ಯೆ.461 & 462, ಮೊದಲ ಮಹಡಿ, ಗಡಾ ಪೆಟ್ರೋಲ್ ಬಂಕ್, ಹುಮನಾಬಾದ್, ಬೀದರ್ ಜಿಲ್ಲೆ, ಕರ್ನಾಟಕ–585330.

ಡಿಮಾಂಡ್ ನೋಟೀಸ್

ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 3(1) ಓದಿಕೊಂಡಂತೆ ಆರ್ಥಿಕ ಸ್ವತ್ತಿನ ಭದ್ರತೆ ಮತ್ತು ಪುನರ್‌ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಅಧಿನಿಯಮ, 2002ರ ಸೆಕ್ಷನ್ 13(2) ಅನ್ವಯ. ಕೆಳಸಹಿದಾರರು ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್‌ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಅಧಿನಿಯಮ, 2002ರ (ಸದರಿ ಅಧಿನಿಯಮ) ಅನ್ವಯ ಆಧಾರ್ ಹೌಸಿಂಗ್ ಫೈನಾನ್ಸ್ ಲಿ. (ಎಹೆಚ್‌ಎಫ್‌ಎಲ್)ನ ಅಧಿಕೃತ ಅಧಿಕಾರಿಯಾಗಿರುವರು. ಭದ್ರತಾ ಆಸಕ್ತಿ ಜಾರಿ ನಿಯಮಗಳು, 2002ರ ನಿಯಮ 3ನ್ನು ಓದಿಕೊಂಡಂತೆ ಸದರಿ ಅಧಿನಿಯಮದ ಸೆಕ್ಷನ್ 13(12)ರ ಅನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಸಾಲಗಾರರಿಗೆ ನೀಡಲಾಗಿರುವ ಈ ಕೆಳಗೆ ತಿಳಿಸಿರುವ ಸಂಬಂಧಪಟ್ಟ ಡಿಮಾಂಡ್ ನೋಟೀಸ್‌ನಲ್ಲಿ(ಗಳಲ್ಲಿ) ತಿಳಿಸಿರುವ ಸಾಲದ ಬಾಕಿ ಮೊತ್ತವನ್ನು ಮರುಪಾವತಿ ಮಾಡುವಂತೆ ಕೆಳಕಂಡ ಸಾಲಗಾರರಿಗೆ(ರುಗಳಿಗೆ) ಕರೆ ನೀಡಿ ಸದರಿ ಅಧಿನಿಯಮದ ಪ್ರಕರಣ 13(2)ರ ಅನ್ವಯ ಕೆಳಸಹಿದಾರರು ಡಿಮಾಂಡ್ ನೋಟೀಸ್ ನೀಡಿದ್ದರು. ಮೇಲೆ ತಿಳಿಸಿದ ವಿಚಾರದ ಸಂಬಂಧದಲ್ಲಿ ಸದರಿ ಸಾಲಗಾರ(ರು) ಬರೆದುಕೊಟ್ಟಿರುವ ಯಾವುದೇಇತರೆ ದಾಖಲೆ ಪತ್ರಗಳು ಬರಹಗಳನ್ನು ಓದಿಕೊಂಡಂತೆ ಸಾಲದ ಒಪ್ಪಂದ ಪತ್ರದ ಅನ್ವಯ ಪಾವತಿ ಮಾಡಬೇಕಿರುವ ಬಾಕಿ ಮೊತ್ತವನ್ನು ಕೆಳಗೆ ತಿಳಿಸಿರುವ ದಿನಾಂಕಗಳಿಂದ ಪಾವತಿ ಮಾಡುವವರೆಗೆ ಮತ್ತು ಅಥವಾ ಸಂದಾಯವಾಗುವ ದಿನಾಂಕದವರೆಗೆ ಸದರಿ ಡಿಮಾಂಡ್ ನೋಟೀಸ್‌ನಲ್ಲಿ (ಗಳಲ್ಲಿ ವಿವರಿಸಿರುವಂತೆ ಮುಂದಿನ ಬಡ್ಡಿಯ ಜೊತೆಗೆ ಈ ಕೆಳಗೆ ತಿಳಿಸಿರುವ ಮೊತ್ತವನ್ನು ಸದರಿ ನೋಟೀಸ್ ಪ್ರಕಟವಾದ 60 ದಿನಗಳೊಳಗೆ ಎಹೆಚ್‌ಎಫ್‌ಎಲ್ ಇವರಿಗೆ ಪಾವತಿ ಮಾಡುವಂತೆ ಸದರಿ ಸಾಲಗಾರನಿಗೆ(ರಿಗೆ) ಮತ್ತೊಮ್ಮೆ ಈ ಮೂಲಕ ನೋಟೀಸ್ ನೀಡಲಾಗಿದೆ. ಸಾಲದ ಮರುಪಾವತಿ ಭದ್ರತೆಯಾಗಿ ಅನುಕ್ರಮವಾಗಿ ಸದರಿ ಸಾಲಗಾರ(ರು) ಎಹೆಚ್‌ಎಫ್‌ಎಲ್ ಗೆ ಕೆಳಕಂಡ ಸ್ವತ್ತುಗಳನ್ನು ಆಧಾರ ಮಾಡಿದ್ದಾರೆ.

ಕ್ರ. ಸಂ	ಸಾಲಗಾರ(ರು) ಸಹ–ಸಾಲಗಾರರು ಜಾಮೀನುದಾರ(ರು) ಹೆಸರು	ಡಿಮಾಂಡ್ ನೋಟೀಸ್ ದಿನಾಂಕ ಮತ್ತು ಮೊತ್ತ	ಸ್ಥಿರಾಸ್ತಿಯ ವಿವರಣೆ
1	(ಲೋನ್ ಕೋಡ್: 31400000007 ಬೀದರ್ ಶಾಖೆ) ಬಿಜಾನ್ ಬೀ ಎಂ (ಸಾಲಗಾರರು) ಲೇಟ್. ಷರೀಪ್ ಎಂ (ಪ್ರತಿನಿಧಿಸುವವರು ಅವರ ಕಾನೂನುಬದ್ಧ ವಾರಸುದಾರರ ಮೂಲಕ) (ಸಹ ಸಾಲಗಾರರು)	14–04–2026 ರೂ. 5,48,629.00	ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ವಸತಿಯುತ ಮನೆಯ ಸಂಖ್ಯೆ 28/ಬಿ, ಇ–ಡಿಜಿಟಲ್ ಸ್ವತ್ತಿನ ಸಂಖ್ಯೆ 24–524–87, ಜೊತೆಗೆ ವಾರ್ಡ್ ಸಂಖ್ಯೆ 13, ವಿಸ್ತೀರ್ಣ ಪೂರ್ವ–ಪಶ್ಚಿಮ 9.14 ಮೀ & ಉತ್ತರ–ದಕ್ಷಿಣ 12.19 ಮೀಟರ್, ಒಟ್ಟು ವಿಸ್ತೀರ್ಣ 111.48 ಚದರ ಮೀಟರ್, ನಿರ್ಮಿತ ಪ್ರದೇಶ 92.9 ಚದರ ಮೀಟರ್, ಔರಾದ್[ಬಿ] ಪಟ್ಟಣದ ಸರ್ವೆ ಸಂಖ್ಯೆ 86/3, ನಗರ ಔರಾದ್[ಬಿ], ತಾಲ್ಲೂಕು ಔರಾದ್[ಬಿ] ಜಿಲ್ಲೆ: ಬೀದರ್. ಚಕ್ಕುಬಂಧಿ : ಪೂರ್ವ: ದಿಲೀಪ್ ಅವರ ಮನೆ, ಪಶ್ಚಿಮ: ವಸಂತ ಪಟಗಿ ಅವರ ಭೂಮಿ, ಉತ್ತರ: ಯಾದವ್ ರಾವ್ ಅವರ ಪ್ಲಾಟ್ ಮತ್ತು ದಕ್ಷಿಣ: ಸಾರ್ವಜನಿಕ ರಸ್ತೆ.
2	(ಲೋನ್ ಕೋಡ್: : 31410000134 ಬೀದರ್ ಶಾಖೆ) ಬಸವರಾಜ ಕೆ (ಸಾಲಗಾರರು) ಮಾಲಮ್ಮ ಬಿ (ಸಹ ಸಾಲಗಾರರು)	14–04–2026 ರೂ. 3,93,478.00	ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ಶ್ರೀಮತಿ ಮಾಲಮ್ಮ ಕೋಂ. ಬಸವರಾಜ್ ಬಸ್ನಾಲೆ, ಸುಮಾರು 38 ವರ್ಷ ವಯಸ್ಸಿನವರು, ಮನೆಯ ಉದ್ಯೋಗ, ಸ್ಥಿರಾಸ್ತಿ ಮಾಲೀಕರು ಮತ್ತು ಸ್ವಾಧೀನದಲ್ಲಿರುವ ಮನೆಯ ಜಿಪಿ ಸಂಖ್ಯೆ: 1–206.ಇದರ ಇ–ಸ್ವತ್ತಿನ ಸಂಖ್ಯೆ: 15060010 2400220026. ಇದರ ವಿಸ್ತೀರ್ಣ ಪೂರ್ವ–ಪಶ್ಚಿಮ: 5.66928 ಚದರ ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ : 7.19328 ಮೀಟರ್, ಒಟ್ಟು ವಿಸ್ತೀರ್ಣ 40.78 ಚದರ ಮೀಟರ್‌ಗಳು, ಆರ್‌ಸಿಸಿ ಛಾವಣಿ ಮತ್ತು ಕಿಟಕಿಗಳಿಂದ ಎರಡು ಕೊಠಡಿಗಳನ್ನು ಒಳಗೊಂಡಿದೆ. ಫಾರೆಸ್ಟ್ ಬಾಬುಲ್ ಮರದಿಂದ ಮಾಡಲ್ಪಟ್ಟಿದೆ, ಮುಧೋಳ ಗ್ರಾಮ (ಬಿ), ತಾಲ್ಲೂಕು : ಕಮಲ್ ನಗರ, ಜಿಲ್ಲೆ: ಬೀದರ್. ಚಕ್ಕುಬಂಧಿ : ಪೂರ್ವಕ್ಕೆ: ಶಿವರಾಜ್ ಬಸ್ನಾಲೆಯವರ ಮನೆ, ಪಶ್ಚಿಮಕ್ಕೆ: ವೈಜನಾಥ್ ರಾವ್ ಬಸ್ನಾಲೆಯವರ ಮನೆ, ಉತ್ತರಕ್ಕೆ: ಸಿಸಿ ರಸ್ತೆ ಮತ್ತು ದಕ್ಷಿಣಕ್ಕೆ: ಶಿವರಾಜ್ ಬಸ್ನಾಲೆಯವರ ಮನೆ.
3	(ಲೋನ್ ಕೋಡ್: 37810000030 ಹುಮನಾಬಾದ್ ಶಾಖೆ) ಅಂಬ್ರೇಶ್ ಶರಣಪ್ಪ (ಸಾಲಗಾರರು) ನಾಗಮ್ಮ ಶರಣಪ್ಪ (ಸಹ ಸಾಲಗಾರರು) ಶರಣಪ್ಪ ಪಿ (ಜಾಮೀನುದಾರರು)	14–04–2026 ರೂ. 4,96,748.00	ಮನೆ ಮತ್ತು ತೆರೆದ ಸ್ಥಳದ ಜಿ.ಪಿ. ಆಸ್ತಿ ಸಂಖ್ಯೆ: 43 & ಆಸ್ತಿ ಸಂಖ್ಯೆ. 150600501000102038 ಅಳತೆ ಪೂರ್ವ–ಪಶ್ಚಿಮ : 10.36 ಮೀ & ಉತ್ತರ–ದಕ್ಷಿಣ 07.40 ಮೀ (ಒಟ್ಟು 108 ಚದರ ಮೀಟರ್) & ನಿರ್ಮಿಸಲಾಗಿರುವುದು 76.66 ಮೀ, ಸ್ಕೆಚ್ ನಕ್ಷೆಯ ಪ್ರಕಾರ, ಸರ್ವೆ ನಂ. 215/*/* ನಲ್ಲಿ ಇದೆ. ದುಬಲಗುಂಡಿ ಗ್ರಾಮ, ತಾಲ್ಲೂಕು : ಹುಮನಾಬಾದ್, ಜಿಲ್ಲೆ: ಬೀದರ್. ಚಕ್ಕುಬಂಧಿ ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಅಯ್ಯೂಬ್ ಮಿಯಾನ್ ಬಾಗವಾನ್ ಅವರ ಮನೆ, ಉತ್ತರಕ್ಕೆ: ರಸ್ತೆ ಮತ್ತು ದಕ್ಷಿಣಕ್ಕೆ: ನರೇಂದ್ರ ಪ್ರಭುರಾವ್ ಅವರ ಮನೆ.
4	(ಲೋನ್ ಕೋಡ್: 37810000076 ಹುಮನಾಬಾದ್ ಶಾಖೆ) ರಮೇಶ್ ಬಂಡೆಪ್ಪ (ಸಾಲಗಾರರು) ಸುಜಾತ ರಮೇಶ್ (ಸಹ ಸಾಲಗಾರರು)	14–04–2026 ರೂ. 14,85,360.00	ಆಸ್ತಿ ಶ್ರೀಮತಿ ಸುಜಾತ ಕೋಂ. ರಮೇಶ್ ಮೆಟೇಜ್, ವಯಸ್ಸು ಸುಮಾರು 41 ವರ್ಷ, ಉದ್ಯೋಗ ವ್ಯವಹಾರ, ಮಾಲೀಕರು ಮತ್ತು ಸ್ವಾಧೀನದಲ್ಲಿರುವ ಮನೆಯ ಸಿಸಿಸಿ ನಂ.21–29, ಇದರ ಪಿಐಡಿ ಸಂಖ್ಯೆ 1–102–27, ಅಳತೆ ಪೂರ್ವ–ಪಶ್ಚಿಮ 75–ಅಡಿ ಮತ್ತು ಉತ್ತರ–ದಕ್ಷಿಣ 49–ಅಡಿ, ಒಟ್ಟು ವಿಸ್ತೀರ್ಣ 3675 ಚದರ ಅಡಿ (341.4075 ಚದರ ಮೀಟರ್) ಬುಧವಾರಪೇಟೆ, ಬಸವಕಲ್ಯಾಣ ತಾಲ್ಲೂಕು ಮತ್ತು ಬೀದರ್ ಜಿಲ್ಲೆ. ಚಕ್ಕುಬಂಧಿ : ಪೂರ್ವಕ್ಕೆ : ಮೂರ್ಲಿಂಗೇಶ್ವರ ದೇವಸ್ಥಾನ, ಪಶ್ಚಿಮಕ್ಕೆ: ಶ್ರೀಮತಿ ಪಾರ್ವತಿಯವರ ಮನೆ, ಉತ್ತರಕ್ಕೆ : ದಾರಿ ಮತ್ತು ದಕ್ಷಿಣಕ್ಕೆ : ಬಾಬುರಾವ್ ಮತ್ತು ಅವರ ಸಹೋದರರ ಮನೆ.
5	(ಲೋನ್ ಕೋಡ್: 31410000366 ಬೀದರ್ ಶಾಖೆ) ಸೂರ್ಯಕಾಂತ್ (ಸಾಲಗಾರರು) ಸಿದ್ರಾಮ (ಸಹ ಸಾಲಗಾರರು)	14–04–2026 ರೂ. 4,36,294.00	ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ಮಾಲೀಕತ್ವ ಮತ್ತು ಸ್ವಾಧೀನಪಡಿಸಿಕೊಂಡಿರುವ ವಸತಿ ಕಟ್ಟಡದ ಜಿಪಿ ಸಂಖ್ಯೆ 349, ಸ್ವತ್ತಿನ ಸಂಖ್ಯೆ 150600 400900300355, ಅಳತೆ ಪೂರ್ವ–ಪಶ್ಚಿಮ 8.2296 ಮೀಟರ್ ಮತ್ತು ಉತ್ತರ–ದಕ್ಷಿಣ 12.192 ಮೀಟರ್‌ಗಳು, ಒಟ್ಟು ವಿಸ್ತೀರ್ಣ 100.34 ಚದರ ಮೀಟರ್‌ಗಳಿಗೆ ಸಮನಾಗಿರುತ್ತದೆ, ಇದರ ಸ್ತಂಭ ಪ್ರದೇಶದ ವಿಸ್ತೀರ್ಣ 100.34 ಚದರ ಮೀಟರ್‌ಗಳು, ಶ್ರೀಮಂಡಲ ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆ ಬೀದರ್. ಚಕ್ಕುಬಂಧಿಗಳು: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಯೆಶಪ್ಪ ಅವರ ಮನೆ, ಉತ್ತರಕ್ಕೆ: ಗುಂಡಪ್ಪ ಅವರ ಮನೆ ಮತ್ತು ದಕ್ಷಿಣಕ್ಕೆ: ಸ್ಯಾಮ್ಯುವೆಲ್ ಅವರ ಮನೆ.

ಸದರಿ ಸಾಲಗಾರರು ಮೇಲೆ ತಿಳಿಸಿರುವಂತೆ ಎಹೆಚ್‌ಎಫ್‌ಎಲ್‌ಗೆ ಸಾಲದ ಮೊತ್ತ ಮರುಪಾವತಿ ಮಾಡಲು ವಿಫಲರಾದಲ್ಲಿ ವೆಚ್ಚ ಮತ್ತು ಪರಿಣಾಮಗಳಿಗೆ ಸದರಿ ಸಾಲಗಾರರ ಸಂಪೂರ್ಣ ಹೊಣೆಗಾರಿಕೆಯಲ್ಲಿ ಅಧಿನಿಯಮದ ಪ್ರಕರಣ 13(4) ಮತ್ತು ಅನ್ವಯವಾಗುವ ನಿಯಮಗಳ ಅನ್ವಯ ಎಹೆಚ್‌ಎಫ್‌ಎಲ್ ಮೇಲೆ ತಿಳಿಸಿದ ಭದ್ರತೆಯುಳ್ಳ ಸ್ವತ್ತುಗಳ ಮೇಲೆ ಕ್ರಮ ಕೈಗೊಳ್ಳುವುದು. ಎಹೆಚ್‌ಎಫ್‌ಎಲ್ ನ ಪೂರ್ವಭಾವಿ ಲಿಖಿತ ಅನುಮತಿ ಇಲ್ಲದೆ ಮಾರಾಟ, ಗುತ್ತಿಗೆ ಅಥವಾ ಇನ್ನಿತರೆ ರೂಪದಲ್ಲಿ ಮೇಲೆ ತಿಳಿಸಿರುವ ಸ್ವತ್ತುಗಳನ್ನು ವರ್ಗಾವಣೆ ಮಾಡದಂತೆ ಅಧಿನಿಯಮದ ಅನ್ವಯ ಸದರಿ ಸಾಲಗಾರರನ್ನು ನಿಷೇಧಿಸಲಾಗಿದೆ. ಸದರಿ ಅಧಿನಿಯಮದ ಉಪಬಂಧಗಳನ್ನು ಅಥವಾ ಇದರಡಿ ರೂಪಿಸಿರುವ ನಿಯಮಗಳನ್ನು ಯಾರಾದರು ಉಲ್ಲಂಘಿಸಿದರೆ ಅಥವಾ ಉಲ್ಲಂಘಿಸಲು ನೆರವಾದದ್ದೇ ಆದರೆ ಅಂತಹವರು ಅಧಿನಿಯಮದ ಅನ್ವಯ ತಿಳಿಸಿರುವಂತೆ ಜೈಲು ಶಿಕ್ಷೆ ಮತ್ತು/ಅಥವಾ ಕಾಯ್ದೆಯ ಅನುಸಾರ ದಂಡ ಪಾವತಿಸಬೇಕಾಗುತ್ತದೆ.

ಸ್ಥಳ: ಬೀದರ್ ಮತ್ತು ಹುಮನಾಬಾದ್, ದಿನಾಂಕ : 07.05.2026
ಅಧಿಕೃತ ಅಧಿಕಾರಿ, ಆಧಾರ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ಸುದ್ದಿ ಮಿಂಚು

ವಾಡಿ: ಹಲಕರ್ಟಿ ಗ್ರಾಮದಲ್ಲಿ 1.50 ಕೋಟಿ ರೂ. ವೆಚ್ಚದ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಕೋಣೆಗಳ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

1.50 ಕೋಟಿ ರೂ. ವೆಚ್ಚದ ಕಾಮಗಾರಿಗೆ ಗುದ್ದಲಿ ಪೂಜೆ

ಸಂ.ಕ.ಸಮಾಚಾರ ವಾಡಿ: ಪಟ್ಟಣ ಸಮೀಪದ ಹಲಕರ್ಟಿ ಗ್ರಾಮದಲ್ಲಿ ಸುಮಾರು 1.50 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಕೋಣೆಗಳ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

ಗ್ರಾಮದ ಶ್ರೀ ಕಟ್ಟಿಮನಿ ಮಹಾಸಂಸ್ಥಾನ ಹಿರೇಮಠದ ಪೀಠಾಧಿಪತಿ ಅಭಿನವ ಮುನೀಂದ್ರ ಶಿವಾಚಾರ್ಯ ಮಹಾಸ್ವಾಮೀಜಿ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಗುಣಮಟ್ಟ ಶಿಕ್ಷಣದಿಂದ ಬಡ ಮಕ್ಕಳು ವಂಚಿತರಾಗುತ್ತಿದ್ದಾರೆ.

ಇದನ್ನು ಅರಿತ ಸರಕಾರ ಕೋಟ್ಯಂತರ ರೂ. ವೆಚ್ಚದಲ್ಲಿ ಸುಮಾರು 8 ಸುಸಜ್ಜಿತ ಶಾಲಾ ಕೋಣೆಗಳ ಕಟ್ಟಡಗಳ ನಿರ್ಮಾಣ ಮಾಡಲಾಗುತ್ತಿದೆ. ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಶಿಕ್ಷಕರು ಹೆಚ್ಚು ಶ್ರಮಿಸಬೇಕು. ಸರಕಾರಿ ಶಾಲೆಯಲ್ಲಿ ದೊರಕುವ ಸೌಲಭ್ಯಗಳ ಬಗ್ಗೆ ಪಾಲಕರಲ್ಲಿ ಅರಿವು ಮೂಡಿಸಬೇಕು ಎಂದು ಸ್ವಾಮೀಜಿ ತಿಳಿಸಿದರು.

ಮುಖಂಡರಾದ ಜಿಪಂ ಮಾಜಿ ಸದಸ್ಯ ಇಬ್ರಾಹಿಂ ಪಟೇಲ್, ಎಸ್‌ಡಿಎಂಸಿ ಅಧ್ಯಕ್ಷ ದೇವಪ್ಪ ಸುಣಗಾರ್ ಹಾಗೂ ಸಹಕಾರ ಕೃಷಿ ಪ್ರಾಥಮಿಕ ಪತ್ತಿನ ಸಂಘದ ಅಧ್ಯಕ್ಷ ಈರಣ್ಣ ಇಸಬಾ, ಮಲ್ಲಿಕಾರ್ಜುನ ಕಟ್ಟಿಮನಿ, ಶರಣು ಇಟ್ಟೀನ್, ಭಾಗಣ್ಣ ಹೋನಗುಂಟ, ಶಿವಕುಮಾರ್ ಅಂದೋಲ, ನಿಂಗಣ್ಣ ನೆಲೋಗಿ, ಪಾಲ್ಗೊಳ್ಳಪ್ಪ ಗಂಜಿ, ಶರಣಬಸಪ್ಪ ಕೊಲ್ಲೂರ್, ಮುನಿಯಪ್ಪ ಇಸಬಾ, ಹಣಮಂತ ಹೂಗೋಳ್, ಭಾಗಣ್ಣ ಪಿಟ್ಟಿನ, ಸಂತೋಷ್ ಅಳ್ಳೊಳ್ಳಿ, ಮತ್ತು ಪಿಡಬ್ಲ್ಯೂಡಿ ಸಹಾಯಕ ಇಂಜಿನಿಯರ್ ಅರವಿಂದ್ ಹಾಗೂ ಸೈಟ್ ಇಂಜಿನಿಯರ್ ಶಫೀಕ್ ಇದ್ದರು.

ಸಿಎಂ ರಾಜೀನಾಮೆ ನೀಡಲಿ

ಸಂ.ಕ. ಸಮಾಚಾರ ಸೋಲಾಪುರ: ಪುಣೆ ಜಿಲ್ಲೆಯೊಳಗಿನ ಭೋರ್ ತಾಲೂಕಿನಲ್ಲಿಯ ನಸರಾಪುರದಲ್ಲಿ ಬಾಲಕಿ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿರುವ ಘಟನೆಯಿಂದ ಕಾಂಗ್ರೆಸ್ ಸಂಸದೆ ಪ್ರಣಿತಿ ಶಿಂದೆಯವರು, ರಾಜ್ಯ ಸರಕಾರದ ಆಡಳಿತ ಸರಿಯಾಗಿಲ್ಲ, ಶಕ್ತಿ ಕಾಯಿದೆ ಜಾರಿಗೆ ತಂದು ಆರೋಪಿಗೆ ಗಲ್ಲು ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಭವನದಲ್ಲಿ ಆಯೋಜಿಸಿದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದ ಅವರು, ಕಾಯಿದೆ ಮತ್ತು ವ್ಯವಸ್ಥೆ ಒಂದಕ್ಕೊಂದು ತಾಳಮೇಳ ಇಲ್ಲದಂತಾಗಿದೆ. ಈ ವಿಷಯದಲ್ಲಿ ವಿಫಲರಾಗಿರುವ ಸಿಎಂ ದೇವೇಂದ್ರ ಫಡ್ನವೀಸ್ ರಾಜೀನಾಮೆ ನೀಡಬೇಕು ಎಂದರು.

ಘಟನೆಯಿಂದ ಜನರು ವ್ಯಥೆ ಪಡುತ್ತಿದ್ದರೆ, ಆಡಳಿತ ಬಿಜೆಪಿ ಚುನಾವಣೆ ಗೆಲುವಿನ ಆನಂದೋತ್ಸವ ಆಚರಿಸುತ್ತಿದೆ. ಸಮಾಜದಲ್ಲಿನ ಗಂಭೀರ ಸಮಸ್ಯೆಗಳತ್ತ ಸರಕಾರದ ಗಮನವೆ ಇಲ್ಲದಂತೆ ತೋರುತ್ತಿದೆ. ಸೋಲಾಪುರ ಸಹ ಇತ್ತೀಚೆಗೆ ಕಡೆ ಹಗಲಿನಲ್ಲಿಯೇ ದರೋಡೆ, ಕೊಲೆ ಸುಲಿಗೆ ನಡೆಯುತ್ತಿವೆ. ಮಹಿಳೆ ಮತ್ತು ಬಾಲಕಿಯರ ಮೇಲೆ ಅತ್ಯಾಚಾರಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅಫೀಮು ಮತ್ತು ಇತರೆ ಮಾದಕ ವಸ್ತುಗಳ ಮಾರಾಟ ಸಂಖ್ಯೆ ಹೆಚ್ಚುತ್ತಿರುವುದರ ಬಗ್ಗೆ ಚಿಂತೆ ವ್ಯಕ್ತಪಡಿಸುತ್ತ, ಪಟ್ಟಣದಲ್ಲಿ ಮಟಕಾ, ಬಾರ್ ಇತರೆ ಅಕ್ರಮ ದಂಧೆಗಳು ನಡೆಸುವ ಗುಬ್ಬರ ನೀರು ಉಣಿಸಿ ಬೆಳೆಸುತ್ತಿದೆ ಎಂದು ಸರಕಾರದ ಮೇಲೆ ಸಂಸದೆ ಪ್ರಣಿತಿ ಶಿಂದೆ ಟೀಕಾಸ್ತ್ರ ಎಸೆದರು.

ಕಲಬುರಗಿಯಲ್ಲಿ 'ಎಥನಿಕ್' ದಿನದ ಸಂಭ್ರಮಾಚರಣೆಗೆ ಎನ್‌ವಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯೆ ಸಿದ್ಧಮ್ಮ ಗೊಬ್ಬೂರ್ ಚಾಲನೆ ನೀಡಿದರು.

ಯುವ ಸಮೂಹದ ಕೈಯಲ್ಲಿ ದೇಶಿಯ ಸಂಸ್ಕೃತಿ ಅಳಿವು ಉಳಿವು

ಸಂ.ಕ. ಸಮಾಚಾರ ಕಲಬುರಗಿ: ಸಂಸ್ಕೃತಿಯ ವಾರಸುದಾರರೆಂದರೆ ಆ ನಾಡಿನ ಯುವಜನತೆ, ವಿದ್ಯಾರ್ಥಿಗಳು ಮನಸ್ಸು ಮಾಡಿದರೆ ಮಾತ್ರ ಭಾರತೀಯ ಸಂಸ್ಕೃತಿ ಉಳಿಯಲು ಸಾಧ್ಯ ಎಂದು ನೂತನ ವಿದ್ಯಾಲಯ ಪಾಲಿಟೆಕ್ನಿಕ್ ಮಹಾವಿದ್ಯಾಲಯದ ಪ್ರಾಚಾರ್ಯೆ ಸಿದ್ದಮ್ಮ ಗೊಬ್ಬುರ ಅವರು ಹೇಳಿದರು.

ನಗರದ ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯದಲ್ಲಿ ಮಂಗಳವಾರ ನಡೆದ 'ಎಥನಿಕ್' ದಿನದ ಸಂಭ್ರಮಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಮ್ಮ ಆಚಾರ-ವಿಚಾರಗಳು, ವೇಷಭೂಷಣಗಳು, ಊಟೋಪಚಾರ ಎಲ್ಲವೂ ಅನುಪಮವಾಗಿದ್ದು, ವಿದೇಶಿಯರು ಇತ್ತ ಕಡೆ ವಾಲುತಿದ್ದರೆ, ನಾವು ಆಧುನಿಕತೆಯ ಭರಾಟೆಯಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರು ಹೋಗುತ್ತ ನಮ್ಮ ಸಂಸ್ಕೃತಿಯನ್ನು ಮರೆಯುತಿರುವುದು ವಿಷಾದನೀಯ ಎಂದು ಕಳವಳ ವ್ಯಕ್ತಪಡಿಸಿದರು.

ನೂತನ ವಿದ್ಯಾಲಯ ಪಾಲಿಟೆಕ್ನಿಕ್ ಮಹಾವಿದ್ಯಾಲಯದ ಗಣಕಯಂತ್ರ ವಿಜ್ಞಾನದ ಮುಖ್ಯಸ್ಥೆ ಮಂಜುಳಾ ಪಾಟೀಲ್ ಅವರು ಹಲವು ಜನಪದ ಗೀತೆಗಳನ್ನು ಹಾಡಿ ವಿದ್ಯಾರ್ಥಿಗಳಿಗೆ ರಂಜಿಸಿದರು. ಡೊಳ್ಳು ಕುಣಿತ, ಲಂಬಾಣಿ ನೃತ್ಯ, ಭರತನಾಟ್ಯದಂತಹ ಹಲವು ವೈವಿಧ್ಯಮಯ ದೃಶ್ಯಕ್ಕೆ ಮಹಾವಿದ್ಯಾಲಯವು ಸಾಕ್ಷಿಯಾಯಿತು. ವೇದಿಕೆಯ ಮೇಲೆ ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ದಯಾನಂದ ಎಂ. ಶಾಸ್ತ್ರೀ, ಎನ್‌ವಿ ಪದವಿ ಮಹಾವಿದ್ಯಾಲಯದ ನಿರ್ದೇಶಕ ಪ್ರೊ. ಗೋವಿಂದ ಪೂಜಾರ್ ಉಪಸ್ಥಿತ-ರಿದ್ದರು.

ಭಂಕೂರ್ ಕ್ರಾಸ್ ಬಳಿ ಅಗ್ನಿ ಅವಘಡ

ಶಹಾಬಾದ್: ಸಮೀಪದ ಭಂಕೂರ್ ಕ್ರಾಸ್ ಬಳಿ ಇರುವ ಮೊಬೈಲ್ ಅಂಗಡಿಯೊಂದಕ್ಕೆ ಆಕಸ್ಮಿಕವಾಗಿ ಬೆಂಕಿ ತಗುಲಿದ ಘಟನೆ ಮಂಗಳವಾರ ರಾತ್ರಿ ನಡೆದಿದೆ. ಈ ಭೀಕರ ಅಗ್ನಿ ಅವಘಡದಲ್ಲಿ ಸುಮಾರು 2 ಲಕ್ಷ ರೂ. ಮೌಲ್ಯದ ವಸ್ತುಗಳು ಸುಟ್ಟು ಕರಕಲಾಗಿವೆ ಎಂದು ಅಂದಾಜಿಸಲಾಗಿದೆ.

ಘಟನೆಯ ವಿವರ: ಮುಗುಳನಾಗಾವಿ ಗ್ರಾಮದ ನಿವಾಸಿ ಕಿರಣಸಿಂಗ್ ರಾಠೋಡ್‌ಗೆ ಸೇ-ರಿದ ಮೊಬೈಲ್ ಅಂಗಡಿಯಲ್ಲಿ ಈ ಘಟನೆ ಸಂಭವಿಸಿದೆ. ಮಂಗಳವಾರ ರಾತ್ರಿ ಸುಮಾರು 8 ಗಂಟೆಯ ವೇಳೆಗೆ ಅಂಗಡಿಯಲ್ಲಿ ಹಠಾತ್ ಬೆಂಕಿ ಕಾಣಿಸಿಕೊಂಡಿದೆ. ಇದನ್ನು ಗಮನಿಸಿದ ಸ್ಥಳೀಯರು ಕಾರ್ಯಪ್ರವೃತ್ತರಾಗಿ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದಾರೆ.

ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಸಿಬ್ಬಂದಿ ಸತತ ಪ್ರಯತ್ನ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದರಿಂದಾಗಿ ಅಕ್ಕಪಕ್ಕದ ಅಂಗಡಿಗಳಿಗೆ ಬೆಂಕಿ ಹರಡುವುದು ತಪ್ಪಿದಂತಾಗಿದೆ. ಆದರೂ ಅಂಗಡಿಯಲ್ಲಿದ್ದ ಹೊಸ ಮೊಬೈಲ್‌ಗಳು, ಬಿಡಿಭಾಗಗಳು ಹಾಗೂ ಪೀಠೋಪಕರಣಗಳು ಬೆಂಕಿಗೆ ಆಹುತಿಯಾಗಿವೆ.

ಬೆಂಕಿ ಹತ್ತಲು ನಿಖರ ಕಾರಣ ತಿಳಿದು ಬಂದಿಲ್ಲವಾದರೂ, ಶಾರ್ಟ್ ಸರ್ಕ್ಯೂಟ್‌ನಿಂದ ಈ ಅವಘಡ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ.

213 ಶುದ್ಧ ನೀರಿನ ಘಟಕಗಳು ಬಂದ್

ನೀರಿನ ಸಮಸ್ಯಾತ್ಮಕ ಗ್ರಾಮಗಳು 236 | ಜಿಲ್ಲೆಯಲ್ಲಿ ನೀರಿಗೆ ಹಾಹಾಕಾರ

■ ಶಂಕರಬಾಬು ರೆಡ್ಡಿ

ಕಲಬುರಗಿ: ಜಿಲ್ಲೆಯಲ್ಲಿ ನೀರಿಗೆ ಹಾಹಾಕಾರ ಶುರುವಾಗಿದ್ದು, 236 ಗ್ರಾಮಗಳಲ್ಲಿ ನೀರಿನ ಸಮಸ್ಯಾತ್ಮಕ ಗ್ರಾಮಗಳೆಂದು ಗುರುತಿಸಲಾಗಿದೆ. ಇನ್ನೊಂದೆಡೆ ಬೇಸಿಗೆಯಲ್ಲಿ ಜನರಿಗೆ ನೀರು ಬರುತ್ತಿಲ್ಲ ಮತ್ತು ಶುದ್ಧ ನೀರಿನ ಘಟಕಗಳು ಸಹ ಬಂದಾಗಿರುವುದರಿಂದ ಜನತೆ ನೀರಿಗಾಗಿ ಪರದಾಡುವಂತಾಗಿದೆ.

ಪತ್ರಿಕೆಗೆ ಲಭ್ಯ ಮಾಹಿತಿ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 517 ಶುದ್ಧ ನೀರಿನ ಘಟಕಗಳು ಸ್ಥಾಪನೆ ಮಾಡಲಾಗಿದ್ದು, ಅದರಲ್ಲಿ 270 ಘಟಕಗಳಿಂದ ಶುದ್ಧ ನೀರು ಬರುತ್ತಿವೆ. ಅಫಜಲಪುರ–21, ಆಳಂದ–26, ಚಿಂಚೋಳಿ–55, ಚಿತ್ತಾಪುರ–4, ಜೇವರ್ಗಿ–29, ಕಲಬುರಗಿ–45, ಸೇಡಂ–21 ಸೇರಿ ಗ್ರಾಮೀಣ ಭಾಗದಲ್ಲಿ ಒಟ್ಟು 201 ಶುದ್ಧ ಘಟಕಗಳು ಮತ್ತು ಕಲಬುರಗಿ ನಗರದಲ್ಲಿ 12 ಘಟಕಗಳು ಸೇರಿ ಒಟ್ಟು 213 ಘಟಕಗಳು ಬಂದಾಗಿವೆ.

ಅಫಜಲಪುರ– 43, ಆಳಂದ–45, ಚಿಂಚೋಳಿ–14, ಚಿತ್ತಾಪುರ–25, ಜೇವರ್ಗಿ–16, ಕಲಬುರಗಿ–20, ಕಾಳಗಿ–20, ಕಮಲಾಪುರ–11, ಸೇಡಂ–28, ಶಹಾಬಾದ್–7 ಮತ್ತು ಯಡ್ರಾಮಿ–7 ಒಟ್ಟು ಸೇರಿ 236 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಉದ್ಭವಿಸಬಹುದಾಗಿದೆ ಎಂದು ಹೇಳಲಾಗುತ್ತಿದೆ. ಬಹುತೇಕ ಗ್ರಾಮಗಳಲ್ಲಿ ನೀರಿನ ಸಮಸ್ಯೆ ಕಾಡುತ್ತಿದೆ. ಗ್ರಾಮಗಳಲ್ಲಿ ನೀರಿನ ಸಮಸ್ಯೆ ಎದುರಿಸುತ್ತಿರುವ ಜನತೆ ಊರ ಆಚೆ ಇರುವ ಬೋರವೆಲ್ ಅಥವಾ ನೀರಿನ ಗುಮ್ಮಿಯಿಂದ ನೀರು ತರುವ ಪರಿಸ್ಥಿತಿ ಬಂದಿದೆ. ಜಿಲ್ಲಾಡಳಿತ, ಮಹಾನಗರ ಪಾಲಿಕೆ ಮತ್ತು ಜಿಲ್ಲಾ ಪಂಚಾಯತ್ ಜಂಟಿಯಾಗಿ ಸಕ್ರಿಯವಾಗಿ ನೀರಿನ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕಾಗಿದೆ.

ಜಿಲ್ಲಾಡಳಿತ ಆವರಣದಲ್ಲಿಯೇ ನೀರಿಲ್ಲ

ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ನಗರದಲ್ಲಿ ಒಟ್ಟು 55 ವಾರ್ಡ್‌ಗಳಲ್ಲಿ ಬಹುತೇಕ ಬಡಾವಣೆಗಳಲ್ಲಿ ಶುದ್ಧ ನೀರಿನ ಘಟಕಗಳು ಬಂದಾಗಿವೆ.

ಸಿದ್ಧಾರ್ಥ ನಗರ, ಶಕ್ತಿ ನಗರ, ಅಂಬಿಕಾ ನಗರ, ಎಸ್.ಬಿ.ಕಾಲೇಜ್ ಏರಿಯಾ, ಕೀರ್ತಿ ನಗರ, ಪಂಚಶೀಲ ನಗರ, ನಾಗನಳ್ಳಿ ತಾಂಡಾ, ಸುಂದರ ನಗರ, ಶಾಂತಾ ಕಾಲೋನಿ, ತಾರಫೈಲ್–2, ಬ್ರಹ್ಮಪುರ, ಮಹಾಲಕ್ಷ್ಮೀ ಲೇಔಟ್ ಸೇರಿ ಒಟ್ಟು 12 ಶುದ್ಧ ನೀರಿನ ಘಟಕಗಳು ಬಂದಾಗಿವೆ. ಮತ್ತೆ ಕೆಲವು ಕಡೆ ಘಟಕಗಳಿವೆ ಆದರೆ, ಅವುಗಳು ಇನ್ನೂ ಪರೀಕ್ಷೆ ಆರಂಭವೇ ಆಗಿಲ್ಲ ಎಂದು ಹೇಳಲಾಗುತ್ತಿದೆ. ಮುಖ್ಯವಾಗಿ ಜಿಲ್ಲಾಡಳಿತ (ಮಿನಿ ವಿಧಾನಸೌಧ) ಆವರಣದ ಎದುರು ಮತ್ತು ಹಿಂದುಗಡೆ ಇರುವ ಶುದ್ಧ ನೀರಿನ ಘಟಕಗಳು ಬಂದಾಗಿರುವುದು ಅಚ್ಚರಿಯನ್ನುಂಟು ಮಾಡಿದೆ.

ಜಿಲ್ಲಾಧಿಕಾರಿಗಳು ತಮ್ಮ ಕಚೇರಿ ಆವರಣದಲ್ಲಿರುವ ಶುದ್ಧ ನೀರಿನ ಘಟಕಗಳು ಪ್ರಾರಂಭಿಸದಿರುವ ಜಿಲ್ಲೆಯ ನೀರಿನ ಸಮಸ್ಯೆ ಏನು ಬಗೆಹರಿಸುತ್ತಾರೆ ಎಂದು ನಾಗರಿಕರು ಪ್ರಶ್ನಿಸುತ್ತಿದ್ದಾರೆ.

ಕಲಬುರಗಿಯ ಮಿನಿ ವಿಧಾನಸೌಧ ಆವರಣದಲ್ಲಿ ಬಂದ್ ಆಗಿರುವ ಶುದ್ಧ ನೀರಿನ ಘಟಕಗಳ ನೋಟ.

ವಿವಿಧೆಡೆ ಟ್ಯಾಂಕರ್ ನೀರು ಸರಬರಾಜು

ಜಿಲ್ಲೆಯ ಆಳಂದ ತಾಲೂಕಿನ ಹೆಬಳಿ ಗ್ರಾಮ, ಕಲಬುರಗಿ ತಾಲೂಕಿನ ಮೂಕ ತಾಂಡಾ ಮತ್ತು ಕುಸನೂರದಲ್ಲಿ ಟ್ಯಾಂಕರ್ ವಾಹನಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಒಟ್ಟು ಗ್ರಾಮೀಣ ಭಾಗಕ್ಕೆ 5 ನೀರಿನ ಟ್ಯಾಂಕರ್ ವಾಹನಗಳಿದ್ದು, ಅವುಗಳಲ್ಲಿ 3 ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. 2 ವಾಹನಗಳಿಗೆ ಚಾಲಕರೇ ಇಲ್ಲ. ತುರ್ತಾಗಿ ನೀರು ಬೇಕಾದರೆ ಪರ್ಯಾಯವಾಗಿ ಚಾಲಕರನ್ನು ನಿಯೋಜಿಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆ ನಿವಾರಣೆಗೆ ಪಾಲಿಕೆಯಿಂದ ಸುಮಾರು 55 ಟ್ಯಾಂಕರ್ ವಾಹನಗಳ ವ್ಯವಸ್ಥೆ ಮಾಡಲಾಗಿದೆ. ಸಮಸ್ಯೆ ಇರುವ ಏರಿಯಾಗಳಿಗೆ ನೀರು ಸರಬರಾಜು ಮಾಡಲಾಗುತ್ತಿದೆ. ನಗರದಲ್ಲಿ ಬಂದಾಗಿರುವ ಶುದ್ಧ ನೀರಿನ ಘಟಕಗಳ ದುರಸ್ತಿ ಮಾಡಿಸಿ ಐದು ವರ್ಷ ನಿರ್ವಹಣೆ ಕ್ರಮವಹಿಸಲಾಗುತ್ತಿದೆ ಜೊತೆಗೆ ಜಿಲ್ಲಾಡಳಿತ ಕಚೇರಿ ಆವರಣದಲ್ಲಿರುವ ನೀರಿನ ಘಟಕಕ್ಕೆ ಬೋರವೆಲ್ ಮೂಲಕ ಪಂಪ್‌ಲೈನ್ ಸಂಪರ್ಕ ಕಲ್ಪಿಸಲಾಗುವುದು.

■ ಅವಿನಾಶ ಶಿಂಧೆ, ಆಯುಕ್ತ, ಮಹಾನಗರ ಪಾಲಿಕೆ, ಕಲಬುರಗಿ.

ನೀರಿನ ಸಮಸ್ಯೆ ಕಂಡು ಬರುವ ಗ್ರಾಮಗಳಿಗೆ ಟ್ಯಾಂಕರ್ ವಾಹನಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಬಂದಾಗಿರುವ ಶುದ್ಧ ನೀರಿನ ಘಟಕಗಳ ದುರಸ್ತಿಗೆ ಜಿಲ್ಲಾ ಪಂಚಾಯತಿ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

■ ಜಗದೇವ ಎಸ್.ಜೀವಣಗಿ, ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗ, ಕಲಬುರಗಿ

ಮಹಾಲಕ್ಷ್ಮಿ ಹುಂಡೇಕರ್ ನೂತನ ಆವಿಷ್ಕಾರ ವಾಟ್ಸ್‌ಅಪ್ ಆಧಾರಿತ 'Sun-day' AI ಸಹಾಯಕ ಸೇವೆ ಆರಂಭ

ಕಲಬುರಗಿ: ಬೀದರ್ ಜಿಲ್ಲೆಯ ಹುಮನಾಬಾದ್ ತಾಲೂಕಿನ ಮಹಿಳೆ ಮಹಾಲಕ್ಷ್ಮಿ ಬಸವರಾಜ ಹುಂಡೇಕರ್ ಅವರು ದೇಶದಲ್ಲೇ ಅಪರೂಪವಾದ ಹೊಸ ಮಾದರಿಯ AI ಸೇವೆಯನ್ನು ಪರಿಚಯಿಸಿ ಗಮನ ಸೆಳೆದಿದ್ದಾರೆ.

'Sunday' ಎಂಬ ಹೆಸರಿನ ಈ ವಾಟ್ಸ್‌ಅಪ್ ಆಧಾರಿತ AI ಸಹಾಯಕ ಸೇವೆ, ಉದ್ಯೋಗ ಜೀವನದ ಒತ್ತಡ ಮತ್ತು ಮಾನಸಿಕ ತಳಮಳ ಅನುಭವಿಸುವವರಿಗೆ ಕೇಳುವ ಸ್ನೇಹಿತನಂತೆ ನೆರವಾಗುವ ಉದ್ದೇಶದಿಂದ ರೂಪಿಸಲಾಗಿದೆ. ಈ ಸೇವೆಯ ವಿಶೇಷತೆ ಎಂದರೆ ಯಾವುದೇ ಪ್ರತ್ಯೇಕ ಆಪ್ ಡೌನ್‌ಲೋಡ್ ಮಾಡಬೇಕಾಗಿಲ್ಲ, ಲಾಗಿನ್ ಪ್ರಕ್ರಿಯೆಯೂ ಇಲ್ಲ. ಬಳಕೆದಾರರು ನೇರವಾಗಿ ವಾಟ್ಸ್‌ಪ್ ಮೂಲಕ 'Sunday' ಸೇವೆಯನ್ನು ಸಂಪರ್ಕಿಸಿ ಬಳಸಬಹುದು.

ಪ್ರತಿ ಭಾನುವಾರ ರಾತ್ರಿ ಮುಂದಿನ ವಾರದ ಕೆಲಸದ ಒತ್ತಡ, ಕಚೇರಿ ವಾತಾವರಣ, ಮೇಲಧಿಕಾರಿಗಳ ಒತ್ತಾಯ ಹಾಗೂ ವೈಯಕ್ತಿಕ ಚಿಂತೆಗಳಿಂದ ಬಳಲುವ ಉದ್ಯೋಗಿಗಳಿಗೆ ಮನದ ಮಾತು ಹೇಳಿಕೊಳ್ಳಲು ವೇದಿಕೆ ಕಲ್ಪಿಸುವ ಉದ್ದೇಶದಿಂದ ಈ ಸೇವೆ ರೂಪುಗೊಂಡಿದೆ. ಸಮಸ್ಯೆಗಳಿಗೆ ಪರಿಹಾರ ಹೇಳುವುದಕ್ಕಿಂತ, ಕೇವಲ ಆಲಿಸಿ ಬೆಂಬಲ ನೀಡುವ ಸಹಾಯಕನಾಗಿ 'Sunday' ಕಾರ್ಯನಿರ್ವಹಿಸುವುದು ಇದರ ವೈಶಿಷ್ಟ್ಯವಾಗಿದೆ.

ತಾಂತ್ರಿಕ ಹಿನ್ನೆಲೆ ಅಥವಾ ದೊಡ್ಡ ತಂಡವಿಲ್ಲದೇ, ಪೂರ್ಣಕಾಲಿಕ ಉದ್ಯೋಗದ ಜೊತೆಗೆ ಸಮಯ ಹೊಂದಿಸಿಕೊಂಡು ಮಹಾಲಕ್ಷ್ಮಿ ಅವರು ಈ ಸೇವೆಯನ್ನು ಅಭಿವೃದ್ಧಿಪಡಿಸಿರುವುದು ವಿಶೇಷವಾಗಿದೆ. ಅವರ ಸಾಧನೆ, ತಂತ್ರಜ್ಞಾನ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ಅನೇಕ ಮಹಿಳೆಯರಿಗೆ ಸ್ಫೂರ್ತಿಯಾಗಿದೆ. ಬೀದರ್ ಜಿಲ್ಲೆಯ ಸಣ್ಣ ಪಟ್ಟಣದಿಂದ ಹುಟ್ಟಿದ ಈ ಆವಿಷ್ಕಾರ, ಇದೀಗ ದೇಶದಾದ್ಯಂತ ಸ್ಮಾರ್ಟ್‌ಫೋನ್ ಹೊಂದಿರುವ ಪ್ರತಿಯೊಬ್ಬರಿಗೂ ತಲುಪುವಂತಾಗಿದೆ. 'Sunday' ಸೇವೆ ಉಚಿತವಾಗಿದೆ. ಮಾಹಿತಿಗಾಗಿ: ವೆಬ್‌ಸೈಟ್: heysundayapp.com, ವಾಟ್ಸ್‌ಅಪ್ : +91 63664 45258 ಸಂಪರ್ಕಿಸಬಹುದು.

ಕಲಬುರಗಿ ಜಾಜಿ ಶಿಕ್ಷಣ ಸಂಸ್ಥೆಯ ಗುರುಕುಲ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಗುರುಕುಲ ಕಾಲೇಜಿನಲ್ಲಿ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಸಂ.ಕ. ಸಮಾಚಾರ ಕಲಬುರಗಿ: ಜಾಜಿ ಶಿಕ್ಷಣ ಸಂಸ್ಥೆಯ ಗುರುಕುಲ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಜಾಜಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕ ಎಂ..ಎಸ್ ಮುಕುಂದ ಹಾಗೂ ಶಿವಪ್ರಸಾದ ಜಾಜಿ ಉದ್ಘಾಟಿಸಿದರು. ಜಾಜಿ ಶಿಕ್ಷಣ ಸಂಸ್ಥೆ ನಿರ್ದೇಶಕ ಶಿವಪ್ರಸಾದ ಜಾಜಿ ಮಾತನಾಡಿ, ವಿದ್ಯಾರ್ಥಿಗಳ ಸಾಧನೆಗೆ ಅಭಿನಂದಿಸಿ ಈ ಸಾಧನೆ ನಿರಂತರವಾಗಿರಲೆಂದು ಹಾರೈಸಿದರು.

ಪ್ರಾಂಶುಪಾಲ ರವಿಕುಮಾರ ವಲ್ಲಂಶೆಟ್ಟಿ ಮಾತನಾಡಿ, ನಿಮ್ಮ ಮುಂದಿನ ಜೀವನ ಸುಖಕರವಾಗಿರಲಿ ಎಂದು ಹಾರೈಸಿ ಸಾಧನೆಗೆ ಸಹಕರಿಸಿದ ಪಾಲಕರಿಗೆ ಹಾಗೂ ಉಪನ್ಯಾಸಕರಿಗೆ ಧನ್ಯವಾದ ಸಮರ್ಪಿಸಿದರು.

ಉಪಪ್ರಾಂಶುಪಾಲ ಮಂಗೇಶಕುಮಾರ ಖಿಡ್ಕೆ ಮಾತನಾಡಿ, ನಿಮ್ಮ ಎರಡು ವರ್ಷಗಳ ಸತತ ಪರಿಶ್ರಮ ಇಂದು ಫಲ ಸಿಕ್ಕಿದೆ ನಿಮ್ಮ ಸಾಧನೆ ಉಪನ್ಯಾಸಕರಿಗೆ ಮತ್ತು ಪಾಲಕರಿಗೆ ಹೆಮ್ಮೆಯ ವಿಷಯವಾಗಿದೆ ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

589 ಅಂಕಗಳನ್ನು ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದ ಸಮೀರ ಕುಲಕರ್ಣಿಗೆ 10 ಸಾವಿರ ರೂ., 584 ಅಂಕಗಳನ್ನು ಪಡೆದ ಅಭಿಜ್ಞಾ ನಾಡಗಿರಿಗೆ 5 ಸಾವಿರ ರೂ., 581 ಅಂಕಗಳನ್ನು ಪಡೆದ ವಿದ್ಯಾರ್ಥಿಗಳಾದ ಅಲೇಖ ಮತ್ತು ನಾಮಿಯಾ ಸಮೀನಗೆ 2500 ರೂ. ಚೆಕ್ ನೀಡಿ ಪಾಲಕರೊಂದಿಗೆ ಸನ್ಮಾನಿಸಲಾಯಿತು.

ವಿಷಯವಾರು ನೂರಕ್ಕೆ ನೂರು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪಾರಿತೋಷಕದೊಂದಿಗೆ ಸನ್ಮಾನಿಸಲಾಯಿತು. ಪ್ರಥಮ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಚೆಕ್ ನೀಡಿ ಗೌರವಿಸಲಾಯಿತು.

ಉಪನ್ಯಾಸಕ ಶ್ಯಾಮಸುಂದರ ಶಹಾಬಾದಕರ್, ಎವ್‌ಲಿನ್ ವಿಲ್ಸನ್, ರಾಜೇಶ್ವರಿ ಪಾಟೀಲ್ ಬಹುಮಾನ ವಿತರಣಾ ಕಾರ್ಯಕ್ರಮ ನೆರವೇರಿಸಿದರು. ಪ್ರಜ್ಞಾ ಕುಲಕರ್ಣಿ ನಿರೂಪಿಸಿದರು. ಎಲ್ಲ ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು, ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಪಾಲಕರು ಇದ್ದರು. ವೇದಿಕೆಯ ಮೇಲೆ ಜಾಜಿ ಫೌಂಡೇಶನ ಮಾನವ ಸಂಪನ್ಮೂಲ ಮುಖ್ಯಸ್ಥ ರಮೇಶ ಕುಲಕರ್ಣಿ ಇದ್ದರು.

ಪಂಢರಪುರ–ತಿರುಪತಿ ವಿಶೇಷ ರೈಲು ಇನ್ನು ರೆಗುಲರ್

ಸಂ.ಕ.ಸಮಾಚಾರ ಕಲಬುರಗಿ: ಪಂಢರಪುರ–ತಿರುಪತಿ ನಡುವಿನ ಸಾಪ್ತಾಹಿಕ (ವಾರಾಂತ್ಯದ) ವಿಶೇಷ ರೈಲುಗಳ ಸೇವೆಯನ್ನು ನಿಯಮಿತ (ರೆಗುಲರ್) ರೈಲುಗಳನ್ನಾಗಿ ಪರಿವರ್ತಿಸಲಾಗಿದೆ. ಅಂದರೆ ಈ ರೈಲುಗಳು ವರ್ಷವಿಡೀ ಪ್ರತಿ ವಾರಕ್ಕೊಮ್ಮೆ ನಿಯಮಿತವಾಗಿ ಸಂಚರಿಸಲಿವೆ.

ಪ್ರಯಾಣಿಕರ ಬೇಡಿಕೆಯನ್ನು ಪರಿಗಣಿಸಿ ಭಾರತೀಯ ರೈಲ್ವೆ ಈ ಉಪಕ್ರಮ ಕೈಗೊಂಡಿದೆ. ಹೊಸ ರೈಲು ಸಂಖ್ಯೆಗಳೊಂದಿಗೆ ಈ ಸೇವೆಗಳು ಇನ್ನು ನಿಯಮಿತವಾಗಿ (ರೆಗುಲರ್) ಸಂಚರಿಸಲಿದ್ದು, ಪ್ರಯಾಣಿಕ-ರಿಗೆ ಹೆಚ್ಚು ಅನುಕೂಲವಾಗುವುದರ ಜೊತೆಗೆ ಕಾರ್ಯಾಚರಣೆ ಸುಗಮವಾಗಲಿದೆ.

ಈ ರೈಲು ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳ ವಿವಿಧ ಭಾಗಗಳ ಪ್ರಯಾಣಿಕರಿಗೆ ಸೇವೆ ಒದಗಿಸಲಿದೆ. ದೇಶದ ಅತ್ಯಂತ ಪವಿತ್ರ ಯಾತ್ರಾಸ್ಥಳಗಳಾದ ಪಂಢರಪುರದ ಶ್ರೀ ವಿಠ್ಠಲ ಹಾಗೂ ತಿರುಪತಿಯ ಶ್ರೀ ವೆಂಕಟೇಶ್ವರರ ನಡುವಿನ ರೈಲ್ವೆ ಸಂಪರ್ಕವನ್ನು ಇದು ಮತ್ತಷ್ಟು ಬಲಪಡಿಸಲಿದೆ.

ವಾರಾಂತ್ಯ ರೈಲುಗಳು

ಪ್ರಸ್ತುತ ಸಂಚರಿಸುತ್ತಿರುವ ವಿಶೇಷ ರೈಲು ಸಂಖ್ಯೆ 07012 (ತಿರುಪತಿ–ಪಂಢರಪುರ ವಾರಾಂತ್ಯ ವಿಶೇಷ) 16.05.2026ರಿಂದ ರೈಲು ಸಂಖ್ಯೆ 17437 (ತಿರುಪತಿ–ಪಂಢರಪುರ ವಾರಾಂತ್ಯ) ಎಂಬ ನಿಯಮಿತ ಸೇವೆಯಾಗಿ ಪರಿವರ್ತಿಸಲಾಗುತ್ತದೆ.

ಪ್ರಸ್ತುತ ಸಂಚರಿಸುತ್ತಿರುವ ವಿಶೇಷ ರೈಲು ಸಂಖ್ಯೆ 07032 (ಪಂಢರಪುರ–ತಿರುಪತಿ ವಾರಾಂತ್ಯ ವಿಶೇಷ) ಅನ್ನು 17.05.2026ರಿಂದ ರೈಲು ಸಂಖ್ಯೆ 17438 (ಪಂಢರಪುರ–ತಿರುಪತಿ ವಾರಾಂತ್ಯ) ಎಂಬ ನಿಯಮಿತ ಸೇವೆಯಾಗಿ ಪರಿವರ್ತಿಸಲಾಗುತ್ತದೆ.

ಸಮಯ

ರೈಲು ಸಂಖ್ಯೆ 17437 (ತಿರುಪತಿ–ಪಂಢರಪುರ ವಾರಾಂತ್ಯ) ಪ್ರತಿ ಶನಿವಾರ ಸಂಜೆ 4–ಕ್ಕೆ ತಿರುಪತಿಯಿಂದ ಹೊರಟು, ಮರುದಿನ ಸಂಜೆ ಸಂಜೆ 7ಕ್ಕೆ ಪಂಢರಪುರ ತಲುಪಲಿದೆ.

ರೈಲು ಸಂಖ್ಯೆ 17438 (ಪಂಢರಪುರ–ತಿರುಪತಿ ವಾರಾಂತ್ಯ) ಪ್ರತೀ ಭಾನುವಾರ ರಾತ್ರಿ 8ಕ್ಕೆ ಪಂಢರಪುರದಿಂದ ಹೊರಟು, ಮರುದಿನ ರಾತ್ರಿ 11:30ಕ್ಕೆ ತಿರುಪತಿ ತಲುಪಲಿದೆ.

ನಿಲುಗಡೆಗಳು

ಮೋಡ್ಲಿಂಬ್, ಕುರ್ದವಾಡಿ, ಬಾರ್ಶಿ ಟೌನ್, ಧಾರಾಶಿವ, ಲಾತೂರ, ಲಾತೂರ್ ರೋಡ್, ಉದಗಿರಿ, ಬೀದರ್, ಜಹೀರಾಬಾದ್, ವಿಕಾರಾಬಾದ್, ಲಿಂಗಂಪಲ್ಲಿ, ಬೇಗಂಪೇಟ್, ಸಿಕಂದರಾಬಾದ್, ಕಾಚಿಗುಡ, ಶಾದ್‌ನಗರ, ಮಹಬೂಬ್‌ನಗರ, ವನಪರ್ತಿ ರೋಡ್, ಗದ್ವಾಲ್, ಕರ್ನೂಲ್ ಸಿಟಿ, ಧೋನೇ, ಗುತ್ತಿ, ತಾಡಪತ್ರಿ, ಯೆರ್ರಗುಂಟ್ಲ, ಕಡಪ, ರಾಜಂಪೇಟ ಮತ್ತು ರೇಣಿಗುಂಟ.

ರೈಲು ಸಂಯೋಜನೆ

1 ಎಸಿ 2–ಟಿಯರ್, 3 ಎಸಿ 3–ಟಿಯರ್, 14 ಸ್ಲೀಪರ್ ಕ್ಲಾಸ್, 4 ಜನರಲ್ ಸೆಕೆಂಡ್ ಕ್ಲಾಸ್ ಹಾಗೂ 2 ಗಾರ್ಡ್ ಕಮ್ ಬ್ರೇಕ್ ವ್ಯಾನ್‌ಗಳು (ಒಟ್ಟು 24 ಬೋಗಿಗಳು)

ರಿಜರ್ವೇಶನ್– ಬುಕ್ಕಿಂಗ್

ವಿಶೇಷ ಶುಲ್ಕದೊಂದಿಗೆ ಮುಂದುವರಿಯುವ ಈ ರೈಲುಗಳ ಪ್ರಯಾಣಕ್ಕಾಗಿ ರಿಸರ್ವೇಶನ್‌ನ್ನು ಎಲ್ಲ ಕಂಪ್ಯೂಟರೈಸ್ಡ್ ರಿಜರ್ವೇಶನ್ ಕೇಂದ್ರಗಳಲ್ಲಿ ಮಾಡಬಹುದು. ಜೊತೆಗೆ www.irctc.co.in. ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ. ಕಾಯ್ದಿರಿಸದ– ಜನರಲ್ ಬೋಗಿಗಳ ಬುಕ್ಕಿಂಗ್‌ನ್ನು ರೈಲು ನಿಲ್ದಾಣಗಳ ಕೌಂಟರ್‌ಗಳಲ್ಲಿ ಹಾಗೂ ರೈಲ್ ಒನ್ ಆ್ಯಪ್ ಮೂಲಕ ಮಾಡಬಹುದು.

ವೇಳಾಪಟ್ಟಿಗಾಗಿ

ತುಣ ತಿತಿತಿ.ಜಟಡಣುಡಿಥಿ.ಟಿಜುಚಿಟಡಿಚುಟ.ರಿಠ.ಟಿ ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಅಥವಾ ರೈಲ್‌ಒನ್, ಎನ್‌ಟಿಇಎಸ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬಹುದು.

ನೀರು ಸರಬರಾಜಿನಲ್ಲಿ ವ್ಯತ್ಯಯ ಇಂದಿನಿಂದ

ಕಲಬುರಗಿ: ನಗರದ ಭೀಮಾ ನದಿಯ ಕೋಟನೂರು (ಡಿ) ಪಂಪ್‌ಹೌಸ್‌ಗೆ ಸರಬರಾಜಾಗುವ ವಿದ್ಯುತ್ ವಿತರಣೆಯಲ್ಲಿ ಜೆಸ್ಕಾಂ ಸಂಸ್ಥೆಯಿಂದ ನಿರ್ವಹಣೆ ಮತ್ತು ದುರಸ್ಥಿಯಡಿಯಲ್ಲಿ ವಿದ್ಯುತ್ ಕಂಬದ ಕಾಮಗಾರಿ ನಡೆಯಲಿರುವ ಹಿನ್ನೆಲೆಯಲ್ಲಿ, 6ರಿಂದ ಮೇ 8ರವರೆಗೆ ದಿನಾಲೂ 2 ಗಂಟೆಗಳ ಕಾಲ ನಗರದ ಭೀಮಾ ನದಿಯಿಂದ ನೀರು ಪಡೆಯುವ ನಗರದ ಪ್ರದೇಶಗಳಲ್ಲಿ ನೀರು ಸರಬರಾಜಿನ ನಿಗದಿತ ಸಮಯದಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆಯಿದೆ. ಆದ್ದರಿಂದ ಸಾರ್ವಜನಿಕರು ಮಹಾನಗರ ಪಾಲಿಕೆ, ಕೆ.ಯು.ಡಬ್ಲ್ಯೂ.ಎಸ್.ಎಂ.ಪಿ – ಕೆ.ಯು.ಐ.ಡಿ.ಎಫ್.ಸಿ ಹಾಗೂ ಮೆ। ಎಲ್.&.ಟಿ ಲಿಮಿಟೆಡ್ ಸಂಸ್ಥೆಯೊಂದಿಗೆ ಸಹಕರಿಸಬೇಕು ಎಂದು ಕೆ.ಯು.ಡಬ್ಲ್ಯೂ.ಎಸ್.ಎಂ.ಪಿ, ಕೆ.ಯು.ಐ.ಡಿ.ಎಫ್.ಸಿ ಯೋಜನಾ ಅನುಷ್ಠಾನ ಘಟಕದ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ. ನೀರು ಸರಬರಾಜಿಗೆ ಸಂಬಂಧಿಸಿದ ಮಾಹಿತಿಗಾಗಿ ಸಾರ್ವಜನಿಕರು ಪಾಲಿಕೆಯ ಕಚೇರಿ ಅಥವಾ 08472–261025 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.

ಸ್ವಾಮಿ ವಿವೇಕಾನಂದರ ಮೂರ್ತಿ ಸ್ಥಾಪನೆಗೆ ಆಗ್ರಹ

ಕಲಬುರಗಿ: ನಗರಾಭಿವೃದ್ಧಿ ಪ್ರಾಧಿಕಾರ ಆವರಣದಲ್ಲಿ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ಮೂರ್ತಿ ಸ್ಥಾಪಿಸಬೇಕು ಎಂದು ಜೈ ಕನ್ನಡಿಗರ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಸಚೀನ್ ಫರಹತಾಬಾದ ಆಗ್ರಹಿಸಿದರು. ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಸಲ್ಲಿಸಿದ ಮನವಿಯಲ್ಲಿ, 2011ರಲ್ಲಿ ಅಂದಿನ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರ ಅವಧಿಯಲ್ಲಿ ನಗರದ ಹೊಸ ಜೇವರ್ಗಿ ರಸ್ತೆಯ ಪಕ್ಕದಲ್ಲಿ ಸ್ವಾಮಿ ವಿವೇಕಾನಂದರ ಮೂರ್ತಿ ಸ್ಥಾಪನೆಗೆ ಎಲ್ಲ ಸಿದ್ಧತೆಗಳು ನಡೆದಿದ್ದರೂ, ಇಂದಿಗೂ ಮೂರ್ತಿ ಸ್ಥಾಪನೆ ಕಾರ್ಯ ಪೂರ್ಣಗೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸ್ವಾಮಿ ವಿವೇಕಾನಂದರ ಮೂರ್ತಿಯನ್ನು ಸುಮಾರು 15 ವರ್ಷಗಳಿಂದ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯ ಒಂದು ಕೋಣೆಯಲ್ಲಿ ಇಟ್ಟು ನಿರ್ಲಕ್ಷ್ಯ ವಹಿಸಿರುವುದು ದುರದೃಷ್ಟಕರ ಸಂಗತಿ. ವಿಶ್ವದಾದ್ಯಂತ ಭಾರತದ ಸಂಸ್ಕೃತಿ, ಆಧ್ಯಾತ್ಮಿಕತೆ ಮತ್ತು ಯುವಶಕ್ತಿಯ ಸಂದೇಶ ಸಾರಿದ ಮಹಾನ್ ಚೇತನರ ಮೂರ್ತಿಗೆ ಈ ರೀತಿಯ ನಿರ್ಲಕ್ಷ್ಯ ತೋರಿರುವುದು ಅವಮಾನಕರ ಎಂದು ಅವರು ಹೇಳಿದರು. ಕೂಡಲೇ ನಗರಾಭಿವೃದ್ಧಿ ಪ್ರಾಧಿಕಾರವು ಸ್ವಾಮಿ ವಿವೇಕಾನಂದರ ಮೂರ್ತಿಯನ್ನು ಗೌರವಯುತವಾಗಿ ತನ್ನ ಆವರಣದಲ್ಲಿ ಸ್ಥಾಪಿಸಬೇಕು. ಒಂದು ತಿಂಗಳೊಳಗಾಗಿ ಈ ಕಾರ್ಯಕ್ಕೆ ಚಾಲನೆ ನೀಡದಿದ್ದಲ್ಲಿ ಕಚೇರಿ ಮುತ್ತಿಗೆ ಹಾಕಿ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಸುರೇಶ್ ಹನಗುಡಿ, ಅಕ್ಷಯ, ಗುಡ್ಡು ಸಿಂಗ್, ಅಣವೀರ ಪಾಟೀಲ, ಶಿವಕುಮಾರ ಯಾದವ, ಪಿಂಟು ಜಮಾದಾರ, ಹುಲಿಕಂತ, ಮಲ್ಲು, ದರ್ಶನ ಹಾಗೂ ಶ್ರೀಮಂತ ಉಪಸ್ಥಿತರಿದ್ದರು.

ಆಧಾರ್ ಹೌಸಿಂಗ್ ಫೈನಾನ್ಸ್ ಲಿ.

Aadhar Housing Finance Ltd

ಕಾರ್ಪೊರೇಟ್ ಕಛೇರಿ: ಕಛೇರಿ ಸಂಖ್ಯೆ 501 & 503, 5ನೇ ಮಹಡಿ, ಲೈಟ್‌ಬ್ರಿಡ್ಜ್, ಸಖಿ ವಿಹಾರ ರಸ್ತೆ, ಅಂದೇರಿ ಪೂರ್ವ, ಮುಂಬಯಿ ಸಬ್‌ಅರ್ಬನ್ (ಜಿಲ್ಲೆ), ಮಹಾರಾಷ್ಟ್ರ–400072.
ಗುಲ್ಬರ್ಗಾ ಶಾಖೆ : ನಂ.2–909/19/122/217, ಪ್ಲಾಟ್ ನಂ.217,1ನೇ ಮಹಡಿ, ಪಿಐಡಿ ನಂ.92155, ಘಟ್ಟ–2, ಜಿಟಿ & ಟಿಸಿ ಕಾಲೇಜು ಪಕ್ಕ, ಬಡೇಪುರ, ಎಂಜಿ ರಸ್ತೆ, (ಗುಲ್ಬರ್ಗಾ), ಕಲಬುರಗಿ–585101, ಕರ್ನಾಟಕ.

ಡಿಮಾಂಡ್ ನೋಟೀಸ್

ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 3(1) ಓದಿಕೊಂಡಂತೆ ಆರ್ಥಿಕ ಸ್ವತ್ತಿನ ಭದ್ರತೆ ಮತ್ತು ಪುನರ್‌ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಅಧಿನಿಯಮ, 2002ರ ಸೆಕ್ಷನ್ 13(2) ಅನ್ವಯ. ಕೆಳಸಹಿದಾರರು ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್‌ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಅಧಿನಿಯಮ, 2002ರ (ಸದರಿ ಅಧಿನಿಯಮ) ಅನ್ವಯ ಆಧಾರ್ ಹೌಸಿಂಗ್ ಫೈನಾನ್ಸ್ ಲಿ. (ಎಹೆಚ್‌ಎಫ್‌ಎಲ್)ನ ಅಧಿಕೃತ ಅಧಿಕಾರಿಯಾಗಿರುವರು. ಭದ್ರತಾ ಆಸಕ್ತಿ ಜಾರಿ ನಿಯಮಗಳು, 2002ರ ನಿಯಮ 3ನ್ನು ಓದಿಕೊಂಡಂತೆ ಸದರಿ ಅಧಿನಿಯಮದ ಸೆಕ್ಷನ್ 13(12)ರ ಅನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಸಾಲಗಾರರಿಗೆ ನೀಡಲಾಗಿರುವ ಈ ಕೆಳಗೆ ತಿಳಿಸಿರುವ ಸಂಬಂಧಪಟ್ಟ ಡಿಮಾಂಡ್ ನೋಟೀಸ್‌ನಲ್ಲಿ(ಗಳಲ್ಲಿ) ತಿಳಿಸಿರುವ ಸಾಲದ ಬಾಕಿ ಮೊತ್ತವನ್ನು ಮರುಪಾವತಿ ಮಾಡುವಂತೆ ಕೆಳಕಂಡ ಸಾಲಗಾರರಿಗೆ(ರುಗಳಿಗೆ) ಕರೆ ನೀಡಿ ಸದರಿ ಅಧಿನಿಯಮದ ಪ್ರಕರಣ 13(2)ರ ಅನ್ವಯ ಕೆಳಸಹಿದಾರರು ಡಿಮಾಂಡ್ ನೋಟೀಸ್ ನೀಡಿದ್ದರು. ಮೇಲೆ ತಿಳಿಸಿದ ವಿಚಾರದ ಸಂಬಂಧದಲ್ಲಿ ಸದರಿ ಸಾಲಗಾರ(ರು) ಬರೆದುಕೊಟ್ಟಿರುವ ಯಾವುದೇಇತರೆ ದಾಖಲೆ ಪತ್ರಗಳು ಬರಹಗಳನ್ನು ಓದಿಕೊಂಡಂತೆ ಸಾಲದ ಒಪ್ಪಂದ ಪತ್ರದ ಅನ್ವಯ ಪಾವತಿ ಮಾಡಬೇಕಿರುವ ಬಾಕಿ ಮೊತ್ತವನ್ನು ಕೆಳಗೆ ತಿಳಿಸಿರುವ ದಿನಾಂಕಗಳಿಂದ ಪಾವತಿ ಮಾಡುವವರೆಗೆ ಮತ್ತು ಅಥವಾ ಸಂದಾಯವಾಗುವ ದಿನಾಂಕದವರೆಗೆ ಸದರಿ ಡಿಮಾಂಡ್ ನೋಟೀಸ್‌ನಲ್ಲಿ (ಗಳಲ್ಲಿ ವಿವರಿಸಿರುವಂತೆ ಮುಂದಿನ ಬಡ್ಡಿಯ ಜೊತೆಗೆ ಈ ಕೆಳಗೆ ತಿಳಿಸಿರುವ ಮೊತ್ತವನ್ನು ಸದರಿ ನೋಟೀಸ್ ಪ್ರಕಟವಾದ 60 ದಿನಗಳೊಳಗೆ ಎಹೆಚ್‌ಎಫ್‌ಎಲ್ ಇವರಿಗೆ ಪಾವತಿ ಮಾಡುವಂತೆ ಸದರಿ ಸಾಲಗಾರನಿಗೆ(ರಿಗೆ) ಮತ್ತೊಮ್ಮೆ ಈ ಮೂಲಕ ನೋಟೀಸ್ ನೀಡಲಾಗಿದೆ. ಸಾಲದ ಮರುಪಾವತಿ ಭದ್ರತೆಯಾಗಿ ಅನುಕ್ರಮವಾಗಿ ಸದರಿ ಸಾಲಗಾರ(ರು) ಎಹೆಚ್‌ಎಫ್‌ಎಲ್ ಗೆ ಕೆಳಕಂಡ ಸ್ವತ್ತುಗಳನ್ನು ಆಧಾರ ಮಾಡಿದ್ದಾರೆ.

ಕ್ರ. ಸಂ	ಸಾಲಗಾರ(ರು) ಸಹ–ಸಾಲಗಾರರು ಜಾಮೀನುದಾರ(ರು) ಹೆಸರು	ಡಿಮಾಂಡ್ ನೋಟೀಸ್ ದಿನಾಂಕ ಮತ್ತು ಮೊತ್ತ	ಸ್ಥಿರಾಸ್ತಿಯ ವಿವರಣೆ
1	(ಲೋನ್ ಕೋಡ್: 32310000360 ಗುಲ್ಬರ್ಗಾ ಶಾಖೆ) ಮಾಶಾಕ್‌ಸಾಬ್ ಸೋ ಇಬ್ರಾಹಿಂ ಸಾಬ್ (ಸಾಲಗಾರರು) ನಸ್ರೀನ್ ಮಾಶಾಕ್‌ಸಾಬ್ (ಸಹ ಸಾಲಗಾರರು)	14–04–2026 ರೂ. 8,37,814.00	ವಸತಿಯುತ ಮನೆಯ ಜಿಪಿ ನಂ.2/78/1, ಇದರ ಪಿಐಡಿ ನಂ.151500600100200190, ಅಳತೆ ಪೂರ್ವದಿಂದ ಪಶ್ಚಿಮಕ್ಕೆ 24.384 ಮೀ. ಮತ್ತು ಉತ್ತರದಿಂದ ದಕ್ಷಿಣಕ್ಕೆ 30.48 ಮೀ. ಒಟ್ಟು ವಿಸ್ತೀರ್ಣ 743.22 ಚದರ ಮೀಟರ್, ಇದರ ಸ್ತಂಭ ಪ್ರದೇಶ 297.29 ಮೀಟರ್, ಕೊತ್ನೂರು ಗ್ರಾಮ, ಜೇವರ್ಗಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ. ಚಕ್ಕುಬಂಧಿ : ಪೂರ್ವಕ್ಕೆ: ಲೇನ್, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ರಸ್ತೆ ಮತ್ತು ದಕ್ಷಿಣಕ್ಕೆ: ಲೇನ್
2	(ಲೋನ್ ಕೋಡ್: 32310000583 ಗುಲ್ಬರ್ಗಾ ಶಾಖೆ) ಗೋರಖನಾಥ ದತ್ತು ಪಾದೆರ್ (ಸಾಲಗಾರರು) ಹೀರಾ ಬಾಯಿ (ಸಹ ಸಾಲಗಾರರು)	14–04–2026 ರೂ. 8,22,802.00	ವಸತಿಯುತ ಮನೆಯ ಜಿ ಪಿ ಸಂಖ್ಯೆ.560/2, ಆರ್‌ಡಿಪಿಆರ್ ಸಂಖ್ಯೆ.151500100500220290, ಅಳತೆ ಪೂರ್ವದಿಂದ ಪಶ್ಚಿಮಕ್ಕೆ : 13.7160 ಮೀ ಮತ್ತು ಉತ್ತರದಿಂದ ದಕ್ಷಿಣಕ್ಕೆ : 6.7056 ಮೀಟರ್, ಒಟ್ಟು ವಿಸ್ತೀರ್ಣ 91.974010 ಚದರ ಮೀಟರ್, ಇದರ ಸ್ತಂಭ ಪ್ರದೇಶ 91.974010 ಚದರ ಮೀಟರ್, ಗುಲ್ಬರ್ಗಾ ಜಿಲ್ಲೆ, ಅಫ್ಜಲ್‌ಪುರ ತಾಲ್ಲೂಕಿನ ಉಡಚನ್ ಗ್ರಾಮದಲ್ಲಿದೆ. ಚಕ್ಕುಬಂಧಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಜಲೀಂದ್ರ ಪಾಡೇರ್ ಅವರ ಮನೆ ಮತ್ತು ದಕ್ಷಿಣಕ್ಕೆ : ರಸ್ತೆ.
3	(ಲೋನ್ ಕೋಡ್: 32310000218 ಗುಲ್ಬರ್ಗಾ ಶಾಖೆ) ಚಂದಪ್ಪ ಕೊಳ್ಳಿ (ಸಾಲಗಾರರು) ರುಕ್ಮವ್ವ ವೋಗಂಗಪ್ಪ (ಸಹ ಸಾಲಗಾರರು)	29–04–2026 ರೂ. 5,67,361.00	ವಸತಿಯುತ ಮನೆಯ ಜಿ.ಪಿ. ನಂ.425, ಅದರ ಆಸ್ತಿ ಐಡಿ ಸಂಖ್ಯೆ.151500100600100453, ಅಳತೆ ಪೂರ್ವದಿಂದ ಪಶ್ಚಿಮಕ್ಕೆ 12.19 ಮೀ ಮತ್ತು ಉತ್ತರ – ದಕ್ಷಿಣಕ್ಕೆ 9.14 ಮೀಟರ್, ಒಟ್ಟು ವಿಸ್ತೀರ್ಣ 111.41 ಚದರ ಮೀ. ಕಲಬುರಗಿ ಜಿಲ್ಲೆ, ಅಫಜಲಪುರ ತಾಲ್ಲೂಕು, ಮಲ್ಲಾಬಾದ ಗ್ರಾಮದಲ್ಲಿದೆ. ಚಕ್ಕುಬಂಧಿ: ಪೂರ್ವಕ್ಕೆ: ಸರ್ಕಾರಿ ರಸ್ತೆ, ಪಶ್ಚಿಮಕ್ಕೆ: ಭಾಗಪ್ಪ ಕೊಳ್ಳಿ, ಉತ್ತರಕ್ಕೆ: ಸಾಯಿಬಣ್ಣ ಕೊಳ್ಳಿ ಮತ್ತು ದಕ್ಷಿಣಕ್ಕೆ: ಸರ್ಕಾರಿ ರಸ್ತೆ.
4	(ಲೋನ್ ಕೋಡ್: 32310000308 ಗುಲ್ಬರ್ಗಾ ಶಾಖೆ) ಸುರೇಶ್ (ಸಾಲಗಾರರು) ಸುಜಾತ (ಸಹ ಸಾಲಗಾರರು)	14–04–2026 ರೂ. 7,99,873.00	ವಸತಿಯುತ ಮನೆಯ ಜಿಪಿ ಸಂಖ್ಯೆ 3/48, ಆಸ್ತಿ ಐಡಿ ಸಂಖ್ಯೆ 151500603100520002, ಅಳತೆ ಪೂರ್ವದಿಂದ ಪಶ್ಚಿಮಕ್ಕೆ : 12.192 ಮೀ ಮತ್ತು ಉತ್ತರದಿಂದ ದಕ್ಷಿಣಕ್ಕೆ: 9,144 ಮೀಟರ್, ಒಟ್ಟು ವಿಸ್ತೀರ್ಣ 111.48 ಚದರ ಮೀ ಸ್ತಂಭ ಪ್ರದೇಶ 111.48 ಮೀಟರ್ ಹೊಂದಿದ್ದು, ಕಲಬುರಗಿ ಜಿಲ್ಲೆ, ಜೇವರ್ಗಿ ತಾಲ್ಲೂಕು, ಬೇಲೂರಿನಲ್ಲಿದೆ. ಚಕ್ಕುಬಂಧಿ ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಮಾಲಪ್ಪ ಬಿರಾದಾರ್, ಉತ್ತರಕ್ಕೆ: ರಸ್ತೆ ಮತ್ತು ದಕ್ಷಿಣಕ್ಕೆ: ಮಹದೇವಪ್ಪ ಕಾಂಬ್ಳೆ.

ಸದರಿ ಸಾಲಗಾರರು ಮೇಲೆ ತಿಳಿಸಿರುವಂತೆ ಎಹೆಚ್‌ಎಫ್‌ಎಲ್‌ಗೆ ಸಾಲದ ಮೊತ್ತ ಮರುಪಾವತಿ ಮಾಡಲು ವಿಫಲರಾದಲ್ಲಿ ವೆಚ್ಚ ಮತ್ತು ಪರಿಣಾಮಗಳಿಗೆ ಸದರಿ ಸಾಲಗಾರರ ಸಂಪೂರ್ಣ ಹೊಣೆಗಾರಿಕೆಯಲ್ಲಿ ಅಧಿನಿಯಮದ ಪ್ರಕರಣ 13(4) ಮತ್ತು ಅನ್ವಯವಾಗುವ ನಿಯಮಗಳ ಅನ್ವಯ ಎಹೆಚ್‌ಎಫ್‌ಎಲ್ ಮೇಲೆ ತಿಳಿಸಿದ ಭದ್ರತೆಯುಳ್ಳ ಸ್ವತ್ತುಗಳ ಮೇಲೆ ಕ್ರಮ ಕೈಗೊಳ್ಳುವುದು. ಎಹೆಚ್‌ಎಫ್‌ಎಲ್ ನ ಪೂರ್ವಭಾವಿ ಲಿಖಿತ ಅನುಮತಿ ಇಲ್ಲದೆ ಮಾರಾಟ, ಗುತ್ತಿಗೆ ಅಥವಾ ಇನ್ನಿತರೆ ರೂಪದಲ್ಲಿ ಮೇಲೆ ತಿಳಿಸಿರುವ ಸ್ವತ್ತುಗಳನ್ನು ವರ್ಗಾವಣೆ ಮಾಡದಂತೆ ಅಧಿನಿಯಮದ ಅನ್ವಯ ಸದರಿ ಸಾಲಗಾರರನ್ನು ನಿಷೇಧಿಸಲಾಗಿದೆ. ಸದರಿ ಅಧಿನಿಯಮದ ಉಪಬಂಧಗಳನ್ನು ಅಥವಾ ಇದರಡಿ ರೂಪಿಸಿರುವ ನಿಯಮಗಳನ್ನು ಯಾರಾದರು ಉಲ್ಲಂಘಿಸಿದರೆ ಅಥವಾ ಉಲ್ಲಂಘಿಸಲು ನೆರವಾದದ್ದೇ ಆದರೆ ಅಂತಹವರು ಅಧಿನಿಯಮದ ಅನ್ವಯ ತಿಳಿಸಿರುವಂತೆ ಜೈಲು ಶಿಕ್ಷೆ ಮತ್ತು/ಅಥವಾ ಕಾಯ್ದೆಯ ಅನುಸಾರ ದಂಡ ಪಾವತಿಸಬೇಕಾಗುತ್ತದೆ.

ಸ್ಥಳ : ಗುಲ್ಬರ್ಗಾ, ದಿನಾಂಕ : 07.05.2026

ಅಧಿಕೃತ ಅಧಿಕಾರಿ, ಆಧಾರ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

CITATION

IN THE COURT OF II ADDL. CIVIL JUDGE & J.M.F.C AT KALABURAGI
CRL. MISC. NO. 3232/2026

Mohd. Yunus Ali S/o Mohammed Yusuf Ali, Age: 60 years, Occ: Private work, R/o H.No. 11-1041, Madeena Colony Jeelanabad, MSK Mill, Kalaburagi (R.G. Nagar Police Station Jurisdiction) PETITIONER

V/S

The Chief Registrar Birth & Death Kalaburagi Mahanagar Palike, Kalaburagi RESPONDENT

To, all concerned

PETITION U/SEC. 13(3) OF REGISTRATION OF BIRTHS & DEATH ACT

To, all concerned,

Whereas the above named petitioner have filed a petition for direction to respondent to take entry the date of death of petitioner is the son of deceased Chhote Begum D/o Syed Mazharulla Zanjani Kalaburagi, in the register of birth & death office Mahanagar Palike, Kalaburagi, who expired on 26-01-2018, at H.No. 11-1041, Madeena Colony Jeelanabad, MSK Mill Kalaburagi. Whereas if anybody has got any interest in the matter he/she appear before this court on date: 11-06-2026 at about 11.00 am either person or through an Advocate duly instructed enable to answer in the matter, failing which the matter will be determined on merit basis. Given under my hand and seal of this court, this the 30-04-2026

SMT. FATRUBI K. SHAH
Advocate Kalaburagi

BY ORDER OF THE COURT
CHIEF MINISTERIAL OFFICER
PRL. CIVIL JUDGE & JMFC
COURT KALABURAGI

ಸುದ್ದಿ ಮಿಂಚು

ಕೆಕ್ಕರಸಾವಳಗಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶಾಂತಾಬಾಯಿ ಕುಂಬಾರ ಮುಖ್ಯಗುರುಗಳಾಗಿ ಆಗಮಿಸಿರುವ ಪ್ರಯುಕ್ತ ಸಿಬ್ಬಂದಿ ಹಾಗೂ ಎಸ್‌ಡಿಎಂಸಿ ವತಿಯಿಂದ ಸನ್ಮಾನಿಸಲಾಯಿತು.

ಮುಖ್ಯಗುರು ಅಧಿಕಾರ ಸ್ವೀಕಾರ

ಅಫಜಲಪುರ: ತಾಲೂಕಿನ ಕೆಕ್ಕರಸಾವಳಗಿ(ಸಂಗಾಪುರ) ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಗೆ ಹೊಸದಾಗಿ ಮುಖ್ಯಗುರುಗಳಾಗಿ ಶಾಂತಾಬಾಯಿ ಕುಂಬಾರ ಅವರು ಆಗಮಿಸಿರುವ ಪ್ರಯುಕ್ತ ಶಾಲೆಯ ಸಿಬ್ಬಂದಿ, ಎಸ್‌ಡಿಎಂಸಿ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಸನ್ಮಾನಿಸಿದರು.

ಶಿಕ್ಷಕ ಸಿಬ್ಬಂದಿ ಶಶಿಕಾಂತ ದೊಡ್ಡಮನಿ, ಪ್ರಭಾವತಿ ಸಣ್ಣೂರ, ರುದ್ರಪ್ಪ ಕುಂಬಾರ, ಜಾವೇದ ಹುಂಡೇಕಾರ ಹಾಗೂ ಎಸ್‌ಡಿಎಂಸಿ ಅಧ್ಯಕ್ಷ ರಾಜಕುಮಾರ ಯಂಕಂಚಿ ಮುಖಂಡರಾದ ಶ್ರೀಮಂತ ಬೋಳಶೆಟ್ಟಿ, ಕಲ್ಯಾಣಿ ಯಂಕಂಚಿ, ಲಕ್ಷ್ಮಣಗೌಡ ಪಾಟೀಲ, ಕುಪೇಂದ್ರ ಪೂಜಾರಿ, ಸಂಗಣ್ಣ ಕುಂಬಾರ, ಅಶೋಕ ಪಾಟೀಲ, ಸಿದ್ದರಾಮ ಮಾಹೂರ, ರಮೇಶ ಕುಂಬಾರ, ಶರಣಪ್ಪ ಸುತಾರ, ಜೆಟ್ಟೆಪ್ಪ ಇಟಗಿ, ನಿಂಗಪ್ಪ ಕೋಬಾಳ ಸೇರಿ ಗ್ರಾಮಸ್ಥರು ಇದ್ದರು.

ರಂಗಾಯಣದ ಮಕ್ಕಳ ಬೇಸಿಗೆ ರಂಗ ತರಬೇತಿ ಶಿಬಿರ ಸಮಾರೋಪ ನಾಳೆ

ಮುಕ್ತಾಯ ಹಂತಕ್ಕೆ ವರ್ಣರಂಜಿತ ಮಕ್ಕಳ ಹಬ್ಬ

ಸಂ.ಕ.ಸಮಾಚಾರ ಕಲಬುರಗಿ : ಏ. 7 ರಿಂದ ಆರಂಭವಾದ ಮಕ್ಕಳ ಬೇಸಿಗೆ ರಂಗತರಬೇತಿ ಶಿಬಿರ ಮಕ್ಕಳ ಹಬ್ಬವು 8ರಂದು ಸಮಾರೋಪಗೊಳ್ಳಲಿದೆ. ಈ ಶಿಬಿರದಲ್ಲಿ 78 ಮಕ್ಕಳು ದಾಖಲಾತಿ ಪಡೆದಿದ್ದು, ಸಂಗೀತ, ನೃತ್ಯ , ಮೈಮು, ನಾಟಕ, ತರಬೇತಿ ಪಡೆದಿದ್ದಾರೆ. ಪ್ರತಿ ದಿನ ಒಂದೊಂದು ಕಲಾ ಪ್ರಕಾರದ ಪರಿಚಯ ಮಾಡಿಕೊಡಲಾಗಿದೆ. ಪ್ರಮುಖವಾಗಿ ಹೆಜ್ಜೆ ಮೇಳ,

ಡೊಳ್ಳು ಕುಣಿತ, ಜಾನಪದ ಜಾದು, ಕುಂಬಾರನ ಕಲೆ ಪ್ರದರ್ಶನ, ಮಕ್ಕಳಿಂದ ಕೈಗೊಂಬೆ, ಚಿತ್ರಕಲೆ, ಕ್ಲೇ ಮಾಡಲಿಂಗ್, ವಿವಿಧ ಕ್ಷೇತ್ರದ ಸಾಧಕರೊಂದಿಗೆ ಸಂವಾದ, ಮಕ್ಕಳಿಗೆ ಕಥಾವಾಚನ, ಮಕ್ಕಳಿಂದ ಕಥೆ ಹೇಳಿಸುವುದು ಹೀಗೆ ಎಲ್ಲಾ ಪ್ರಕಾರದ ಪರಿಚಯ ಮಕ್ಕಳಿಗೆ ಮಾಡಿಕೊಡಲಾಗಿದೆ.

ಅಂಧ ವಿಕಲಚೇತನರಾದ ಬಸವರಾಜ ಅವರು, ಮಕ್ಕಳಿಗೆ ಗಣಿತ ವಿಷಯ ಕುರಿತು ಸರಳವಾದ ಸೂತ್ರಗಳನ್ನು ಹೇಳಿದರು. ಕಬ್ಬಿಣದ ಕಡಲೆಯಂತೆ ಇರುವ ಗಣಿತವನ್ನು ಹೇಗೆ ಸರಳೀಕರಿಸಿಕೊಂಡು ಅರಿತುಕೊಳ್ಳಬೇಕು ಎಂಬುದರ ಮನನ ಮಾಡಿಸಿದರು. ನಾಗನಾಥ ಯಾದಗಿರ ಅವರು ಸ್ಥಳೀಯ ಪಕ್ಷಿಗಳು ಹಾಗೂ ಕಲಬುರಗಿಗೆ ಬರುವ ಬೇರೆ ಬೇರೆ ರಾಜ್ಯ, ದೇಶಗಳಿಂದ, ಖಂಡಗಳಿಂದ ಬರುವ ಪಕ್ಷಿಗಳ ಪರಿಚಯ ಮಾಡಿಕೊಟ್ಟರು. ಪಕ್ಷಿ ಪ್ರಪಂಚದ ವಿಚಿತ್ರ ಸಂಗತಿಗಳನ್ನು ಪರಿಚಯಿಸಿದರು. ಅಗ್ನಿ ಶಾಮಕ ದಳದವರನ್ನು ಕರೆಯಿಸಿ ಅಗ್ನಿ ದುರಂತ ನಡೆದರೆ ಮೊದಲು ಏನು ಮುನ್ನೆಚ್ಚರಿಕೆ ತಗೆದುಕೊಳ್ಳಬೇಕು, ಬೆಂಕಿಯನ್ನು ಯಾವರೀತಿ ನಂದಿಸಬೇಕು ಎಂದು ಪ್ರಾತ್ಯಕ್ಷತೆ ನೀಡಿ ಮಕ್ಕಳಿಗೆ ಅರಿವು ನೀಡಿದರು. ಈire Engine

ನಲ್ಲಿ ಇರುವ ನೀರನ್ನು ಕಾರಂಜಿ ತರ ನೀರು ಬಿಟ್ಟು ಅದರಲ್ಲಿ ಮಕ್ಕಳು ಬಣ್ಣದ ಆಡವಾಡಿ ಸಂಭ್ರಮಿಸಿದರು. ಸ್ಥಳಿಯ ಪ್ರೇಕ್ಷಣಿಯ ಮತ್ತು ಐತಿಹಾಸಿಕ ಸ್ಥಳಗಳ ಕಿರುಚಿತ್ರ ಮತ್ತು ಮಕ್ಕಳಿಗಾಗಿಯೆ ಸಿದ್ದಪಡಿಸಿದ ಕೆಲವು ಕಿರುಚಿತ್ರಗಳನ್ನು ಪ್ರದರ್ಶಿಸಲಾಯಿತು. ಈ ಮೊದಲು ಎಲ್ಲಾ ಹಳ್ಳಿಗಳಲ್ಲಿ ಮಣ್ಣಿನ ಗಡಗಿಯಲ್ಲಿ ಆಹಾರ ತಯಾರಿಸಲಾಗುತ್ತಿತ್ತು. ಕ್ರಮೇಣವಾಗಿ ಮಣ್ಣಿನ ಮಡಿಕೆಗಳ ಬದಲು ಜರ್ಮನ್, ಸ್ಟೀಲ್ ಪಾತ್ರಗಳು ಬಂದವು. ಆದ್ದರಿಂದ ಮಕ್ಕಳಿಗೆ ಮಣ್ಣಿನ ಗಡಗಿಗಳ ಮಹತ್ವವನ್ನು ತಿಳಿಸಲು ಮಣ್ಣಿನ ಗಡಗೆಯಲ್ಲಿ ಅಡುಗೆಯ ರೂಪದಲ್ಲಿ ಮಕ್ಕಳಿಂದ ಮಣ್ಣಿನ ಗಡಗೆಯಲ್ಲಿ ವಿವಿಧ ತರಹದ ಅನೇಕ ರೀತಿಯ ತಿಂಡಿ ತಿನಿಸುಗಳನ್ನು ಅಡುಗೆ ಮಾಡಿದ ರುಚಿಕರ ಆಹಾರ ಬಂದ ಸಾರ್ವಜನಿಕರು, ಮಕ್ಕಳ ಪಾಲಕರು, ಮಕ್ಕಳಿಂದ ಸಿದ್ದವಾದ ಆಹಾರ ಸವಿದು ಮಕ್ಕಳೊಂದಿಗೆ ಸಂಭ್ರಮಿಸಿದರು. ಈ ಎಲ್ಲ ಚಟುವಟಿಕೆಗಳು ನಿರ್ದೇಶಕಿ ಡಾ. ಸುಜಾತಾ ಜಂಗಮಶೆಟ್ಟಿ, ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಸವರಾಜ ಹೂಗಾರ, ಆಡಳಿತಾಧಿಕಾರಿ ಸಿದ್ರಾಮ ಸಿಂಧೆ ಅವರ ಮಾರ್ಗದರ್ಶನದಲ್ಲಿ ಹಾಗೂ ರಾಜಕುಮಾರ ಎಸ್.ಕೆ ಸಂಚಾಲಕತ್ವದಲ್ಲಿ ರೆಪರ್ಟರಿ ಕಲಾವಿದರು ಶ್ರದ್ಧೆಯಿಂದ ಮಕ್ಕಳಿಗೆ ತರಬೇತಿ ನೀಡಿದರು.

ವಿಯೆಟ್ನಾಂನಲ್ಲಿ ಕೆಲಸದ ಆಮಿಷವೊಡ್ಡಿ ಕೂಡಿ ಹಾಕಿದ್ರು

ಕಲಬುರಗಿ: ವಿದೇಶದಲ್ಲಿ ಡಾಟಾ ಎಂಟ್ರಿ ಆಪರೇಟರ್ ಕೆಲಸ ಕೊಡಿಸುವುದಾಗಿ ನಂಬಿಸಿ, ಯುವಕರನ್ನು ಕಾಂಬೋಡಿಯಾಕ್ಕೆ ಕರೆದೊಯ್ದು ಅಲ್ಲಿ ಸೈಬರ್ ಅಪರಾಧ ಎಸಗುವಂತೆ ಒತ್ತಾಯಿಸಿ ಕೂಡಿ ಹಾಕಿದ್ದ ಘಟನೆ ಬೆಳಕಿಗೆ ಬಂದಿದೆ.

ಈ ನಗರದ ಚೌಕ್ ಪೊಲೀಸ್ ಠಾಣೆಯಲ್ಲಿ ಕಲಬುರಗಿಯ ತಾಜ್ ನಗರದ ನಿವಾಸಿ ಸೈಯದ್ ಸೋಫಿಯಾನ್ (27) ಎಂಬುವವರು ಬೆಂಗಳೂರು ಮೂಲದ ಏಜೆಂಟ್ ಮದನ್ ವಡಿವೇಲ್ ವಿರುದ್ಧ ದೂರು ನೀಡಿದ್ದಾರೆ.

ಬೆಂಗಳೂರಿನಲ್ಲಿ ಓಲಾ ಚಾಲಕರಾಗಿದ್ದ ಇವರು, ಫೇಸ್‌ಬುಕ್‌ನಲ್ಲಿ ಬಂದ ಜಾಹೀರಾತು ನೋಡಿ ಮದನ್ ವಡಿವೇಲ್ ಎಂಬ ಏಜೆಂಟ್‌ನನ್ನು ಸಂಪರ್ಕಿಸಿದ್ದರು. ವಿಯೆಟ್ನಾಂನಲ್ಲಿ ತಿಂಗಳಿಗೆ 700 (ಸುಮಾರು 58,000 ರೂ.) ಸಂಬಳದ ಡಾಟಾ ಎಂಟ್ರಿ ಕೆಲಸ ಕೊಡಿಸುವುದಾಗಿ ಮದನ್ ನಂಬಿಸಿದ್ದನು.

2025ರ ಡಿಸೆಂಬರ್‌ನಲ್ಲಿ ಸೋಫಿಯಾನ್ ಮತ್ತು ಅವರ ತಮ್ಮ ವಿಯೆಟ್ನಾಂಗೆ ತೆರಳಿದರು. ಆದರೆ ಅಲ್ಲಿಂದ ಅವರನ್ನು ರಸ್ತೆ ಮಾರ್ಗದ ಮೂಲಕ ಕಾಂಬೋಡಿಯಾ ಗಡಿಗೆ ಕರೆದೊಯ್ಯಲಾಯಿತು. ಕಾಂಬೋಡಿಯಾದ ಪೋನೊಕಲಿ ಸಿಟಿಯ ಚೀನಾ ಮೂಲದ ಕಂಪನಿಯೊಂದರಲ್ಲಿ ಇವರನ್ನು ಕೂಡಿ ಹಾಕಲಾಯಿತು. ಅಲ್ಲಿ ಇವರಿಗೆ ಡೇಟಿಂಗ್ ಆಪ್‌ಗಳ ಮೂಲಕ ನಕಲಿ ಐಡಿ ಸೃಷ್ಟಿಸಿ ಭಾರತೀಯರಿಗೆ ಹಣ ಹೂಡಿಕೆ ಮಾಡುವಂತೆ ವಂಚಿಸುವ ಕೆಲಸ ನೀಡಲಾಯಿತು.

ಕೆಲಸ ಮಾಡಲು ನಿರಾಕರಿಸಿದಾಗ ಏಜೆಂಟ್‌ಗೆ ನೀಡಲಾದ 3 ಲಕ್ಷ ರೂ. ವಾಪಸ್ ನೀಡಬೇಕು, ಇಲ್ಲದಿದ್ದರೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿ ಮೊಬೈಲ್‌ಗಳನ್ನು ಕಸಿದುಕೊಳ್ಳಲಾಗಿತ್ತು. ಜೀವಭಯದಿಂದ ಇಬ್ಬರು ಯುವಕರು ಕೆಲ ದಿನಗಳ ಕಾಲ ಅಲ್ಲಿ ಕೆಲಸ ಮಾಡಬೇಕಾಯಿತು.

ಜನವರಿ 15, 2026 ರಂದು ಅಮೆರಿಕ ಮತ್ತು ಕಾಂಬೋಡಿಯಾ ಪೊಲೀಸರು ಜಂಟಿಯಾಗಿ ಈ ಸೈಬರ್ ಕ್ರೈಂ ಅಡ್ಡೆಯ ಮೇಲೆ ದಾಳಿ ಮಾಡಿದರು. ಈ ಸಂದರ್ಭದಲ್ಲಿ ಸಿಕ್ಕ ಅವಕಾಶವನ್ನು ಬಳಸಿಕೊಂಡ ಯುವಕರು ಅಲ್ಲಿಂದ ತಪ್ಪಿಸಿಕೊಂಡು ಕಾಡಿನಲ್ಲಿ ಅವಿತುಕೊಂಡರು. ನಂತರ ಭಾರತೀಯ ರಾಯಭಾರಿ ಕಚೇರಿ ಸಂಪರ್ಕಿಸಿ, ತುರ್ತು ಪ್ರಮಾಣಪತ್ರ ಪಡೆದು ಫೆಬ್ರವರಿ 3 ರಂದು ಸುರಕ್ಷಿತವಾಗಿ ಕಲಬುರಗಿಗೆ ಮರಳಿದ್ದಾರೆ.

ಬೆಂಗಳೂರು ಮೂಲದ ಏಜೆಂಟ್ ಮದನ್ ವಡಿವೇಲ್ ಮತ್ತು ಇತರರ ವಿರುದ್ಧ ಚೌಕ್ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ನಕಲಿ ನಂಬರ್ ಪ್ಲೇಟ್ ಹೊಂದಿದ ಆಟೋ ಜಪ್ತಿ

ಕಲಬುರಗಿ: ನಗರದ ರೈಲ್ವೆ ನಿಲ್ದಾಣದ ಬಳಿ ನಕಲಿ ನೋಂದಣಿ ಸಂಖ್ಯೆ ಹೊಂದಿದ್ದ ಆಟೋವನ್ನು ಸಂಚಾರ ಪೊಲೀಸರು ಜಪ್ತಿ ಮಾಡಿದ್ದು, ಪೊಲೀಸರನ್ನು ಕಂಡು ಚಾಲಕ ಪರಾರಿಯಾದ ಘಟನೆ ಮಂಗಳವಾರ ನಡೆದಿದೆ.

ಮೇ. 1ರಂದು ಸಂಚಾರ ಪೊಲೀಸ್ ಠಾಣೆ–01ರ ಪೊಲೀಸ್ ಪೇದೆ ಭೀಮು ರಾಠೋಡ ಮತ್ತು ತಂಡದವರು ರೈಲ್ವೆ ಸ್ಟೇಷನ್‌ನಿಂದ ತಿಮ್ಮಾಪೂರ ಸರ್ಕಲ್‌ವರೆಗೆ ಸಂಚಾರ ಸುಗಮಗೊಳಿಸುವ ಕರ್ತವ್ಯದಲ್ಲಿದ್ದರು. ಬೆಳಿಗ್ಗೆ 10ಗಂಟೆ ಸುಮಾರಿಗೆ ತಿಮ್ಮಾಪೂರ ಸರ್ಕಲ್ ಕಡೆಯಿಂದ ಒನ್‌ವೇ ರಸ್ತೆಯಲ್ಲಿ ಬಂದ ಆಟೋ ತಡೆದು ಪರಿಶೀಲಿಸಿದಾಗ ಅಕ್ರಮ ಬೆಳಕಿಗೆ ಬಂದಿದೆ.

ಆಟೋದ ಹಿಂಭಾಗದಲ್ಲಿ ಪರ್ಮಿಟ್ ನಂ. 5369 ಎಂದು ಬರೆಯಲಾಗಿತ್ತು. ಮುಂಭಾಗದಲ್ಲಿ ಕೆಎ–32/6353 ಎಂಬ ನಂಬರ್ ಇತ್ತು. ಆದರೆ, ಸೂಕ್ಷ್ಮವಾಗಿ ಗಮನಿಸಿದಾಗ ಅದರ ಕೆಳಗಡೆಯೇ ಕೆಎ–32/ಃ–4304 ಎಂಬ ಮತ್ತೊಂದು ನಂಬರ್ ಪತ್ತೆಯಾಗಿದೆ.

ಪೊಲೀಸರು ಆಟೋದ ಚೆಸ್ಸಿ ನಂಬರ್ ಪರಿಶೀಲಿಸಿದಾಗ ವಾಹನದ ಮೇಲಿದ್ದ ನಂಬರ್‌ಗಳಿಗೂ ಮತ್ತು ಮೂಲ ದಾಖಲೆಗಳಿಗೂ ಯಾವುದೇ ಸಂಬಂಧವಿಲ್ಲದಿರುವುದು ಕಂಡು ಬಂದಿದೆ.

ನಂಬರ್ ಪ್ಲೇಟ್‌ಗಳ ಬಗ್ಗೆ ಪೊಲೀಸರು ವಿಚಾರಣೆ ನಡೆಸುತ್ತಿದ್ದಂತೆಯೇ, ಗಾಬರಿಗೊಂಡ ಚಾಲಕ ಆಟೋವನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾನೆ.

ನಕಲಿ ನಂಬರ್ ಬಳಸಿ ಸಾರ್ವಜನಿಕರಿಗೆ ವಂಚನೆ ಮಾಡುತ್ತಿದ್ದ ಹಾಗೂ ಸಂಭವನೀಯ ಅಪಘಾತಗಳ ಸಂದರ್ಭದಲ್ಲಿ ಕಾನೂನಿನಿಂದ ತಪ್ಪಿಸಿಕೊಳ್ಳಲು ಈ ಸಂಚು ರೂಪಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

ಸ್ಟೇಷನ್ ಬಜಾರ್ ಪೊಲೀಸರು ಆಟೋವನ್ನು ಜಪ್ತಿ ಮಾಡಿ ಆಟೋ ಚಾಲಕ ಮತ್ತು ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೃಷಿ ಪದವಿಗಿದೆ ಹೆಚ್ಚಿನ ಭವಿಷ್ಯ

ಚೇತನಗೌಡ ಗೋನಾಯಕ ಅಭಿಮತ | ಡಾ.ಬುಜುರ್ಕೆ ಅಕಾಡೆಮಿಯಿಂದ ಸಿಇಟಿ ತರಬೇತಿಗೆ ಚಾಲನೆ

ಸಂ.ಕ.ಸಮಾಚಾರ ಕಲಬುರಗಿ: ವೈದ್ಯಕೀಯ, ಇಂಜಿನಿಯರಿಂಗ್ ಕೋರ್ಸ್‌ಗಳಿಗಿಂತ ಕೃಷಿಗೆ ಸಂಬಂಧಿತ ಕೋರ್ಸ್‌ಗಳಿಗೆ ಹೆಚ್ಚಿನ ಭವಿಷ್ಯ ಹಾಗೂ ಬೇಡಿಕೆಯಿದೆ ಎಂದು ಕಾಂಗ್ರೆಸ್ ಯುವ ಘಟಕದ ರಾಷ್ಟ್ರೀಯ ಮಾಧ್ಯಮ ಸಂಯೋಜಕ ಚೇತನಗೌಡ ಗೋನಾಯಕ ಹೇಳಿದರು.

ಡಾ. ಬುಜುರ್ಕೆ ಅಕಾಡೆಮಿ ಆಯೋಜಿಸಿದ್ದ ಬಿಎಸ್ಸಿ ಅಗ್ರಿ ಕೋರ್ಸ್ ಮತ್ತು ಕೃಷಿಗೆ ಸಂಬಂಧಿಸಿದ ಕೋರ್ಸ್ ಗಳ ಪ್ರಾಯೋಗಿಕ (ಸಿಇಟಿ) ಪರೀಕ್ಷೆಯ ತರಬೇತಿಗೆ ಚಾಲನೆ ನೀಡಿ ಅವರು ಮಾತನಾಡಿ,.

ಹಿಂದುಳಿದ ಈ ಭಾಗದಲ್ಲಿ ಕೃಷಿಗೆ ಸಂಬಂಧಿತ ಕೋರ್ಸ್‌ಗಳ ಪ್ರವೇಶಾತಿ ಕುರಿತು ಡಾ. ಬುಜುರ್ಕೆ ಅಕಾಡೆಮಿ ತರಬೇತಿ ಕೊಡುತ್ತಿರುವುದು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕೋರ್ಸ್ ಗೆ ಆಯ್ಕೆಯಾಗುತ್ತಿರುವುದು ದೊಡ್ಡ ಕೊಡುಗೆ. ವಿದ್ಯಾರ್ಥಿಗಳಲ್ಲಿ ಪಿಯುಸಿ ನಂತರ ಮುಂದೇನು? ಎಂಬುದರ ಕುರಿತಾಗಿ ಸ್ಪಷ್ಟತೆ ಇರಬೇಕು. ಪ್ರಮುಖವಾಗಿ ಯಾರದ್ದೇ ನೋಡಿ ಹಾಗೂ ಒತ್ತಡಕ್ಕೆ ಒಳಗಾಗಿ ಕೋರ್ಸ್ ಆಯ್ಕೆ

ಕಲಬುರಗಿಯ ಸಂಗಮೇಶ್ವರ ಕಾಲೋನಿಯಲ್ಲಿ ಆಯೋಜಿಸಿದ್ದ ಸಿಇಟಿ ಪರೀಕ್ಷೆ ತರಬೇತಿಗೆ ಚಾಲನೆ ನೀಡಲಾಯಿತು.

ಮಾಡಿಕೊಳ್ಳಬೇಡಿ, ಇಚ್ಛೆಯ ಕೋರ್ಸ್ ಸೇರಿ ಭವಿಷ್ಯ ರೂಪಿಸಿಕೊಳ್ಳಿ ಎಂದರು.

ರಾಜ್ಯದಲ್ಲಿ ಈಗ ಭರ್ತಿ ಮಾಡಿಕೊಳ್ಳಬೇಕೆಂದಿರುವ 52 ಸಾವಿರ ಹುದ್ದೆಗಳಲ್ಲಿ 36 ಸಾವಿರ ಕಲ್ಯಾಣ ಕರ್ನಾಟಕ ಭಾಗದ್ದಾಗಿವೆ. ಹೀಗಾಗಿ ಈ ಭಾಗದವರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತಿರುವುದು ಅಭಿವೃದ್ಧಿಪೂರಕ. ಇಷ್ಟೊಂದು ಹುದ್ದೆಗಳು ದೊರಕಲು 371ಜೆ ವಿಧಿ ಜಾರಿಗೆ ತಂದಿರುವುದೇ ಕಾರಣ ಎಂದು ತಿಳಿಸಿದರು.

ಆಕಾಶವಾಣಿ ಕೇಂದ್ರದ ನಿವೃತ್ತ ಕಾರ್ಯಕ್ರಮ ಅಧಿಕಾರಿ ಡಾ. ಸದಾನಂದ ಪೆರ್ಲ ಉಪನ್ಯಾಸ ನೀಡಿ, ಪ್ರಯತ್ನವೊಂದೇ ಸಾಧನೆಗೆ ಪೂರಕ. ಆಲಸ್ಯದಿಂದ ಏನು ಸಾಧನೆ ಮಾಡಲಾಗದು. ಪರೀಕ್ಷೆ ಬಂದಾಗೊಮ್ಮೆ ಓದಬೇಡಿ. ರೈತನೇ ಈ ಜಗತ್ತಿಗೆ ಆಧಾರ. ರೈತನಿಂದಲೇ ಎಲ್ಲರೂ ಎನ್ನುವುದು ಮತ್ತಷ್ಟು ಬಲಬಪಡಿಸಲು ತಾವು ಮುಂದಾಗಬೇಕು ಎಂದರು.

ಹಿರಿಯ ಪತ್ರಕರ್ತ ಹಣಮಂತರಾವ್ ಭೈರಾಮಡಗಿ ಮಾತನಾಡಿ, ಬಿಎಸ್ಸಿ ಕೃಷಿ ಪದವಿ ಸರ್ಕಾರಿ ನೌಕರಿ ಪಡೆಯಲು ಎಂಬುದನ್ನು ಇಟ್ಟುಕೊಳ್ಳದೇ ಕೃಷಿ ಕ್ಷೇತ್ರ ಬಲಪಡಿಸಲು ಪದವಿ ಪಡೆಯುವ ಎಂಬುದರ ಧ್ಯೇಯ ಇಟ್ಟುಕೊಳ್ಳಿ ಎಂದರು.

ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ರಾಜು ತೆಗ್ಗಳ್ಳಿ ಮಾತನಾಡಿದರು. ಡಾ. ಬುಜುರ್ಕೆ ಅಕಾಡೆಮಿ ನಿರ್ದೇಶಕ ಡಾ.ಶಿವರಾಜ ಬುಜುರ್ಕೆ ಪ್ರಾಸ್ತಾವಿಕ ಮಾತನಾಡಿ, 10 ವರ್ಷಗಳಿಂದ ಅಕಾಡೆಮಿಯಿಂದ ಕೃಷಿಗೆ ಸಂಬಂಧಿಸಿದ ವಿವಿಧ ಕೋರ್ಸ್ ಗಳ ಪ್ರಾಯೋಗಿಕ ಪರೀಕ್ಷೆ ಕುರಿತಾಗಿ ತರಬೇತಿ ನೀಡಲಾಗುತ್ತಿದೆ. ವರ್ಷಂಪ್ರತಿ ತಮ್ಮಲ್ಲಿ ತರಬೇತಿ ಪಡೆದವರಲ್ಲಿ 40–50 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬಿಎಸ್ಸಿ ಕೃಷಿ ಪದವಿ ಕೋರ್ಸ್ ಗಳಿಗೆ ಆಯ್ಕೆಯಾಗುತ್ತಿದ್ದಾರೆ ಎಂದರು.

ಪ್ರಮುಖರಾದ ಸಿ.ಬಿ.ಹಿರೇಮಠ, ಚೇತನ ಬುಜುರ್ಕೆ, ಹರ್ಷವರ್ಧನ ಬುಜುರ್ಕೆ, ಸುಷ್ಮಾ ಬುಜುರ್ಕೆ ಸೇರಿ ಇತರರಿದ್ದರು. ಮಹೇಶ ಅರಳಿ ನಿರೂಪಿಸಿದರು.

> ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್‌ಗಳಿಗಿಂತ ಕೃಷಿ ಕೋರ್ಸ್ ಗಳೇ ಬೇಡಿಕೆ ಹೆಚ್ಚುತ್ತಿದೆ. ಹೀಗಾಗಿ ಹೆಚ್ಚಿನ ಆಸಕ್ತಿಯಿಂದ ಓದಿ. ಡಾ. ಬುಜುರ್ಕೆ ಅಕಾಡೆಮಿಯಲ್ಲಿ ಕೃಷಿಗೆ ಸಂಬಂಧಿಸಿದ ವಿವಿಧ ಕೋರ್ಸ್‌ಗಳ ಪರಿಕರಗಳ ಲ್ಯಾಬ್ ಮತ್ತು ಮಾದರಿಗಳು ವಿದ್ಯಾರ್ಥಿಗಳ ಕಲಿಕೆಗೆ ಪರಿಣಾಮಕಾರಿಯಾಗಿವೆ.
>
> ■ ಡಾ. ರಾಜು ತೆಗ್ಗಳ್ಳಿ, ಮುಖ್ಯಸ್ಥ, ಕೃಷಿ ವಿಜ್ಞಾನ ಕೇಂದ್ರ, ಕಲಬುರಗಿ.

ಶ್ರೀನಿವಾಸ ಸರಡಗಿ ಶ್ರೀಗಳ ಕೊಡುಗೆ ಅನನ್ಯ

ಸಂ.ಕ. ಸಮಾಚಾರ ಕಲಬುರಗಿ: ಮೌಲ್ಯಗಳ, ಧರ್ಮದ, ಸೇವಾಭಾವದ ಮತ್ತು ಸಮಾಜಮುಖಿ ಚಿಂತನೆಯ ಹಬ್ಬವಾಗಿದೆ ಎಂದು ಶಿಕ್ಷಣ ಪ್ರೇಮಿ ಶಿವಾನಂದ ಖಜೂರಗಿ ಹೇಳಿದರು.

ನಗರ ಹೊರವಲಯದ ತಾಜ ಸುಲ್ತಾನಾಪುರದ ಚಿನ್ನದಕಂತಿ ಚಿಕ್ಕವಿಕ್ಕವೀರೇಶ್ವರ ಸಂಸ್ಥಾನ ಹಿರೇಮಠದಲ್ಲಿ ಶ್ರೀಮಠದ ಪೀಠಾಧಿಪತಿ ಪೂಜ್ಯ ಡಾ. ರೇವಣಸಿದ್ಧ ಶಿವಾಚಾರ್ಯರ ಜನ್ಮ ದಿನದ ನಿಮಿತ್ತ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನಿಸಿ ಮಾತನಾಡಿದ ಅವರು, ಪೀಠಾಧಿಪತಿಗಳು ನಮ್ಮ ಸಮಾಜಕ್ಕೆ ನೀಡಿರುವ ಮಾರ್ಗದರ್ಶನ ಅಪಾರ. ಅವರು ಕೇವಲ ಆಧ್ಯಾತ್ಮಿಕ ನಾಯಕರಲ್ಲ, ಸಮಾಜವನ್ನು ಸರಿಯಾದ ದಾರಿಯಲ್ಲಿ ನಡೆಸುವ ದೀಪಸ್ತಂಭರಾಗಿದ್ದಾರೆ ಎಂದು ಗುಣಗಾನ ಮಾಡಿದರು.

ಮಠದ ಪೀಠಾಧಿಪತಿ ಪೂಜ್ಯ ಡಾ. ರೇವಣಸಿದ್ಧ ಶಿವಾಚಾರ್ಯರು ಆಶೀರ್ವಚನ ನೀಡಿದರು. ಇದುವರೆಗೂ ಮಠಕ್ಕೆ ನಾನು ಮಾಡಿದ್ದೂ ಕಡಿಮೆ, ಆದರೆ ಭಕ್ತರೇ ಶ್ರೀನಿವಾಸ ಸರಡಗಿ, ಕುರಕೋಟಿ, ತಾಜ ಸುಲ್ತಾನಪುರ ಮಠದ ಭಕ್ತರಿಂದಲೇ ಮಠ ಬೆಳಕಿಗೆ ಬಂದಿದೆ ಎಂದರು.

ಸಾಹಿತಿ, ಶಿಕ್ಷಣ ಪ್ರೇಮಿ ಬಿ. ಎಚ್. ನಿರಗುಡಿ, ಶಿಕ್ಷಣ ಪ್ರೇಮಿ ಶಿವಾನಂದ ಖಜುರ್ಗಿ, ಆನಂದ ಪೂಜಾರಿ, ಸುಭಾಷ ಓಗಿ, ಸಂಗೀತ ಕಲಾವಿದರಾದ ಸೂರ್ಯಕಾಂತ ಡುಮ್ಮಾ, ಶಿವಶಂಕರ ಬಿರಾದಾರ, ಶಿವಕುಮಾರ ಜಾಲಹಳ್ಳಿ, ರವಿಸ್ವಾಮಿ ಗೋಟೂರ ಅವರನ್ನು ಗೌರವಿಸಲಾಯಿತು. ಉಪ ತಹಸೀಲ್ದಾರ ವೀರಯ್ಯ ಹೊಸಮಠ, ಗ್ರಾಮ ಪಂಚಾಯತ ಮಾಜಿ ಅಧ್ಯಕ್ಷರಾದ ಚಂದ್ರಶೇಖರ ಜಿ. ಪಾಟೀಲ ವೇದಿಕೆಯಲ್ಲಿದ್ದರು. ಶಿವಶಂಕರ ಬಿರಾದಾರ ಪ್ರಾರ್ಥಿಸಿದರು. ವಿನೋದ ಮಾಳಾ ಸ್ವಾಗತಿಸಿದರು. ನ್ಯಾಯವಾದಿ ಹಣಮಂತರಾಯ ಅಟ್ಟೂರ ಪ್ರಾಸ್ತಾವಿಕವಾಗಿ ಮಾತನಾಡಿದರು.

ರವಿಕುಮಾರ ಶಹಾಪುರಕರ್ ನಿರೂಪಿಸಿ, ವಂದಿಸಿದರು. ಕಾರ್ಯಕ್ರಮದಲ್ಲಿ ಅಂಬಾರಾಯ ಕೋಣೆ, ಗುರುಶಾಂತ ಓಗಿ, ಶಿವಲಿಂಗಪ್ಪ ಮಾಳಾ, ಶರಣು ಮಾಮಾನಿ, ಬಸವರಾಜ ಓಗಿ, ರೇವಣಸಿದ್ದಯ್ಯ ಬೇಲೂರ, ರಾಜಶೇಖರ ಪಾಟೀಲ, ಶರಣಬಸಪ್ಪ ಮಚೆಟ್ಟಿ, ಚಿನ್ನು ಮಾಮನಿ, ಸುರೇಶ ಪಡಶೆಟ್ಟಿ, ನಾಗೇಂದ್ರ ದೇಗಲಮಡ್ಡಿ, ಮಹಾಂತಯ್ಯ ಬಾಳ್ಳಿ, ವಿನೋದ ಚಿಮದಿ, ಬಸವರಾಜ ಶೀಲವಂತ, ಸುಚಿತ ಮಾಳಾ, ಮಹಾದೇವ ನಾಗೂರ ಸೇರಿ ಅನೇಕರಿದ್ದರು.

ಕಲಬುರಗಿಯ ತಾಜಸುಲ್ತಾನಪುರ ಗ್ರಾಮದಲ್ಲಿ ಶ್ರೀಮಠದ ಪೀಠಾಧಿಪತಿ ಪೂಜ್ಯ ಡಾ. ರೇವಣಸಿದ್ಧ ಶಿವಾಚಾರ್ಯರ ಜನ್ಮ ದಿನ ಆಚರಿಸಲಾಯಿತು.

ಶಕ್ತಿಯೋಜನೆ ಪರಿಶೀಲನೆ 12ರಂದು

ಸಂ.ಕ.ಸಮಾಚಾರ ಹುಮನಾಬಾದ್ : ಮೇ 12ರಂದು ಬೆಳಿಗ್ಗೆ 10ಕ್ಕೆ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳ ಒಂದಾದ ಶಕ್ತಿ ಯೋಜನೆ ಅನುಷ್ಠಾನ ಕುರಿತು ಗ್ಯಾರಂಟಿ ಸಮಿತಿ ಅಧ್ಯಕ್ಷ ಅಹ್ಮದ್ ಮೈನೋದ್ದಿನ ಅಫಸರಮಿಯ್ಯ ಹಾಗೂ ಸದಸ್ಯರ ತಂಡ ಪರಿಶೀಲನೆ ನಡೆಸಲಿದೆ.

ಕಾರಣ ಸಂಬಂಧಿತ ಅನುಷ್ಠಾನ ಸಮಿತಿ ಸದಸ್ಯರು ಹಾಗೂ ಅನುಷ್ಠಾನ ಅಧಿಕಾರಿಗಳು ಸಕಾಲಕ್ಕೆ ಕೇಂದ್ರ ಬಸದ್ ನಿಲ್ದಾಣದಲ್ಲಿ ಅಗತ್ಯ ದಾಖಲೆಗಳ

ಸಮೇತ ಹಾಜರ್ ಇರುವಂತೆ ಮನವಿ ಮಾಡಲಾಗಿದೆ. ಜೊತೆಗೆ ಶಕ್ತಿ ಯೋಜನೆಗಳ ಫಲಾನುಭವಿಗಳಿಗೆ ಯಾವುದೇ ರೀತಿ ತೊಂದರೆ ಇದ್ದಲ್ಲಿ ಗ್ಯಾರಂಟಿ ಸಮಿತಿ ಅಧ್ಯಕ್ಷ ಹಾಗೂ ಸದಸ್ಯರ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬಹುದು. ಕಾರಣ ಈ ಸೌಲಭ್ಯದಿಂದ ಫಲಾನುಭವಿಗಳು ಪ್ರಯೋಜನ ಪಡೆಯಬೇಕೆಂದು ಗ್ಯಾರಂಟಿ ಸಮಿತಿ ಕಾರ್ಯದರ್ಶಿ ದೀಪಿಕಾ ನಾಯ್ಕರ್ ಈ ಮೂಲಕವಾಗಿ ಕೋರಿದ್ದಾರೆ.

ರೈತ ಮಹಿಳೆಯರಿಗೆ "ರೈತ ಸೇವಾ ಶ್ರೀ" ಪ್ರಶಸ್ತಿ ಪ್ರದಾನ

ಕಲಬುರಗಿ: ನಗರದ ಸುವರ್ಣ ಭವನ (ಕನ್ನಡ ಭವನ)ದಲ್ಲಿ ಬುಧವಾರ ಶ್ರೀ ದಾನೇಶ್ವರಿ ಸೇವಾ ಸಂಸ್ಥೆ ಸಂಸ್ಥೆಯ 11ನೇ ವಾರ್ಷಿಕೋತ್ಸವ ಅಂಗವಾಗಿ ಪ್ಲಾಸ್ಟಿಕ್ ನಿಷೇಧ ಜಾಗೃತಿ ಕಾರ್ಯಕ್ರಮ, ರೈತ ಮಹಿಳೆಯರಿಗೆ ಉಡಿತುಂಬುವ ಕಾರ್ಯಕ್ರಮ, ಉಚಿತ ಟೈಲರಿಂಗ್ ತರಬೇತಿ ಉದ್ಘಾಟನಾ ಸಮಾರಂಭ ಹಾಗೂ 5 ಜನ ಪ್ರಗತಿಪರ ರೈತ ಮಹಿಳೆಯರಿಗೆ "ರೈತ ಸೇವಾ ಶ್ರೀ" ಪ್ರಶಸ್ತಿಯನ್ನು ವಿತರಣೆ ಮಾಡಲಾಯಿತು.

ಸಂಸ್ಥೆಯ ಅಧ್ಯಕ್ಷರಾದ ಜ್ಯೋತಿ ಹಿರೇಮಠ ನೇತೃತ್ವದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಸಮಾಜಮುಖಿ ಕಾರ್ಯಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ರೈತ ಮಹಿಳೆಯರ ಸಾಧನೆ ಗುರುತಿಸಿ ರೈತ ಮಹಿಳೆಯರಿಗೆ "ರೈತ ಸೇವಾ ಶ್ರೀ" ಪ್ರಶಸ್ತಿ ಪ್ರದಾನ ನೀಡಲಾಯಿತು. ಕಾರ್ಯಕ್ರಮದಲ್ಲಿ ಮಾಜಿ ಶಾಸಕ ದತ್ತಾತ್ರೇಯ ಸಿ. ಪಾಟೀಲ ರೇವೂರ, ಡಾ. ಸುಧಾ ಹಾಲಕಾಯಿ, ವಿಜಯಕುಮಾರ ಪಾಟೀಲ ತೆಗಲತಿಪ್ಪಿ, ಜ್ಯೋತಿ ಎಂ. ಮರಗೋಳ, ಬಾಬುರಾವ ಪಾಟೀಲ್, ವೀರಸ್ವಾಮಿ, ರಾಚೂಟಯ್ಯ ಹಿರೇಮಠ, ವಿಶ್ವನಾಥ ಸಾಲಿಮಠ, ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸದಸ್ಯರಾದ ಸುಧಾಕರ ಇಟಗಿ, ನಾಗಮ್ಮ ಮಠಪತಿ, ನೀಲಮ್ಮ ಹಿರೇಮಠ ಸೇರಿ ಸದಸ್ಯರು ಇದ್ದರು.

ಹಾಬಾಳ ಟಿ. ಸರ್ಕಾರಿ ಪ್ರಾಥಮಿಕ ಶಾಲೆ ವೃತ್ತಿ ಬದುಕಿನ ಮೊದಲ ಮತ್ತು ಕೊನೆಯ ಶಾಲೆ

ಮುಖ್ಯ ಗುರು ಮುಡುಬಿಗೆ ಸ್ವಾಗತ ಕೋರಿದ ಯುವಕರು

ಸಂ.ಕ.ಸಮಾಚಾರ ಸೇಡಂ: ತಾಲೂಕಿನ ಹಾಬಾಳ ಟಿ ಗ್ರಾಮಕ್ಕೆ 28 ವರ್ಷಗಳ ಹಿಂದೆ ಸಹಶಿಕ್ಷಕರಾಗಿ ಸೇವೆಗೆ ಸೇರಿದ್ದ ಶಿಕ್ಷಕರೊಬ್ಬರು 28 ವರ್ಷಗಳ ನಂತರ ಇದೇ ಗ್ರಾಮದ ಇದೇ ಶಾಲೆಗೆ ಮುಖ್ಯ ಗುರುಗಳಾಗಿ ಸೇವೆ ಸಲ್ಲಿಸಲು ಆಗಮಿಸಿದಾಗ ಗ್ರಾಮದಲ್ಲಿ ಸಂಭ್ರಮ ಮನೆ ಮಾಡಿತ್ತು. ಅಲ್ಲದೇ ಅವರಿಗೆ ಅದ್ದೂರಿಯಾಗಿ ಸ್ವಾಗತಿಸಿದ ಪ್ರಸಂಗ ಜರುಗಿ–ತು. ಈ ವಿಶಿಷ್ಟತೆಗೆ ಕಾರಣವಾದ ಶಿಕ್ಷಕ, ಸಾಹಿತಿ, ಸಂಶೋಧಕ, ಸಂಘಟಕ, ಕಸಾಪ ಅಧ್ಯಕ್ಷ, ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರೆಂಬ ಖ್ಯಾತಿಗೆ ಒಳಗಾಗಿರುವ ಮುಡುಬಿ ಗುಂಡೇರಾವ.

1998ರಲ್ಲಿ ಶಿಕ್ಷಕರಾಗಿ ನೇಮಕವಾದ ಮೇಲೆ 5 ವರ್ಷ ಸೇವೆ ಸಲ್ಲಿಸಿ, ವಿದ್ಯಾರ್ಥಿಗಳ ಮತ್ತು ಗ್ರಾಮಸ್ಥರ ಅಚ್ಚುಮೆಚ್ಚಿನ ಗುರುಗಳೆಂದು ಹೆಸರು ಮಾಡಿದ್ದ ಮುಡುಬಿಗುಂಡೇರಾವನಿವೃತ್ತಿಯ ಕೊನೆಯ ವರ್ಷದಲ್ಲಿ ಪುನ: ಇದೆ ಶಾಲೆಗೆ ಮುಖ್ಯಗುರುವಾಗಿ ಆಗಮಿಸಿದ್ದಾರೆ. ಗುಂಡೇರಾವ ಗ್ರಾಮ ಪ್ರವೇಶಿಸಿದಾಗ ಶಿಷ್ಯಬಳಗ ತಮ್ಮ ಪರಿಚಯ ಹೇಳಿಕೊಂಡು, ನಿಮ್ಮ ಆಶೀರ್ವಾದದಿಂದ ಬದುಕು ಕಟ್ಟಿಕೊಂಡಿದ್ದೇವೆ ಎಂದರು. ಮೂಲ ಸೌಕರ್ಯ ಮತ್ತು ಸಾಮಾಜಿಕ ಜಾಲ ತಾಣ ಇರದ 1998ರಲ್ಲಿನ ಮಕ್ಕಳು ಇಂದು ತಮ್ಮ ಪರಿಚಯ ಮಾಡಿಕೊಂಡಿದ್ದು, ಶಿಕ್ಷಕರ ಸೇವೆ ಸಾರ್ಥಕತೆ ಎಷ್ಟೊಂದು ಅನುಭವವಾಯಿತು ಎಂದು ಮುಡುಬಿ ಸಂತಸಪಟ್ಟರು.

ಕಲಿಸಿದ ಗುರುಗಳು ನಿವೃತ್ತಿಗೆ ಇನ್ನೂ ಒಂದು ವರ್ಷ ಬಾಕಿ ಇರುವಾಗ ಮರಳಿ ಇದೆ ಶಾಲೆ ಆಯ್ಕೆ ಮಾಡಿಕೊಂಡು ಊರಿನ ಮತ್ತು ಶಿಷ್ಯ ಬಳಗದ ಬಗ್ಗೆ ಅಭಿಮಾನದಿಂದ ಗ್ರಾಮ ಪ್ರವೇಶಿಸಿದಾಗ ಎಲ್ಲರಲ್ಲಿ ಮಂದಹಾಸ ಮೂಡಿತು. ಈ ಹಿಂದೆ ಸೇವೆ ಸಲ್ಲಿಸಿದ ಕೋಡ್ಲಾ ಶಾಲೆಯನ್ನು ಗ್ರಾಮಸ್ಥರ ಮತ್ತು ಚುನಾಯಿತ ಪ್ರತಿನಿಧಿಗಳ ಸಹಕಾರದಿಂದ ಹೈಟೆಕ್ ಶಾಲೆ ಮಾಡಿ, ಮುಖ್ಯಗುರುಗಳಾಗಿ ಬಡ್ತಿ ಹೊಂದಿ 28 ವರ್ಷಗಳ ಹಿಂದೆ ಸೇವೆ ಸಲ್ಲಿಸಿದ ಶಾಲೆಗೆ ಪುನ: ಆಗಮಿಸಿದ ಗುರುಗಳನ್ನು ಅಭಿಮಾನ ಮತ್ತು ಖುಷಿಯಿಂದ ಸ್ವಾಗತಿಸಿದ್ದು ಅಪರೂಪದ ಕ್ಷಣವಾಗಿತ್ತು.



28ವರ್ಷಗಳ ನಂತರ ಮುಖ್ಯಗುರುಗಳಾಗಿ ಪುನ: ಅದೇ ಶಾಲೆಗೆ ಕರ್ತವ್ಯಕ್ಕೆ ಹಾಜರಾದ ಮುಡುಬಿ ಗುಂಡೇರಾವ ಅವರಿಗೆ ಶಿಷ್ಯಬಳಗ, ಗ್ರಾಮಸ್ಥರು ಸ್ವಾಗತಿಸಿದರು.



ಕಲಬುರಗಿ ಹೊರವಲಯ ಅಜಾದಪುರ್ 33 ಕೆವಿ ಸ್ಟೇಷನ್ ನಲ್ಲಿ ಸಂಭವಿಸಿದ ವಿದ್ಯುತ್ ಅವಘಡದಲ್ಲಿ ಕೈ ಕಳೆದುಕೊಂಡಿರುವ ಕಡಗಂಚಿಯ ನಿವಾಸಿ ಸದಾಶಿವ ಸಿದ್ಧಾರೂಢ ಅವರಿಗೆ ಕಲಬುರಗಿಯಲ್ಲಿ ಶಾಸಕ ಅಲ್ಲಮಪ್ರಭು ಪಾಟೀಲ್, ಡಿಸಿ ಫೌಜಿಯಾ ತರನ್ನುಮ್ ಅವರು ಮುಖ್ಯಮಂತ್ರಿಗಳ ಪರಿಹಾರದ 2 ಲಕ್ಷ ರೂಪಾಯಿ ಚೆಕ್ ವಿತರಿಸಿದರು.

ಹೊಂಡದಲ್ಲಿ ಈಜಲು ಹೋಗಿ ಬಾಲಕ ಸಾವು

ಸಂ.ಕ.ಸಮಾಚಾರ ವಾಡಿ: ಬಿಸಿಲಿನ ತಾಪಕ್ಕೆ ನೀರಿನ ಹೊಂಡದಲ್ಲಿ ಗೆಳೆಯರ ಜತೆ ಈಜಲು ತೆರಳಿದ್ದ ಬಾಲಕ ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ಪಟ್ಟಣದ ಸಮೀಪದ ದಿಗ್ಗಿ ತಾಂಡಾದಲ್ಲಿ ಸಂಭವಿಸಿದೆ. ರಿತೇಶ್ ನಾರಾಯಣ(12) ಮೃತ ದುರ್ದೈವಿ.ಘಟನೆಗೆ ಕಾರಣ: ಡಿಗ್ಗಿ ತಾಂಡಾದಲ್ಲಿ ಹಾದು ಹೋಗಿರುವ ರೈಲ್ವೆ ಹಳಿ ಕಾಮಗಾರಿಗಾಗಿ ಗುತ್ತಿಗೆದಾರನು ಮಣ್ಣು ಅಗೆದು ಬಿಟ್ಟಿದ್ದ ಆಳವಾದ ಹೊಂಡದಲ್ಲಿ ಭಾರಿ ಪ್ರಮಾಣದ ನೀರಿನ ಮಟ್ಟ ಸಂಗ್ರಹವಾಗಿದೆ. ಬಿಸಿಲಿನ ತಾಪಮಾನ ಹೆಚ್ಚಾದಂತೆ ಈಜು ಬಾರದ ಬಾಲಕ ರಿತೇಶ್ ಗೆಳೆಯರ ಜತೆ ನೀರಿನ ಆಳ ಅಂದಾಜಿಸದೆ ಹೊಂಡಕ್ಕೆ ಇಳಿದ ಪರಿಣಾಮವೇ ಈ ಅಪಘಾತಕ್ಕೆ ಕಾರಣವಾಗಿದೆ.

ರೈಲ್ವೆ ಕಾಮಗಾರಿ ಮುಗಿದ ನಂತರ ಗುತ್ತಿಗೆದಾರ ನಿರ್ಲಕ್ಷ್ಯದಿಂದ ಹೊಂಡವನ್ನು ಭರ್ತಿ ಮಾಡದೇ ಹಾಗೆ ಬಿಟ್ಟಿರುವದೇ ಈ ದುರಂತಕ್ಕೆ ಕಾರಣವಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಘಟನಾ ಸ್ಥಳಕ್ಕೆ ವಾಡಿ ಪೊಲೀಸ್ ಠಾಣೆ ಪಿಎಸ್.ಐ ಕೆ.ತಿರುಮಲೇಶ ಭೇಟಿ ನೀಡಿದ್ದಾರೆ. ವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

50 ಲಕ್ಷ ಪರಿಹಾರಕ್ಕೆ ಪಟ್ಟು: ಸ್ಥಳದಲ್ಲಿಯೇ ರೈಲ್ವೆ ಇಲಾಖೆ ಸುಮಾರು 50 ಲಕ್ಷ ರೂ. ಪರಿಹಾರ ಘೋಷಣೆ ಮಾಡುವವರೆಗೆ ಶವ ಹೂಳಲು ಬಿಡುವುದಿಲ್ಲ. ಎಂದು ಗ್ರಾಮಸ್ಥರ ಜತೆ ಬಿಜೆಪಿ ಮುಖಂಡ ಮಣಿಕಂಠ ರಾಠೋಡ, ಆಂದೋಲ ಸಿದ್ದಲಿಂಗ ಸ್ವಾಮಿ ಪ್ರತಿಭಟನೆ ನಡೆಸಿದರು.

ಘಟನಾ ಸ್ಥಳಕ್ಕೆ ಭೇಟಿ ನೀಡಲು ಆಗಮಿಸಿದ ಬಿಜೆಪಿ ಹಿರಿಯ ನಾಯಕಿ ದಿವ್ಯಾ ಹಾಗರಗಿ ಅವರ ಕಾರನ್ನು ಪೊಲೀಸರು ತಡೆದು ತಾಂಡಾದ ಒಳಗಡೆ ಪ್ರವೇಶ ಮಾಡದಂತೆ ನಿರ್ಬಂಧ ಹಾಕಿದರು. ಪರಿಣಾಮ ದಿವ್ಯಾ ಹಾಗರಗಿ ಮತ್ತು ಪೊಲೀಸರ ಮಧ್ಯೆ ಪರಸ್ಪರ ಮಾತಿನ ಚಕಮಕಿ ನಡೆಯಿತು.

ತಹಸೀಲ್ದಾರ್ ಮಧ್ಯೆ ಪ್ರವೇಶ

ಚಿತ್ತಾಪುರ ತಹಸೀಲ್ದಾರ್ ನಾಗಯ್ಯ ಹಿರೇಮಠ ಘಟನೆ ಸ್ಥಳಕ್ಕೆ ಭೇಟಿ ನೀಡಿ, ಬಾಲಕನ ಸಾವಿಗೆ ಅಗತ್ಯ ನೆರವು ಪರಿಹಾರ ಸರಕಾರದಿಂದ ಕೊಡಿಸಲಾಗುವುದು. ಇದರಿಂದ ಶವ ಸಂಸ್ಕಾರಕ್ಕೆ ಅನುಮತಿ ನೀಡಿ ಎಂದು ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಇದರಿಂದ ಧರಣಿ ಮುಂದುವರೆದಿದೆ.

ಬಾಲಿರೆಡ್ಡಿ ನಿಧನ

ರಾಯಚೂರು: ನಗರದ ಬಾಲಂಕು ಆಸ್ಪತ್ರೆಯ ಖ್ಯಾತ ವೈದ್ಯ ಡಾ.ಶ್ರೀಧರರೆಡ್ಡಿ ಅವರ ತಂದೆ ಬಾಲಿರೆಡ್ಡಿ(90) ವರ್ಷ ಅವರು ಬುಧವಾರ ಬೆಳಿಗ್ಗೆ 6.30ಕ್ಕೆ ಜಿಲ್ಲೆಯ ಸಿಂಧನೂರು ತಾಲ್ಲೂಕಿನ ರೈತನಗರ ಗ್ರಾಮದಲ್ಲಿ ನಿಧನರಾಗಿದ್ದಾರೆ. ಬಾಲಿರೆಡ್ಡಿ ಅವರು ರೈತಗ್ರಾಮದ ಸ್ಥಾಪಕರಲ್ಲೊಬ್ಬರಾಗಿದ್ದರು. ಪ್ರಗತಿಪರ ಕೃಷಿಕರಾಗಿದ್ದರು. ಮೃತರಿಗೆ ಮೂವರು ಪುತ್ರರು ಹಾಗೂ ಓರ್ವ ಪುತ್ರಿಯರಿದ್ದಾರೆ. ಮೃತರ ಅಂತ್ಯಕ್ರಿಯೆ ರೈತನಗರ ಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯಿಂದಾಗಿ ಪಾಳು ಬಿದ್ದಿವೆ | ಚಿತ್ತಾಪುರದಲ್ಲಿ ಅನೇಕ ಭವನಗಳು ನನೆಗುದಿಗೆ

ಕಾಮಗಾರಿ ಮುಗಿದರೂ ಹಸ್ತಾಂತರವಿಲ್ಲ ಅಂಬೇಡ್ಕರ್ ಭವನ

■ ರಾಯಪ್ಪ ಕಮರವಾಡಿ

ಚಿತ್ತಾಪುರ: ದಲಿತರ ಕಲ್ಯಾಣ ಕಾರ್ಯಗಳಿಗೆ ಸದ್ಬಳಕೆಯಾಗಬೇಕಾದ ಅಂಬೇಡ್ಕರ್ ಸಮುದಾಯ ಭವನ ಹಾಳು ಕೊಂಪೆಯಾಗಿದೆ. ಮುಳ್ಳು ಕಂಟಿಗಳ ಮಧ್ಯೆ ಭೂತ ಬಂಗಲೆಯಂತೆ ನಿಂತಿರುವ ಸುಂದರ ಕಟ್ಟಡ ಅಧಿಕಾರಿಗಳ ನಿರ್ಲಕ್ಷಕ್ಕೆ ಗುರಿಯಾಗಿದೆ.

ಪಟ್ಟಣದ ಹಳೆಯ ತಹಸೀಲ್ದಾರ್ ಕಚೇರಿಯ ಪಕ್ಕದಲ್ಲಿ ಸಮಾಜ ಕಲ್ಯಾಣ ಇಲಾಖೆಯ 1.50 ಕೋಟಿ ರೂ. ಅನುದಾನದಲ್ಲಿ ಡಾ. ಅಂಬೇಡ್ಕರ್ ಭವನ ನಿರ್ಮಾಣಗೊಂಡು ಹತ್ತು ವರ್ಷಗಳು ಕಳೆದಿವೆ. ಕಟ್ಟಡ ನಿರ್ಮಿಸಿದ ಗುತ್ತಿಗೆದಾರ ಪುರಸಭೆ ಆಡಳಿತಕ್ಕೆ ಹಸ್ತಾಂತರ ಮಾಡದೆ ನಿರ್ಲಕ್ಷ ವಹಿಸಿರುವುದು ಭವನ ಪಾಳು ಬೀಳಲು ಕಾರಣವಾಗಿದೆ. ದಲಿತ ಸಮುದಾಯದ ಮನವಿ ಮೇರೆಗೆ 2015–16ರಲ್ಲಿ ಅಗತ್ಯ ಅನುದಾನ ಒದಗಿಸಿ ಸಚಿವ ಪ್ರಿಯಾಂಕ್ ಖರ್ಗೆ ಅಡಿಗಲ್ಲು ನೆರವೇರಿಸಿದರು. ಸಮಾಜ ಕಲ್ಯಾಣ ಇಲಾಖೆ ಹಾಗೂ ಪುರಸಭೆ ಆಡಳಿತದ ದಿವ್ಯ ನಿರ್ಲಕ್ಷದಿಂದಾಗಿ ಭವನ ದಲಿತ ಸಮಾಜಕ್ಕೆ ಹಸ್ತಾಂತರವಾಗದೆ ನಿರ್ಲಕ್ಷಿಡಾಗಿದೆ.

ಪರಿಶಿಷ್ಟಜಾತಿ ಸಮುದಾಯಗಳ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅನುಕೂಲವಾಗಲೆಂದು ಸರ್ಕಾರ ಅಗತ್ಯ ಅನುದಾನ ಒದಗಿಸಿ ಸಮುದಾಯ ಭವನಗಳನ್ನು ನಿರ್ಮಿಸುತ್ತಿದೆ. ನಿಗದಿತ ಅವಧಿಯಲ್ಲಿ ಕಾಮಗಾರಿಗಳು ಪೂರ್ಣಗೊಂಡು ಆಯಾ ಸಮುದಾಯಗಳಿಗೆ ಹಸ್ತಾಂತರವಾಗಬೇಕು. ಆದರೆ ತಾಲೂಕು ಕೇಂದ್ರದಲ್ಲಿ ವಿವಿಧ ಸಮಾಜಗಳ ಸಮುದಾಯ ಭವನಗಳು ಪೂರ್ಣಗೊಳ್ಳದೆ ನನೆಗುದಿಗೆ ಬಿದ್ದಿವೆ. ಅಂಬೇಡ್ಕರ್ ಭವನ ಸೇರಿ ಮಹರ್ಷಿ ವಾಲ್ಮೀಕಿ ಭವನ, ಡಾ.ಬಾಬು ಜಗಜೀವನ್ ರಾಮ್ ಭವನ, ಅಂಬಿಗರ ಚೌಡಯ್ಯ ಭವನ ಹಾಗೂ ಕನ್ನಡ ಭವನ ಕಟ್ಟಡಗಳು ಹಸ್ತಾಂತರಗೊಳ್ಳದೆ ಹಾಳಾಗುತ್ತಿವೆ. ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯಿಂದ ಸಮುದಾಯ ಭವನ ನಿರ್ಮಾಣ ಯೋಜನೆ ಹಳ್ಳ ಹಿಡಿದಿವೆ ಎಂಬುದು ಸಾರ್ವಜನಿಕರ ಆರೋಪವಾಗಿದೆ.

ಚಿತ್ತಾಪುರದ ಹಳೆಯ ತಹಸೀಲ್ದಾರ್ ಕಚೇರಿ ಪಕ್ಕದಲ್ಲಿ ನಿರ್ಮಿಸಲಾದ ಡಾ. ಅಂಬೇಡ್ಕರ್ ಸಮುದಾಯ ಭವನ ಹಸ್ತಾಂತರಗೊಳ್ಳದೆ ಪಾಳು ಬಿದ್ದಿದೆ.

> ಸರಕಾರ ಸಾಕಷ್ಟು ಅನುದಾನ ಖರ್ಚು ಮಾಡಿ ಅಂಬೇಡ್ಕರ್ ಭವನ ನಿರ್ಮಿಸಿದೆ. ದಲಿತ ಸಮಾಜಕ್ಕೆ ಹಸ್ತಾಂತರ ಮಾಡುವಂತೆ ಅಧಿಕಾರಿಗಳಲ್ಲಿ ಮನವಿ ಮಾಡಿದ್ರು ಪ್ರಯೋಜನವಾಗಿಲ್ಲ. ಕಾಮಗಾರಿ ಮುಗಿದು ಹತ್ತು ವರ್ಷ ಕಳೆದರೂ ಸಮುದಾಯಕ್ಕೆ ಹಸ್ತಾಂತರ ಮಾಡಿಲ್ಲ. ಕಾರಣವೇನು? ಎಂದು ಕೇಳಿದರೆ ಯಾವ ಅಧಿಕಾರಿಗಳಲ್ಲೂ ಉತ್ತರವಿಲ್ಲ.
>
> ■ ಉದಯಕುಮಾರ ಸಾಗರ, ಮುಖಂಡ, ದಲಿತ ಸಮುದಾಯ, ಚಿತ್ತಾಪುರ.

> ಡಾ.ಅಂಬೇಡ್ಕರ್ ಭವನ ಸೇರಿ ಮಹರ್ಷಿ ವಾಲ್ಮೀಕಿ ಭವನ, ಡಾ.ಬಾಬು ಜಗಜೀವನ್ ರಾಮ್ ಭವನ, ಅಂಬಿಗರ ಚೌಡಯ್ಯ ಭವನ ಹಾಗೂ ಕನ್ನಡ ಭವನ ಕಟ್ಟಡಗಳು ಪಾಳು ಬೀಳಲು ಅಧಿಕಾರಿಗಳ ಇಚ್ಛಾಶಕ್ತಿ ಎದ್ದು ಕಾಣುತ್ತಿದೆ. ಪಾಳು ಬಿದ್ದಿರುವ ಸಮುದಾಯ ಭವನಗಳ ಕಾಮಗಾರಿ ಪೂರ್ಣಗೊಳಿಸಿ ಆ ಸಮುದಾಯಗಳಿಗೆ ಹಸ್ತಾಂತರ ಮಾಡಿಕೊಡುವರೇ ಕಾದು ನೋಡಬೇಕು.